ಇಂದಿನ ಹವಾಮಾನ

ದಕ್ಷಿಣ ಕನ್ನಡ 29° 25° | ಉಡುಪಿ 29° 26°

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಗುರುವಾರ 11, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ದ.ಕ. ಜಿಲ್ಲೆಯ ವಿವಿಧ ದೇಗುಲಗಳಲ್ಲಿ ಬಿಜೆಪಿ ವಿಶೇಷ ಪೂಜೆ



ಪುಟ 6

ಉಡುಪಿ ಜಿಲ್ಲೆಯ ವಿವಿಧ ದೇವಸ್ಥಾನದಲ್ಲಿ ವಿಶೇಷ ಪೂಜೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಜಡಿಮಳೆ ಜೊತೆಗಿನ ಗಾಳಿಯ ರೌದ್ರಾವತಾರಕ್ಕೆ ಅಕ್ಷರಶಃ ನಲುಗಿದ ಬಂಟ್ವಾಳ ತಾಲೂಕಿನ ಜನತೆ!









ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ಮಂಗಳವಾರ ರಾತ್ರಿ ಭಾರೀ ಗಾಳಿ ಮಳೆಯಾಗಿದ್ದು, ಈ ಪೈಕಿ ಬಂಟ್ವಾಳ ತಾಲೂಕಿನ ವಿವಿಧೆಡೆ ಅಪಾರ ಹಾನಿ ಸಂಭವಿಸಿದೆ. ಹಲವೆಡೆಗಳಲ್ಲಿ ಮನೆಯ ಆವರಣ ಗೋಡೆ ಕುಸಿತ, ಮನೆ ಮೇಲೆ ಉರುಳಿರುವುದು, ಮನೆಯ ಮುಂಭಾಗದ ಶೀಟ್ ಹಾರಿಹೋಗಿರುವುದು, ಕಲ್ಲಿನ ತಡೆಗೋಡೆ ಕುಸಿದಿರುವುದು ಮೊದಲಾದ ಘಟನೆಗಳು ನಡೆದಿದ್ದು ಕಷ್ಟನಷ್ಟಕ್ಕೆ ಕಾರಣವಾಗಿದೆ (ಪುಟ 2)

ಸುತ್ತಮುತ್ತ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿರುಸು ತಗ್ಗಿಸಿದ ಮುಂಗಾರು ಮಳೆ

ಮಂಗಳೂರು: ಭಾರೀ ಮಳೆಯ ಮುನ್ಸೂಚನೆ, ಆರೆಂಜ್ ಅಲರ್ಟ್ ಇದ್ದರೂ ಬುಧವಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಬಿರುಸು ತಗ್ಗಿಸಿತ್ತು. ಅಲ್ಲಲ್ಲಿ ಒಂದಿಷ್ಟು ಮಳೆ ಹೊರತು ಪಡಿಸಿದರೆ ದಿನದ ಹೆಚ್ಚಿನ ಅವಧಿಯಲ್ಲಿ ಮೋಡ ಮುಸುಕಿದ ವಾತಾವರಣ ಕಂಡುಬಂತು. ಈ ನಡುವೆ ಕಳೆದ ಕೆಲವು ದಿನಗಳಿಂದ ಮಳೆಯಾಗುತ್ತಿರುವ ಪರಿಣಾಮ ವಾತಾವರಣದಲ್ಲಿನ ತಾಪಮಾನ ಇಳಿಕೆಯಾಗಿದ್ದು, ಸಂಜೆಯ ಬಳಿಕ ಗ್ರಾಮೀಣ ಭಾಗಗಳಲ್ಲಿ ತಂಪಿನ ಅನುಭವವಾಗಿದೆ.

ಕರಾವಳಿಯ ಜೀವನದಿ ಒಡಲಿನಲ್ಲಿ ಹೆಚ್ಚಳವಾಗಿದೆ ಈಗ ನೀರಿನ ಹರಿವು

ಮಂಗಳೂರು: ಪಶ್ಚಿಮ ಘಟ್ಟ ಸಹಿತ ಎಲ್ಲೆಡೆ ಮಳೆ ಆರಂಭವಾಗಿರುವ ಬೆನ್ನಿಗೇ ಕರಾವಳಿ ಭಾಗದ ಜೀವನದಿಗಳ ಒಡಲಿನಲ್ಲಿ ನೀರಿನ ಹರಿವು ನಿಧಾನವಾಗಿ ಹೆಚ್ಚಳವಾಗಿದೆ. ನೇತ್ರಾವತಿ, ಫಲ್ಗುಣಿ, ಪಯಸ್ವಿನಿ ಸಹಿತ ಎಲ್ಲಾ ನದಿಗಳಲ್ಲಿ ಈಗ ನೀರಿನ ಹರಿವು ಆರಂಭಗೊಂಡಿದೆ. ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಇನ್ನಷ್ಟು ಮಳೆಯಾದರೆ ನದಿಗಳಿಗೆ ಹಳೆಯ ಸೌಂದರ್ಯ ಮತ್ತೆ ಮರುಕಳಿಸಲಿದೆ. ನದಿ ತೊರೆಗಳಲ್ಲಿಯೂ ನೀರಿನ ಹರಿವು ಕಂಡುಬರುತ್ತಿದೆ.

ವಿಟ್ಲ ಪರಿಸರದಲ್ಲಿ ಈಗ ಲಾರಿ ಬ್ಯಾಟರಿ ಎಗರಿಸುವ ಜಾಲ ಸಕ್ರಿಯ??

ವಿಟ್ಲ: ವಾಹನಗಳ ಬ್ಯಾಟರಿ ಕಳ್ಳತನ ಮಾಡುವ ಜಾಲ ಸಕ್ರಿಯವಾಗಿದ್ದು, ಜೂ. 7ರಂದು ರಾತ್ರಿ 4 ವಾಹನಗಳ ಬ್ಯಾಟರಿ ಕಳ್ಳರು ಹೊತ್ತೊಯ್ದಿದ್ದಾರೆ. ಅಳಕೆಮಜಲು ಮಸೀದಿಯ ಆವರಣದ ಹೊರಗಡೆ ನಿಲ್ಲಿಸಲಾಗಿದ್ದ ಎರಡು ಲಾರಿಗಳ ಬ್ಯಾಟರಿಯನ್ನು ಕಳ್ಳರು ಎಗರಿಸಿದ್ದಾರೆ. ನಿಣ್ಣಂಕಲ್ಲು ಅಡ್ಡರಸ್ತೆಯಲ್ಲಿ ನಿಲ್ಲಿಸಿದ್ದ ಕೋಳಿ ಸಾಗಾಟದ ಲಾರಿಯ ಬ್ಯಾಟರಿಯನ್ನೂ ಕದ್ದಿದ್ದಾರೆ. ಉಕ್ಕುಡ ಚೆಕ್‌ಪೋಸ್ಟ್ ಸಮೀಪ ಮಸೀದಿ ಮೈದಾನದಲ್ಲಿ ನಿಲ್ಲಿಸಿದ್ದ ಲಾರಿಯ ಬ್ಯಾಟರಿ ಕಳವಾಗಿದೆ.

ಮಾನ್ಸೂನ್ ಅಬ್ಬರ ಇಲ್ಲದಿದ್ದರೂ ಕಡಲಿನಲ್ಲಿ ಹೆಚ್ಚಳವಾಗಿದೆ ಉಬ್ಬರ

ಮಂಗಳೂರು: ಮಳೆ ತೀವ್ರಗೊಳ್ಳದಿದ್ದರೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಡಲಿನ ಆರ್ಭಟ ಹೆಚ್ಚಳವಾಗಿದೆ. ಬುಧವಾರ ಕಡಲ ತೀರಗಳಲ್ಲಿ ಹೆದ್ದೆರೆಗಳು ದಡಕ್ಕೆ ಅಪ್ಪಳಿಸುತ್ತಿದ್ದು, ಪ್ರವಾಸಿಗರು, ಸ್ಥಳೀಯರು ಕಡಲ ತೀರಕ್ಕೆ ತೆರಳದಂತೆ ಎಚ್ಚರಿಕೆ ನೀಡಲಾಗಿದೆ.

ಚಾಲಕರಿಗೆ ಸವಾಲೆಸೆಯುತ್ತಿದೆ ಘಾಟಿ ರಸ್ತೆ

ಅಂಜಿಸ್ತಿದೆ ಮಂಜು!

ತುಸು ಎಚ್ಚರ ತಪ್ಪಿದರೆ ಅಪಾಯ ಖಚಿತ

ಮಂಗಳೂರು: ಇಲ್ಲಿನ ಕರಾವಳಿ ಭಾಗ ಮತ್ತು ಮಲೆನಾಡನ್ನು ಸಂಪರ್ಕಿಸುವ ಪ್ರಮುಖ ಕೊಂಡಿಯಾದ ಚಾರ್ಮಾಡಿ ಘಾಟಿ, ಶಿರಾಡಿ ಘಾಟಿ ರಸ್ತೆಗಳಲ್ಲಿ ಕಳೆದ ಎರಡು ದಿನಗಳಿಂದ ದಟ್ಟ ಮಂಜು ಆವರಿಸುತ್ತಿದ್ದು, ಇದು ವಾಹನ ಸಂಚಾರಕ್ಕೆ ತೀವ್ರ ಅಡಚಣೆ ಉಂಟುಮಾಡುತ್ತಿದೆ.

ಮುಂಜಾನೆ, ಸಂಜೆ ವೇಳೆ ಸಂಕಷ್ಟ

ಈ ರಸ್ತೆಗಳಲ್ಲಿ ಮುಂಜಾನೆ ಹಾಗೂ ಸಂಜೆ ವೇಳೆಯಲ್ಲಿ ಈಗ ಮಂಜಿನ ತೀವ್ರತೆ ಹೆಚ್ಚಾಗುತ್ತಿದ್ದು, ಕೆಲವೆಡೆ ಮುಂದಿನ ಕೆಲವೇ ಮೀಟರ್ ದೂರದ ಪರಿಸರವೂ ಕಾಣದಂತಹಾ ಸ್ಥಿತಿ ಉಂಟಾಗುತ್ತಿದೆ.

ಘಾಟಿ ಪ್ರದೇಶಗಳಲ್ಲಿ ವಿಶೇಷವಾಗಿ ತಿರುವುಗಳಿರುವ ಪ್ರದೇಶಗಳಲ್ಲಿ ಎದುರು ಬರುವ ವಾಹನಗಳು ಸ್ಪಷ್ಟವಾಗಿ ಕಾಣದ ಕಾರಣ ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಾಗಿರುವುದರಿಂದ ಈ ಭಾಗದಲ್ಲಿ ಚಾಲಕರು ಎಚ್ಚರಿಕೆ ವಹಿಸಬೇಕು ಎಂದು ಸ್ಥಳೀಯಾಡಳಿತಗಳು ಸೂಚನೆ ನೀಡಿವೆ.



ಈ ಬಾರಿ ಎಂದಿಗಿಂತ ದಟ್ಟವಾಗಿದೆ ಮಂಜು...

ಸಾಮಾನ್ಯವಾಗಿ ಮಳೆಗಾಲದ ಆರಂಭದೊಂದಿಗೆ ಚಾರ್ಮಾಡಿ ಘಾಟಿಯಲ್ಲಿ ಚಳಿಯ ವಾತಾವರಣ ಮತ್ತು ದಟ್ಟ ಮಂಜು ಆವರಿಸುವುದು ಮಾಮೂಲಿಯಾದರೂ, ಈ ಬಾರಿ ಮಂಜಿನ ಪ್ರಮಾಣ ಹೆಚ್ಚಿರುವುದರಿಂದ ವಾಹನ ಸವಾರರು ಹೆಚ್ಚಿನ ಎಚ್ಚರಿಕೆಯಿಂದ ಸಂಚರಿಸುವಂತೆ ಸೂಚಿಸಲಾಗಿದೆ.

ಮಳೆಗಾಲದಲ್ಲಿ ಘಾಟಿಯ ಸೌಂದರ್ಯ ಪ್ರವಾಸಿಗರನ್ನು ಆಕರ್ಷಿಸುತ್ತಿದ್ದರೂ, ಸುರಕ್ಷತೆಗೆ ಆದ್ಯತೆ ನೀಡಿ ಎಚ್ಚರಿಕೆಯಿಂದ ಪ್ರಯಾಣಿಸುವುದು ಅತ್ಯಗತ್ಯವಾಗಿದೆ.

ಚಾಲಕರೇ ಹೀಗೆ ಮಾಡಿ

- ಸಂಚಾರದ ವೇಳೆ ವಾಹನದ ಹೆಡ್‌ಲೈಟ್ ಆನ್ ಇಟ್ಟು ಸಂಚರಿಸಬೇಕು
- ರಸ್ತೆಯಲ್ಲಿ ವೇಗದ ಮಿತಿ ಕಟ್ಟುನಿಟ್ಟಾಗಿ ಪಾಲಿಸಬೇಕು
- ಅನಗತ್ಯ ಓವರ್‌ಟೇಕ್ ಮಾಡುವ ಪ್ರಯತ್ನ ಬೇಡ
- ವಾಹನಗಳ ನಡುವೆ ಸುರಕ್ಷಿತ ಅಂತರ ಕಾಯ್ದುಕೊಳ್ಳಬೇಕು
- ಮಂಜಿನ ಪ್ರಮಾಣ ಹೆಚ್ಚಾದರೆ ಸುರಕ್ಷಿತ ಸ್ಥಳದಲ್ಲಿ ನಿಲ್ಲಿಸಿ ಬಳಿಕ ಪ್ರಯಾಣ ಮುಂದುವರಿಸಬೇಕು
- ಸುರಕ್ಷತೆಗೆ ಆದ್ಯತೆ ನೀಡಿ ಎಚ್ಚರಿಕೆಯಿಂದ ಘಾಟಿಯಲ್ಲಿ ವಾಹನವನ್ನು ಚಲಾಯಿಸಿ

ಸಂಗಮ ವರದಿಗೆ ಸಿಕ್ಕಿತು ಸ್ಪಂದನೆ


ಅಂತೂ ಸೊಳ್ಳೆ ಫ್ಯಾಕ್ಟ್ರಿಗೆ ಸಿಕ್ಕಿತು 'ತೆರವು ಭಾಗ್ಯ'!

ಉಡುಪಿ ಆಸ್ಪತ್ರೆ ಆವರಣ ಸ್ವಚ್ಛ ಸುಂದರ

ಉಡುಪಿ: ಇಲ್ಲಿನ ನಗರದ ಹಳೇ ಸರ್ಕಾರಿ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ ಆವರಣವು ಅಶುಚಿತ್ವದ ಗೂಡಾಗಿ ಸೊಳ್ಳೆಗಳ ಉತ್ಪಾದನಾ ಕಾರ್ಖಾನೆಯಂತಾಗಿರುವ ಕುರಿತು 'ಹೊಸ ದಿಗಂತ' ದಿನಪತ್ರಿಕೆಯ ಸಂಗಮ ಜೂನ್ 7ರಂದು ಪ್ರಕಟಿಸಿದ್ದ ವಿಶೇಷ ವರದಿಗೆ ಸಂಬಂಧಪಟ್ಟ ಇಲಾಖೆಗಳು ಸ್ಪಂದಿಸಿದ್ದು, ಬುಧವಾರ ಆಸ್ಪತ್ರೆಯ ಆವರಣದಲ್ಲಿದ್ದ ಭಾರೀ ಪ್ರಮಾಣದ ಕಸ-ತ್ಯಾಜ್ಯ ಸಂಪೂರ್ಣ ವಿಲೇ ಆಗಿದೆ.

ರೋಗ ಹರಡುವ ಭೀತಿ ಕಾಡಿತ್ತು

ನಗರದ ಹೃದಯಭಾಗದಲ್ಲಿರುವ ಈ ಆಸ್ಪತ್ರೆಯ ನಿವೇಶನ ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣಗಳು ನಿರ್ವಹಣೆಯಿಲ್ಲದೆ ದಟ್ಟ ಪೊದೆಗಳಾಗಿ ಮಾರ್ಪಟ್ಟಿದ್ದವು. ಮಳೆನೀರು ನಿಂತು ಸೊಳ್ಳೆಗಳು ಹೆಚ್ಚಾಗುತ್ತಿರುವುದರಿಂದ ಡೆಂಗ್ಯೂ, ಮಲೇರಿಯಾ ಹರಡುವ ಭೀತಿ ಎದುರಾಗಿತ್ತು. ನಗರಾಡಳಿತ ಮತ್ತು ಆರೋಗ್ಯ ಇಲಾಖೆ, ಜಂಟಿಯಾಗಿ ಕಾರ್ಯಾಚರಣೆ ನಡೆಸಿ ತಗಡಿನ ತಡೆಬೇಲಿ ಹಾಗೂ ಆವರಣ ಗೋಡೆಯ ಸಂಧಿನಲ್ಲಿ ಶೇಖರಣೆಯಾಗಿದ್ದ ತ್ಯಾಜ್ಯವನ್ನು ಬುಧವಾರ ತೆರವುಗೊಳಿಸಿದೆ.



ದೂರವಾಗಿದೆ ನಾಗರಿಕರ ಆತಂಕ

ಒಂದೆಡೆ ಮುಂಗಾರು ಬಿರುಸುಗೊಳ್ಳುತ್ತಿದೆ. ಇನ್ನೊಂದೆಡೆ ಮಳೆ ಆರಂಭದಲ್ಲಿಯೇ ಡೆಂಗ್ಯೂ ಪ್ರಕರಣಗಳು ಏರಿಕೆಯಾಗುತ್ತಿವೆ. ಇದರ ನಡುವಲ್ಲೇ ಈ ಸ್ವಚ್ಛತಾ ಕಾರ್ಯ ನಡೆದಿರುವುದು ಸಾರ್ವಜನಿಕರಲ್ಲಿ ನಿರಾಳತೆ ತಂದಿದೆ.

ಇಲ್ಲೀಗ 'ಜಾಗ್ರತೆ ವಹಿಸಿ' ಬ್ಯಾನರ್ ಅಳವಡಿಕೆಗೆ ಸೀಮಿತವಾಗಿದೆ ಸ್ಥಳಿಯಾಡಳಿತ

ಅಪಾಯ ಆಹ್ವಾನಿಸುತ್ತಿದೆ ತ್ರಿಶಂಕು ಸ್ಥಿತಿಯ ಕಟ್ಟಡ

ಪುತ್ತೂರು: ನಗರದಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡವೊಂದು ಇಂದೋ, ನಾಳೆಯೋ ಅಪಾಯ ತಂದಿಡಲು ಸಿದ್ಧವಾಗಿ ನಿಂತಿದ್ದರೂ, ಇಲ್ಲಿ ಅಪಾಯದ ಸೂಚನೆ ಫಲಕ ಹಾಕುವುದು ಬಿಟ್ಟು ಬೇರೆ ಯಾವುದೇ ಕ್ರಮ ಕೈಗೊಂಡಿಲ್ಲ.

ಒಂದು ಪಾರ್ಶ್ವ ಕೆಡವಲಾಗಿತ್ತು

ನಗರ ಮಧ್ಯದಲ್ಲಿನ ಮಹಿಳಾ ಪೊಲೀಸ್ ಠಾಣೆ ಬಳಿ ಈ ಹಳೆ ಕಟ್ಟಡವಿದೆ. ಶಿಥಿಲಾವಸ್ಥೆಯ ಈ ಕಟ್ಟಡದ ವಿವಾದ ನ್ಯಾಯಾಲಯದಲ್ಲಿದೆ. ಪುತ್ತೂರು ದೇವಳ ಜಾತ್ರೆ ವೇಳೆ ಬಲ್ನಾಡು ದೈವಸ್ಥಾನದಿಂದ ಕಿರುವಾಳು ಆಗಮಿಸಲು ತೊಂದರೆ ಎಂದು ಕಟ್ಟಡದ ಒಂದು ಪಾರ್ಶ್ವ ಜೆಸಿಬಿ ಬಳಸಿ ಕೆಡವಿ ಹಾಕಲಾಗಿತ್ತು. »ಪುಟ 6





ಸಂಭಾವ್ಯ ಅನಾಹುತಕ್ಕೆ ಎಡೆಮಾಡಿಕೊಡುತ್ತಿದೆ...

ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುವ ವಿವಾದಿತ ಕಟ್ಟಡವನ್ನು ನೆಲಸಮ ಮಾಡಿ ಕಟ್ಟಡದ ಒಂದು ಪಾರ್ಶ್ವವನ್ನು ಹಾಗೇ ಬಿಟ್ಟಿರುವುದು ಸಂಭಾವ್ಯ ಅನಾಹುತಕ್ಕೆ ಎಡೆಮಾಡಿಕೊಟ್ಟಿದೆ ಎನ್ನುತ್ತಿದ್ದಾರೆ ಇಲ್ಲಿನ ಸ್ಥಳೀಯರು. ಈ ಬಗ್ಗೆ ಸ್ಥಳೀಯಾಡಳಿತ ತಕ್ಷಣ ಎಚ್ಚೆತ್ತು ತನ್ನ ವ್ಯಾಪ್ತಿಯ ಈ ಸಂಭಾವ್ಯ 'ಅಪಾಯ'ವನ್ನು ತಪ್ಪಿಸಬೇಕಿದೆ.

ತುರ್ತು ಕ್ರಮ ಅಗತ್ಯವಿದೆ

ದಿನದ 24 ಗಂಟೆ ಈ ರಸ್ತೆಯಲ್ಲಿ ಜನ-ವಾಹನ ಸಂಚಾರವಿದ್ದು, ಯಾವ ಸಮಯದಲ್ಲಿ ಬಿದ್ದರೂ ಇದು ಅಪಾಯಕಾರಿಯಾಗಲಿದೆ. ಪಕ್ಕದಲ್ಲೇ ಬಸ್, ಆಟೋಗೆ ಕಾಯುವ ಪ್ರಯಾಣಿಕರೂ ಈ ಅಪಾಯಕಾರಿ ಕಟ್ಟಡಕ್ಕೆ ಸಿಲುಕುವ ಸಾಧ್ಯತೆ ಹೆಚ್ಚಿದೆ. ಕೂಡಲೇ ಆಡಳಿತ ಈ ಬಗ್ಗೆ ಎಚ್ಚೆತ್ತುಕೊಂಡು ಸೂಕ್ತ ಕ್ರಮ ಕೈಗೊಳ್ಳಬೇಕಿದೆ.

● ಶಿವಕುಮಾರ್, ಪುತ್ತೂರು ನಿವಾಸಿ

ಕೊಡಗಿನಲ್ಲಿ 'ಫಿಟ್ ಇಂಡಿಯಾ' ಸಂಡೇಸ್!



ಭಾರತೀಯ ಕ್ರೀಡಾ ಪ್ರಾಧಿಕಾರ (ಸಾಯಿ) ಎಸ್‌ಟಿಸಿ ಮಡಿಕೇರಿ ಕ್ಯಾಂಪಸ್‌ನಲ್ಲಿ ವಿಶ್ವ ಸೈಕಲ್ ದಿನಾಚರಣೆಯ ಅಂಗವಾಗಿ ಫಿಟ್ ಇಂಡಿಯಾ ಸಂಡೇಸ್ ಆನ್ ಸೈಕಲ್ ಕಾರ್ಯಕ್ರಮಕ್ಕೆ ಮಡಿಕೇರಿಯ ವಕೀಲರಾದ ಗಿರಿ ಚಾಲನೆ ನೀಡಿದರು. ಸುಮಾರು 50ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಹೊಸ, ಹಳೆ ಬಸ್ ನಿಲ್ದಾಣಗಳು, ಜನರಲ್ ಆಸ್ಪತ್ರೆ ಪರಿಸರ, ನಾಯಕ್ಸ್‌ರೋಡ್

ಕಾಸರಗೋಡು ಹಾದಿ ಬೀದಿಗಳಲ್ಲಿ ಬೌಬೌ ಹಾವಳಿ

ಕಾಸರಗೋಡು: ನಗರದ ವಿವಿಧೆಡೆ ಬೀದಿ ನಾಯಿ ಹಾವಳಿ ಹೆಚ್ಚಿದ್ದು, ಇದರಿಂದ ಇಲ್ಲಿ ನಡೆದಾಡಲು ಕೂಡಾ ಭಯ ಪಡಬೇಕಾದ ಪರಿಸ್ಥಿತಿ ನಾಗರಿಕರಲ್ಲಿ ತಲೆದೋರಿದೆ.

ಎಲ್ಲೆಲ್ಲಿ ಇದೆ ಶ್ವಾನ ಸಮಸ್ಯೆ?

ಕಾಸರಗೋಡು ಹೊಸ ಬಸ್ ನಿಲ್ದಾಣ, ಜನರಲ್ ಆಸ್ಪತ್ರೆ, ಹಳೆ ಬಸ್ ನಿಲ್ದಾಣ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ನಾಯಕ್ಸ್ ರೋಡ್ ಮೊದಲಾದ ಕಡೆಗಳಲ್ಲಿ ಅತೀ ಹೆಚ್ಚು ಬೀದಿ ನಾಯಿಗಳು ಕಂಡುಬರುತ್ತಿವೆ. ನಾಯಿ ಹಿಂಡು ಜನರ ಮೇಲೆ ದಾಳಿಗೆ ಮುಂದಾಗುತ್ತಿದ್ದು, ನಡೆದಾಡಲು ಸಾಧ್ಯವಾಗದ ಪರಿಸ್ಥಿತಿ ಎದುರಾಗಿದೆ. ದ್ವಿಚಕ್ರ ವಾಹನ ಮೇಲೂ ದಾಳಿ ನಡೆಯುತ್ತಿದೆ. »ಪುಟ 6



ಸಂಗಮ ವಿಶೇಷ

ಆಸ್ಪತ್ರೆಗೆ ಬರುತ್ತಿದ್ದಾರೆ ಪ್ರತಿನಿತ್ಯ 50ರಷ್ಟು ಮಂದಿ

ದಿನನಿತ್ಯ ಬೀದಿನಾಯಿಗಳಿಂದ ಕಡಿತಕ್ಕೊಳಗಾಗಿ ಗಾಯಗೊಂಡ ಸರಾಸರಿ 50ರಷ್ಟು ಮಂದಿ ಚಿಕಿತ್ಸೆಗಾಗಿ ಆಗಮಿಸುತ್ತಿದ್ದಾರೆಂದು ಕಾಸರಗೋಡು ಜನರಲ್ ಆಸ್ಪತ್ರೆ ಮೂಲಗಳು ತಿಳಿಸಿವೆ.

ಅಲ್ಲಲ್ಲಿ ಆಹಾರ ತ್ಯಾಜ್ಯ ಎಸೆಯುವ ಪರಿಣಾಮವಿದು?

ಕಾಸರಗೋಡು ಜನರಲ್ ಆಸ್ಪತ್ರೆ ಮತ್ತು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಪರಿಸರಗಳಲ್ಲಿ ಆಹಾರ ತ್ಯಾಜ್ಯಗಳನ್ನು ವ್ಯಾಪಕವಾಗಿ ಎಸೆಯುತ್ತಿರುವ ಬೆಳವಣಿಗೆ ನಡೆಯುತ್ತಿದ್ದು, ಆಹಾರ ಅರಸಿ ಇಲ್ಲಿ ಬೀದಿನಾಯಿಗಳು ತುಂಬಿಕೊಳ್ಳಲು ಕಾರಣ ಎಂದು ಹೇಳಲಾಗುತ್ತಿದೆ.

ಬೋವಿಕ್ಕಾನ ಪೇಟೆಯಲ್ಲಿ ಭಯಹುಟ್ಟಿಸಿದೆ ಕಪ್ಪು ನಾಯಿ

ಬೋವಿಕ್ಕಾನ ಪೇಟೆಯಲ್ಲಿ ಬೀದಿ ನಾಯಿಗಳ ಕಾಟ ವ್ಯಾಪಕಗೊಂಡಿದೆ. ಮಂಗಳವಾರ ಪೇಟೆ ಸಮೀಪ ಸಿ.ಎಚ್. ಅಬ್ದುಲ್ಲ ಕುಂಞ ಎಂಬವರಿಗೆ, ಅಂಗಡಿ ತೆರೆಯಲು ಬಂದ ಅಚ್ಯುತನ್ ಎಂಬವರ ಮೇಲೂ ನಾಯಿ ದಾಳಿ ನಡೆಸಿದೆ. ಕಾನತ್ತೂರು ರಸ್ತೆಯಲ್ಲಿ ಅಂಗಡಿ ತೆರೆಯುತ್ತಿದ್ದ ಮಹಿಳಾ ಟೈಲರ್‌ಗೂ ನಾಯಿ ಕಡಿದಿದೆ. ಈ ಮೂರು ಮಂದಿಯನ್ನು ಜನರಲ್ ಆಸ್ಪತ್ರೆಗೆ ದಾಖಲಿಸ ಲಾಗಿದೆ. ಈ ಮೂವರಿಗೂ ಕಪ್ಪು ಬಣ್ಣದ ಒಂದೇ ಬೀದಿನಾಯಿ ಕಚ್ಚಿದ್ದು, ಅದು ಹುಚ್ಚುನಾಯಿ ಹೇಳಲಾಗುತ್ತಿದೆ.


ಭಾರೀ ಮಳೆಗೆ ಕಾಲುದಾರಿಯ ಅರ್ಧ ಭಾಗ ಕುಸಿತ: 40 ಮನೆಗಳ ನಿವಾಸಿಗಳಿಗೆ ಸಂ'ಕಷ್ಟ'

ದುರಸ್ತಿ ನಿರೀಕ್ಷೆಯಲ್ಲಿ ಕುಲವೂರು-ಮುತ್ತೂರು ಗ್ರಾಮಗಳ ಗಡಿ ಭಾಗ

ಕೈಕಂಬ: ಮುತ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕುಲವೂರು ಮತ್ತು ಮುತ್ತೂರು ಗ್ರಾಮಗಳ ಗಡಿ ಭಾಗವಾದ ಮಾರ್ಗದ ಅಂಗಡಿ ಎಂಬಲ್ಲಿ ಸೈಟ್ ಮನೆಗೆ ತೆರಳುವ ದಾರಿ ಅರ್ಧ ಭಾಗ ಕುಸಿದು ಹೋಗಿದೆ.

ಇದರ ಪರಿಣಾಮವಾಗಿ ಈಗ ನೊಣಾಲು, ಬಡಕಾಯಿಬೆಟ್ಟು, ಬಾರ್ಲ, ಹೊಸಮನೆ, ಪಕಿರಕೂಡಿ, ತೌಡಂಗೆ, ಕಡಂಜಬೆಟ್ಟು ಮೊದಲಾದ ಪ್ರದೇಶಗಳಿಗೆ ಸಂಪರ್ಕ ಕಡಿತಗೊಳ್ಳುವ ಭೀತಿ ಎದುರಾಗಿದೆ.

ಈ ಪ್ರದೇಶಗಳಲ್ಲಿ ಅಂದಾಜು ಸುಮಾರು 40ರಷ್ಟು ಮನೆಗಳಿದ್ದು ಇಲ್ಲಿನ ಜನಸಂಚಾರಕ್ಕೆ ತೊಡಕುಂಟಾಗುವ ಸಾಧ್ಯತೆ ಇದೆ.



ಕಾಲುವೆ ಬದಿಯೂ ಕುಸಿತ

ಕುಪ್ಪೆಪದವು ದೊಡ್ಡಳಿಕೆಯಲ್ಲಿ ಸಣ್ಣ ನೀರಾವರಿ ಅಣೆಕಟ್ಟೆಯಿಂದ ಮುತ್ತೂರಿಗೆ ನೀರು ಹರಿಸುವ ಬೃಹತ್ ಕಾಲುವೆ ಬದಿ ಕುಸಿದಿದ್ದು ಇನ್ನಷ್ಟು ಕುಸಿತದ ಅಪಾಯವಿದೆ.

ಸಂಪರ್ಕ ಕಡಿತ ಭೀತಿ

ಕುಸಿತ ಸ್ಥಳದಿಂದ ಕೇವಲ ಐದಾರು ಅಡಿ ಅಂತರದಲ್ಲಿರುವ 2 ಮನೆಗಳು ಅಪಾಯಕ್ಕೆ ಸಿಲುಕಲಿವೆ. ಇಲ್ಲಿ ಇನ್ನು ಅರ್ಧ ಅಡಿ ಮಣ್ಣು ಕುಸಿದರೆ ಸಂಪರ್ಕ ಕಡಿತಗೊಂಡು ಶಾಲಾ ಮಕ್ಕಳಿಗೆ, ವೃದ್ಧರಿಗೆ, ಸಾರ್ವಜನಿಕರ ಸಂಚಾರಕ್ಕೆ ಸಂಕಷ್ಟ ಎದುರಾಗಲಿದೆ.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಗುರುವಾರ 11, ಜೂನ್ 2026

ಸುತ್ತಮುತ್ತ

ಜೂ. 12ರಂದು ಮುತ್ತೂರು ಗ್ರಾಮಸಭೆ

ಕೈಕಂಬ: ಮುತ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕೊಳವೂರು ಮತ್ತು ಮುತ್ತೂರು ಗ್ರಾಮಗಳ 2026-27ನೇ ಸಾಲಿನ ಪ್ರಥಮ ಹಂತದ ಗ್ರಾಮ ಸಭೆಯು ಜೂ.12ರಂದು ಬೆಳಿಗ್ಗೆ 11ಕ್ಕೆ ಗ್ರಾ.ಪಂ. ಬಳಿಯ ಸಂಜೀವಿನಿ ಕಟ್ಟಡದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹಳೆಯಂಗಡಿ: ಶ್ರೀ ಗಣೇಶೋತ್ಸವ ಸೇವಾ ಟ್ರಸ್ಟಿನ ಅಧ್ಯಕ್ಷರಾಗಿ ಆಯ್ಕೆ

ಮುಲ್ಕಿ: ಹಳೆಯಂಗಡಿ ಶ್ರೀ ಗಣೇಶೋತ್ಸವ ಸೇವಾ ಟ್ರಸ್ಟಿನ 2025-26ನೇ ಸಾಲಿನ ವಾರ್ಷಿಕ ಮಹಾಸಭೆ ಟ್ರಸ್ಟಿನ ಅಧ್ಯಕ್ಷ ಬಿ. ಸೂರ್ಯ ಕುಮಾರ್ ರವರ ಅಧ್ಯಕ್ಷತೆಯಲ್ಲಿ ಹಳೆಯಂಗಡಿಯ ಶ್ರೀನಿವಾಸ ಕಲಾ ಮಂದಿರದಲ್ಲಿ ನಡೆಯಿತು. ಸಭೆಯಲ್ಲಿ ಗತಸಭೆಯ ವರದಿಯನ್ನು ಕಾರ್ಯದರ್ಶಿ ರಾಮದಾಸ್ ಪಾವಂಜೆ ಮಂಡಿಸಿಅನುಮೋದಿಸಲಾಯಿತು. 2025-26ನೇ ಸಾಲಿನ ವಾರ್ಷಿಕ ಆಯ-ವ್ಯಯ



ಪಟ್ಟಿಯನ್ನು ಕೋಶಾಧಿಕಾರಿ ಹಿಮಕರ್ ಕದಿಕೆ ಸಭೆಯಲ್ಲಿ ಅಂಗೀಕರಿಸಲಾಯಿತು. ಸಭೆಯಲ್ಲಿ ಟ್ರಸ್ಟಿನ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಟ್ರಸ್ಟ್ ನೂತನ ಅಧ್ಯಕ್ಷರಾಗಿ ಎಸ್.ಎಸ್. ಸತೀಶ್ ಭಟ್, ಉಪಾಧ್ಯಕ್ಷರಾಗಿ ಜೀವನ್ ಪ್ರಕಾಶ್, ಪ್ರಧಾನ ಕಾರ್ಯದರ್ಶಿಯಾಗಿ ಸುಧಾಕರ ಆರ್. ಅಮೀನ್, ಕೋಶಾಧಿಕಾರಿಯಾಗಿ ನರೇಂದ್ರ ಪ್ರಭು, ಜೊತೆ ಕಾರ್ಯದರ್ಶಿಯಾಗಿ ಶ್ರೀಧರ್ ಶೆಟ್ಟಿಗಾರ್ ಆಯ್ಕೆಯಾಗಿದ್ದು ಉಳಿದಂತೆ ಬಿ. ಸೂರ್ಯ ಕುಮಾರ್, ಚಂದ್ರಶೇಖರ ನಾನಿಲ್, ರಾಮದಾಸ್ ಪಾವಂಜೆ, ಪಿ.ಉಮೇಶ್ ಪೂಜಾರಿ, ಹಿಮಕರ್ ಕದಿಕೆ, ವಿನೋದ್ ಕುಮಾರ್ ಬೊಳ್ಳೂರು, ಜೈಕೃಷ್ಣ ಬಿ. ಕೋಟ್ಯಾನ್, ಹರಿದಾಸ್ ಭಟ್ ತೋಕೂರು, ವಿನೋದ್ ಕುಮಾರ್ ಕೊಳುವೈಲು, ನಾಗರಾಜ್ ಹಳೆಯಂಗಡಿ ಅವರನ್ನು ಟ್ರಸ್ಟಿಗಳಾಗಿ ಹಾಗೂ ಸಂತೋಷ್ ಕುಮಾರ್ ಕೊಳುವೈಲು ಮತ್ತು ಮಂಜುನಾಥ ಪ್ರಭು ಪಾವಂಜೆ ಅವರನ್ನು ಪದನಿಮಿತ್ತ ಟ್ರಸ್ಟಿಗಳನ್ನಾಗಿ ಮುಂದುವರಿಸಲಾಯಿತು.

ಬಂಟ್ವಾಳ: ವಿವಿಧೆಡೆ ಆವರಣಗೋಡೆ ಕುಸಿದು ಹಾನಿ

ಬಂಟ್ವಾಳ: ಮಂಗಳವಾರ ರಾತ್ರಿಯ ಗಾಳಿ, ಮಳೆಗೆ ಬಂಟ್ವಾಳ ತಾಲೂಕಿನ ವಿವಿಧೆಡೆ ಹಾನಿ ಸಂಭವಿಸಿದೆ. ಬಿಮೂಡ ಗ್ರಾಮದ ಮೊಡಂಕಾಪು ಎಂಬಲ್ಲಿ ಸ್ಟೇನಿ ಜೋನ್ ಸೆರಾವೋ ಅವರ ಆವರಣ ಗೋಡೆಯು ಕುಸಿದು ಬಿದ್ದು, ನೀರು ಹೋಗುವ ತೋಡು ಮುಚ್ಚಿದ್ದಲ್ಲದೆ ಪಕ್ಕದಲ್ಲಿರುವ ಶ್ರೀ ವನದುರ್ಗಾ ತಥಾ ಜಲಾಂತರ್ಗತ ನಾಗ ಸಾನಿಧ್ಯ ದೇವಸ್ಥಾನದ ಆವರಣ ಗೋಡೆ ಹಾಗೂ ನಾಗಬನಕ್ಕೂ ಹಾನಿಯಾಗಿದೆ. ಕಾವಳಮೂಡೂರು ಗ್ರಾಮದ, ಕಾರಿಂಜ ದರ್ಖಾಸು ಮನೆ ಎಂಬಲ್ಲಿ ಗಿರಿಜಾ ಅವರ ಮನೆ ಮೇಲೆ ಅಡಿಕೆ ಮರ ಮುರಿದು ಬಿದ್ದು ಮನೆಯ ಮುಂಭಾಗದ ಶೀಟ್ ಮುರಿದು ಬಿದ್ದಿದೆ. ಯಾವುದೇ ಪ್ರಾಣ ಹಾನಿ ಸಂಭವಿಸಿರುವುದಿಲ್ಲ ಹಾಗೆಯೇ ವಿಟ್ಲಕಸಬಾ ಗ್ರಾಮದ ನೀರಕಣಿ ಎಂಬಲ್ಲಿ ರಹಿಮತ್ ಅವರ ಮನೆ ಹಿಂಭಾಗ ಕಲ್ಲಿನ ತಡೆಗೋಡೆ ಭಾಗಶಃ ಕುಸಿದಿದ್ದು, ವಾಸ್ತವ್ಯದ ಮನೆಗೆ ಯಾವುದೇ ಹಾನಿ ಆಗಿರುವುದಿಲ್ಲೆಂದು ಕಂದಾಯ ಇಲಾಖೆ ತಿಳಿಸಿದೆ. ಅಧಿಕಾರಿಗಳು ಸ್ಥಳ ಠಿಶೀಲನೆ ನಡೆಸಿ ವರದಿ ಸಲ್ಲಿಸಿದ್ದಾರೆ. ಬುಧವಾರ ಬೆಳಗ್ಗಿನ ಹೊತ್ತು ಬಿಸಿಲಿನ ವಾತಾವರಣವಿದ್ದು, ಬಳಿಕ ಮಳೆ ಸುರಿದಿದೆ.

ವಿವೇಕಾನಂದ ಪಿಯು ಕಾಲೇಜಿನಲ್ಲಿ ಉಪನ್ಯಾಸ

ಪುತ್ತೂರು: ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಆರೋಗ್ಯ ಹಾಗೂ ನೈರ್ಮಲ್ಯದ ಕುರಿತು ಅರಿವು ಮೂಡಿಸುವ



ನಿಟ್ಟಿನಲ್ಲಿ 'ಮಾನಸಿಕ ಆರೋಗ್ಯ ಹಾಗೂ ಜೀವನ ಕೌಶಲ್ಯಗಳು' ವಿಷಯದ ಕುರಿತಾದ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾಲೇಜಿನ ವೈದೇಹಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿದ್ದ ನಗರದ ಪ್ರಗತಿ ಆಸ್ಪತ್ರೆಯ ಮಕ್ಕಳ ತಜ್ಞ ಡಾ. ಸಂದೀಪ್ ಎಚ್.ಎಸ್., ವಿದ್ಯಾರ್ಥಿಗಳಿಗಾಗಿ ಪ್ರಥಮ ಅವಧಿಯನ್ನು ನಡೆಸಿಕೊಟ್ಟರು. ನೇತಾಜಿ ಸಭಾಭವನದಲ್ಲಿ ವಿದ್ಯಾರ್ಥಿನಿಯರಿಗಾಗಿ ನಡೆದ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಪ್ರಗತಿ ಆಸ್ಪತ್ರೆಯ ವೈದ್ಯೆ ಡಾ. ಅನನ್ಯಲಕ್ಷ್ಮೀ ಅವರು ದೈಹಿಕ ಆರೋಗ್ಯ ಹಾಗೂ ನೈರ್ಮಲ್ಯದ ಜೊತೆಗೆ ಮಾನಸಿಕ ಸ್ವಾಸ್ಥ್ಯದ ಅಗತ್ಯತೆಯನ್ನು ತಿಳಿಸಿಕೊಟ್ಟರು. ಎರಡು ಪ್ರತ್ಯೇಕ ಅವಧಿಗಳಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವೇಕಾನಂದ ಪ.ಪೂ. ಕಾಲೇಜಿನ ಉಪನ್ಯಾಸಕಿಯರಾದ ಚೈತ್ರಾ ಯು.ಎನ್. ಹಾಗೂ ಪುಷ್ಪಲತಾ ಉಪಸ್ಥಿತರಿದ್ದರು. ಉಪನ್ಯಾಸಕಿಯರಾದ ಮಮತಾ ಶೆಟ್ಟಿ ಹಾಗೂ ದಯಾಮಣಿ ಟಿ.ಕೆ. ಕಾರ್ಯಕ್ರಮ ನಿರ್ವಹಿಸಿದರು.

ವಿಟ್ಲ: ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ

ವಿಟ್ಲ: ಅನಿಲಕಟ್ಟೆ ದ.ಕ. ಜಿ.ಪಂ. ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವಿಟ್ಲ ಭಾರತ್ ಸರ್ವಿಸಸ್ ಮಾಲಕ ಸಂಜೀವ ಪೂಜಾರಿ ಬರೆಯುವ ಪುಸ್ತಕಗಳನ್ನು ಉಚಿತವಾಗಿ ನೀಡಿದರು. ಚಂದಳಿಕೆ ಶಾಲಾ ಮುಖ್ಯ ಶಿಕ್ಷಕ ವಿಶ್ವನಾಥ ಗೌಡ, ಅನಿಲಕಟ್ಟೆ ಶಾಲಾ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಜಯಾನಂದ ಗೌಡ ದೇವರಮನೆ, ಉಪಾಧ್ಯಕ್ಷ ರಜಿತ್ ಆಳ್ವ ಎರ್ಮೆನಿಲೆ, ಸಲಹೆಗಾರ ಮೋನಪ್ಪ ಗೌಡ ಶಿವಾಜಿ ನಗರ, ಎಸ್ ಡಿ ಎಂ ಸಿ ಅಧ್ಯಕ್ಷ ನವೀನ್ ಕುಮಾರ್ ಖಂಡಿಗ ಉಪಸ್ಥಿತರಿದ್ದರು.



ನೆಟ್ಲ ದೇಗುಲ



ಕಟೀಲು ದೇಗುಲ



ಪುತ್ತೂರು ದೇಗುಲ

ಪ್ರಧಾನಿ ನರೇಂದ್ರ ಮೋದಿ ದೀರ್ಘಾವಧಿ ಆಡಳಿತ | '2047ರ ವಿಕಸಿತ ಭಾರತ' ಯಶಸ್ಸಿಗಾಗಿ ಪ್ರಾರ್ಥನೆ

ಜಿಲ್ಲೆಯ ವಿವಿಧ ದೇಗುಲಗಳಲ್ಲಿ ಬಿಜೆಪಿಯಿಂದ ವಿಶೇಷ ಪೂಜೆ

ಬಂಟ್ವಾಳ/ ಕಟೀಲು/ ಪುತ್ತೂರು/ ಉಳ್ಳಾಲ/ ಮುಲ್ಕಿ/ ಸುಳ್ಯ: ಜಗತ್ತಿನಲ್ಲಿಯೇ ದೀರ್ಘಾವಧಿ (4399 ದಿನ) ಸೇವೆ ಸಲ್ಲಿಸಿ ಐತಿಹಾಸಿಕ ದಾಖಲೆಯ ಆಡಳಿತ ನಡೆಸುತ್ತಿರುವ ದೇಶದ ಪ್ರಧಾನಿ ನರೇಂದ್ರ ಮೋದಿಯವರಿಗೆ ದೀರ್ಘಾಯುಷ್ಯ ಮತ್ತು 2047ರ ವಿಕಸಿತ ಭಾರತದ ಸಂಕಲ್ಪ ಸಾಧನೆಯ ಯಶಸ್ಸಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿ ಕಾರ್ಯಕರ್ತರು, ಮುಖಂಡರು ಬುಧವಾರ ವಿವಿಧ ದೇಗುಲಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಶ್ರೀ ರಕ್ತೇಶ್ವರಿ ದೇವಿ ಸನ್ನಿಧಿ

ಬಂಟ್ವಾಳ ತಾಲೂಕಿನ ಬಿಜೆಪಿ ಬಂಟ್ವಾಳ ಮಂಡಲದ ವತಿಯಿಂದ ಬಿ.ಸಿ.ರೋಡಿನ ಶ್ರೀ ರಕ್ತೇಶ್ವರಿ ದೇವಿ ಸನ್ನಿಧಿಯಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಬಂಟ್ವಾಳ ಮಂಡಲದ ಬಿಜೆಪಿ ಅಧ್ಯಕ್ಷ ಚೆನ್ನಪ್ಪ ಆರ್ ಕೋಟ್ಯಾನ್, ಪಕ್ಷದ ಪ್ರಮುಖರಾದ ಗೋಪಾಲ ಸುವರ್ಣ, ಸುಲೋಚನ ಜಿ.ಕೆ.ಭಟ್, ರಾಮದಾಸ್ ಬಂಟ್ವಾಳ, ರವೀಂದ್ರ ಕಂಬಳಿ, ಮಾದವ ಮಾವೆ, ಶಿವಪ್ರಸಾದ್ ಶೆಟ್ಟಿ ಸಂದೇಶ್ ಶೆಟ್ಟಿ ಆರೆಬೆಟ್ಟು, ಕಮಲಾಕ್ಷಿ ಕೆ.ಪೂಜಾರಿ, ದಿನೇಶ್ ಅಮ್ಟೂರು, ಪುರುಷೋತ್ತಮ ಸಾಲಿಯಾನ್ ನರಿಕೊಂಬು, ಅಶೋಕ್ ಶೆಟ್ಟಿ ಸರಪಾಡಿ, ಸುರೇಶ್ ಕುಲಾಲ್, ಜನಾರ್ದನ ಬೊಂಡಾಲ, ಹರ್ಷಿಣಿ ಪುಷ್ಪಾನಂದ,ಹಿರಣ್ಮಯಿ, ರೂಪ ಶೆಟ್ಟಿ, ಲಖಿತಾ ಆರ್ ಶೆಟ್ಟಿ ಹರಿ ಪ್ರಸಾದ್ ಭಂಡಾರಿ ಬೆಟ್ಟು,ಸುರೇಶ್ ಕೋಟ್ಯಾನ್,ಪ್ರಭಾಕರ್ ಪ್ರಭು, ಸಂಪತ್ ಕೋಟ್ಯಾನ್, ಪ್ರವೀಣ್ ಕುಮಾರ್, ಆನಂದ ಶಂಭೂರು,ಮೋಹನ್ ದಾಸ್ ಕೊಟ್ಟಾರಿ,ಕಿಶೋರ್ ಶೆಟ್ಟಿ ಪ್ರೇಮನಾಥ ಶೆಟ್ಟಿ,ದಿನೇಶ್ ಝ್ಯೋಂಕ್ಯಾರ್, ರಜನಿ ,ಪ್ರಣಾಮ್ ರಾಜ್ ಅಜ್ಜಿಬೆಟ್ಟು, ಸುರೇಶ್ ಪೂಜಾರಿ, ಚಿದಾನಂದ ಪಟ್ಟೆಕೋಡಿ,ಲಕ್ಷ್ಮಣ್ ಗೌಡ,ವಿಜಯ ನಾವೂರ, ವಿಜಯ ಅಮ್ಟಾಡಿ, ಮುತ್ತಪ್ಪ ಮಾಣಿ ಮತ್ತಿತರರಿದ್ದರು.

ಪೊಳಲಿ ಶ್ರೀ ದೇವರ ಸನ್ನಿಧಾನ

ಬಿಜೆಪಿ ಸಜಿಪಮುನ್ನೂರು ಮಹಾಶಕ್ತಿ ಕೇಂದ್ರದಿಂದ ಸಾವಿರ ಸೀಮೆಯ ಒಡತಿ ಪೊಳಲಿ ಶ್ರೀ ರಾಜರಾಜೇಶ್ವರೀ ಅಮ್ಮನವರ ಸನ್ನಿಧಾನದಲ್ಲಿ ವಿಶೇಷ ಪೂಜೆ ನಡೆಸಲಾಯಿತು. ಈ ವೇಳೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷರಾದ ವೆಂಕಟೇಶ್ ನಾವಡ, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ದೇವಪ್ಪ ಪೂಜಾರಿ, ಮಂಡಲ ಪ್ರಧಾನ ಕಾರ್ಯದರ್ಶಿ ಸುದರ್ಶನ ಬಜ, ಕಾರ್ಯದರ್ಶಿ ಹರೀಶ್ ಶೆಟ್ಟಿ ಪಡು, ಪ್ರಮುಖರಾದ ಸುಭಾಷ್ಚಂದ್ರ ನಾಯಕ್ ಉಳಿಪಾಡಿಗುತ್ತು, ಕೃಷ್ಣರಾಜ್ ಮಾರ್ಲ ಮುತ್ತೂರು, ಯಶವಂತ ಪೊಳಲಿ, ಯಶೋಧರ ಪೊಳಲಿ, ಲೋಕೇಶ್ ಭರಣಿ, ವಾಮನ ಆಚಾರ್ಯ ಕಾರ್ತಿಕ್ ಬಳ್ಳಾಲ್ , ಲೋಕೇಶ್ ಪಲ್ಲಿಪಾಡಿ, ಕೃಷ್ಣ ಪೊಳಲಿ ಇದ್ದರು.

ನೆಟ್ಲ ದೇವಳ

ಬಿಜೆಪಿ ಮುಖಂಡರು, ಮೋದಿ ಅಭಿಮಾನಿಗಳು ಹಾಗೂ ಭಕ್ತರು ಮತ್ತು ಕಾರ್ಯಕರ್ತರು ಮೋಗರ್ನಾಡು ಸಾವಿರ ಸೀಮೆಯ ಒಡೆಯ ಶ್ರೀ ನೀಟಿಲಾಕ್ಷ ಸದಾಶಿವ ದೇವರ ಸನ್ನಿಧಿಯಲ್ಲಿ ವಿಶೇಷ ಪೂಜೆಯೊಂದಿಗೆ ಪ್ರಾರ್ಥನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಭಾ.ಜ.ಪಾ ಜಿಲ್ಲಾ ಕಾರ್ಯದರ್ಶಿ ದಿನೇಶ್ ಅಮ್ಟೂರು, ಕಲ್ಲಡ್ಕ ರೈತರ ಸೇವಾ ಸಹಕಾರಿ ಸಂಘದ ನಿರ್ದೇಶಕರಾದ ಪ್ರಭಾಕರ ಶೆಟ್ಟಿ ಬೈದರಡ್ಕ ಒಬಿಸಿ ಮೋರ್ಚಾದ ಜಿಲ್ಲಾ ಪ್ರಮುಖರಾದ ಗೋಪಾಲ್ ಪೂಜಾರಿ, ಬಂಟ್ವಾಳ ಮಂಡಲ ಯುವ ಮೋರ್ಚಾದ ಕಾರ್ಯದರ್ಶಿ ಕೌಶಿಲ್ ಶೆಟ್ಟಿ ಬಂಟ್ವಾಳ ಮಂಡಲ ಓಬಿಸಿ ಕಾರ್ಯದರ್ಶಿ ಯತೀಶ್ ಮೂಳೀಕೊಡಂಗೆ, ಶಕ್ತಿ ಕೇಂದ್ರದ ಪ್ರಮುಖರಾದ ಪ್ರವೀಣ್ ಕುಮಾರ್, ಬೂತ್ ಅಧ್ಯಕ್ಷರಾದ ಮಹಾಬಲ ಸಾಲಿಯನ್ ಮೂಳಿಕೊಡಂಗೆ, ಶೇಖರ್ ಕೊಟ್ಟಾರಿ ಅಮ್ಟೂರು, ಕಾರ್ಯದರ್ಶಿ ಸಂದೀಪ್ ಶೆಟ್ಟಿ ಬೈದರಡ್ಕ, ತಾಲೂಕು ಪಂಚಾಯತ್ ಮಾಜಿ ಉಪಾಧ್ಯಕ್ಷ ಆನಂದ ಎ ಶಂಭೂರು, ಜಿಲ್ಲಾ ಓ.ಬಿ.ಸಿ ಮೋರ್ಚಾದ ಪ್ರಮುಖರಾದ ಚಿದಾನಂದ ಪಟ್ಟೆ ಕೋಡಿ. ವಾಣಿ ಶೆಟ್ಟಿ ಪ್ರಮುಖರಾದ ಉಮೇಶ್ ಟಿ. ಪೂಜಾರಿ, ಜೀತೇಶ್ ಶೆಟ್ಟಿ ಬಾಳಿಕೆ, ಪವನ್ ಶೆಟ್ಟಿ ಬಾಳಿಕೆ ಹಾಗೂ ಸ್ಥಳೀಯ ಪ್ರಮುಖರು ಉಪಸ್ಥಿತರಿದ್ದರು.

ಕಟೀಲು ದೇಗುಲ

ಮುಲ್ಕಿ ಮೂಡುಬಿದಿರೆ ಮಂಡಲದಿಂದ ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಅರ್ಚಕ ವೆಂಕಟರಮಣ ಆಸ್ರಣ್ಣ ಪ್ರಾರ್ಥನೆಗೈದರು. ಮೂಲ್ಕಿ ಮುಡುಬಿದಿರೆ ಮಂಡಲಾಧ್ಯಕ್ಷ ದಿನೇಶ್ ಪುತ್ರನ್ ಬಿಜೆಪಿ ಮುಖಂಡರಾದ ಬಾಹುಬಲಿ ಪ್ರಸಾದ್, ಎಂ.ಎಸ್. ಕೋಟ್ಯಾನ್, ಈಶ್ವರ್ ಕಟೀಲ್, ಶಾಂತಿ ಪ್ರಸಾದ್ ಹೆಗ್ಡೆ, ಭುವನಾಭಿರಾಮ ಉಡುಪ, ಸುನೀಲ್ ಆಳ್ವ ಅಭಿಲಾಷ್ ಶೆಟ್ಟಿ ಕಟೀಲ್, ಪ್ರೇಮ್ ರಾಜ್ ಶೆಟ್ಟಿ ಬರ್ಕೆ, ತಿಲಕ್ ರಾಜ್ ಶೆಟ್ಟಿ , ಪದ್ಮಲತಾ ಕಟೀಲು, ಮಲ್ಲಿಕಾ ಪ್ರಕಾಶ್, ಶೈಲೇಶ್ ಅಂಚನ್, ಲೋಕಯ್ಯ ಸಾಲಿಯಾನ್, ಪುರೋಷತ್ತಮ್ ಶೆಟ್ಟಿಗಾರ್, ಪ್ರಣೀಕ್ ಕಿನ್ನಿಗೋಳಿ, ಪ್ರಶಾಂತ್ ಮೂಲ್ಕಿ, ಗೋಪಾಲಕೃಷ್ಣ ಶೈಲೇಶ್ ಮೂಲ್ಕಿ, ಕೇಶವ ಕರ್ಕೇರ, ನವೀನ್ ರಾಜ್ ಮೂಲ್ಕಿ, ಮಮತಾ ಪೂಂಜ, ಗೀತಾ ಲಕ್ಷೀ ಭಟ್, ಸರೋಜಿನಿ ಗುಜರನ್, ಬೇಬಿ ಸುಂದರ ಕೋಟ್ಯಾನ್, ಪೂರ್ಣಿಮಾ ಹಳೆಯಂಗಡಿ, ರಶ್ಮಿ ಆಚಾರ್ಯ, ಮಿಥುನ್ ಆಚಾರ್ಯ, ಯತೀಶ್ ಆಚಾರ್ಯ, ದುರ್ಗಾಪ್ರಸಾದ್ ಶೆಟ್ಟಿ ಕುತ್ತೆತ್ತೂರು, ವಿಶ್ವನಾಥ ಕಾಮತ್ ಪಡುಮಾರ್ನಾಡ್, ಸುಶಾಂತ್ ಕಟೀಲು, ಸದಾನಂದ ಶೆಟ್ಟಿ, ಸುಮ ಬಿ ಶೆಟ್ಟಿ, ಇದ್ದರು.

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇಗುಲ

ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಜೂ.10 ರಂದು ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಪ್ರಧಾನ ಅರ್ಚಕ ವಿ.ಎಸ್. ಭಟ್ ಪ್ರಾರ್ಥನೆ ನೆರವೇರಿಸಿದರು. ಈ ಸಂದರ್ಭ ಮಾಜಿ ಶಾಸಕ ಸಂಜೀವ ಮಠಂದೂರು, ನಗರ ಮಂಡಲ ಅಧ್ಯಕ್ಷ ಶಿವಕುಮಾರ್ ಕಲ್ಲಿಮಾರ್, ಹಿರಿಯರಾದ ಯು. ಪೂವಪ್ಪ, ಗೋಪಾಲಕೃಷ್ಣ ಹೇರಳೆ, ರಾಜೇಶ್ ಬನ್ನೂರು, ಚಂದ್ರಶೇಖರ್ ಬಪ್ಪಳಿಗೆ, ಡಾ. ಸುರೇಶ್ ಪುತ್ತೂರಾಯ, ರಾಜ್ಯ ಒಬಿಸಿ ಮೋರ್ಚಾ ಕಾರ್ಯದರ್ಶಿ ಆರ್.ಸಿ. ನಾರಾಯಣ, ಜಿಲ್ಲಾ ಉಪಾಧ್ಯಕ್ಷೆ ವಿದ್ಯಾ ಆರ್. ಗೌರಿ ಪಾಲ್ಗೊಂಡರು.

ಉಳ್ಳಾಲದ ಪವಿತ್ರ ಕ್ಷೇತ್ರಗಳಲಿಪ್ರಾರ್ಥನೆ

ಉಳ್ಳಾಲ ತಾಲೂಕಿನ ತಲಪಾಡಿ ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರ ಹಾಗೂ ಸೋಮೇಶ್ವರ ಶ್ರೀ ಸೋಮನಾಥ ಕ್ಷೇತ್ರದಲ್ಲಿ ಮಂಗಳೂರು ಮಂಡಲದಿಂದ ಸಾಮೂಹಿಕ ಪ್ರಾರ್ಥನೆ ನಡೆಯಿತು. ಸಂಸದ ಕ್ಯಾ.ಬ್ರಿಜೇಶ್ ಚೌಟ, ಬಿಜೆಪಿ ಮಂಗಳೂರು ಮಂಡಲ ಅಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲ್, ಪ್ರಧಾನ ಕಾರ್ಯದರ್ಶಿಗಳಾದ ದಯಾನಂದ್ ತೊಕ್ಕೊಟ್ಟು, ಮೋಹನ್ ರಾಜ್ ಕೆ.ಆರ್., ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ರವೀಂದ್ರ ಶೆಟ್ಟಿ ಉಳಿದೊಟ್ಟು, ಕಾರ್ಯದರ್ಶಿ ಧನಲಕ್ಷ್ಮಿ ಗಟ್ಟಿ,ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಂಜುಳಾ ರಾವ್, ಕ್ಷೇತ್ರಾಧ್ಯಕ್ಷೆ ಮಾಧವಿ ಉಳ್ಳಾಲ್, ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷ ನಿಶಾನ್ ಪೂಜಾರಿ, ಕ್ಷೇತ್ರಾಧ್ಯಕ್ಷ ಮುರಳಿ ಕೊಣಾಜೆ, ಕೋಟೆಕಾರು ಪಟ್ಟಣ ಪಂಚಾಯತ್ ಅಧ್ಯಕ್ಷೆ ದಿವ್ಯಾ ಶೆಟ್ಟಿ, ಸೋಮೇಶ್ವರ ಪುರಸಭಾ ಉಪಾಧ್ಯಕ್ಷ ರವಿಶಂಕರ್ ಸೋಮೇಶ್ವರ, ಸ್ಥಾಯಿ ಸಮಿತಿ ಅಧ್ಯಕ್ಷ ಪುರುಷೋತ್ತಮ್ ಗಟ್ಟಿ ಪರ್ಯತ್ತೂರು, ಸದಸ್ಯರಾದ ಮನೋಜ್ ಕಟ್ಟೆಮನೆ, ಜಯ ಪೂಜಾರಿ, ಸ್ವಪ್ನಾ ಶೆಟ್ಟಿ ಬಿಜೆಪಿ ಮಂಡಲ ಕಾರ್ಯದರ್ಶಿ ರಮೇಶ್ ಬೆದ್ರೋಳಿಕೆ, ರಾಜ್ಯ ಮೀನುಗಾರ ಪ್ರಕೋಷ್ಠದ ಸಹ ಸಂಚಾಲಕ ಯಶವಂತ್ ಅಮೀನ್, ಪ್ರಮುಖರಾದ ಸುಮಲತಾ ಕೊಣಾಜೆ, ದೀಕ್ಷಿತ್ ನಿಸರ್ಗ, ಸುಜಾತ ಶೆಟ್ಟಿ, ಜಯಶ್ರೀ ಕನೀರ್ ತೋಟ, ಅರುಣ್ ಉಚ್ಚಿಲ್, ಸೋಮೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ಸದಾನಂದ ಬಂಗೇರ, ದೀಪಕ್ ಪಿಲಾರ್, ಬಾಸ್ಕರ್ ಗಟ್ಟಿ ಇದ್ದರು.

ತೋಕೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನ

ಹಳೆಯಂಗಡಿ ಮಹಾಶಕ್ತಿ ಕೇಂದ್ರದ ವತಿಯಿಂದ ತೋಕೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಯಿತು. ಬಿಜೆಪಿ ಪ್ರಧಾನ ಕಾರ್ಯದರ್ಶಿ ಶೋಭೇಂದ್ರ ಸಸಿಹಿತ್ಲು, ಹಳೆಯಂಗಡಿ ಮಹಾಶಕ್ತಿಕೇಂದ್ರದ ಅಧ್ಯಕ್ಷ ಲಕ್ಷ್ಮಣ್ ಸಾಲ್ಯಾನ್, ಪ್ರಧಾನ ಕಾರ್ಯದರ್ಶಿ ಜೀವನ್ ಶೆಟ್ಟಿ ಅಂಗರಗುಡ್ಡೆ ಪಡುಪಣಂಬೂರು, ಬಿಜೆಪಿ ನಾಯಕರಾದ ಹೇಮಂತ ಅಮೀನ್, ಮೋಹನ್ ದಾಸ್, ಲೋಹಿತ್ ಕೋಟ್ಯಾನ್, ಸಂತೋಷ್ ಕುಮಾರ್, ನವೀನ್‌ರಾಜ್, ದಿವೇಶ ದೇವಾಡಿಗ ಬೆಳ್ಳಾಯರು, ವಿನೋದ್ ಸುವರ್ಣ, ದೇವಸ್ಥಾನದ ವ್ಯವಸ್ಥಾಪನ ಸಮಿತಿ ಸದಸ್ಯ ಪುರುಷೋತ್ತಮ ಸಾಲ್ಯಾನ್ ಇದ್ದರು.

ಪೆರುವಾಜೆ ಜಲದುರ್ಗಾ ದೇವಸ್ಥಾನ

ಬಿಜೆಪಿ ಸುಳ್ಯ ಮಂಡಲದ ವತಿಯಿಂದ ಪೆರುವಾಜೆ ಜಲದುರ್ಗಾ ದೇವಸ್ಥಾನದಲ್ಲಿ ವಿಶೇಷ ಪೂಜೆಯನ್ನು ಬುಧವಾರ ನಡೆಸಲಾಯಿತು. ಈ ಸಂದರ್ಭ ಶಾಸಕಿ ಭಾಗೀರಥಿ ಮುರುಳ್ಯ, ಸುಳ್ಯ ಮಂಡಲ ಅಧ್ಯಕ್ಷ ವೆಂಕಟ್ ವಳಲಂಬೆ, ಪ್ರಧಾನ ಕಾರ್ಯದರ್ಶಿ ವಿನಯ್ ಕುಮಾರ್ ಕಂದಡ್ಕ, ಜಿಲ್ಲಾ ಉಪಾಧ್ಯಕ್ಷ ರಾಕೇಶ ರೈ ಕೆಡೆಂಜಿ, ಜಿಲ್ಲಾ ಕಾರ್ಯದರ್ಶಿ ಪುಷ್ಪ ಮೇದಪ್ಪ, ಬೆಳ್ಳಾರೆ ಮಹಾಶಕ್ತಿ ಕೇಂದ್ರ ಪ್ರಮುಖ ಅಜಿತ್ ಕಿಲ್ಲಂಗೋಡಿ, ಕಾರ್ಯದರ್ಶಿ ಶಿವಪ್ರಸಾದ್ ನಡುತೋಟ, ಚಂದ್ರಶೇಖರ ಪನ್ನೆ, ಯುವ ಮೋರ್ಚಾ ಸದಸ್ಯ ಹರ್ಷಿತ್ ಪೆರುವಾಜೆ, ಪದ್ಮನಾಭ ಶೆಟ್ಟಿ ಪೆರುವಾಜೆ, ಕುಶಾಲಪ್ಪ ಮುಕ್ಕೂರು, ರಮೇಶ, ವಿಜಯ್, ವೆಂಕಟಕೃಷ್ಣ ರಾವ್, ಪೂರ್ಣಿಮ, ಪದ್ಮನಾಭ ಕಲಾಸುಮ, ಪ್ರಸಾದ ಕಾಟೂರು ಇದ್ದರು.



ಶ್ರೀ ರಕ್ತೇಶ್ವರಿ ದೇವಿ ಸನ್ನಿಧಿ



ಪೊಳಲಿ ದೇಗುಲ



ಸೋಮೇಶ್ವರ



ತೋಕೂರು



ಕಟೀಲು ದೇಗುಲ

> **ಸದೃಢ ರಾಷ್ಟ್ರವನ್ನಾಗಿ ಮಾಡುವ ಶಕ್ತಿ ನೀಡಲಿ**
>
> ನಾಯಕ ಪ್ರಧಾನಿ ನರೇಂದ್ರ ಮೋದಿಯವರು 12 ವರ್ಷ ನಿರಂತರವಾಗಿ ಕಾರ್ಯನಿರ್ವಹಿಸಿದ್ದಾರೆ. ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರು ಸೇರಿ ಉಳ್ಳಾಲ ತಾಲೂಕಿನ ಪವಿತ್ರ ಕ್ಷೇತ್ರಗಳಲ್ಲಿ ಪ್ರಾರ್ಥನೆ ನೆರವೇರಿಸಿದ್ದೇವೆ. ಮೋದಿಯವರಿಗೆ ಆರೋಗ್ಯ,ಆಯುಷ್ಯ ಮತ್ತು ಭಾರತವನ್ನು ಅಖಂಡವಾಗಿ ವಿಶ್ವದಲ್ಲಿಯೇ ಸದೃಡ ರಾಷ್ಟ್ರವನ್ನಾಗಿ ಮಾಡುವ ಶಕ್ತಿ ನೀಡಲಿ.
>
> ● ಕ್ಯಾ.ಬ್ರಿಜೇಶ್ ಚೌಟ, ಸಂಸದ

> **ಇತಿಹಾಸ ಬರೆದ ಮೋದಿ**
>
> ಚುನಾಯಿತ ಪ್ರಧಾನಿಯಾಗಿ ಜಗತ್ತಿಗೇ ತನ್ನದೇ ಆದ ನಾಯಕತ್ವ ಕೊಡುವ ಜತೆಗೆ ಆರ್ಥಿಕತೆಯಲ್ಲಿ ದೇಶದ ಪ್ರಗತಿಯನ್ನು ಜಗದತ್ತರಕ್ಕೆ ಏರಿಸಿದ ಮಹಾನುಭಾವ. ನರೇಂದ್ರ ಮೋದಿಯವರ ಆಡಳಿತದಲ್ಲಿ ಭಾರತ ಜಗದ್ಗುರು ಆಗುವ ಸಂದರ್ಭದಲ್ಲಿ ಅವರಿಗೆ ಇನ್ನಷ್ಟು ಶಕ್ತಿ ನೀಡುವಂತೆ ದೇವರಿಗೆ ಪೂಜೆ ನೆರವೇರಿಸಿದ್ದೇವೆ. ಈ ದೇಶ ಸುಭೀಕ್ಷೆ ಕಾಣಲಿ ಎಂದು ಹಾರೈಸುತ್ತಿದ್ದೇವೆ.
>
> ● ಸಂಜೀವ ಮಠಂದೂರು, ಮಾಜಿ ಶಾಸಕರು

ರಾಣಿ ಅಬ್ಬಕ್ಕ ಮಾನವೀಯ ಗುಣ ಮೆರೆದ ವೀರ ನಾರಿ: ಪುಷ್ಕಳ ಕುಮಾರ್



ಕೊಣಾಜೆ: ಉಳ್ಳಾಲದ ರಾಣಿ ಅಬ್ಬಕ್ಕನ ಪೋರ್ಚುಗೀಸರೊಂದಿಗೆ ಹೋರಾಟ ಸಂದರ್ಭದಲ್ಲೂ ಮಾನವೀಯ ಗುಣ ಮೆರೆದ ನಾರಿ ಎಂದು ಹರಿದಾಸ ತೋನ್ಸೆ ಪುಷ್ಕಳ ಕುಮಾರ್ ಹೇಳಿದರು.

ಕೈರಂಗಳ ಶಾರದಾ ಗಣಪತಿ ವಿದ್ಯಾ ಕೇಂದ್ರದಲ್ಲಿ ಆಯೋಜಿಸಿದ ಅಬ್ಬಕ್ಕ 500ರ ಸ್ಮರಣೆ ಸಮಾರಂಭದಲ್ಲಿ ಅವರು 'ವೀರರಾಣಿ ಅಬ್ಬಕ್ಕ' ಕಥಾ ಕೀರ್ತನ ಪ್ರಸ್ತುತ ಪಡಿಸಿದರು. ವಿದ್ಯಾ ಕೇಂದ್ರದ ಅಧ್ಯಕ್ಷ ಟಿಜಿ ರಾಜಾರಾಮ್ ಭಟ್ ಉದ್ಘಾಟಿಸಿದರು. ಹಿನ್ನೆಲೆಯಲ್ಲಿ ಶ್ರೀಪತಿ ಭಟ್ ಹಾರ್ಮೋನಿಯಂ, ಯಶಸ್ ಭಟ್ ಮೃದಂಗ ಸಹಕಾರ ನೀಡಿದರು. ಪ್ರಾಂಶುಪಾಲ ಚಂದ್ರ ಕುಮಾರ್ ಸ್ವಾಗತಿಸಿದರು. ಅಧ್ಯಾಪಕ ಶ್ರೀನಿವಾಸ ಭಟ್ ಸೇರಾಜೆ ನಿರೂಪಿಸಿ, ವಂದಿಸಿದರು.

ಬಲ್ನಾಡಿನ ಒಂಟಿ ವೃದ್ಧ ಮಹಿಳೆಗೆ ಶಾಸಕರಿಂದ ಎಲ್‌ಪಿಜಿ ಸಿಲಿಂಡರ್, ಒಲೆ

ಪುತ್ತೂರು: ನಗರಸಭಾ ವ್ಯಾಪ್ತಿಯ ಬಲ್ನಾಡು ಗ್ರಾಮ ವ್ಯಾಪ್ತಿಯ ಒಂಟಿಯಾಗಿದ್ದ ವೃದ್ಧ ಮಹಿಳೆಯೊಬ್ಬರಿಗೆ ಶಾಸಕ ಅಶೋಕ್ ಕುಮಾರ್ ರೈ ಎಲ್‌ಪಿಜಿ ಸಿಲಿಂಡರ್ ಮತ್ತು ಒಲೆ ನೀಡುವ ಮೂಲಕ ನೆರವಾಗಿದ್ದಾರೆ.

ಗ್ರಾಮದಲ್ಲಿ ಕಾಮಗಾರಿಗೆ ಶಿಲಾನ್ಯಾಸಕ್ಕೆ ತೆರಳಿದ್ದಸಂದರ್ಭದಲ್ಲಿಸಣ್ಣಮನೆಯೊಂದರ ಬದಿ ಏಕಾಂಗಿ ವೃದ್ಧೆಯೋರ್ವರು ನಿಂತಿದ್ದನ್ನು ಗಮನಿಸಿದ ಶಾಸಕರು ನೇರವಾಗಿ ಆ ಮನೆಗೆ ತೆರಳಿ ವಿಚಾರಿಸಿದ್ದರು. ಮಗ ಇದ್ದರೂ ಮನೆಗೆ ಬರುವುದಿಲ್ಲ ಎಂದೂ ಹೇಳಿ ಸಂಕಷ್ಟ ಹೇಳಿಕೊಂಡಿದ್ದರು. ಅವರ ಬಳಿ ಸರ್ಕಾರದಿಂದ ಸಿಗುವ ಸೌಲಭ್ಯ ಸಿಗುತ್ತದೆಯೇ ಎಂದು ಶಾಸಕರು ವಿಚಾರಿಸುವಾಗ ಗ್ಯಾರಂಟಿ ಯೋಜನೆಗಳು ದೊರೆಯುವ ಬಗ್ಗೆ ಮಾಹಿತಿ ನೀಡಿದರು. ನನ್ನ ಮನೆಯಲ್ಲಿ ಅಡುಗೆ ಮಾಡಲು ಗ್ಯಾಸ್ ಇಲ್ಲ, ಗ್ಯಾಸ್ ಒಲೆಯೂ ಇಲ್ಲ ಕೊಟ್ಟರೆ ಒಳ್ಳೆಯದಿತ್ತು ಎಂದು ಹೇಳಿದಾಗ ಶಾಸಕರು, ಅದನ್ನು ಒದಗಿಸುವ ಭರವಸೆ ನೀಡಿದ್ದರು.

ಶಾಸಕರು ಮಾತು ಕೊಟ್ಟ ಮಾತಿನಂತೆ ಒಂದೇ ದಿನದಲ್ಲಿ ಮಹಿಳೆಯ ಮನೆಗೆ ಗ್ಯಾಸ್ ಒಲೆ ಮತ್ತು ಸಿಲಿಂಡರನ್ನು ತಲುಪಿಸಿದ್ದಾರೆ. ಮಹಿಳೆಗೆ ಗ್ಯಾಸ್ ಒಲೆ ಉರಿಸಲು ಗೊತ್ತಿರಲಿಲ್ಲ, ಶಾಸಕರೇ ಅದನ್ನು ಮಹಿಳೆಗೆ ಕಲಿಸಿಕೊಟ್ಟ ಘಟನೆಯೂ ನಡೆಯಿತು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಪ್ರಸಾದ್ ಆಳ್ವ, ಪುಡಾ ಸದಸ್ಯ ನಿಹಾಲ್ ಪಿ. ಶೆಟ್ಟಿ, ಶರೀಫ್ ಬಲ್ನಾಡು, ರಾಮಣ್ಣ ಪಿಲಿಂಜ, ದಾಮೋದರ ಮುರ ಇದ್ದರು.

ಕೆವಿಜಿ ಐಪಿಎಸ್ ಪ್ರಾಂಶುಪಾಲರಾಗಿ ಅನಿಶ್ ನಾದ್ ಅಧಿಕಾರ ಸ್ವೀಕಾರ



ಸುಳ್ಯ: ಕೆವಿಜಿ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್‌ಗೆ ಪ್ರಾಂಶುಪಾಲರಾಗಿ ಅನೀಶ್ ನಾದ್ ಎಂ.ಇ. ಅಧಿಕಾರ ಸ್ವೀಕರಿಸಿದರು.

ಈ ಸಂದರ್ಭ ಎಒಎಲ್‌ಇ ಕಮಿಟಿ ಬಿ ಆಡಳಿತಾಧಿಕಾರಿ ಭವಾನಿಶಂಕರ ಅಡ್ತಲೆ ಮಾತನಾಡಿದರು. ಕೆವಿಜಿ ಐ.ಪಿ.ಎಸ್ ಉಪ ಪ್ರಾಂಶುಪಾಲೆ ಶಿಲ್ಪ ಬಿದ್ದಪ್ಪ ಉಪಸ್ಥಿತರಿದ್ದರು.

ಶೈಕ್ಷಣಿಕ ಕ್ಷೇತ್ರದಲ್ಲಿ 24 ವರ್ಷಗಳ ಅನುಭವ ಹೊಂದಿರುವ ಅನಿಶ್ ನಾದ್ ಬಿ.ಕೆ. ಬಿರ್ಲಾ, ಜಿ.ಡಿ. ಗೊಯೆಂಕಾ ಹಾಗೂ ಎಂಐಟಿ, ವಿ.ಜಿ.ಎಸ್. ಬಾರ್ಶಿ ಮುಂತಾದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಂಶುಪಾಲ, ಶೈಕ್ಷಣಿಕ ಆಡಳಿತಗಾರರಾಗಿ ಸೇವೆ ಸಲ್ಲಿಸಿದ್ದಾರೆ.

ಬೆಳಿಗ್ಗೆ 6ರಿಂದಲೇ ಕಾರ್ಯಾಚರಣೆ | ಬಂಟ್ವಾಳ ಸಂಚಾರಿ ಪೊಲೀಸರಿಂದ ಸ್ಕೂಲ್ ಬಸ್‌ಗಳ ದಾಖಲಾತಿಗಳ ಪರಿಶೀಲನೆ

ನಿಯಮ ಉಲ್ಲಂಘಿಸಿದ ಖಾಸಗಿ ಶಿಕ್ಷಣ ಸಂಸ್ಥೆಗಳ ಬಸ್ ವಿರುದ್ಧ ಪ್ರಕರಣ ದಾಖಲು

ಬಂಟ್ವಾಳ: ಬುಧವಾರ ಬೆಳ್ಳಂಬೆಳಿಗ್ಗೆ ಸ್ಕೂಲ್ ಬಸ್‌ಗಳಿಗೆ ಬಂಟ್ವಾಳ ಸಂಚಾರಿ ಪೊಲೀಸರಿಂದ ಶಾಕ್ ಕಾದಿತ್ತು. ನಿಯಮ ಉಲ್ಲಂಘಿಸಿ ಶಾಲಾ ಮಕ್ಕಳನ್ನು ಕರೆದೊಯ್ಯುತ್ತಿದ್ದ ಖಾಸಗಿ ಶಿಕ್ಷಣ ಸಂಸ್ಥೆಯ ಮಿನಿಬಸ್‌ಗಳ ವಿರುದ್ಧ ಸುಮಾರು 20 ಪ್ರಕರಣಗಳನ್ನು ಬಂಟ್ವಾಳ ಸಂಚಾರಿ ಪೊಲೀಸರು ಒಂದೇ ದಿನದಲ್ಲಿ ದಾಖಲಿಸಿಕೊಂಡಿದ್ದಾರೆ.

ಬೆಳಿಗ್ಗೆ 6 ಗಂಟೆಯಿಂದಲೇ ಟ್ರಾಫಿಕ್ ಎಸ್‌ಐ ಆದರ್ಶ್ ಅವರ ನೇತೃತ್ವದಲ್ಲಿ ಕಾರ್ಯಾಚರಣೆಗಿಳಿದ ಸಂಚಾರಿ ಪೊಲೀಸರು ಬಿ.ಸಿ.ರೋಡಿನ ವೃತ್ತ ಬಳಿ ಖಾಸಗಿ ಶಿಕ್ಷಣ ಸಂಸ್ಥೆಗೆ ಸೇರಿದ ಬಹುತೇಕ ಮಿನಿ ಬಸ್‌ಗಳನ್ನು ತಡೆದು ನಿಲ್ಲಿಸಿ ತಪಾಸಣೆ ನಡೆಸಿದ್ದಾರೆ. ಶಾಲಾ ಮಕ್ಕಳನ್ನು ಕರೆದೊಯ್ಯುವ ಸ್ಕೂಲ್ ಬಸ್‌ಗಳು ನಿಗದಿತ ಮಕ್ಕಳಿಗಿಂತ ಹೆಚ್ಚುವರಿ ಮಕ್ಕಳನ್ನು





ಕರದೊಯ್ಯಲಾಗುತ್ತಿದೆಯಾ, ವಾಹನದ ದಾಖಲಾತಿಗಳು ಸಮರ್ಪಕವಾಗಿದೆಯಾ ಮತ್ತು ನಿಯಮಗಳನ್ನು ಪಾಲಿಸುತ್ತಿದೆಯಾ ಎಂಬುದನ್ನು ಸಂಚಾರಿ ಪೊಲೀಸರು ಪರಿಶೀಲಿಸಿ ಖಚಿತಪಡಿಸಿಕೊಂಡರು.

ನಿಯಾಮ ಪಾಲಿಸದ ಚಾಲಕರಿಗೆ ಹಾಗೂ ದಾಖಲಾತಿ ಇಲ್ಲದಿರುವ ಬಸ್‌ಗಳಿಗೆ ಕೇಸು ಹಾಕಿ ಎಚ್ಚರಿಸಿದ್ದಾರೆ. ಈ ಸಂದರ್ಭ ವಿವಿಧ ನಿಯಮ ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಸುಮಾರು 20 ಪ್ರಕರಣಗಳು ದಾಖಲು ಮಾಡಿದ್ದಾರೆ. ಇವುಗಳ ಪೈಕಿ ಚಾಲಕ ಸಮವಸ್ತ್ರ ಹಾಕದಿರುವ ಆರು ಚಾಲಕರು, ನಿಗದಿತ ಮಕ್ಕಳಿಗಿಂತ ಹೆಚ್ಚುವರಿಯಾಗಿ ಮಕ್ಕಳನ್ನು ಬಸ್‌ಗಳಲ್ಲಿ ಕರೆದೊಯ್ಯುತ್ತಿರುವ 4 ಶಾಲಾ ಬಸ್ ಗಳಿಗೆ, ಫಿಟ್ ನೆಸ್ ಪ್ರಮಾಣ ಪತ್ರದ ಅವಧಿ ಮುಗಿದ ಒಂದು ಬಸ್ ಹಾಗೂ ದಾಖಲೆಗಳಿಲ್ಲದೆ ವಾಹನಗಳಿಗೆ ಕೇಸು ದಾಖಲು ಮಾಡಿದ್ದಾರೆ. ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳಲ್ಲಿ ಮಕ್ಕಳ ಸುರಕ್ಷತಾ ದೃಷ್ಟಿಯಿಂದ ಇಲಾಖೆಯ ನಿಯಮಗಳನ್ನು ಅಗತ್ಯವಾಗಿ ಪಾಲಿಸಬೇಕು. ಮಳೆಗಾಲದಲ್ಲಿ ಜಾಗರೂಕತೆಯಿಂದ ವಾಹನ ಚಲಾಯಿಸಬೇಕು. ಚಾಲಕರು ಮುಂಜಾಗ್ರತಾ ಕ್ರಮವನ್ನು ಅನುಸರಿಸಬೇಕು. ನಿಯಮಗಳನ್ನು ಉಲ್ಲಂಘಿಸಿ ವಾಹನ ಚಲಾಯಿಸುವ ಸ್ಕೂಲ್ ಬಸ್ ಹಾಗೂ ಚಾಲಕರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದಾಗಿ ಟ್ರಾಫಿಕ್ ಎಸ್.ಐ.ಆದರ್ಶ್ ಎಚ್ಚರಿಸಿದ್ದಾರೆ.

ಪಾಲಿಸಬೇಕಾದ ನಿಯಮಗಳು

ಪ್ರತಿಯೊಂದು ಸ್ಕೂಲ್ ಬಸ್ ಗಳಲ್ಲಿ ಮಕ್ಕಳ ಸುರಕ್ಷಾ ದೃಷ್ಟಿಯಿಂದ ಕಿಟಕಿಗಳಿಗೆ ಗ್ರಿಲ್ಸ್ ಅಳವಡಿಸಬೇಕು, ಜಿ.ಪಿ.ಎಸ್. ಟ್ರಾಕಿಂಗ್ ಹೊಂದಿರಬೇಕು. ಸ್ಪೀಡ್ ಗವರ್ನರ್ ಅಳವಡಿಸಿರಬೇಕು. ಸಿಸಿ ಟಿವಿ ಹೊಂದಿರಬೇಕು.,ಮಕ್ಕಳನ್ನು ಬಸ್ ನೊಳಗೆ ಹತ್ತಿಸಲು ಮತ್ತು ಇಳಿಸಲು ಸಹಾಯಕರಿರಬೇಕು. ಪ್ರಥಮ ಚಿಕಿತ್ಸಾ ಪೆಟ್ಟಿಗೆ ಹೊಂದಿರಬೇಕು. ತುರ್ತು ಕಿಟಕಿ ಹೊಂದಿರಬೇಕು. ಬಾಗಿಲು ಚಿಲಕ ಹೊಂದಿರಬೇಕು, ವಾಹನ ಫಿಟ್ ನೆಸ್ ಪ್ರಮಾಣ ಪತ್ರ ಹೊಂದಿರಬೇಕು. ವಾಹನದ ವಿಮೆ ಸರಿಯಾಗಿರಬೇಕು. ನಿಯಮ ಉಲ್ಲಂಘಿಸಿದರೆ ವಾಹನಗಳ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದಾಗಿ ಎಚ್ಚರಿಸಿದ್ದಾರೆ.

ಸುತ್ತಮುತ್ತ

ಇಂದು ಕಾವೂರು, ಕದ್ರಿ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

ಮಂಗಳೂರು: ಕಾವೂರು ಉಪಕೇಂದ್ರದಿಂದ ಹೊರಡುವ 11ಕೆವಿ ವಾಮಂಜೂರು ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಜೂ.11 ಗುರುವಾರದಂದು ಬೆಳಿಗ್ಗೆ 10 ರಿಂದ ಸಂಜೆ 05 ಗಂಟೆಯವರೆಗೆ ಪಚ್ಚನಾಡಿ, ದೇವಿನಗರ, ವಾಮಂಜೂರು, ಮಂಗಳಾನಗರ, ಅಮೃತನಗರ, ಆರ್.ಟಿ.ಓ ಟೆಸ್ಟ್ ಯಾರ್ಡ್,ಸಂತೋಷನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಕದ್ರಿ ವ್ಯಾಪ್ತಿಯಲ್ಲೂ ವಿದ್ಯುತ್ ನಿಲುಗಡೆ

ಕದ್ರಿ ಉಪಕೇಂದ್ರದಿಂದ ಹೊರಡುವ 11ಕೆವಿ ಕದ್ರಿ ಟೆಂಪಲ್ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿ ರುವುದರಿಂದ ಜೂ.11 ಗುರುವಾರದಂದು ಬೆಳಿಗ್ಗೆ 1 ರಿಂದ ಸಂಜೆ 05 ಗಂಟೆಯವರೆಗೆ ಆಳ್ವಾರಿಸ್ ರಸ್ತೆ, ಕೈಬಟ್ಟಲ್, ಚರ್ಚ್ ಮಾರ್ಟಿಸ್ ರಸ್ತೆ, ಟೆಂಪಲ್ ರಸ್ತೆ, ಕದ್ರಿ ಟೆಂಪಲ್, ಮಂಜುಶ್ರೀ ಲೇಔಟ್,ಕದ್ರಿ ಟೆಂಪಲ್ ನ್ಯೂರಸ್ತೆ, ಕದ್ರಿ ಕಂಬಳ ರಸ್ತೆ, ಸರ್ಕ್ಯೂಟ್ ಹೌಸ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಶಿಕ್ಷಣ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ

ಪುತ್ತೂರು: ಪುತ್ತೂರು ಮತ್ತು ಸುಳ್ಯದ ಪ್ರಮುಖ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಲು ಅರ್ಹ ಹಾಗೂ ಆಸಕ್ತ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಖಾಲಿ ಇರುವ ಹುದ್ದೆಗಳು: ಅಡ್ಮಿನ್ (ಅಡ್ಮಿನಿಸ್ಟ್ರೇಟಿವ್ ಸ್ಟಾಫ್), ಕಚೇರಿ ಸಹಾಯಕಿಯರು(ಆಫೀಸ್ ಸ್ಟಾಫ್), ವಿದ್ಯಾರ್ಹತೆ: ಯಾವುದೇ ಪದವಿ ಮುಗಿಸಿರಬೇಕು, ತಾಂತ್ರಿಕ ಜ್ಞಾನ: ಬೇಸಿಕ್ ಕಂಪ್ಯೂಟರ್ ಜ್ಞಾನ ಕಡ್ಡಾಯ, ಅನುಭವ ಇರುವವರಿಗೆ ಆದ್ಯತೆ(ಆದರೆ, ಸೂಕ್ತ ಅರ್ಹತೆ ಇದ್ದರೆ, ಅನುಭವ ಇಲ್ಲದ ಫ್ರೆಶರ್‌ಗ ಳಿಗೂ ಮುಕ್ತ ಅವಕಾಶವಿದೆ). ನಗರದ ಎಪಿಎಂಸಿ ರಸ್ತೆಯಲ್ಲಿರುವ ವಿದ್ಯಾಮಾತಾ ಅಕಾಡೆಮಿಯಲ್ಲಿ ಜೂ.13 ಮತ್ತು 14ರಂದು ಬೆಳಗ್ಗೆ 11.30ರಿಂದ ಸಂದರ್ಶನ ನಡೆಯಲಿದೆ. ಅಪ್‌ಡೇಟೆಡ್ ಬಯೋಡೇಟಾ ಮತ್ತು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಫೋಟೋ ತರಬೇಕಾದ ದಾಖಲೆಗಳಾಗಿವೆ. ಸಂಪರ್ಕ: 8590773486 / 9148935808

ಕೋಟೇಶ್ವರದ ಪ್ರಿಮ್ ರೋಸ್ ಶಾಲೆಯಲ್ಲಿ ಶೈಕ್ಷಣಿಕ ವರ್ಷದ ಆರಂಭ



ಕುಂದಾಪುರ: ಚಿರಂತನ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಮುನ್ನಡೆಸುತ್ತಿರುವ ಕುಂದಾಪುರ ಕೋಟೇಶ್ವರದ ಪ್ರಿಮ್‌ರೋಸ್ ಫೌಂಡೇಶನ್ ಶಾಲೆಯಲ್ಲಿ ಹೊಸ ಶೈಕ್ಷಣಿಕ ವರ್ಷದ ಮೊದಲ ದಿನವನ್ನು ಸೋಮವಾರ ಅತ್ಯಂತ ಸಂಭ್ರಮ ಮತ್ತು ಸಡಗರದಿಂದ ಆಚರಿಸಲಾಯಿತು.

ಮಕ್ಕಳನ್ನು ಸ್ವಾಗತಿಸಲು ಶಾಲೆಯನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಶಾಲೆಯ ಮೊದಲ ದಿನದ ಪ್ರಮುಖ ಆಕರ್ಷಣೆಯಾಗಿ, ಮೆಂಟರ್‌ಗಳಾದ ಮಂಜುಳಾ ಮತ್ತು ರೇಷ್ಮಾ ಅವರು ಶಾಲೆಯ ಹೊಸ್ತಿಲು ತುಳಿದ ಪುಟಾಣಿ ಮಕ್ಕಳಿಗೆ ಸಾಂಪ್ರದಾಯಿಕವಾಗಿ ಬರಮಾಡಿಕೊಂಡರು. ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕಿ ಡಾ. ಚಿಂತನಾ ರಾಜೇಶ್, ಅಕಾಡೆಮಿಕ್ ಲೀಡ್ ವಿಲ್ಮಾ ಡಿಸಿಲ್ವಾ ಹಾಗೂ ಪ್ರಾಂಶುಪಾಲೆ ವಿನುತಾ ಬಿ. ಶೆಟ್ಟಿ ಅವರು ಉಪಸ್ಥಿತರಿದ್ದು, ಮಕ್ಕಳಿಗೆ ಮತ್ತು ಪೋಷಕರಿಗೆ ಆತ್ಮೀಯ ಸ್ವಾಗತ ಕೋರಿ, ಹೊಸ ಶೈಕ್ಷಣಿಕ ವರ್ಷಕ್ಕೆ ಶುಭ ಹಾರೈಸಿದರು.

ಪರಿಸರ ದಿನ ಆಚರಣೆ

ಸುಬ್ರಹ್ಮಣ್ಯ: ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ಜನಾಂಗದ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಶಾಲಾ ಆವರಣದಲ್ಲಿ ಗಿಡ ನೆಡುವುದರ ಮೂಲಕ ವಿಶ್ವ ಪರಿಸರ ದಿನವನ್ನು ಆಚರಿಸಿದರು.

ಶಾಲಾ ಪ್ರಭಾರ ಮುಖ್ಯ ಶಿಕ್ಷಕಿ ಮಲ್ಲಿಕಾ, ಶಿಕ್ಷಕಿಯರಾದ ಜೀವಿತಾ, ಭವ್ಯಾ, ಕವಿತಾ, ಗೀತಾ, ಸುಧಾ, ಹರ್ಷಿತಾ ಹಾಗೂ ಪೋಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸೋಮೇಶ್ವರದಲ್ಲಿ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ಆರು ವರ್ಷಗಳ ಸಂಭ್ರಮಾಚರಣೆ

ಬೀದಿಬದಿ ವ್ಯಾಪಾರಿಗಳ ಸ್ವಾವಲಂಬಿ ಜೀವನಕ್ಕೆ ದಾರಿದೀಪ

ಉಳ್ಳಾಲ: ಪ್ರಧಾನಿ ನರೇಂದ್ರ ಮೋದಿ ಅವರ ದೂರ ದೃಷ್ಟಿಯ ಕಲ್ಪನೆಯಾದ ಪಿಎಮ್ ಸ್ವನಿಧಿ ಯೋಜನೆಯು ಕೋವಿಡ್-19 ನಂತರ ಸಂಕಷ್ಟದಲ್ಲಿದ್ದ ಬೀದಿಬದಿ ವ್ಯಾಪಾರಿಗಳಿಗೆ ಆರ್ಥಿಕ ಪುನಶ್ಚೇತನ ನೀಡುವ ಉದ್ದೇಶದಿಂದ ಜಾರಿಗೊಂಡಿದ್ದು, ಈ ಯೋಜನೆಯಿಂದ ಲಕ್ಷಾಂತರ ವ್ಯಾಪಾರಿಗಳಿಗೆ ಸ್ವಾವಲಂಬಿ ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗಿದೆ ಎಂದು ಸೋಮೇಶ್ವರ ಪುರಸಭೆಯ ಉಪಾಧ್ಯಕ್ಷ ರವಿಶಂಕರ್ ಸೋಮೇಶ್ವರ ಅಭಿಪ್ರಾಯಪಟ್ಟರು.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಪ್ರಧಾನ ಮಂತ್ರಿ ಸ್ವನಿಧಿ (ಪಿಎಮ್ ಸ್ವನಿಧಿ) ಯೋಜನೆಯ ಆರು ವರ್ಷಗಳ ಸಂಭ್ರಮಾಚರಣೆ ಅಂಗವಾಗಿ ಸೋಮೇಶ್ವರ ಪುರಸಭೆಯ ವತಿಯಿಂದ ಹಮ್ಮಿಕೊಳ್ಳಲಾದ 'ಲೋಕ ಕಲ್ಯಾಣ ಮೇಳ' ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು.

ಯೋಜನೆಯ ಪ್ರಯೋಜನ ಪಡೆಯಿರಿ

ಪುರಸಭೆ ಮುಖ್ಯಾಧಿಕಾರಿ ಮತ್ತಡಿ ಮಾತನಾಡಿ, ಪಿಎಮ್ ಸ್ವನಿಧಿ ಯೋಜನೆಯ ಮೂಲಕ ಬೀದಿಬದಿ ವ್ಯಾಪಾರಿಗಳಿಗೆ ಸುಲಭ ಸಾಲ ಸೌಲಭ್ಯ ದೊರೆಯುತ್ತಿದ್ದು, ಸ್ವನಿಧಿ ಸೇ ಸಮೃದ್ಧಿ ಅಭಿಯಾನದ ಮೂಲಕ ವಿವಿಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾಮಾಜಿಕ ಭದ್ರತಾ ಹಾಗೂ ಕಲ್ಯಾಣ ಯೋಜನೆಗಳ ಪ್ರಯೋಜನಗಳನ್ನು ತಲುಪಿಸಲಾಗುತ್ತಿದೆ ಎಂದ ಅವರು, 'ರೋಲ್ ಔಟ್ ಆಫ್ ಪಿಎಮ್ ಸ್ವನಿಧಿ' ಕಾರ್ಯಕ್ರಮದಡಿ ಹೊಸ ಅರ್ಹ ಬೀದಿಬದಿ ವ್ಯಾಪಾರಿಗಳು ಯೋಜನೆಯ ಪ್ರಯೋಜನ ಪಡೆಯುವಂತೆ ಮನವಿ ಮಾಡಿದರು.



ವಿವಿಧ ಸಾಮಾಜಿಕ ಭದ್ರತೆಗಳು

ಡೇ ನಲ್ಮ್ ಹಾಗೂ ಪಿಎಮ್ ಸೇವಾನಿಧಿ ಜಿಲ್ಲಾ ಅಭಿಯಾನ ವ್ಯವಸ್ಥಾಪಕ ಅಚ್ಯುತ ನಾಯ್ಕ್ ಮೂಡುಬಗೆ ಮಾತನಾಡಿ, ಯೋಜನೆಯ ಉದ್ದೇಶಗಳು, ಸಾಲ ಸೌಲಭ್ಯಗಳು, ಯೋಜನೆಯಡಿ ಸಕಾಲದಲ್ಲಿ ಸಾಲ ಮರುಪಾವತಿ ಮಾಡುವ ಫಲಾನುಭವಿಗಳಿಗೆ ಹೆಚ್ಚಿನ ಮೊತ್ತದಮುಂದಿನಹಂತದಸಾಲ,ಬಡ್ಡಿಸಹಾಯಧನ ಹಾಗೂ ಡಿಜಿಟಲ್ ವ್ಯವಹಾರಗಳಿಗೆ ಪ್ರೋತ್ಸಾಹ ಧನ ದೊರೆಯುತ್ತಿರುವುದು ಯೋಜನೆಯ ವಿಶೇಷತೆಯಾಗಿದೆ. ಡಿಜಿಟಲ್ ವಹಿವಾಟು ಪ್ರೋತ್ಸಾಹಧನ, ಬಡ್ಡಿ ಸಹಾಯಧನ ಹಾಗೂ ಸ್ವನಿಧಿ ಸೇ ಸಮೃದ್ಧಿ ಅಭಿಯಾನದಡಿ ದೊರೆಯುವ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳ ಕುರಿತು ಮಾಹಿತಿ ನೀಡಿದರು.

ಬೀದಿಬದಿ ವ್ಯಾಪಾರಿಗಳ ಸಾಮಾಜಿಕ, ಆರ್ಥಿಕ ಸಮೀಕ್ಷೆ

ಬೀದಿಬದಿ ವ್ಯಾಪಾರಿಗಳ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಲಾಯಿತು.ಸಮೀಕ್ಷೆಯಲ್ಲಿ ಗುರುತಿಸಲಾದ ಅರ್ಹ ವ್ಯಾಪಾರಿಗಳನ್ನು ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳ ಪ್ರಯೋಜನ ಪಡೆಯುವಂತೆ ಸಂಬಂಧಿತ ಇಲಾಖೆಗಳೊಂದಿಗೆ ಸಂಪರ್ಕ ಕಲ್ಪಿಸಲಾಯಿತು. ಕಾರ್ಯಕ್ರಮದಲ್ಲಿ ಪುರಸಭೆ ವ್ಯಾಪ್ತಿಯ ಅನೇಕ ಬೀದಿಬದಿ ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಇನ್ನಷ್ಟು ವ್ಯಾಪಾರಿಗಳ ಸೇರ್ಪಡೆ

'ರೋಲ್ ಔಟ್ ಆಫ್ ಪಿಎಮ್ ಸೇವಾನಿಧಿ' ಅಭಿಯಾನದಡಿ ಜನಗಣತಿ ಪಟ್ಟಿಗಳನ್ನು ಯೋಜನೆಯ ವ್ಯಾಪ್ತಿಗೆ ಒಳಪಡಿಸಿ,ಅರ್ಹ ಬೀದಿಬದಿ ವ್ಯಾಪಾರಿಗಳನ್ನು ಗುರುತಿಸಿ ಯೋಜನೆಗೆ ಸೇರ್ಪಡೆಗೊಳಿಸುವ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಸೋಮೇಶ್ವರ ಪುರಸ ಭೆಯ ಅಧ್ಯಕ್ಷ ಕಮಲ ಉದ್ಘಾಟಿಸಿದರು. ಈ ಸಂದರ್ಭ ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಪುರುಷೋತ್ತಮ ಗಟ್ಟಿ ಪರ್ಯತ್ತೂರು, ಹಿರಿಯ ಆರೋಗ್ಯ ನಿರೀಕ್ಷಕ ಲಿಲ್ಲಿ ನಾಯರ್, ಪರಿಸರ ಅಭಿಯಂತರ ಪುನೀತ್, ಸುರೇಖಾ ಮೊದಲಾದವರು ಉಪಸ್ಥಿತರಿದ್ದರು.

ವಿಶಾಲಾಕ್ಷಿ ಸ್ವಾಗತಿಸಿ, ಸ್ವಪ್ನಾ ನಿರೂಪಿಸಿದರು.

ಶ್ರೀ ಕ್ಷೇ. ಧ. ಗ್ರಾ. ಯೋಜನೆ ಕಲ್ಲಡ್ಕ, ಗೋಳ್ತಮಜಲು 'ಎ' ಒಕ್ಕೂಟದ ಸಭೆ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ವಿಟ್ಲ ಇದರ ಕಲ್ಲಡ್ಕ ವಲಯದ ಕಲ್ಲಡ್ಕ ಹಾಗೂ ಗೋಳ್ತಮಜಲು 'ಎ' ಒಕ್ಕೂಟದ ತ್ರೈಮಾಸಿಕ ಸಭೆಯು ಕಲ್ಲಡ್ಕ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಸಭಾಭವನದಲ್ಲಿ ನಡೆಯಿತು.

ಅಧ್ಯಕ್ಷತೆಯನ್ನು ಕಲ್ಲಡ್ಕ ವಲಯ ಅಧ್ಯಕ್ಷ ತುಳಸಿ ವಹಿಸಿದ್ದರು. ಗ್ರಾಮಾಭಿವೃದ್ಧಿ ಯೋಜನೆಯ ಕಲ್ಲಡ್ಕ ವಲಯ ಮೇಲ್ವಿಚಾರಕ ಶುಕರಾಜ್, ಯೋಜನೆಯ ಗುಂಪುಗಳ ಕಾರ್ಯ, ಜವಾಬ್ದಾರಿ, ಗುಂಪುಗಳಿಗೆ ನೀಡಲಾಗುವ ಸಾಲ ಸೌಲಭ್ಯಗಳು, ಆರೋಗ್ಯ ವಿಮೆ ಹಾಗೂ ಪ್ರಸಕ್ತ ಸಾಲಿನಲ್ಲಿ ಕಲ್ಲಡ್ಕ ಹಾಗೂ ಗೋಳ್ತಮಜಲು 'ಎ'ಒಕ್ಕೂಟ ವ್ಯಾಪ್ತಿಯಲ್ಲಿ ಯೋಜನೆಯಿಂದ ದೊರೆತ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಈ ಸಂದರ್ಭ ಗೋಳ್ತಮಜಲು 'ಎ' ಒಕ್ಕೂಟವನ್ನು ಕಲ್ಲಡ್ಕ ಒಕ್ಕೂಟದೊಂದಿಗೆ ವಿಲೀನಗೊಳಿಸಿ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಚಿದಾನಂದ ಪಟ್ಟಕೋಡಿ, ಉಪಾಧ್ಯಕ್ಷರಾಗಿ ಲೀಲಾವತಿ ಕೊಳಕಿರು, ಕಾರ್ಯದರ್ಶಿಯಾಗಿ ಸ್ವರ್ಣಲತಾ ಮನಿಮಾಜಲ್, ಜೊತೆ ಕಾರ್ಯದರ್ಶಿಯಾಗಿ ಧನಂಜಯ ಬೊಂಡಲ, ಕೊಶಾಧಿಕಾರಿಯಾಗಿ ವಿನೋದ ಹಾಗೂ ವೆಂಕಪ್ಪ ಗೋಳ್ತಮಜಲು, ಗೀತಾ ಗೋಳ್ತಮಜಲು, ದಾಖಲಾತಿ ಸಮಿತಿಯಲ್ಲಿ ಶಶಿಕಲಾ, ಅರುಣಾಕ್ಷಿ, ತ್ರಿವೇಣಿ ಅವರನ್ನು ಆಯ್ಕೆ ಮಾಡಲಾಯಿತು.

ಗೋಳ್ತಮಜಲು 'ಎ' ಒಕ್ಕೂಟದ ಅಧ್ಯಕ್ಷ ಮಮತಾ, ಪದಾಧಿಕಾರಿಗಳಾದ ಉಷಾ, ಬೇಬಿ, ಮಮತಾ, ವೆಂಕಪ್ಪ ದೇವಕಿ, ಸೇವಾ ಪ್ರತಿನಿಧಿ ಅಶ್ವಿನಿ ಉಪಸ್ಥಿತರಿದ್ದರು. ಕಲ್ಲಡ್ಕ ಶೌರ್ಯ ವಿಪತ್ತು ನಿರ್ವಹಣಾ ತಂಡದ ಸಂಯೋಜಕಿ ವಿದ್ಯಾ ಕಾರ್ಯಕ್ರಮ ನಿರೂಪಿಸಿದರು.

ಸಂತ ಫಿಲೋಮಿನಾ ಕಾಲೇಜಿನಲ್ಲಿ ವೃತ್ತಿಪರ ಆಯ್ಕೆಗಳ ಕುರಿತು ಕಾರ್ಯಾಗಾರ



ಪುತ್ತೂರು: ಸಂತ ಫಿಲೋಮಿನಾ ಪದವಿ ಪೂರ್ವ ಕಾಲೇಜು ಹಾಗೂ ವಾಣಿಜ್ಯ ಸಂಘದ ಆಶ್ರಯದಲ್ಲಿ ವಾಣಿಜ್ಯ ವಿಭಾಗದಲ್ಲಿ ವೃತ್ತಿಪರ ಆಯ್ಕೆಗಳ ಕುರಿತಾಗಿ ಮಾಹಿತಿ ಕಾರ್ಯಾಗಾರ ಬುಧವಾರ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿದ್ದ ಚಾರ್ಟೆಡ್ ಅಕೌಂಟೆಂಟ್ ಸ್ವಸ್ತಿಕ್ ಪಿ. ಬೆಂಗಳೂರು ಮಾತನಾಡಿ, ವಾಣಿಜ್ಯ ವಿಭಾಗವು ವ್ಯವಹಾರ ಕ್ಷೇತ್ರದ ಭಾಷೆಯಾಗಿದ್ದು, ವಾಣಿಜ್ಯ ವಿಭಾಗದಲ್ಲಿ ವಿಪುಲವಾದ ಅವಕಾಶಲಿವೆ. ಈ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಲು ವಿದ್ಯಾರ್ಥಿಗಳು ಪ್ರಯತ್ನಿಸಬೇಕು. ಲೆಕ್ಕ ಪರಿಶೋಧಕ (ಚಾರ್ಟೆಡ್ ಅಕೌಂಟೆಂಟ್) ಕ್ಷೇತ್ರವು ವಿಪುಲ ಅವಕಾಶಗಳ ಕ್ಷೇತ್ರವಾಗಿದ್ದು, ಕಠಿಣ ಪರಿಶ್ರಮದ ಮೂಲಕ ಇಲ್ಲಿ ಯಶಸ್ಸನ್ನು ಸಾಧಿಸಬಹುದು. ಹಾಗೆಯೇ, ಹಣಕಾಸು ವ್ಯವಹಾರ, ಬ್ಯಾಂಕಿಂಗ್ ಮುಂತಾದ ವಿಭಾಗಗಳಲ್ಲೂ ಸಾಕಷ್ಟು ಅವಕಾಶಗಳಿವೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ರೆ.ಫಾ. ಅಶೋಕ್ ರಾಯನ್ ಕ್ರಾಸ್ತಾ ಮಾತನಾಡಿ, ವಾಣಿಜ್ಯ ವಿಭಾಗವು ದಿನನಿತ್ಯದ ವ್ಯವಹಾರದೊಂದಿಗೆ ಉತ್ತಮ ಸಂಪರ್ಕ ಹೊಂದಿರುವ ವಿಭಾಗವಾಗಿದ್ದು, ನೀವು ಕಲಿತ ವಿದ್ಯೆ ನಿತ್ಯ ಜೀವನದಲ್ಲಿ ಉಪಯೋಗಕ್ಕೆ ಬರುತ್ತದೆ. ಕಠಿಣ ಪರಿಶ್ರಮ ಮತ್ತು ಆಸಕ್ತಿಯಿಂದ ಕಲಿತು ಉತ್ತಮ ಅಂಕಗಳೊಂದಿಗೆ ಯಶಸ್ಸನ್ನು ಸಾಧಿಸಬೇಕೆಂದು ಹೇಳಿದರು.

ವಾಣಿಜ್ಯ ವಿಭಾಗದ ಮುಖ್ಯಸ್ಥ ಗೋವಿಂದ ಪ್ರಕಾಶ್ ಸಿ.ಎಚ್. ಉಪಸ್ಥಿತರಿ ದ್ದರು. ವಿದ್ಯಾರ್ಥಿಗಳಾದ ಗುಣಿಕ ನಾಯಕ್ ಸ್ವಾಗತಿಸಿ, ಸ್ನೇಹಾ ವಂದಿಸಿದರು. ಸ್ವಿನಿಕಾ ವಿಯೋಲ ಕ್ರಾಸ್ತಾ ಕಾರ್ಯಕ್ರಮ ನಿರ್ವಹಿಸಿದರು.



ಕಿನ್ನಿಗೋಳಿ ರಾಮ ಮಂದಿರದಲ್ಲಿ ಸೋಮವಾರ ರಾಮ ಮಂದಿರದಲ್ಲಿ ಅಧಿಕ ಮಾಸದ ಪ್ರಯುಕ್ತ ಶ್ರೀ ರಾಮ ನಾಮ ತಾರಕ ಮಂತ್ರ ಹವನ ವೇ.ಗಿರೀಶ್ ಭಟ್ ಅವರ ನೇತೃತ್ವದಲ್ಲಿ ನಡೆಯಿತು. ವಿನಾಯಕ ಭಟ್, ಉಮೇಶ್ ಭಟ್, ಗೋವರ್ಧನ್ ಭಟ್, ರಘುನಂದನ್ ಭಟ್ ಹಾಗೂ ಅಧ್ಯಕ್ಷರಾದ ಶ್ರೀ ರಾಜೇಶ್ ನಾಯಕ್, ಕಾರ್ಯದರ್ಶಿ ರಾಘವೇಂದ್ರ ಪ್ರಭು ಮೊದಲಾದವರು ಉಪಸ್ಥಿತರಿದ್ದರು.



ಪರಿಸರ ದಿನಾಚರಣೆಯ ಅಂಗವಾಗಿ ರೋಟರಿ ಆಂಗ್ಲ ಮಾಧ್ಯಮ ಪ್ರೌಢಶಾಲೆ ವತಿಯಿಂದ ಕಿನ್ನಿಗೋಳಿಯಲ್ಲಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಅಂಗಡಿ ಮುಂಗಟ್ಟುಗಳಿಗೆ, ಆಟೋ ಚಾಲಕರಿಗೆ ಮತ್ತು ಸಾರ್ವಜನಿಕರಿಗೆ ಪರಿಸರ ಸಂರಕ್ಷಣೆಯ ಜಾಗೃತಿಗಾಗಿ ಗಿಡ ವಿತರಿಸುವ ಮೂಲಕ ಪರಿಸರ ಸಂರಕ್ಷಣೆಯ ಮಹತ್ವವನ್ನು ಮೂಡಿಸಲಾಯಿತು. ರೋಟರಿ ಕ್ಲಬ್ ಅಧ್ಯಕ್ಷ ಸಾಯಿನಾಥ್ ಶೆಟ್ಟಿ, ಪ್ರವೀಣ್ ಸಾಲ್ಯಾನ್, ಮುಖ್ಯೋಪಾಧ್ಯಾಯಿನಿ ಸುನೀತಾ ಗುರುರಾಜ್ ಆಡಳಿತಾಧಿಕಾರಿ ಭರತ್ ಕುಮಾರ್, ಶಿಕ್ಷಕಿಯರಾದ ಶಾಂತಾ, ಗಂಗಾದೇವಿ, ಸರಿತಾ ಹಾಗೂ ಡೆನ್ಸಿಲ್ಲಾ ಸಿಯಾನ ಮೊದಲಾದವರು ಉಪಸ್ಥಿತರಿದ್ದರು.

ಕಾರ್ಯಕರ್ತರ ಬೆವರಿಗೆ ಬೆಲೆ ಸಿಗುವಂತೆ ಕೆಲಸ ಮಾಡಿ: ಕೊಡ್ಗಿ



ಕುಂದಾಪುರ: ಕುಂದಾಪುರ ವಿಧಾನಸಭಾ ಕ್ಷೇತ್ರದ ಮಡಮಕ್ಕಿ, ಆರ್ಡಿ ಮತ್ತು ಬೆಳ್ವೆ ಗ್ರಾ.ಪಂ. ವ್ಯಾಪ್ತಿಯ ಬಿಜೆಪಿ ಶಕ್ತಿ ಕೇಂದ್ರಗಳ ನೂತನ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳ ಆಯ್ಕೆ ಸೋಮವಾರ ನಡೆಯಿತು.

ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಮಾತನಾಡಿ, ಶಕ್ತಿಕೇಂದ್ರ ಅಂದರೆ ಪಕ್ಷದ ಪವರ್‌ಹೌಸ್. ಬೂತ್ ಗೆದ್ದರೆ ದೇಶ ಗೆದ್ದಂತೆ. ನೂತನ ತಂಡ ತಕ್ಷಣ ಫೀಲ್ಡ್‌ಗಿಳಿದು ಮೋದಿ ಸರ್ಕಾರದ ಯೋಜನೆಗಳನ್ನು ಪ್ರತಿ ಮನೆಗೂ ತಲುಪಿಸಬೇಕು. ಕಾರ್ಯಕರ್ತರ ಬೆವರಿಗೆ ಬೆಲೆ ಸಿಗುವಂತೆ ಕೆಲಸ ಮಾಡಿ ಎಂದು ಕರೆ ನೀಡಿದರು.

ಕ್ಷೇತ್ರಾಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ ಮಾತನಾಡಿ, ಇನ್ನು ಮೀಟಿಂಗ್‌ಗಷ್ಟೇ ಸೀಮಿ ತವಾಗದೆ, ಪ್ರತಿ ವಾರ್ಡ್‌ನಲ್ಲಿ ಪಕ್ಷ ಕಟ್ಟಿ, ಮತದಾರರ ಪಟ್ಟಿ ಪರಿಶೀಲನೆಯಿಂದ ಹಿಡಿದು, ಪ್ರತಿ ಮನೆಯ ಸಂಪರ್ಕದವರೆಗೆ ಶಕ್ತಿ ಕೇಂದ್ರದ ರೋಲ್ ಮುಖ್ಯ. ಮುಂದಿನ ಚುನಾವಣೆಗಳಿಗೂ ಈಗಿಂದಲೇ ಸಜ್ಜಾಗಿ ಎಂದು ಸಲಹೆ ನೀಡಿದರು.

ಆರ್ಡಿ ಶಕ್ತಿಕೇಂದ್ರ ಅಧ್ಯಕ್ಷ ನಾಗೇಶ್ (ವಿನಯ್) ಶೆಟ್ಟಿ, ಕಾರ್ಯದರ್ಶಿ ಸಂತೋಷ್ ಪೂಜಾರಿ, ಬೆಳ್ವೆ ಶಕ್ತಿಕೇಂದ್ರ ಅಧ್ಯಕ್ಷ ಕೃಷ್ಣ ನಾಯಕ್, ಕಾರ್ಯದರ್ಶಿ ಸುದೀಪ್ ಶೆಟ್ಟಿ, ಮಡಮಕ್ಕಿ ಶಕ್ತಿ ಕೇಂದ್ರದ ಅಧ್ಯಕ್ಷ ಮದನ್ ಮೋಹನ್, ಕಾರ್ಯದರ್ಶಿ ರಾಜೇಶ್ ಆಯ್ಕೆ ಮಾಡಲಾಯಿತು, ಜೊತೆಗೆ ಮೂರು ಶಕ್ತಿಕೇಂದ್ರಗಳ ಬೂತ್ ಅಧ್ಯಕ್ಷರ ಹಾಗೂ ಕಾರ್ಯದರ್ಶಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು.

ಮಂಡಲ ನಿಕಟಪೂರ್ವ ಅಧ್ಯಕ್ಷ ಶಂಕರ ಅಂಕದಕಟ್ಟೆ, ಪ್ರಧಾನ ಕಾರ್ಯದರ್ಶಿಗಳಾದ ಸತೀಶ್ ಪೂಜಾರಿ ವಕ್ವಾಡಿ, ಸುಧೀರ್ ಕೆ.ಎಸ್., ಮಡಮಕ್ಕಿ ಮಂಡಲದ ನಿಕಟ ಪೂರ್ವ ಅಧ್ಯಕ್ಷ ಬಾಲಕಷ್ಣ ಶೆಟ್ಟಿ, ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಉಷಾ ಪ್ರಕಾಶ್ ಶೆಟ್ಟಿ ಹಾಗೂ ಮೂರು ಭಾಗದ ಪ್ರಮುಖರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಗೋವುಗಳ ಕುರಿತು ಬಿ ಫಾರ್ಮಾ ವಿದ್ಯಾರ್ಥಿಗಳ ಜೊತೆ ಸಮಾಲೋಚನೆ



ಮಂಗಳೂರು: ಗೋಸೇವಾ ಗತಿವಿಧಿ ಮತ್ತು ಗವ್ಯ ಉತ್ಪನ್ನಗಳ ಮಾರುಕಟ್ಟೆ ಆಯಾಮ ಮಂಗಳೂರು ವಿಭಾಗ ವತಿಯಿಂದ ಗೋವಿನಿಂದ ನನಗೇನು, ಗೋವಿಗಾಗಿ ನಾನೇನು ಮಾಡಬಹುದು ಎಂಬ ವಿಷಯದ ಬಗ್ಗೆ ಬಿಫಾರ್ಮಾ ವಿದ್ಯಾರ್ಥಿಗಳ ಜೊತೆ ಸಮಾಲೋಚನೆ ಕಾರ್ಯಕ್ರಮ ಪುತ್ತೂರು ವಿವೇಕಾನಂದ ಬಿ ಫಾರ್ಮಾ ಕಾಲೇಜಿನಲ್ಲಿ ಸೋಮವಾರ ನಡೆಯಿತು.

ಕಾಲೇಜಿನ ಪ್ರಾಂಶುಪಾಲ ಗುರುರಾಜ್ ಎಂ. ಪಿ., ಪಂಚಗವ್ಯ ಘೃತ, ಗೋಮೂತ್ರ, ಗೋಮಯಗಳ ಔಷಧೀಯ ಮಹತ್ವ ಹಾಗೂ ಅವುಗಳ ಬಗ್ಗೆ ಪ್ರಕಟಗೊಂಡಿರುವ ವೈಜ್ಞಾನಿಕ ಲೇಖನಗಳ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ತಮ್ಮ ಬಳಿ ಆ ರೀತಿಯ ಸಾಕಷ್ಟು ಬರಹಗಳ ಸಂಗ್ರಹ ಇದ್ದು, ಆಸಕ್ತ ವಿದ್ಯಾರ್ಥಿಗಳು ಅಧ್ಯಯನ ನಡೆಸಬಹುದು ಎಂದರು.

ಗೋಸೇವಾ ಗತಿವಿಧಿ ಕರ್ನಾಟಕ ದಕ್ಷಿಣ ಪ್ರಾಂತ ಸಂಯೋಜಕ ಪ್ರವೀಣ್ ಸರಳಾಯ, ಸ್ವದೇಶಿ ಗೋವುಗಳು ನಡೆದಾಡುವ ಔಷಧಾಲಯ ಎಂಬ ವಿಚಾರವನ್ನು ಅನೇಕ ಘಟನೆಗಳ ಮೂಲಕ ವಿವರಿಸಿದರು.

ರಾಧಾ ಸುರಭಿ ಗೋಮಂದಿರದ ಶ್ರೀ ಭಕ್ತಿ ಭೂಷಣ್ ದಾಸ್, ಪುರಾಣ, ಮಹಾಭಾರತ ಭಗವದ್ಗೀತೆಗಳನ್ನು ಉಲ್ಲೇಖಿಸಿ ಗೋವಿನ ಮಹಾ ನತೆಯನ್ನು ತೆರೆದಿಟ್ಟರು. ಗೋವಿನ ಕೃಪೆ ಯಿಂದ, ಪಂಚಗವ್ಯ ಔಷಧಗಳಿಂದ ಅನೇಕ ತೀವ್ರ ರೋಗಗಳನ್ನು ನಿವಾರಣೆ ಮಾಡಿದ ಅನುಭವಗಳನ್ನು ಹಂಚಿಕೊಂಡರು.

ಗವ್ಯ ಉತ್ಪನ್ನಗಳ ಮಾರುಕಟ್ಟೆ ಆಯಾ ಮ ಪ್ರಮುಖ್ ಅಶೋಕ ಇಳಂತಿಲ ಕಾರ್ಯಕ್ರಮದ ಆಯೋಜನೆಯ ಉದ್ದೇಶವನ್ನು ವಿವರಿಸಿ ದರು. ಗೊಸೇವಾ ಗತಿವಿಧಿ ಮಂಗಳೂರು ವಿಭಾಗ ಸಂಯೋಜಕ ಗಂಗಾಧರ್ ಪೆರ್ಮಂಕಿ, ಪುತ್ತೂರು ಜಿಲ್ಲಾ ಸಂಯೋಜಕ್ ನಿರಂಜನ್ ಕುಂತೂರು ಉಪಸ್ಥಿತರಿದ್ದರು. ವಿವೇಕಾನಂದ ಕಾಲೇಜಿನ 120 ಬಿ ಫಾರ್ಮಾ ವಿದ್ಯಾರ್ಥಿಗಳು ಮತ್ತು ಅಧ್ಯಾಪಕ ವೃಂದದವರು ಭಾಗವಹಿಸಿದ್ದರು.



ಅದಮಾರು ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜು, ಅದಮಾರಿನ ಎನ್‌ಎಸ್‌ಎಸ್ ಘಟಕ ಹಾಗೂ ಇಲ್ಲಿನ ಪ್ರೌಢಶಾಲಾ ವಿಭಾಗದ ಪ್ರಜ್ಞಾ ಇಕೋ ಕ್ಲಬ್‌ವತಿಯಿಂದ ವಿಶ್ವ ಪರಿಸರ ದಿನಾಚರಣೆಯನ್ನು ನಡೆಸಲಾಯಿತು. ಈ ಸಂದರ್ಭ ಶಾಲಾ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು. ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ ಭಾಷಣ ಹಾಗೂ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನವನ್ನು ವಿತರಿಸಲಾಯಿತು. ಕಾಲೇಜಿನ ಪ್ರಾಂಶುಪಾಲ ಸಂಜೀವ ನಾಯ್ಕ್, ಪ್ರೌಢಶಾಲಾ ವಿಭಾಗದ ಹಿರಿಯ ಶಿಕ್ಷಕ ಶ್ರೀಕಾಂತ್ ರಾವ್, ಪ್ರಜ್ಞಾ ಇಕೋ ಕ್ಲಬ್ ಸಂಚಾಲಕಿ ನವ್ಯ ಬಿ. ಎಸ್., ಎನ್‌ಎಸ್‌ಎಸ್‌ನ ಯೋಜನಾಧಿಕಾರಿ ಡಾ. ಜಯಶಂಕರ್ ಹಾಗೂ ಅಧ್ಯಾಪಕರು ಉಪಸ್ಥಿತರಿದ್ದರು.



ಮಂಗಳೂರಿನ ಶ್ರೀ ಗೋಕರ್ಣನಾಥೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಗಿಡ ನೆಡುವ ಕಾರ್ಯಕ್ರಮವು ಕಾಲೇಜಿನ ಆವರಣದಲ್ಲಿ ನಡೆಸಲಾಯಿತು. ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಜಯಪ್ರಕಾಶ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರಘುರಾಜ್ ಕದ್ರಿ, ಎನ್‌ಎಸ್‌ಎಸ್ ಯೋಜನಾಧಿಕಾರಿ ವನಿತಾ ಶೆಟ್ಟಿ, ಉಪನ್ಯಾಸಕರಾದ ಅಮಿತ್, ಭಾರತಿ,ಅಶ್ವಿನಿ ಶೆಟ್ಟಿ, ಸಿಬ್ಬಂದಿ ಮಹೇಶ್ ಹಾಗೂ ಎನ್‌ಎಸ್‌ಎಸ್ ಸ್ವಯಂಸೇವಕರು ಉಪಸ್ಥಿತರಿದ್ದರು.

ಸವಣೂರು ವಿದ್ಯಾರಶ್ಮಿ ವಿದ್ಯಾಲಯದ ಪ್ರಾರಂಭೋತ್ಸವ | ಕೆ. ಸೀತಾರಾಮ ರೈ ಹುಟ್ಟುಹಬ್ಬ ಆಚರಣೆ | ಅಬಾಕಸ್ ತರಗತಿ ಉದ್ಘಾಟನೆ

ವಿವಿಧ ಕ್ಷೇತ್ರದಲ್ಲಿ ಬಿಡುವಿಲ್ಲದೇ ದುಡಿದ ಮಹಾನ್ ವ್ಯಕ್ತಿತ್ವದ ಸಾಧಕರು 'ರೈ': ಗಣರಾಜ ಕುಂಬ್ಳೆ

ಸವಣೂರು: ಸಹಕಾರ ರತ್ನ ಸವಣೂರು ಕೆ. ಸೀತಾರಾಮ ರೈ ಅವರ 79ನೇ ಹುಟ್ಟು ಹಬ್ಬ ಆಚರಣೆ, ಸವಣೂರು ವಿದ್ಯಾರಶ್ಮಿ ವಿದ್ಯಾಲಯದ ಪ್ರಾರಂಭೋತ್ಸವ ಮತ್ತು ಅಬಾಕಸ್ ತರಗತಿ ಉದ್ಘಾಟನೆ ಮಂಗಳವಾರ ಸಂಸ್ಥೆಯ ವಿದ್ಯಾಚೇತನ ಸಭಾಂಗಣದಲ್ಲಿ ನಡೆಯಿತು.

ಮುಖ್ಯ ಅತಿಥಿ ರಾಮಕುಂಜ ಶ್ರೀ ರಾಮ ಕುಂಜೇಶ್ವರ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲ ಗಣರಾಜ ಕುಂಬ್ಳೆ ಮಾತನಾಡಿ, ಸೀತಾರಾಮ ರೈಯವರಿಗೆ ನೂರು ವರ್ಷದ ಹುಟ್ಟುಹಬ್ಬ ಸಂಭ್ರಮ ಒದಗಿ ಬರಲಿ. ರೈ ಅವರು ಅನನ್ಯ ಶೈಲಿಯ ಸಾಧಕರು, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಹಿತ್ಯದ ಕ್ಷೇತ್ರದಲ್ಲಿ ಬಿಡುವಿಲ್ಲದೇ ದುಡಿದ ಮಹಾನ್ ವ್ಯಕ್ತಿತ್ವದ ಸಾಧಕರು. ಕನ್ನಡ ಭಾಷೆ, ಸಂಸ್ಕೃತಿಯ ಉಳಿವಿಗಾಗಿ ಹತ್ತಾರು ಕಾರ್ಯಕ್ರಮವನ್ನು ಸಂಘಟಿಸಿದ ಮೇರು ವ್ಯಕ್ತಿತ್ವ ರೈ ಅವರದ್ದು. ಸವಣೂರು ಎಂಬ ಊರು ಅಭಿವೃದ್ಧಿ ಹೊಂದಿ ಗುರುತಿಸುವಂತಾಗುವಲ್ಲಿ ರೈ ಅವರ ಕೊಡುಗೆ ದೊಡ್ಡದು ಎಂದರು.



ಕಾರ್ಯಕ್ರಮ ಉದ್ಘಾಟಿಸಿದ ವಿದ್ಯಾರಶ್ಮಿ ಸಂಸ್ಥೆಗಳ ಸಂಚಾಲಕ ಸವಣೂರು ಕೆ.ಸೀತಾರಾಮ ರೈ ಮಾತನಾಡಿ, ಸವಣೂರಿನ ಸುಂದರವಾದ ಪ್ರದೇ ಶದಲ್ಲಿ 25 ಎಕರೆ ವಿಸ್ತೀರ್ಣದಲ್ಲಿ ಸುಮಾರು 20 ಕೋಟಿ ರೂ. ವೆಚ್ಚದಲ್ಲಿ ವಿದ್ಯಾರಶ್ಮಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದೇನೆ. ಯುನಿವರ್ಸಿಟಿ ಮಾದರಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲು ನನ್ನ ತಂದೆ ಶೀಂಟೂರು ನಾರಾಯಣ ರೈಯವರ ಪ್ರೇರಣೆಯೇ ಕಾರಣ. ಮೈಸೂರು, ಬೆಂಗಳೂರಿನಲ್ಲಿ ದೊರೆಯುವ ಎಲ್ಲಾ ಸೌಲಭ್ಯಗಳ ಶಿಕ್ಷಣ ವಿದ್ಯಾರಶ್ಮಿಯಲ್ಲಿ ದೊರೆಯುತ್ತದೆ. ಆಧುನಿಕ ಸೌಲಭ್ಯದ ಶಿಕ್ಷಣ, ಸುಸಜ್ಜಿತವಾದ ಹಾಸ್ಟೆಲ್ ವ್ಯವಸ್ಥೆಯೊಂದಿಗೆ ಪರಿಪೂರ್ಣ ಶಿಕ್ಷಣ ನೀಡುವ ಶಿಕ್ಷಕವೃಂದ ಇರುವುದು ವಿದ್ಯಾರಶ್ಮಿಯ ಹೆಮ್ಮೆಯ ವಿಷಯವಾಗಿದೆ. ಇದೀಗ ನೂತನವಾಗಿ ಅಬಾಕಸ್ ತರಗತಿಯೂ ಆರಂಭಗೊಂಡಿದೆ ಎಂದು ಹೇಳಿದರು.

ವಿದ್ಯಾರಶ್ಮಿಯ ಆಡಳಿತಾಧಿಕಾರಿ ಅಶ್ವಿನ್ ಎಲ್. ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಪುತ್ತೂರು ಐಆರ್‌ಸಿಎಂಡಿ ಸಂಸ್ಥೆಯ ಸಿಇಒ ಪ್ರಪುಲ್ಲಾ ಗಣೇಶ್, ಧಾರ್ಮಿಕ ಮುಂದಾಳು ರವೀಂದ್ರ ಶೆಟ್ಟಿ ನುಳಿಯಾಲು, ಟ್ರಸ್ಟಿ ಮಹೇಶ್ ಎಸ್. ರೈ ಶುಭಹಾರೈಸಿದರು.

ವಿದ್ಯಾಲಯದ ಟ್ರಸ್ಟಿಗಳಾದ ಸವಣೂರು ಎನ್. ಸುಂದರ ರೈ, ಕಸ್ತೂರಿ ಕಲಾ ಎಸ್. ರೈ, ರಶ್ಮಿ ಅಶ್ವಿನ್ ಶೆಟ್ಟಿ ಸವಣೂರು, ಶಿಕ್ಷಕ-ರಕ್ಷಕ ಸಂಘದ ಉಪಾಧ್ಯಕ್ಷ ತಾರಾನಾಥ ಕಾಯರ್ಗ, ವಿದ್ಯಾರಶ್ಮಿ ವಿದ್ಯಾಲಯದ ಪ್ರಾಂಶುಪಾಲೆ ಶಶಿಕಲಾ ಎಸ್. ಆಳ್ವ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಗೌರವ

ಒಲಿಂಪಿಯಾಡ್‌ನಲ್ಲಿ ಗಮನಾರ್ಹ ಸಾಧನೆ ಮಾಡಿದ ಸಂಸ್ಥೆಯ ವಿದ್ಯಾರ್ಥಿನಿ ಜನಿತಾ ಸಿ. ಕಂಪ್ಯೂಟರ್ ಒಲಿಂಪಿಯಾಡ್‌ನಲ್ಲಿ ರಾಷ್ಟ್ರೀಯ ಮಟ್ಟದಲ್ಲಿ 4ನೇ ಸ್ಥಾನ ಮತ್ತು ರಾಜ್ಯ ಮಟ್ಟದಲ್ಲಿ 1ನೇ ಸ್ಥಾನ ಪಡೆದು ವಿದ್ಯಾರ್ಥಿವೇತನವನ್ನು ಪಡೆದರು. ವಿದ್ಯಾರ್ಥಿನಿ ಹಸ್ಮಿತಾ ಶೆಟ್ಟಿ ಗಣಿತ ಒಲಿಂಪಿಯಾಡ್‌ನಲ್ಲಿ ರಾಷ್ಟ್ರೀಯಮಟ್ಟದಲ್ಲಿ 8ನೇ ಸ್ಥಾನ ಮತ್ತು ರಾಜ್ಯ ಮಟ್ಟದಲ್ಲಿ 1ನೇ ಸ್ಥಾನ ಪಡೆದು ವಿದ್ಯಾರ್ಥಿವೇತನವನ್ನು ಪಡೆದಿದ್ದು, ಅವರನ್ನು ಹಾಗೂ ಎಕ್ಸಲೆನ್ಸ್ ಅವಾರ್ಡ್ ಪಡೆದ ವಿದ್ಯಾರ್ಥಿಗಳಾದ ಅವಿ ಅಶ್ವಿನ್ ಶೆಟ್ಟಿ (ಗಣಿತ ಒಲಿಂಪಿಯಾಡ್), ತನಯ್ ಡಿ. ಕೆ. (ಇಂಗ್ಲಿಷ್ ಒಲಿಂಪಿಯಾಡ್), ನಿರೀಕ್ಷಾ ವೈ. ಆರ್. (ವಿಜ್ಞಾನ ಒಲಿಂಪಿಯಾಡ್), ಫಾತಿಮತ್ ಸಾಹಲಾ (ಗಣಿತ ಒಲಿಂಪಿಯಾಡ್) ಅವರನ್ನು ಅಭಿನಂದಿಸಲಾಯಿತು.

ವಿದ್ಯಾರ್ಥಿಗಳಾದ ಮೋಕ್ಷಾ ಕೆ.ಯು. ಸಂವಿಧಾನ ಪೀಠಿಕೆ ವಾಚಿಸಿದರು. ಶ್ರುತ ಮತ್ತು ಬಳಗ ಪ್ರಾರ್ಥಿಸಿದರು. ಶಂತನು ಕೃಷ್ಣ ಸ್ವಾಗತಿಸಿ, ಶ್ರದ್ಧಾ ಮತ್ತು ಬಳಗದವರು ಹುಟ್ಟುಹಬ್ಬದ ಶುಭಾಶಯ ಗೀತೆ ಹಾಡಿದರು. ಫಾತಿಮತ್ ಹನ್ನಾ ಕಾರ್ಯಕ್ರಮ ನಿರ್ವಹಿಸಿದರು. ಶಾಲಾ ಪ್ರಾರಂಭೋತ್ಸವದ ಅಂಗ ವಾಗಿ ಸವಣೂರು ಚಂದ್ರನಾಥ ಬಸದಿಯ ಪದ್ಮಾ ವತಿ ದೇವಿ ಸನ್ನಿಧಿಯಲ್ಲಿ ಪ್ರಾರ್ಥನೆ ಸಲ್ಲಿಸಿದರು. ಅರ್ಚಕ ಶ್ರೇಯಾಂಸ ಕುಮಾರ್ ಇಂದ್ರ ಪ್ರಾರ್ಥನೆ ನೆರವೇರಿಸಿದರು.

ಸುತ್ತಮುತ್ತ

ನಾಳೆ ವಿದ್ಯುತ್ ವ್ಯತ್ಯಯ

ಮುಲ್ಕಿ/ ಸುರತ್ಕಲ್: ಮುಲ್ಕಿ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಮುಲ್ಕಿ ಟೌನ್ ವಿದ್ಯುತ್ ಮಾರ್ಗದಲ್ಲಿ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಚಿತ್ರಾಪು, ಕಾರ್ನಾಡು, ಗೇರುಕಟ್ಟೆ, ಬಪ್ಪನಾಡು, ಮುಲ್ಕಿ ಬಸ್ ಸ್ಟ್ಯಾಂಡ್, ಒಡೆಯರಬೆಟ್ಟು, ಮಾನಂಪಾಡಿ, ಕೊಳಚಿಕಂಬ್ಳ, ಪಡುಬೈಲು, ಪಂಚಮಹಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ. 11ರಂದು ಬೆಳಿಗ್ಗೆ 9ರಿಂದ ಸಂಜೆ 4.30 ಗಂಟೆಯವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ. ಕಾಟಿಪಳ್ಳ ವಿದ್ಯುತ್ ಉಪಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಕಾಟಿಪಳ್ಳ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಚೇಳಾರು, ಕಾಟಿಪಳ್ಳ ಕೃಷ್ಣಾಪುರ, ಕುತ್ತೆತ್ತೂರು, ಕುಡ್ಸೆಂಪ್, ಸುರತ್ಕಲ್, ಕಾನ ಮತ್ತು ತಡಂಬೈಲ್ ವಿದ್ಯುತ್ ಮಾರ್ಗಗಳಲ್ಲಿ 2ನೇ ಬ್ಲಾಕ್, 5ನೇ ಬ್ಲಾಕ್, 6ನೇ ಬ್ಲಾಕ್, 7ನೇ ಬ್ಲಾಕ್, ಪೆಡ್ಡಿಯಂಗಡಿ, ಬಾಳ, ಮಂಗಳಪೇಟೆ, ಎಂ.ಆರ್.ಪಿ.ಎಲ್ ಸ್ಕೂಲ್ ಗೇಟ್, ಆದರ್ಶ ನಗರ, ಪೆರ್ಮುದೆ, ಕುತ್ತೆತ್ತೂರು, ಕೋಟೆ, ಸೂರಿಂಜೆ, ದೇಲಂತಬೆಟ್ಟು, ಶಿಬರೂರು, ಕಾನ, ಕಟ್ಲ, ಜನತಾ ಕಾಲೊನಿ, ಬಿ.ಎ.ಎಸ್.ಎಫ್, ಕಡಂಬೋಡಿ, ಸುರತ್ಕಲ್, ಗುಡ್ಡೆಕೊಪ್ಲ, ಹೊಸಬೆಟ್ಟು, ತಡಂಬೈಲ್, ಮಾರಿಗುಡಿ, ಮುಂಚೂರು, ಮಧ್ಯ, ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.11ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಜೂ.12: ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ

ಉಡುಪಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ ಆಶ್ರಯದಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಜೂ.12ರಂದು ಬೆಳಗ್ಗೆ 10.30ಕ್ಕೆ ನಗರದ ಮಣಿಪಾಲದ ರಜತಾದ್ರಿಯ ಅಟಲ್ ಬಿಹಾರಿ ವಾಜಪೇಯಿ ಸಭಾಂಗಣದಲ್ಲಿ ನಡೆಯಲಿದೆ.

ಬ್ರಹ್ಮಶ್ರೀ ನಾರಾಯಣ ಗುರು ಮಂದಿರದ ಟ್ರಸ್ಟ್‌ನಿಂದ ಸಾಂತ್ವನ

ಬಂಟ್ವಾಳ: ಮಂಗಳೂರು– ಬೆಂಗಳೂರು ರಾ.ಹೆ.ಯ ಸೂರಿಕುಮೇರ್ ಬಳಿ ಕಳೆದ ಮಂಗಳವಾರ ರಾತ್ರಿ ಕಲ್ಲಡ್ಕದಿಂದ ಮಾಣಿಗೆ ತೆರಳುತ್ತಿದ್ದ ಬೈಕ್ ಗೆ ಸ್ಕೂಟರ್ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟ ಹತ್ತರ ಹರೆಯದ ಬಾಲಕಿಯ ಮನೆಗೆ ನೀರಪಾದೆ ಬ್ರಹ್ಮಶ್ರೀ ನಾರಾಯಣ ಗುರು ಮಂದಿರದ ಟ್ರಸ್ಟ್‌ನ ಪದಾಧಿಕಾರಿಗಳು ಮಂಗಳವಾರ ಭೇಟಿ ನೀಡಿ ಹೆತ್ತವರು ಹಾಗೂ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಬಂಟ್ವಾಳ ತಾಲೂಕಿನ ಬಾಳ್ತಿಲ ಗ್ರಾಮದ ಮಿತ್ತಕೋಲ್ಯ ಹೇಮಂತ್ ಕುಮಾರ್ ಅವರ ಪುತ್ರಿ ಹತ್ತರ ಹರೆಯದ ನೈರುತಿ ಈ ಅಪಘಾತದಲ್ಲಿ ಮೃತಪಟ್ಟಿದ್ದು ಈ ಘಟನೆಯಿಂದಾಗಿ ಮನೆಮಂದಿ ಆಘಾತದಿಂದಿದ್ದು ಬ್ರಹ್ಮಶ್ರೀ ನಾರಾಯಣ ಗುರು ಮಂದಿರದ ಟ್ರಸ್ಟ್ ಪದಾಧಿಕಾರಿಗಳು ಕುಟುಂಬಸ್ಥರನ್ನು ಸಂತೈಸಿ ಧೈರ್ಯ ತುಂಬಿದರಲ್ಲದೆ ಟ್ರಸ್ಟ್ ವತಿಯಿಂದ ಆರ್ಥಿಕ ನೆರವು ನೀಡಿದರು. ಈ ಸಂದರ್ಭದಲ್ಲಿ ಟ್ರಸ್ಟಿನ ಅಧ್ಯಕ್ಷ ನಾರಾಯಣ ಪೂಜಾರಿ ನಿಡ್ಯೆ, ಗೌರವಾಧ್ಯಕ್ಷರು ಮಾಜಿ ಶಾಸಕರದ ಎ. ರುಕ್ಮಯ ಪೂಜಾರಿ, ಕಾರ್ಯದರ್ಶಿ ಮೋಹನ್ ಪಿ.ಎಸ್., ಟ್ರಸ್ಟಿಗಳಾದ ಶರತ್ ಕುಮಾರ್ ಸೇನೆರೆ ಕೋಡಿ, ಜಯರಾಮ ಕಲ್ಲಾಪು ಸ್ಥಳೀಯರಾದ ಕೃಷ್ಣಪ್ಪ ಪೂಜಾರಿ ತೋಟ ಇದ್ದರು.

ಜಾತಿ ನಿಂದನೆ: ಮಹಿಳೆಯ ವಿರುದ್ಧ ಕ್ರಮಕ್ಕೆ ಆಗ್ರಹ

ಬಂಟ್ವಾಳ: ಜಾತಿ ಸಮುದಾಯಗಳ ಬಗ್ಗೆ ಅವಹೇಳನ ಮಾಡಿದ ಅನಿತಾ ಕಾಸರಗೋಡು ಎಂಬವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಬಂಟ್ವಾಳ ತಾ.ಪಂ.ಮಾಜಿ ಸದಸ್ಯ ಪ್ರಭಾಕರ ಪ್ರಭು ರಾಜ್ಯ ಪೊಲೀಸ್ ಮಹಾ ನಿರ್ದೇಶಕರನ್ನು ಆಗ್ರಹಿಸಿದ್ದಾರೆ. ಕಾಸರಗೋಡು ಜಿಲ್ಲೆಯ ನಿವಾಸಿ ಅನಿತಾ ಎಂಬವವರು ಸಾಮಾಜಿಕ ಜಾಲತಾಣಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎರಡು ಪ್ರಬಲ ಜಾತಿ ಸಮುದಾಯಗಳ ಬಗ್ಗೆ ಮನಬಂದಂತೆ ಅವಹೇಳನಕಾರಿ ಪದಗಳನ್ನು ಬಳಕೆ ಮಾಡಿ ಬಿಲ್ಲವ ಹಾಗೂ ಬಂಟ ಜಾತಿ ಬಗ್ಗೆ ಕೆಟ್ಟ ಶಬ್ದ ಬಳಸಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಹರಿಯ ಬಿಟ್ಟಿದ್ದಾರೆ. ಈ ಬಗ್ಗೆ ಪ್ರಶ್ನಿಸಿದರೆ ಮತ್ತೆ ಮುಂದುವರಿದು ಯಾವುದೆ ಕಾನೂನು, ನಿಯಮಗಳನ್ನು ಲೆಕ್ಕಿಸದೆ ಬಿಲ್ಲವ ಸಮುದಾಯದ ಬಗ್ಗೆ ಅವ್ಯಾಚ್ಯ ಪದಗಳಿಂದ ನಿಂದಿಸಿದ್ದಾರೆ. ಈ ನಿಟ್ಟಿನಲ್ಲಿ ನೆರೆ ರಾಜ್ಯ ಕೇರಳ ಪೊಲೀಸ್ ಮಹಾನಿರ್ದೇಶಕರೊಂದಿಗೆ ಸಮನ್ವಯ ಸಾಧಿಸಿ ಕಾನೂನು ಕ್ರಮ ಕೈಗೊಳ್ಳಲು ಅಗತ್ಯ ಕ್ರಮ ವಹಿಸಬೇಕಾಗಿ ಅವರು ಒತ್ತಾಯಿಸಿದ್ದಾರೆ.

ಮಡಿಕೇರಿಯಲ್ಲಿ 'ಕಾರ್ಯಪಡೆ ಸಮಿತಿ ಸಭೆ'ಯಲ್ಲಿ ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದ ಶಾಸಕರು

ಕುಡಿಯುವ ನೀರಿನ ಸಮಸ್ಯೆ ವ್ಯವಸ್ಥೆಯ ಲೋಪ: ಮಂಥರ್

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮುಂಗಾರು ಆರಂಭವಾಗಿದ್ದು ಮುಂದಿನ ದಿನಗಳಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಕುಡಿಯುವ ನೀರನ್ನು ಆಗಾಗ ಪರೀಕ್ಷೆ ಮಾಡಿ, ಶುದ್ಧ ಕುಡಿಯುವ ನೀರು ಪೂರೈಕೆಗೆ ಗಮನ ಹರಿಸಬೇಕು ಎಂದು ಶಾಸಕ ಡಾ.ಮಂಥರ್ ಗೌಡ ಅವರು ಸಲಹೆ ಮಾಡಿದ್ದಾರೆ.

ನಗರದ ತಹಶೀಲ್ದಾರ್ ಕಚೇರಿಯಲ್ಲಿ ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಾಲೂಕು ಮಟ್ಟದ ಅಧಿಕಾರಿಗಳು, ಪಿಡಿಒಗಳು, ಕಂದಾಯ ಇಲಾಖೆ ಅಧಿಕಾರಿಗಳು, ಪೊಲೀಸರು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳನ್ನೊಳಗೊಂಡ 'ಕಾರ್ಯಪಡೆ ಸಮಿತಿ ಸಭೆ' ನಡೆಸಿ ಅವರು ಮಾತನಾಡಿದರು.

ಮಳೆಗಾಲದಲ್ಲಿ ಸಾಂಕ್ರಾಮಿಕ ರೋಗ ಹರಡದಂತೆ ಎಚ್ಚರವಹಿಸಬೇಕು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಾಲುವೆ, ಚರಂಡಿಗಳನ್ನು ಸ್ವಚ್ಛಗೊಳಿಸುವ ಕಾರ್ಯ ಆಗಬೇಕು. ರಸ್ತೆ ಬದಿ ಚರಂಡಿಯಲ್ಲಿ ಸರಾಗವಾಗಿ ನೀರು ಹರಿಯುವಂತಾಗಲು ಶುಚಿಗೊಳಿಸುವ ಕಾರ್ಯ ಆಗಬೇಕು ಎಂದು ಸಂಬಂಧಪಟ್ಟ ಇಂಜಿನಿಯರ್‌ಗಳಿಗೆ ಶಾಸಕರು ಸೂಚಿಸಿದರು.



ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆಯೆಂದರೆ ನಮ್ಮ ವ್ಯವಸ್ಥೆ ವಿಫಲ ಎಂದೇ ಅರ್ಥ. ಆದ್ದರಿಂದ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಗಮನಹರಿಸಬೇಕು ಎಂದು ಅವರು ಅಧಿಕಾರಿಗಳಿಗೆ ತಾಕೀತು ಮಾಡಿದರು.

ನೋಡಲ್ ಅಧಿಕಾರಿಗಳು, ಪಿಡಿಒ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ದೂರವಾಣಿ ಸಂಖ್ಯೆ ಸ್ಥಳೀಯರಿಗೆ ಮಾಹಿತಿ ಇರಬೇಕು. ತುರ್ತು ಸಂದರ್ಭದಲ್ಲಿ ಸ್ಥಳಾಂತರಕ್ಕೆ ಸಹಕಾರಿಯಾಗಲಿದೆ. ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಶಾಸಕರು ನಿರ್ದೇಶನ ನೀಡಿದರು. ಸ್ವಯಂಸೇವಕರ ನಿಯೋಜನೆ ಸೇರಿದಂತೆ ಸ್ಥಳೀಯ ಮಟ್ಟದಲ್ಲಿ ಸಂವಹನ ಮತ್ತು ಸಂಪರ್ಕಕ್ಕೆ ಸದಾ ಸಿದ್ಧವಿರಬೇಕು. ಅಗ್ನಿಶಾಮಕ, ಲೋಕೋಪಯೋಗಿ, ಪಂಚಾಯತ್ ರಾಜ್, ಕಂದಾಯ, ಅರಣ್ಯ ಹೀಗೆ ವಿವಿಧ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು.

ಮಾಹಿತಿ ನೀಡಲು ಸೂಚನೆ

ಭೂಕುಸಿತ ಹಾಗೂ ಪ್ರವಾಹ ಪೀಡಿತ ಪ್ರದೇಶಗಳಲ್ಲಿನ ಜನರಿಗೆ ಮುನ್ನೆಚ್ಚರಿಕೆ ವಹಿಸುವ ಸಂಬಂಧ ಮಾಹಿತಿ ನೀಡಬೇಕು. ಕಾಳಜಿ ಕೇಂದ್ರ ತೆರೆಯಲು ಸಿದ್ಧತೆ ಮಾಡಿಕೊಳ್ಳಬೇಕು. ಸ್ಥಳೀಯರಿಗೆ ಹೆಚ್ಚಿನ ಮಳೆ ಸಂದರ್ಭದಲ್ಲಿ ಸಂತ್ರಸ್ತರಿಗೆ ಧೈರ್ಯ ತುಂಬುವ ಕೆಲಸ ಮಾಡಬೇಕು ಎಂದು ಶಾಸಕರು ಸಲಹೆ ಮಾಡಿದರು.

ಮರ ಬಿದ್ದ ಸಂದರ್ಭದಲ್ಲಿ ತೆರವುಗೊಳಿಸುವುದು, ಸುಗಮ ಸಾರಿಗೆ ಸಂಚಾರಕ್ಕೆ ವ್ಯವಸ್ಥೆ ಮಾಡುವುದು, ಹೆಚ್ಚಿನ ಗಾಳಿ-ಮಳೆ ಸಂದರ್ಭದಲ್ಲಿ ವಿದ್ಯುತ್ ಕಂಬಗಳು ಬೀಳುವ ಸಾಧ್ಯತೆ ಇದೆ. ಈ ಬಗ್ಗೆ ಎಚ್ಚರವಹಿಸಬೇಕು ಎಂದರು.

ಕಾಳಜಿ ಕೇಂದ್ರಗಳಲ್ಲಿ ಆಹಾರ ದಾಸ್ತಾನು ಮಾಡಿಕೊಳ್ಳಬೇಕು. ಗುಣಮಟ್ಟದ ಆಹಾರ ಪೂರೈಸಬೇಕು. ಶಾಲೆಯ ಮುಖ್ಯೋಪಾಧ್ಯಾಯರು ಅಗತ್ಯ ಸಹಕಾರ ನೀಡಬೇಕು ಎಂದರು. ಆಯಾಯ ಗ್ರಾ.ಪಂ.ವ್ಯಾಪ್ತಿಯಲ್ಲಿ ಜಾನುವಾರು ರಕ್ಷಣೆಗೆ ಮುಂದಾಗಬೇಕು. ಗೋರಕ್ಷಣಾ ಕೇಂದ್ರ ಆರಂಭಕ್ಕೆ ಮುಂದಾಗಬೇಕು. ಅಗತ್ಯ ಮೇವು ಪೂರೈಕೆಗೆ ಕ್ರಮವಹಿಸಬೇಕು ಎಂದು ಶಾಸಕರು ಸೂಚಿಸಿದರು.

ಸಾರ್ವಜನಿಕರ ಸಂಕಷ್ಟಕ್ಕೆ ಸ್ಪಂದಿಸುವುದು ಅಧಿಕಾರಿಗಳ ಕರ್ತವ್ಯ. ಆ ನಿಟ್ಟಿನಲ್ಲಿ ಗಮನಹರಿಸಬೇಕು. ಲೋಕೋಪಯೋಗಿ, ಪಂಚಾಯತ್ ರಾಜ್, ಸೆಸ್ಕ್, ಅರಣ್ಯ ಹೀಗೆ ವಿವಿಧ ಇಲಾಖೆಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದರು. ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ಮಾತನಾಡಿದರು. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜೇಶ್ ಯಲ್ಲಪ್ಪ, ತಾ.ಪಂ.ಇಒ ಶೇಖರ್, ತಹಶೀಲ್ದಾರ್ ಶ್ರೀಧರ, ಪೌರಾಯುಕ್ತ ಎಚ್.ಆರ್.ರಮೇಶ್ ಮಳೆಗಾಲದಲ್ಲಿ ಕೈಗೊಳ್ಳಲಾಗಿರುವ ಕ್ರಮಗಳ ಬಗೆ ಮಾಹಿತಿ ನೀಡಿದರು. ತಾಲೂಕು ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಇಂಜಿನಿಯರ್‌ಗಳು, ಪಿಡಿಒಗಳು, ಮಳೆಗಾಲದಲ್ಲಿ ಕೈಗೊಂಡ ಮುನ್ನೆಚ್ಚರಿಕಾ ಕ್ರಮಗಳ ಮಾಹಿತಿ ನೀಡಿದರು.

ಅತ್ತಾವರ ಸರೋಜಿನಿ ಮಧುಸೂದನ ಕುಶೆ ವಿದ್ಯಾಸಂಸ್ಥೆಯಲ್ಲಿ ಅಕ್ಷರಾಭ್ಯಾಸ



ಮಂಗಳೂರು: ಅತ್ತಾವರ ಸರೋಜಿನಿ ಮಧುಸೂದನ ಕುಶೆ ವಿದ್ಯಾಸಂಸ್ಥೆಯಲ್ಲಿ ಪೂರ್ವ ಪ್ರಾಥಮಿಕ ತರಗತಿಗಳಿಗೆ ಪ್ರವೇಶ ಪಡೆದ ಪುಟಾಣಿ ವಿದ್ಯಾರ್ಥಿಗಳಿಗಾಗಿ ಆರಂಭಿಕ ಹಂತದ ಅಕ್ಷರಾಭ್ಯಾಸ ಕಾರ್ಯಕ್ರಮ ನಡೆಯಿತು.

ಸಂಸ್ಥೆಯ ಟ್ರಸ್ಟಿಯಾದ ವಸಂತಿ ಹೊಸಬೆಟ್ಟರ್ ಅಕ್ಷರಭ್ಯಾಸಕ್ಕೆ ಚಾಲನೆ ನೀಡಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಎಸ್.ಆರ್.ಕೆ ಲಾ ಎಸೋಸಿಯೇಟ್ಸ್‌ನ ವಕೀಲ ಶಶಿರಾಜ್ ರಾವ್ ಕಾವೂರು, ವಿದ್ಯೆಗೆ ಆರಂಭ ಮಾತ್ರ ಇರುತ್ತದೆ ಅಂತ್ಯ ಇರುವುದಿಲ್ಲ, ಶಿಕ್ಷಣದ ಜೊತೆ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಹೆತ್ತವರ ನಿರಂತರ ಸಹಕಾರ ಅಗತ್ಯ ಎಂದು ಹೇಳಿದರು.

ನಾವು ಯಾರು ದೇವರನ್ನು ನೋಡಲಿಲ್ಲ ಗುರುಗಳೇ ಪ್ರತ್ಯಕ್ಷ ದೇವರು. ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಕಲಿಸಬೇಕು, ಇದರಲ್ಲಿ ಪೋಷಕರು ಹಾಗೂ ಶಿಕ್ಷಕರ ಪಾತ್ರ ಮಹತ್ವದ್ದು ಎಂದರು. ಸಂಸ್ಥೆಯ ಪ್ರಾಂಶುಪಾಲ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು ಮಾತನಾಡಿ, ಸರೋಜಿನಿ ಮಧುಸೂದನ ಕುಶೆ ಸಂಸ್ಥೆಯಲ್ಲಿ ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಆಚಾರ ವಿಚಾರಗಳು ಬೇರೂರಿ ಬಿಟ್ಟಿವೆ. ಈ ಸಂಸ್ಕೃತಿ ಎಳವೆಯಲ್ಲಿ ಜಾಗೃತಗೊಂಡರೆ ಮಕ್ಕಳ ಸರ್ವತೋಮುಖ ಅಭಿವೃದ್ಧಿ ಖಂಡಿತ ಜೊತೆಗೆ ಅಕ್ಷರಾಭ್ಯಾಸದ ಮಹತ್ವವೇನು ಎಂಬುದನ್ನು ತಿಳಿಸಿಕೊಟ್ಟರು.

ಸಂಸ್ಥೆಯ ಎಒ ಮುರುಳಿಧರ್ ರಾವ್, ಉಪ ಪ್ರಾಂಶುಪಾಲೆ ಪವಿತ್ರ, ಸಹ ಮುಖ್ಯ ಶಿಕ್ಷಕಿ ಸೌಜನ್ಯ ಉಪಸ್ಥಿತರಿದ್ದರು. ವರಲಕ್ಷ್ಮಿ ನಿರೂಪಿಸಿದರು. ಭವಿತಾ ಸ್ವಾಗತಿಸಿ, ರೇಷ್ಮಾ ಪ್ರಕಾಶ್ ವಂದಿಸಿದರು. ರಶ್ಮಿ ಪಿ. ರಾವ್ ಕಾರ್ಯಕ್ರಮ ನಿರ್ವಹಿಸಿದರು.

ಪ್ಲಾಸ್ಟಿಕ್ ದುಷ್ಪರಿಣಾಮ ಜಾಗೃತಿ ಅಗತ್ಯ: ಗೋಕುಲದಾಸ್ ನಾಯಕ್



ಮಂಗಳೂರು: ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ಮತ್ತು ಗ್ಲೋಬಲ್ ಗ್ರೀನ್ ಇಕೋ ಫೌಂಡೇಶನ್ ವತಿಯಿಂದ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ನಗರದ ಗಾಂಧಿನಗರದ ಜಿಲ್ಲಾ ಪಂಚಾಯತ್ ಸರ್ಕಾರಿ ಶಾಲೆಯ ಮಕ್ಕಳಿಗೆ ಪ್ಲಾಸ್ಟಿಕ್ ಬಳಕೆ ವಿರುದ್ಧ ಜಾಗೃತಿ ಮೂಡಿಸಲು ಬಟ್ಟೆ ಚೀಲಗಳನ್ನು ವಿತರಿಸಲಾಯಿತು. ಶಾಲಾ ಪರಿಸರದಲ್ಲಿ ಗಿಡಗಳನ್ನು ನೆಡಲಾಯಿತು.

ಮುಖ್ಯ ಅತಿಥಿಯಾಗಿದ್ದ ದ.ಕ. ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಗೋಕುಲದಾಸ್ ನಾಯಕ್ ಮಾತನಾಡಿ, ಪ್ಲಾಸ್ಟಿಕ್ ಬಳಕೆಯಿಂದ ಪರಿಸರದ ಮೇಲೆ ಆಗುವ ಹಾನಿಯ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವುರಿಂದ ಭವಿಷ್ಯದಲ್ಲಿ ಸ್ವಚ್ಛ ಪರಿಸರ ಕಾಣಲು ಸಾಧ್ಯ ಎಂದರು.

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಶಾಲಾ ಮಕ್ಕಳಿಗೆ ಆಯೋಜಿಸಲಾದ ಭಾಷಣ ಸ್ಪರ್ಧೆಯ ವಿಜೇತರಿಗೆ ಕಾರ್ಡೋಲೈಟ್ ಸ್ಪೆಶಾಲಿಟಿ ಕೆಮಿಕಲ್ಸ್ ಸಂಸ್ಥೆ ವತಿಯಿಂದ ಬಹುಮಾನ ವಿತರಿಸಲಾಯಿತು.

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಮಹಾ ಪ್ರಬಂಧಕ ಅರುಣ್‌ಪ್ರಭ ಕೆ.ಎಸ್. ಬಹುಮಾನ ವಿತರಿಸಿದರು. ಮಂಗಳೂರು ಮಹಾನಗರ ಪಾಲಿಕೆ ಉಪ ಆಯುಕ್ತ ನರೇಶ್ ಶೆಣೈ, ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ, ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ಅಧ್ಯಕ್ಷ ಭಾಸ್ಕರ್ ರೈ ಕಟ್ಟ, ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್., ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀನಿವಾಸ್ ನಾಯಕ್ ಇಂದಾಜೆ ಮುಖ್ಯ ಅತಿಥಿಗಳಾಗಿದ್ದರು. ಶಾಲಾ ಮುಖ್ಯ ಶಿಕ್ಷಕಿ ಫ್ಲೆವಿ ಫೆರ್ನಾಂಡಿಸ್ ಕಾರ್ಯಕ್ರಮ ನಿರೂಪಿಸಿದರು.



ಬಂಟ್ವಾಳ ತಾಲೂಕಿನ ಕೆಲಿಂಜ ದ.ಕ. ಜಿ.ಪಂ. ಸ.ಹಿ.ಪ್ರಾ. ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ಮೋಹಿತ್ ಕುಮಾರ್ ಎಂ., ಶಾಲೆಯ ಮುಖ್ಯ ಶಿಕ್ಷಕಿ ವನಿತಾ ಮೊದಲಾದವರಿದ್ದರು. ಶಾಲಾ ಮುಖ್ಯ ಶಿಕ್ಷಕಿ ವನಿತಾ ನಿರ್ವಹಿಸಿದರು.



ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ರೆಡ್ ಕ್ರಾಸ್ ಸೊಸೈಟಿಯ ಶತಮಾನೋತ್ಸವ ಕಟ್ಟಡದ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು. ರೆಡ್ ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ, ಉಪಾಧ್ಯಕ್ಷ ಡಾ. ಸಚ್ಚಿದಾನಂದ ರೈ, ಖಜಾಂಜಿ ಗುರುದತ್ ನಾಯಕ್, ಕಾರ್ಯದರ್ಶಿ ಕಿಶೋರ್ ಚಂದ್ರ ಹೆಗ್ಡೆ, ಆಡಳಿತ ಸಮಿತಿ ನಿರ್ದೇಶಕ ಪಿ.ಬಿ.ಹರೀಶ್ ರೈ, ಡಾ. ಸುಮನಾ ಬಿ., ರಾಘವೇಂದ್ರ ರಾವ್, ಕಚೇರಿ ಸಿಬ್ಬಂದಿ ಮಲ್ಲಿಕಾ, ಅನಿತಾ, ಗಿರೀಶ್ ಕುಮಾರ್ ಇದ್ದರು.

ನಿವೃತ್ತ ಯೋಧನಿಂದ ಶ್ರಮದಾನ



ಮುಲ್ಕಿ: ಚರಂಡಿಯಲ್ಲಿ ಹೂಳು ತುಂಬಿ ಮಳೆನೀರು ರಸ್ತೆಯಲ್ಲಿ ಹರಿದು ಹೋಗುತ್ತಿದ್ದ ಸಮಸ್ಯೆಗೆ ನಿವೃತ್ತ ಯೋಧರೊಬ್ಬರು ಶ್ರಮದಾನದ ಮೂಲಕ ಸಮಸ್ಯೆಗೆ ಪರಿಹಾರ ಕಲ್ಪಿಸಿ, ಸಾಮಾಜಿಕ ಕಳಕಳಿ ಮೆರೆದಿದ್ದಾರೆ.

ಕಿಲ್ಪಾಡಿ ಗ್ರಾ.ಪಂ. ವ್ಯಾಪ್ತಿಯ ಕುಬೆವೂರು ಶಿಮಂತೂರು ದೇವಸ್ಥಾನ ಸಂಪರ್ಕದ ರಸ್ತೆಯಲ್ಲಿ ಶ್ರೀ ಜಾರಂದಾಯ ದೈವಸ್ಥಾನದ ದ್ವಾರದ ಬಳಿ ಚರಂಡಿಯಲ್ಲಿ ಹೂಳು ತುಂಬಿ ಮಳೆ ನೀರು ರಸ್ತೆಯಲ್ಲಿ ಹರಿದು ಹೋಗುತ್ತಿತ್ತು. ಈ ಬಗ್ಗೆ ಪಂಚಾಯತ್ ಆಡಳಿತಕ್ಕೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಚರಂಡಿ ಅವ್ಯವಸ್ಥೆ ಬಗ್ಗೆ ಗಮನಿಸಿದ ಕುಬೆವೂರಿನ ನಿವೃತ್ತ ಯೋಧ ನಾರಾಯಣ ರೈ ಸ್ವತಃ ಹಾರೆ, ಪಿಕ್ಕಾಸ್, ಕತ್ತಿ ಹಿಡಿದು ತಾತ್ಕಾಲಿಕವಾಗಿ ನೆಲೆಯಲ್ಲಿ ರಸ್ತೆಗೆ ಸೂಕ್ತ ಚರಂಡಿ ವ್ಯವಸ್ಥೆ ಕಲ್ಪಿಸಿದ್ದಾರೆ. ಇವರ ಕಾರ್ಯವನ್ನು ಸ್ಥಳೀಯರು ಶ್ಲಾಘಿಸಿದ್ದಾರೆ.

ಸುಳ್ಯ: ಸ್ವರ್ಣಂ ಜ್ಯುವೆಲ್ಸ್‌ನಿಂದ ವಿದ್ಯಾರ್ಥಿಗಳಿಗೆ ಹಣ್ಣಿನ ಗಿಡ ವಿತರಣೆ



ಸುಳ್ಯ: ಇಲ್ಲಿನ ಸ್ವರ್ಣಂ ಜ್ಯುವೆಲ್ಸ್ ವತಿಯಿಂದ ವಿಜಯ ಗ್ರಾಮಾಭಿವೃದ್ಧಿ ಸಮಿತಿ ಜಾಲ್ಸೂರು ಮತ್ತು ಕರ್ನಾಟಕ ಜರ್ನಲಿಸ್ಟ್ ಯೂನಿಯನ್ ಸುಳ್ಯ ತಾಲೂಕು ಘಟಕ ಸಹಯೋಗದಲ್ಲಿ ವನ ಮಹೋತ್ಸವ ಕಾರ್ಯಕ್ರಮ ಹಾಗೂ ವಿದ್ಯಾರ್ಥಿಗಳಿಗೆ ಹಣ್ಣಿನ ಗಿಡ ವಿತರಣೆ, ಸ್ಥಳದಲ್ಲೇ ರಸಪ್ರಶ್ನೆ ಸ್ಪರ್ಧಾ ಕಾರ್ಯಕ್ರಮ ಜಾಲ್ಸೂರು ಪಯಸ್ವಿನಿ ಪ್ರೌಢ ಶಾಲೆಯಲ್ಲಿ ಸೋಮವಾರ ನಡೆಯಿತು.

ಸ್ವರ್ಣಂ ಜ್ಯುವೆಲ್ಸ್ ಪಾಲುದಾರ ಪ್ರವೀಣ್ ಬಿ. ಗೌಡ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಶಾಲಾ ಸಂಚಾಲಕ ಸದಾನಂದ ಮಾವಜಿ, ಉಪ ವಲಯ ಅರಣ್ಯಾಧಿಕಾರಿ ರಂಜಿತಾ ಪಿ., ಜಾಲ್ಸೂರು ವಿಜಯ ಗ್ರಾಮಾಭಿವೃದ್ಧಿ ಸಮಿತಿ ಹಾಗೂ ಕರ್ನಾಟಕ ಜರ್ನಲಿಸ್ಟ್ ಯೂನಿಯನ್ ಸುಳ್ಯ ತಾಲೂಕು ಅಧ್ಯಕ್ಷ ಯಶ್ವಿತ್ ಕಾಳಮ್ಮನೆ ಉಪಸ್ಥಿತರಿದ್ದು ಶುಭ ಹಾರೈಸಿದರು.

ಬಳಿಕ ವಿದ್ಯಾರ್ಥಿಗಳಿಗೆ ಏರ್ಪಡಿಸಿದ ರಸಪ್ರಶ್ನೆ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಹಣ್ಣಿನ ಗಿಡ ವಿತರಿಸಲಾಯಿತು. ಶಾಲಾ ಆಡಳಿತ ಮಂಡಳಿ ನಿರ್ದೇಶಕ ಗಂಗಾಧರ ಕಾಳಮ್ಮನೆ, ಗಸ್ತು ಅರಣ್ಯಪಾಲಕ ಖ್ಯಾತಲಿಂಗ ಎಸ್.ಕೆ, ಪಯಸ್ವಿನಿ ಶಾಲಾ ಮುಖ್ಯ ಶಿಕ್ಷಕಿ ಜಯಲತಾ, ವಿಜಯ ಗ್ರಾಮಾಭಿವೃದ್ಧಿ ಸಮಿತಿಯ ಕಾರ್ಯದರ್ಶಿ ತಿರುಮಲೇಶ್ವರಿ ಅರ್ಭಡ್ಕ, ಪಯಸ್ವಿನಿ ಪ್ರೌಢಶಾಲಾ ಎಸ್.ಡಿ.ಎಂ.ಸಿ ಅಧ್ಯಕ್ಷ ಚಂದ್ರಶೇಖರ ಉಪಸ್ಥಿತರಿದ್ದರು. ಸ್ವರ್ಣಂ ಜ್ಯುವೆಲ್ಸ್ ಪಾಲುದಾರ ಸಂಜೀವ, ನಿತೀಶ್, ಕರ್ನಾಟಕ ಜರ್ನಲಿಸ್ಟ್ ಯೂನಿಯನ್ ಗೌರವಾಧ್ಯಕ್ಷೆ ಜಯಶ್ರೀ ಕೊಯಿಂಗೋಡಿ, ಕಾರ್ಯದರ್ಶಿ ಶ್ರೀಜಿತ್ ಸಂಪಾಜೆ, ವಿಜಯ ಗ್ರಾಮಾಭಿವೃದ್ಧಿ ಸಮಿತಿಯ ಸದಸ್ಯರಾದ ಸುಮತಿ ಹುಲಿಮನೆ, ವಿಜಯ ಕಾಳಮ್ಮನೆ, ರಶ್ಮಿ ಕಾಳಮ್ಮನೆ, ಜರ್ನಲಿಸ್ಟ್ ಯೂನಿಯನ್ ಸದಸ್ಯ ಕರುಣಾಕರ ಕೆಮ್ರಾರ, ಮತ್ತಿತರರಿದ್ದರು. ಗಣೇಶ್ ಕುಕ್ಕುದಡಿ ಸ್ವಾಗತಿಸಿ, ಶಿವಪ್ರಸಾದ್ ಆಲೆಟ್ಟಿ ವಂದಿಸಿದರು. ರಮೇಶ್ ನೀರಬಿದಿರೆ ನಿರ್ವಹಿಸಿದರು. ಶಾಲಾ ವಠಾರದಲ್ಲಿ ಹಣ್ಣಿನ ಗಿಡವನ್ನು ನೆಡಲಾಯಿತು.



ಭಾರತೀಯ ಸೇನಾಪಡೆಗೆ ಅಗ್ನಿವೀರನಾಗಿ ಆಯ್ಕೆಗೊಂಡ ಸೂರಂಬೈಲಿನ ದ.ಕ. ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯ ಹಿರಿಯ ವಿದ್ಯಾರ್ಥಿ ವಿಜಿತ್ ಕುಮಾರ್ ರೈ ಅವರನ್ನು ಶಾಲಾ ಪರವಾಗಿ ಅಭಿನಂದಿಸಲಾಯಿತು. ಪ್ರಮುಖರಾದ ಮೋಹನ ನಾಯ್ಕ ತೂಂಬಡ್ಕ, ದಯಾನಂದ ತೂಂಬಡ್ಕ, ಶ್ರೀನಿವಾಸ್ ಪ್ರಸಾದ್ ಸೂರ್ಯಂಬೈಲು, ಶ್ರೀಧರ ತೂಂಬಡ್ಕ, ಪ್ರದೀಪ್ ಪಾಣಾಜೆ, ವಿನೋದ್ ರಾಜ್ ತೂಂಬಡ್ಕ, ಕೃಷ್ಣನಾಯ್ಕ ತೂಂಬಡ್ಕ, ಲತೀಶ್ ಪಿಲಪೂರು, ಮುಖ್ಯ ಗುರು ಊರ್ಮಿಳ ಕೆ., ಸಹ ಶಿಕ್ಷಕಿ ಪವಿತ್ರ, ಸುಪ್ರೀತಾ, ಯಶಸ್ವಿನಿ, ವಿದ್ಯಾ, ಶೃತಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಹಾಯಕ ಪ್ರಾಧ್ಯಾಪಕರ ನೇಮಕಾತಿ

ಕಾಸರಗೋಡು: ಕಣ್ಣೂರಿನ ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯ ವೇಷಭೂಷಣ ಮತ್ತು ಫ್ಯಾಷನ್ ವಿನ್ಯಾಸ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕ ಹಿಂದಿ ಹುದ್ದೆಗೆ ಸಂದರ್ಶನವು ಜೂ.16ರಂದು ಬೆಳಗ್ಗೆ 11 ಗಂಟೆಗೆ ಸಂಸ್ಥೆಯ ಆವರಣದಲ್ಲಿ ನಡೆಯಲಿದೆ. ಹಿಂದಿಯಲ್ಲಿ ಕನಿಷ್ಠ ಶೇಕಡಾ 55 ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ, ಯುಜಿಸಿ ನೆಟ್, ಬೋಧನಾ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ವಿವರಗಳಿಗೆ 8281574390 ಸಂಪರ್ಕಿಸಬಹುದು.



ಸಿಎ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಸಂಪ್ಯ ನಿವಾಸಿ ಮೊಹಮ್ಮದ್ ರಿಯಾಝ್ ಅವರನ್ನು ಶಾಸಕ ಅಶೋಕ್ ರೈ ಅವರು ಸನ್ಮಾನಿಸಿ ಗೌರವಿಸಿದರು. ಶಾಸಕರ ಕಚೇರಿಯಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಮೊಹಮ್ಮದ್ ರಿಯಾಝ್ ಸಂಪ್ಯ ನಿವಾಸಿ ಅಬೂಬಕ್ಕರ್ ಹಾಗೂ ಸಾರಾ ದಂಪತಿಯ ಪುತ್ರ. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಪ್ರಸಾದ್ ಆಳ್ವ ಸಲಾಂ ಸಂಪ್ಯ, ಹಾರಿಸ್ ಸಂಪ್ಯ ಉಪಸ್ಥಿತರಿದ್ದರು.

ವಿಶ್ವಕರ್ಮ ಬ್ಯಾಂಕಿನಿಂದ ಉಡುಪಿಯಲ್ಲಿ 'ಸ್ವಚ್ಛತಾ ಹೀ ಸೇವಾ' ಅಭಿಯಾನ

ಸಾರ್ವಜನಿಕರ ಸಹಭಾಗಿತ್ವವೇ ಜಾಗೃತಿಗೆ ಪ್ರೇರಣೆ

ಉಡುಪಿ: ಸ್ವಚ್ಛ ಹಾಗೂ ಆರೋಗ್ಯಕರ ಪರಿಸರವನ್ನು ನಿರ್ಮಿಸುವ ನಿಟ್ಟಿನಲ್ಲಿ ಸ್ವಚ್ಛತೆಯ ಅರಿವು ಮತ್ತು ಜಾಗೃತಿ ಮೂಡಿಸುವ ಉದ್ದೇಶದಿಂದ ವಿಶ್ವಕರ್ಮ ಬ್ಯಾಂಕ್ ನಿರಂತರವಾಗಿ ಸ್ವಚ್ಛತಾ ಶ್ರಮದಾನ ಕಾರ್ಯಕ್ರಮ ನಡೆಸುತ್ತಿರುವುದರ ಹಿಂದೆ ಮುಖ್ಯ ಪ್ರೇರಣೆ ಎಂದರೆ ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳಿಂದ ನಮಗೆ ದೊರೆತ ಉತ್ತಮ ಸ್ಪಂದನೆಯೇ ಇಂತಹ ಇನ್ನಷ್ಟು ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಮಾಡಿದೆ ಎಂದು ವಿಶ್ವಕರ್ಮ ಬ್ಯಾಂಕಿನ ಉಪಾಧ್ಯಕ್ಷ ಜಗದೀಶ್ ಪಡುಪಣಂಬೂರು ಹೇಳಿದರು.

ಅವರು ವಿಶ್ವಕರ್ಮ ಬ್ಯಾಂಕಿನ ಉಡುಪಿ ಶಾಖೆಯ ವತಿಯಿಂದ 'ಸ್ವಚ್ಛತಾ ಹೀ ಸೇವಾ' ಎಂಬ ಧ್ಯೇಯದೊಂದಿಗೆ ಉಡುಪಿಯಲ್ಲಿ ನಡೆದ 50ನೇ ಸ್ವಚ್ಛತಾ ಶ್ರಮದಾನ ಕಾರ್ಯಕ್ರಮ ಹಾಗೂ ಸಮಾರೋಪ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.



ವಿಶ್ವಕರ್ಮ ಬ್ಯಾಂಕಿನ ನಿರ್ದೇಶಕ ಜಗದೀಶ್ ಆಚಾರ್ಯ ಕಪ್ಪೆಟ್ಟು, ತೆಂಕನಿಡಿಯೂರು ವಿಷ್ಣುಮೂರ್ತಿ ದೇವಾಸ್ಥಾನ ಬ್ರಹ್ಮಕಲಶ ಸಮಿತಿಯ ಅಧ್ಯಕ್ಷ ದಯಾನಂದ ಆಚಾರ್ಯ ಹಾಗೂ ಗೆಳೆಯರ ಬಳಗ ವಿಷ್ಣು ನಗರ ಇದರ ಅಧ್ಯಕ್ಷ ಚರಣ್ ರಾಜ್ ಶ್ರಮದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಉಡುಪಿಯ ದೊಡ್ಡಣಗುಡ್ಡೆ ಪರಿಸರದಲ್ಲಿ ಸ್ವಚ್ಛತೆಯ ಜಾಗೃತಿಯ ಮೂಡಿಸುವ ನಿಟ್ಟಿನಲ್ಲಿ ಶ್ರಮದಾನ ಕಾರ್ಯಕ್ರಮವು ನಡೆಯಿತು. ಪ್ರಮುಖರಾದ ರಾಧಾಕೃಷ್ಣ ಶೆಟ್ಟಿ, ಭರತ್ ಕುಮಾರ್, ವಾರಿಜಾ, ಜಯಕರ ಬೈಲೂರು, ವಿಶ್ವನಾಥ ಆಚಾರ್ಯ, ರವಿಚಂದ್ರ ಮಾರಾಳಿ ಹಾಗೂ ವಿಶ್ವಕರ್ಮ ಸಹಕಾರ ಬ್ಯಾಂಕಿನ ಉಡುಪಿ ಶಾಖೆಯ ಶಾಖಾಧಿಕಾರಿ ಸುದೇಶ್ ಹಾಗೂ ಸಿಬ್ಬಂದಿಗಳು, ಬ್ಯಾಂಕಿನ ಸದಸ್ಯರು, ಗ್ರಾಹಕರು, ಸ್ಥಳೀಯರು ಸಹಕರಿಸಿದರು.

ಕೋಟ ಶಾಖಾ ಕಚೇರಿಯಲ್ಲಿ ನೌಕರರು, ಗ್ರಾಹಕರಿಂದ ಪ್ರತಿಭಟನೆ

ಮೆಸ್ಕಾಂ ಖಾಸಗೀಕರಣದ ಪ್ರಯತ್ನ: ಆರೋಪ

ಕೋಟ: ಮೆಸ್ಕಾಂ ಕಂಪನಿಯ ಉಡುಪಿ, ಮಂಗಳೂರು ಹಾಗೂ ಶಿವಮೊಗ್ಗ ವಲಯದಲ್ಲಿರುವ ಹಲವಾರು ವಿದ್ಯುತ್ ಜಾಲಗಳನ್ನು ಟಾಟಾ ಪವರ್ ಕಂಪನಿ ಪ್ರೈವೇಟ್ ನಿರ್ವಹಣೆ ವಹಿಸುವುದಾಗಿ ಕೆಇಆರ್‌ಸಿಗೆ ಅರ್ಜಿ ಸಲ್ಲಿಸಿದ್ದು ಮುಂದಿನ ದಿನಗಳಲ್ಲಿ ವಿದ್ಯುತ್ ಜಾಲಗಳು ಖಾಸಗಿಕರಣದತ್ತ ತಿರುಗುವ ಸಂಶಯ ಎದುರಾಗಿದೆ. ಈ ಖಾಸಗಿಕರಣದ ವಿರುದ್ಧ ಕುಂದಾಪುರ ವಿಭಾಗದ ಕೋಟ ಉಪವಿಭಾಗದಲ್ಲಿ ಕ.ವಿ.ಪ್ರ.ನಿ ನೌಕರರ ಸಂಘ, ಕೋಟ ಉಪವಿಭಾಗ ಕೋಟ ಶಾಖಾ ಕಚೇರಿಯಲ್ಲಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭ ಕಂಪನಿಯ 50ಕ್ಕೂ ಹೆಚ್ಚು ನೌಕರರು ಮತ್ತು ಗುತ್ತಿಗೆದಾರರು, ಗ್ರಾಹಕರು ಸೇರಿ ಖಾಸಗೀಕರಣದ ವಿರುದ್ಧ ಪ್ರತಿಭಟನೆಯಲ್ಲಿ ಭಾಗಿಯಾದರು. ಪ್ರತಿಭಟನೆಯಲ್ಲಿ ಪ್ರಾಥಮಿಕ



ಸಮಿತಿ ಅಧ್ಯಕ್ಷ ದಿನೇಶ ಪುತ್ರನ್ ವಿಠಲವಾಡಿ, ಕಾರ್ಯದರ್ಶಿ ಸುಕುಮಾರ ಶೆಟ್ಟಿ ಅವರು ಕಂಪನಿಗೆ ಆಗುವ ನಷ್ಟ ತಿಳಿಸಿದರು. ಕೋಟ ಸಹಾಯಕ ಇಂಜಿನಿಯರ್ ಪ್ರಶಾಂತ ಶೆಟ್ಟಿ, ಶಿರಿಯಾರ ಶಾಖಾಧಿಕಾರಿ ವೈಭವ ಶೆಟ್ಟಿ, ಸಾಸ್ತಾನ ಶಾಖಾಧಿಕಾರಿ ಮಹೇಶ ಕೆ. ಮಾತನಾಡಿ, ಮುಂದೆ ಹೋರಾಟ ಮಾಡಬೇಕಾದ ಪರಿಸ್ಥಿತಿ ಬರಬಹುದು ಎಂದರು. ಪ್ರಮುಖರಾದ ಚಂದ್ರಶೇಖರ ಕೋಟ, ಶಿರಿಯಾರ ಮೇಲ್ವಿಚಾರಕ ಉಮೇಶ, ನೌಕರರ ಸಂಘದ ಸದಸ್ಯರು, ಗುತ್ತಿಗೆದಾರರು, ನೌಕರರು ಉಪಸ್ಥಿತರಿದ್ದರು.

ವಿದ್ಯುತ್ ಅವಘಡದ ಸಾಧ್ಯತೆ | ತಪ್ಪಿತಸ್ಥರ ವಿರುದ್ಧ ಕಟ್ಟುನಿಟ್ಟಿನ ಕ್ರಮಕ್ಕೆ ಕೆಎಸ್‌ಇಬಿ ನಿರ್ಧಾರ

ವಿದ್ಯುತ್ ಕಂಬಗಳಲ್ಲಿ ಫ್ಲೆಕ್ಸ್, ಜಾಹಿರಾತು ಫಲಕಗಳ ಹಾವಳಿ!





ಕಾಸರಗೋಡು: ಜಿಲ್ಲೆಯಲ್ಲಿ ಕೆಎಸ್‌ಇಬಿ ವಲಯದ ವಿದ್ಯುತ್ ಕಂಬಗಳಲ್ಲಿ ಅನಧಿಕೃತ ಬ್ಯಾನರ್‌ಗಳು, ಫ್ಲೆಕ್ಸ್ ಬೋರ್ಡ್‌ಗಳು, ಹೋರ್ಡಿಂಗ್‌ಗಳು ಇತ್ಯಾದಿಗಳ ಹಾವಳಿ ಹೆಚ್ಚಿದ್ದು ಈ ನಿಟ್ಟಿನಲ್ಲಿ ಇಂತಹ ಕೃತ್ಯ ಎಸಗುವವರ ವಿರುದ್ಧ ಕ್ರಮಕ್ಕೆ ಕೆಎಸ್‌ಇಬಿ ಅಧಿಕಾರಿಗಳು ಇದೀಗ ಮುಂದಾಗಿದ್ದಾರೆ.

ಈ ನಿಟ್ಟಿನಲ್ಲಿ ಕಾಸರಗೋಡು ವಿದ್ಯುತ್ ವೃತ್ತದ ಉಪ ಮುಖ್ಯ ಇಂಜಿನಿಯರ್ ಅವರು ಖಡಕ್ ಸೂಚನೆ ನೀಡಿದ್ದು ವಿದ್ಯುತ್ ಕಂಬಳಲ್ಲಿ ಬ್ಯಾನರ್, ಫ್ಲೆಕ್ಸ್ ಇತ್ಯಾದಿಗಳನ್ನು ಅಳವಡಿಸುವುದರಿಂದ ಗಂಭೀರ ವಿದ್ಯುತ್ ಅಪಘಾತಗಳು ಸಂಭವಿಸ ಬಹುದು ಎಂದು ಮುನ್ನೆಚ್ಚರಿಕೆ ನೀಡಿದ್ದಾರೆ. ಈ ರೀತಿಯ ಚಟುವಟಿಕೆಗಳು ಕಾನೂನುಬಾಹಿರ ಮತ್ತು ಕೇಂದ್ರ ವಿದ್ಯುತ್ ಕಾಯ್ದೆ 2003ರಡಿ ಶಿಕ್ಷಾರ್ಹ ಅಪರಾಧವಾಗಿದೆ. ಒಂದು ವೇಳೆ ವಿದ್ಯುತ್ ಕಂಬಗಳಲ್ಲಿ ಲೈನ್‌ಗಳಲ್ಲಿ ಟ್ರಾನ್ಸ್ ಫಾರ್ಮರ್‌ಗಳಲ್ಲಿ ಹಾಗೂ ಸ್ವಿಚ್ ಬೋರ್ಡ್‌ಗಳಲ್ಲಿ ಅನಧಿಕೃತ ಪ್ರಚಾರ ಜಾಹೀರಾತುಗಳು ಕಂಡುಬಂದಲ್ಲಿ ತಪ್ಪಿತಸ್ಥರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

ಸರಾಗ ವಿದ್ಯುತ್ ಪೂರೈಕೆಗೆ ರೂಪರೇಷೆ

ಕಾಸರಗೋಡು ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಸಮರ್ಪಕ ವಿದ್ಯುತ್ ಪೂರೈಕೆ ಖಚಿತಪಡಿಸಿಕೊಳ್ಳಲು ಕೆಎಸ್‌ಇಬಿ ರೂಪರೇಷೆ ತಯಾರಿಸಿದೆ. ಮಳೆ ಮತ್ತು ಗಾಳಿಬೀಸುವಸಮಯದಲ್ಲಿ ವಿದ್ಯುದ್ದೀಕರಿಸಬಲ್ಲ ವಸ್ತುಗಳು ಅಥವಾ ಫ್ಲೆಕ್ಸ್ ಬೋರ್ಡ್‌ಗಳು ವಿದ್ಯುತ್ ತಂತಿಗಳಿಗೆ ಸ್ಪರ್ಶಿಸುವ ಮೂಲಕ ಬಹುದೊಡ್ಡ ಅನಾಹುತಗಳಿಗೆ ಕಾರಣವಾಗಬಹುದು ಎಂದು ಕೆಎಸ್‌ಇಬಿ ಎಚ್ಚರಿಸಿದೆ. ಆದ್ದರಿಂದ ಸಾರ್ವಜನಿಕರು, ವಿವಿಧ ಸಂಘಟನೆಗಳು, ರಾಜಕೀಯ ಮತ್ತು ಸಾಮಾಜಿಕ ಸಂಘ ಸಂಸ್ಥೆಗಳು ವಿದ್ಯುತ್ ಕಂಬಗಳ ಜಾಹೀರಾತು ಫಲಕಗಳನ್ನು ಅಳವಡಿ ಸುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಅಲ್ಲದೆ ಅನುಮತಿ ಯಿಲ್ಲದೆ ವಿದ್ಯುತ್ ಕಂಬಗಳ ಮೇಲೆ ಬಣ್ಣ ಬಳಿಯುವಂತಹ ಚಟುವಟಿಕೆಗಳನ್ನು ನಡೆಸಬಾರದು. ವಿದ್ಯುತ್ ಸುರಕ್ಷತೆ ಖಚಿತಪಡಿಸಿಕೊಳ್ಳಲು ಕೆಎಸ್‌ಇಬಿ ವಿಭಾಗದ ಪ್ರಯತ್ನಗಳಿಗೆ ಎಲ್ಲರೂ ಸಂಪೂರ್ಣವಾಗಿ ಸಹಕರಿಸಬೇಕೆಂದು ಮನವಿ ಮಾಡಲಾಗಿದೆ.

ಎಸ್‌ಎಂಎಸ್ ಮೂಲಕ ಮಾಹಿತಿ

ಮಳೆ ಗಾಳಿಯಿಂದಾಗಿ ಕೆಎಸ್‌ಇಬಿ ಕಾಸರಗೋಡು ವ್ಯಾಪ್ತಿಯಲ್ಲಿ ವಿದ್ಯುತ್ ಕಡಿತ, ನಿರ್ವಹಣಾ ಚಟುವಟಿಕೆಗಳಿಗೆ ಸಂಬಂಧಿಸಿದ ಸಮಸ್ಯೆಗಳದ್ದಲ್ಲಿ ಗ್ರಾಹಕರು ಎಸ್‌ಎಂಎಸ್ ಸಂದೇಶಗಳ ಮೂಲಕ ಕೆಎಸ್‌ಇಬಿಗೆದೂರುನೀಡಬಹುದು. ಈ ಸೇವೆಯನ್ನು ಪಡೆಯಲು ಗ್ರಾಹಕರು ತಮ್ಮ ವಿದ್ಯುತ್ ಸಂಪರ್ಕಕ್ಕೆ ಲಿಂಕ್ ಮಾಡಲಾದ ಮೊಬೈಲ್ ಸಂಖ್ಯೆಯನ್ನು ಕೆಎಸ್‌ಇಬಿಯಲ್ಲಿ ನೋಂದಾಯಿಸಿಕೊಳ್ಳಬೇಕು. ಇದಕ್ಕಾಗಿ ಗ್ರಾಹಕರಿಗೆ ವಿವಿಧ ಆಯ್ಕೆಗಳನ್ನು ಒದಗಿಸಲಾಗಿದೆ. ಗ್ರಾಹಕರು 9496011431 ಎಂಬ ಮೊಬೈಲ್ ಸಂಖ್ಯೆ ಎಸ್‌ಎಂಎಸ್ ಕಳುಹಿಸುವ ಮೂಲಕ ಅಥವಾ 9496011912 ಸಂಖ್ಯೆಗೆ ಕರೆ ಮಾಡುವ ಮೂಲಕ ಮೊಬೈಲ್ ಸಂಖ್ಯೆಯನ್ನು ನೋಂದಾಯಿಸಿಕೊಳ್ಳಬಹುದು ಅಥವಾ ಕೆಎಸ್‌ಇಬಿ ಟೋಲ್ ಫ್ರೀ ಸಂಖ್ಯೆ 1912 ಅಥವಾ ಹತ್ತಿರದ ವಿಭಾಗ ಕಚೇರಿಯನ್ನು ನೇರವಾಗಿ ಸಂಪರ್ಕಿಸುವ ಮೂಲಕ ನೋಂದಣಿ ಪೂರ್ಣ ಗೊಳಿಸಬಹುದು. ವಿದ್ಯುತ್ ಕಡಿತ ಮತ್ತು ಇತರ ಅಧಿಸೂಚನೆಗಳಿಗೆ ಸಂಬಂಧಿಸಿದ ಎಸ್‌ಎಂಎಸ್ ಸಂದೇಶಗಳನ್ನು ಸ್ವೀಕರಿಸಲು ಎಲ್ಲಾ ಗ್ರಾಹಕರು ತಮ್ಮ ಮೊಬೈಲ್ ಸಂಖ್ಯೆಗಳನ್ನು ಕೆಎಸ್‌ಇಬಿ ವೆಬ್‌ಸೈಟ್‌ನಲ್ಲಿ ಅಥವಾ ಸಂಬಂಧಿತ ಕಚೇರಿಗಳಲ್ಲಿ ನೋಂದಾಯಿಸಿಕೊಳ್ಳಬೇಕು ಎಂದು ಉಪ ಮುಖ್ಯ ಇಂಜಿನಿಯರ್ ಮಾಹಿತಿ ನೀಡಿದ್ದಾರೆ.


ವಿದ್ಯುತ್ ಕಂಬಕ್ಕೆ ಹತ್ತಲು ಸಿಬ್ಬಂದಿಗಳಿಗೆ ಅಡೆತಡೆ

ಕೆಎಸ್‌ಇಬಿ ಸಿಬ್ಬಂದಿಗಳು ವಿದ್ಯುತ್ ತಂತಿಗಳಲ್ಲಿನ ದೋಷಗಳನ್ನು ಸರಿಪಡಿಸಲು ಕಂಬಗಳನ್ನು ಏರುವ ಸಂದರ್ಭದಲ್ಲಿ ಅಂತಹ ಫ್ಲೆಕ್ಸ್ ಬೋರ್ಡ್ ಗಳು ಅಡಚಣೆ ಸೃಷ್ಟಿಸುತ್ತವೆ. ಅಲ್ಲದೇ ಮಳೆಗಾಲದಲ್ಲಿ ಗಾಳಿಗೆ ಫ್ಲೆಕ್ಸ್‌ಗಳು ಹಾರಿಹೋಗಿ ಅಪಾಯ ಸೃಷ್ಟಿಸುವ ಸಾಧ್ಯತೆಯೂ ಹೆಚ್ಚಿದೆ. ಅಲ್ಲದೇ ಶಾರ್ಟ್ ಸರ್ಕ್ಯೂಟ್ ಉಂಟಾಗುವ ಸಾಧ್ಯತೆ ಇದೆ ಎಂದು ಕೆಎಸ್‌ಇಬಿ ತಿಳಿಸಿದೆ.

ಸುತ್ತಮುತ್ತ

ಪಾವೂರು ಪೊಯ್ಯೆ ಚಾಮುಂಡೇಶ್ವರಿ ಭಜನಾ ಮಂಡಳಿಯ ಮಹಾಸಭೆ





ಮಂಜೇಶ್ವರ: ಪಾವೂರು ಬಜಾಲ್ ಪೊಯ್ಯೆ ಶ್ರೀ ಚಾಮುಂಡೇಶ್ವರಿ ಭಜನಾ ಮಂಡಳಿಯ ವಾರ್ಷಿಕ ಮಹಾಸಭೆ ಹಾಗೂ ನೂತನ ಪದಾಧಿಕಾರಿಗಳ ಆಯ್ಕೆ ಶ್ರೀ ಕ್ಷೇತ್ರದಲ್ಲಿ ಜರಗಿತು. ಶ್ರೀ ಚಾಮುಂಡೇಶ್ವರಿ ಭಜನಾ ಮಂಡಳಿಯ 57ನೇ ವಾರ್ಷಿಕ ಏಕಾಹ ಭಜನೋತ್ಸವ ಕಾರ್ಯಕ್ರಮವನ್ನು ಇತ್ತೀಚೆಗೆ ಹಮ್ಮಿಕೊಳ್ಳಲಾಗಿತ್ತು. ಈ ಬಗ್ಗೆ ಸಮಾಲೋಚನೆ ನಡೆಸಲಾಯಿತು. ಮಂಡಳಿಯ ಅಧ್ಯಕ್ಷ ಮೋನಪ್ಪ ಶೆಟ್ಟಿ ಮುಟ್ಟ ಸಭೆಯ ಅಧ್ಯಕ್ಷತೆ ವಹಿಸಿದ್ದರು. 2026–27ನೇ ಸಾಲಿನ ನೂತನ ಅಧ್ಯಕ್ಷರಾಗಿ ವಿಶ್ವನಾಥ ಕಲ್ಲಾಜೆ, ಉಪಾಧ್ಯಕ್ಷರಾಗಿ ಶಿವರಾಮ ಬಳ್ಳೂರು, ಪ್ರಧಾನ ಕಾರ್ಯದರ್ಶಿಯಾಗಿ ಹರ್ಷಿತ್ ನೆಕ್ಕಿಲ, ಜೊತೆ ಕಾರ್ಯದರ್ಶಿಗಳಾಗಿ ಹರ್ಷಿತ್ ಬೊಳಕಡ, ಸತೀಶ್ ಬಳ್ಳೂರು, ಕೋಶಾಧಿಕಾರಿಯಾಗಿ ಮನೋಜ್ ಕಾನದಕಟ್ಟ, ಸಂಘಟನಾ ಕಾರ್ಯದರ್ಶಿಯಾಗಿ ನಿಶಿತ್ ನೆಕ್ಕಿಲ, ಸಹ ಸಂಘಟನಾ ಕಾರ್ಯದರ್ಶಿಯಾಗಿ ಪುನೀತ್ ರೈ ಪಾವೂರು, ಗೌರವ ಸಲಹೆಗಾರರಾಗಿ ನಾರಾಯಣ ಶೆಟ್ಟಿ ಬಜಾಲ್, ವಿನೋದ್‌ಕುಮಾರ್ ರೆಂಜೆಪಡ್ಪು ವಿಶ್ವನಾಥ ಶೆಟ್ಟಿ ಕೋರಿಮುಗೇರು, ನಾಗೇಶ್ ಬಲ್ಲೂರು, ಸುರೇಂದ್ರ ಪಾವೂರು ಆಯ್ಕೆಯಾದರು. ಸಭೆಯಲ್ಲಿ ನವೀನ್ ಶೆಟ್ಟಿ ಕೋರಿಮುಗೇರು, ಸಜಿತ್ ಕಲ್ಲಾಜೆ ಅಲ್ಲದೆ ಮಹಿಳಾ ಸಮಿತಿಯ ಸದಸ್ಯೆಯರಾದ ಪ್ರಜ್ಞಾ ಸತೀಶ್, ನಿಹಾರಿಕ, ಲಲಿತಾ, ಶಾನ್ವಿ ನಿಶಾ ಸನತ್ ಶೆಟ್ಟಿ ರಶಿತಾ ಮುಂತಾದವರು ಉಪಸ್ಥಿತರಿದ್ದರು. ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಶ್ರೀ ಚಾಮುಂಡೇಶ್ವರಿ ದೇವಿಯ ಆಶೀರ್ವಾದ ಸದಾ ಇರಲಿ ಎಂದು ಸಭೆಯಲ್ಲಿ ಪ್ರಾರ್ಥಿಸಲಾಯಿತು. ಮುಂದಿನ ಆಡಳಿತಾವಧಿಯಲ್ಲಿ ಶ್ರೀ ಕ್ಷೇತ್ರದ ಹಾಗೂ ಭಜನಾ ಮಂಡಳಿಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವುದಾಗಿ ನೂತನ ಅಧ್ಯಕ್ಷರು ಭರವಸೆ ನೀಡಿದರು.

ಕರಿಂದಳಂ ಆರೋಗ್ಯ ಕೇಂದ್ರ: ತಾತ್ಕಾಲಿಕ ನೇಮಕಾತಿ

ಕಾಸರಗೋಡು: ಕರಿಂದಳಂ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಪಂಚಾಯತ್ ಮೂಲಕ ವೈದ್ಯರನ್ನು ನೇಮಿಸಲು ಜೂ.16ರಂದು ಬೆಳಗ್ಗೆ 11 ಗಂಟೆಗೆ ಸಂದರ್ಶನ ನಡೆಯಲಿದೆ. ಎಂಬಿಬಿಎಸ್ ಪದವಿ, ಟಿಸಿಎಂಸಿ ನೋಂದಣಿ ವಿದ್ಯಾರ್ಹತೆಯಾಗಿದೆ. ವಯೋಮಿತಿ 50 ವರ್ಷಗಳು. ಕರಿಂದಳಂ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಆಶಾ ಕಾರ್ಯಕರ್ತೆಯ ನೇಮಕಾತಿ ಸಂದರ್ಶನವು ಜೂ.16ರಂದು ಬೆಳಗ್ಗೆ 11.30ಕ್ಕೆ ನಡೆಯಲಿದೆ. ಎಸ್‌ಎಸ್‌ಎಲ್‌ಸಿ ಅರ್ಹತೆ ಪಡೆದ ವಿವಾಹಿತ ಮತ್ತು 25ರಿಂದ 45 ವರ್ಷದೊಳಗಿನ ಮತ್ತು ಪಂಚಾಯತ್‌ನಲ್ಲಿ ಶಾಶ್ವತವಾಗಿ ವಾಸಿಸುತ್ತಿರುವ ಆಸಕ್ತ ಅಭ್ಯರ್ಥಿಗಳು ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ 0467 2235053 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಜೂ.14: ಪ್ರತಾಪನಗರ ಶ್ರೀ ಗೌರಿ ಗಣೇಶೋತ್ಸವ ಪೂರ್ವಭಾವಿ ಮಹಾಸಭೆ

ಉಪ್ಪಳ: ವರ್ಷಂಪ್ರತಿ ಜರಗುವ ಮಂಗಲ್ಪಾಡಿ ಪ್ರತಾಪನಗರ ಸಾರ್ವಜನಿಕ ಶ್ರೀ ಗೌರಿ ಗಣೇಶೋತ್ಸವದ ಸಿದ್ಧತೆ ಹಾಗೂ ಉತ್ಸವದ ಯಶಸ್ವಿಗಾಗಿ ಮಹಾಸಭೆಯು ಜೂ.14ರಂದು ಸಂಜೆ 4.30ಕ್ಕೆ ಪ್ರತಾಪನಗರ ಶ್ರೀ ಗಣೇಶ ಮಂದಿರದಲ್ಲಿ ನಡೆಯಲಿದೆ. ಗ್ರಾಮದ ಪ್ರತೀ ಮನೆಯ ಎಲ್ಲಾ ಸದಸ್ಯರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು ಈ ಸಭೆಯಲ್ಲಿ ಭಾಗವಹಿಸಿ ಸಲಹೆ ಸೂಚನೆಗಳನ್ನಿತ್ತು ನೀಡಬೇಕೆಂದು ಮಂದಿರದ ಪದಾಧಿಕಾರಿಗಳು ವಿನಂತಿಸಿದ್ದಾರೆ.

ಜನಗಣತಿ 2027: ಎಳೇರಿತಟ್ ಕಾಲೇಜಿನಲ್ಲಿ ರಸಪ್ರಶ್ನೆ ಸ್ಪರ್ಧೆ



ಕಾಸರಗೋಡು: ಭಾರತ ಜನಗಣತಿ 2027ರ ಅಭಿಯಾನದ ಭಾಗವಾಗಿ ಜನಗಣತಿ ಕಾರ್ಯಾಚರಣೆ ನಿರ್ದೇಶನಾಲಯ ಮತ್ತು ಜಿಲ್ಲಾಡಳಿತದ ನೇತೃತ್ವದಲ್ಲಿ ಎಳೇರಿತಟ್ ಇ.ಕೆ.ನಾಯನಾರ್ ಮೆಮೋರಿಯಲ್ ಕಾಲೇಜಿನಲ್ಲಿ ರಸಪ್ರಶ್ನೆ ಸ್ಪರ್ಧೆಯನ್ನು ಬುಧವಾರ ಆಯೋಜಿಸಲಾಗಿತ್ತು. ಜನಗಣತಿ ಮಾಸ್ಟರ್ ತರಬೇತುದಾರರಾದ ಟಿ.ರಾಜ್‌ಕುಮಾರ್ ಮತ್ತು ಡಾ.ಪಿ.ವಿ.ಜಿಶಾ ರಸಪ್ರಶ್ನೆ ಸ್ಪರ್ಧೆಯನ್ನು ನಡೆಸಿಕೊಟ್ಟರು. ಮೂರನೇ ವರ್ಷದ ಅರ್ಥಶಾಸ್ತ್ರ ವಿದ್ಯಾರ್ಥಿ ಶ್ರೀಜಿತ್ ಸೋಮನ್ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದರು.

ಜೂ.12ರಂದು ರಸಪ್ರಶ್ನೆ ಸ್ಪರ್ಧೆ

ಭಾರತ ಜನಗಣತಿ 2027ರ ಅಂಗವಾಗಿ ಜಿಲ್ಲಾಡಳಿತ ಮತ್ತು ಜಿಲ್ಲಾ ಮಾಹಿತಿ ಕಚೇರಿ ಜಂಟಿಯಾಗಿ ಕಾಸರಗೋಡು ಜಿಲ್ಲೆಯ ಸರಕಾರಿ ನೌಕರರಿಗಾಗಿ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸುತ್ತಿವೆ. ಸ್ಪರ್ಧೆಯನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಉದ್ಘಾಟಿಸಲಿದ್ದಾರೆ. ಸ್ಪರ್ಧೆಯು ಜೂ.12ರಂದು ಬೆಳಗ್ಗೆ 11 ಗಂಟೆಗೆ ವಿದ್ಯಾನಗರ ಕಲೆಕ್ಟರೇಟ್ ಮಿನಿ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ.

ಯುಗಪುರುಷ ನರೇಂದ್ರ ಮೋದಿ ವಿದ್ಯಾಲಯ: ವಿಶ್ವ ಪರಿಸರ ದಿನಾಚರಣೆ



ಕಾಸರಗೋಡು: ಕಾಸರಗೋಡು ಸಮೀಪದ ಅಡ್ಕತ್ತಬೈಲು ಗುಡ್ಡೆ ದೇವಸ್ಥಾನ ರಸ್ತೆ ಪರಿಸರದ ಯುಗಪುರುಷ ನರೇಂದ್ರ ಮೋದಿ ವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನವನ್ನು ಸಂಭ್ರಮದಿಂದ ವಿವಿಧ ಕಾರ್ಯಕ್ರಮಗಳೊಂದಿಗೆ ಹಮ್ಮಿಕೊಳ್ಳಲಾಯಿತು.

ಶಾಲಾ ಸಂಯೋಜಕಿ ಉಷಾ ನಾಯರ್, ಪಠ್ಯೇತರ ಚಟುವಟಿಕೆಗಳ ಮಾರ್ಗದರ್ಶಕಿ ಶಾಹಿರತ್ನ ಮುಖ್ಯೋಪಾಧ್ಯಾಯಿನಿ ಶ್ರೀವಲ್ಲಿ, ಶೈಕ್ಷಣಿಕ ಮಾರ್ಗದರ್ಶಕಿ ದೀಪಿಕಾ ಶೆಣೈ ಮುಂತಾದವರು ಭಾಗವಹಿಸಿ ವಿಶ್ವ ಪರಿಸರ ದಿನದ ಮಹತ್ವ ಜಾಗೃತಿಗಳ ಕುರಿತು ಮಕ್ಕಳಿಗೆ ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಮಕ್ಕಳಿಂದ ಪರಿಸರ ಜಾಗೃತಿ ಕುರಿತು ಕಿರು ನಾಟಕ, ನೃತ್ಯ ಹಾಗೂ ಭಾಷಣ ಮೊದಲಾದ ಕಾರ್ಯಕ್ರಮ ನಡೆಯಿತು.

ಪ್ರಾಧ್ಯಾಪಕ ರತ್ನಾಕರ ಮಲ್ಲಮೂಲೆ ಅವರಿಗೆ 'ವನಮಿತ್ರ' ಪ್ರಶಸ್ತಿ ಪ್ರದಾನ



ಕಾಸರಗೋಡು: ಮಳೆಕೊಯ್ಲು, ಜಲ ಮರುಪೂರಣ ಹಾಗೂ ಸೌರಯೋಜನೆಯ ಮೂಲಕ ಬರಡು ನೆಲದಲ್ಲಿ ಹಸಿರು ಕ್ರಾಂತಿಯನ್ನುಂಟು ಮಾಡಿ ತನ್ನ ಯೋಜನೆಗಳೆಲ್ಲವನ್ನೂ ಸಾಮಾಜಿಕ ಜಾಗೃತಿಗೆ ಮೀಸಲಿಟ್ಟು ಗಮನ ಸೆಳೆದಿರುವ ಕಾಸರಗೋಡು ಸರಕಾರಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಹಾಗೂ ಕಣ್ಣೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯ ಡಾ. ರತ್ನಾಕರ ಮಲ್ಲಮೂಲೆ ಅವರಿಗೆ ವನಮಿತ್ರ ಪ್ರಶಸ್ತಿಯನ್ನು ಕೇರಳ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣಾ ಖಾತೆ ಸಚಿವ ಶಿಬು ಬೇಬಿ ಜೋನ್ ಅವರು ನೀಡಿ ಅಭಿನಂದಿಸಿದರು.

ವಿಶ್ವ ಪರಿಸರ ದಿನದ ಭಾಗವಾಗಿ ಕೇರಳ ಸರಕಾರದ ಅರಣ್ಯ ಇಲಾಖೆಯು ತಿರುವನಂತಪುರ ನಂದವನದ ಮುಖ್ಯ ಕಚೇರಿಯ ವನಶ್ರೀ ಸಭಾಂಗಣದಲ್ಲಿ ಆಯೋಜಿಸಿದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಸಾರಿಗೆ ಸಚಿವ ಸಿ.ಪಿ.ಜೋನ್ ಅಧ್ಯಕ್ಷತೆ ವಹಿಸಿದ್ದರು. ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು, ವಿವಿಧ ಜಿಲ್ಲೆಯ ಪ್ರತಿನಿಧಿಗಳು, ವಿವಿಧ ಇಲಾಖೆಯ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ರತ್ನಾಕರ ಮಲ್ಲಮೂಲೆಯವರು ಕುಟುಂಬ ಸಮೇತ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಾಸರಗೋಡಿಗೆ ಆಗಮಿಸುವ ಸಂದರ್ಭದಲ್ಲಿ ಮಲ್ಲಮೂಲೆಯವರ ಬನವಾಸಿ ಹಸಿರು ಯೋಜನೆಯನ್ನು ಖುದ್ದಾಗಿ ವೀಕ್ಷಿಸಲು ಬರುವುದಾಗಿ ಸಚಿವರು ಇದೇ ವೇಳೆ ಭರವಸೆ ನೀಡಿದರು.

ವರ್ಕಾಡಿಯಲ್ಲಿ ಪರಿಸರ ದಿನಾಚರಣೆ



ಮಂಜೇಶ್ವರ: ವರ್ಕಾಡಿ ಸೇವಾ ಸಹಕಾರಿ ಬ್ಯಾಂಕ್‌ನಲ್ಲಿ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಮೀಂಜ ಗ್ರಾ.ಪಂ. ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ಸೌಮ್ಯಾ ಕಳಿಯೂರು ಭಾಗವಹಿಸಿ ಗಿಡ ನೆಡುವ ಹಾಗೂ ವಿತರಿಸುವ ಕಾರ್ಯಕ್ರಮ ಉದ್ಘಾಟಿಸಿದರು. ಬ್ಯಾಂಕ್‌ನ ಅಧ್ಯಕ್ಷ ಮೊಹಮ್ಮದ್ ಹನೀಫ್ ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬ್ಯಾಂಕ್‌ನ ಉಪಾಧ್ಯಕ್ಷ ಸತ್ಯನಾರಾಯಣ ಭಟ್, ನಿರ್ದೇಶಕ ರಾಬಿಯಾ, ಮೂಸಾಕುಂಞ್ ಹಾಗೂ ಬ್ಯಾಂಕ್‌ನ ಸದಸ್ಯ ಪದ್ಮನಾಭ, ಪರಮೇಶ್ವರ, ಉಮ್ಮರಬ್ಬ ಸುಕುಮಾರ, ಗಿರಿಧರ, ಸದಾಶಿವ, ಬಾಲಕೃಷ್ಣ ಕ್ಯಾಂಪ್ಕೋ ವರ್ಕಾಡಿ ಶಾಖೆ ಮೆನೇಜರ್ ಅಶ್ವಿನ್‌ಕುಮಾರ್ ಹಾಗೂ ಬ್ಯಾಂಕ್‌ನ ಉದ್ಯೋಗಿ ದಯಾವತಿ, ಜೀವನ್, ಆರತಿ, ದೀಪಾ, ಶೈಲಜಾ, ಗಣೇಶ ಆಚಾರ್ಯ, ಜನಾರ್ದನ ಪೂಜಾರಿ, ಜಯಂತ ಮತ್ತಿತರರಿದ್ದರು. ಕಾರ್ಯದರ್ಶಿ ಶ್ರೀವತ್ಸ ಭಟ್ ಕಾರ್ಯಕ್ರಮ ನಿರೂಪಿಸಿದರು.

ಪಳ್ಳಿಕೆರೆಯಲ್ಲಿ ನೂತನ 'ಸುಪ್ರಭಾತ' ಜ್ಞಾನವಿಕಾಸ ಕೇಂದ್ರದ ಉದ್ಘಾಟನೆ



ಕಾಸರಗೋಡು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಕಾಸರಗೋಡು ತಾಲೂಕಿನ ಚಂದ್ರಗಿರಿ ವಲಯದ ಪಳ್ಳಿಕೆರೆ ಕಾರ್ಯಕ್ಷೇತ್ರದಲ್ಲಿ ಸುಪ್ರಭಾತ ಎಂಬ ನೂತನ ಜ್ಞಾನವಿಕಾಸ ಕೇಂದ್ರವನ್ನು ಪಳ್ಳಿಕೆರೆ ಗ್ರಾ.ಪಂ. ಸದಸ್ಯ ರಾಜೇಶ್ ದೀಪ ಬೆಳಗಿಸಿ ಉದ್ಘಾಟಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ ತಾಲೂಕಿನ ಯೋಜನಾಧಿಕಾರಿ ದಿನೇಶ್ ಅವರು ಕೇಂದ್ರದ ಸದಸ್ಯರಿಗೆ ದಾಖಲಾತಿ ಹಸ್ತಾಂತರಿಸಿ ಕಾರ್ಯಕ್ರಮದ ಧ್ಯೇಯೋದ್ದೇಶ ಬಗ್ಗೆ ಸಮಗ್ರ ಮಾರ್ಗದರ್ಶನ ನೀಡಿದರು. ಒಕ್ಕೂಟದ ಉಪಾಧ್ಯಕ್ಷೆ ಸಂಧ್ಯಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಲಯ ಮೇಲ್ವಿಚಾರಕಿ ಚಂದ್ರಕಲಾ ಪ್ರಾಸ್ತಾವಿಕ ಮಾತನಾಡಿದರು. ಕೇಂದ್ರದ ಸದಸ್ಯೆ ರಜನಿ ಸ್ವಾಗತಿಸಿ, ಕಾವ್ಯಾ ವಂದಿಸಿದರು. ಜ್ಞಾನವಿಕಾಸ ಸಮನ್ವಯ ಅಧಿಕಾರಿ ಸೌಮ್ಯಾ ನಿರೂಪಿಸಿದರು. ಈ ಸಂದರ್ಭ ಸೇವಾ ಪ್ರತಿನಿಧಿ ಶೋಭಾ, ಜ್ಞಾನವಿಕಾಸದ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

ಕ್ರೀಡಾ ಮಂಡಳಿಯಿಂದ ಟಿ.ಪಿ. ದಾಸನ್ ಸ್ಮರಣಾರ್ಥ ಉಪನ್ಯಾಸ ಕಾರ್ಯಕ್ರಮ



ಕಾಸರಗೋಡು: ಕಾಸರಗೋಡು ಜಿಲ್ಲಾ ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ಕೇರಳ ಕ್ರೀಡಾ ಮಂಡಳಿಯ ಮಾಜಿ ಅಧ್ಯಕ್ಷ ಟಿ.ಪಿ. ದಾಸನ್ ಅವರ ಸ್ಮರಣಾರ್ಥ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಜಿಲ್ಲಾ ಕ್ರೀಡಾ ಮಂಡಳಿಯು ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಕ್ರೀಡಾ ಮಂಡಳಿ ಅಧ್ಯಕ್ಷ ಪ್ರೊ. ಪಿ. ರಘುನಾಥ್ ವಹಿಸಿದ್ದರು. ರಾಜ್ಯ ಕ್ರೀಡಾ ಮಂಡಳಿ ಸದಸ್ಯ ಪಿ.ಪಿ. ಅಶೋಕನ್ ಮಾಸ್ಟರ್ ಉಪನ್ಯಾಸ ನೀಡಿದರು. ರಾಜ್ಯ ಕ್ರೀಡಾ ಮಂಡಳಿ ಸದಸ್ಯ ಮಧುಸೂದನನ್, ಜಿಲ್ಲಾ ಕ್ರೀಡಾ ಮಂಡಳಿ ಕಾರ್ಯಕಾರಿ ಸದಸ್ಯ ಟಿ.ವಿ. ಕೃಷ್ಣನ್, ವೀರಮಣಿ, ಎಂ.ಟಿ.ಪಿ. ಅಶ್ರಫ್, ಜಿಲ್ಲಾ ಒಲಿಂಪಿಕ್ ಅಸೋಸಿಯೇಷನ್ ಸದಸ್ಯ ಲತೀಫ್, ಸಮಾಜ ಸೇವಕ ಸಿದ್ದಿಕ್ ಚಕ್ಕರ, ಕಬಡ್ಡಿ ತರಬೇತುದಾರ ಕೆ. ಗಣೇಶ್ ಮಾತನಾಡಿದರು. ಜಿಲ್ಲಾ ಕ್ರೀಡಾ ಮಂಡಳಿ ಉಪಾಧ್ಯಕ್ಷ ಪಳ್ಳಂ ನಾರಾಯಣನ್ ಸ್ವಾಗತಿಸಿ, ಜಿಲ್ಲಾ ಕ್ರೀಡಾ ಅಧಿಕಾರಿ ಎಂ.ಎಸ್.ಸುದೀಪ್ ಬೋಸ್ ಧನ್ಯವಾದವಿತ್ತರು.

ಮುಳಿಂಜ ಶಾಲೆ: ವಿಶ್ವ ಪರಿಸರ ದಿನ



ಉಪ್ಪಳ: ಮುಳಿಂಜ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು. ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯ ಪ್ರತಿಜ್ಞೆ ಸ್ವೀಕರಿಸಲಾಯಿತು.

ಬಿಆರ್‌ಸಿ ಮಂಜೇಶ್ವರದ ಬಿಪಿಸಿ ರಾಜಗೋಪಾಲನ್ ಗಿಡ ನೆಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಚಿತ್ರಾವತಿ ರಾವ್ ಚಿಗುರುಪಾದೆ ಅವರು ವಿಶ್ವ ಪರಿಸರ ದಿನದ ಮಹತ್ವ ಕುರಿತು ಸಂದೇಶ ನೀಡಿದರು. ಶಾಲಾ ಶಿಕ್ಷಕಿ ಜಸೀಲಾ ಪರಿಸರ ಜಾಗೃತಿ ಮೂಡಿಸುವ ಗೀತೆ ಹಾಡಿದರು. ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧೆ, ಚಟುವಟಿಕೆ ಆಯೋಜಿಸಿ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲಾ ಹಿರಿಯ ಶಿಕ್ಷಕ ರಿಯಾಜ್ ಎಂ.ಎಸ್. ಸ್ವಾಗತಿಸಿ, ಶಿಕ್ಷಕಿ ಐಶ್ವರ್ಯ ಧನ್ಯವಾದವಿತ್ತರು.



ಬಡಾಜೆ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ವಾರ್ಡ್ ಪ್ರತಿನಿಧಿ ಬೇಬಿಲತಾ ಯಾದವ್, ಮಂಜೇಶ್ವರ ಗ್ರಾ.ಪಂ. ಸದಸ್ಯ ಶರೀಫ್, ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಯಾಕೂಬ್, ಶಿಕ್ಷಕಿ ಹರಿಣಾಕ್ಷಿ, ಶಿಕ್ಷಕಿ ತಸ್ಲೀನಾ, ಫೌಝಿಯಾ, ನಳಿನಿ ಟೀಚರ್, ಶಾಲಾ ಮುಖ್ಯ ಶಿಕ್ಷಕಿ ಹರಿಣಾಕ್ಷಿ ಟೀಚರ್, ಅಧ್ಯಾಪಕ ಅಶೋಕ್ ಕೊಡ್ಲಮೊಗರು ಮೊದಲಾದವರು ಉಪಸ್ಥಿತರಿದ್ದರು.

ಕಾಸರಗೋಡು: ಅಭಿನಂದನಾ ಸಭೆ



ಕಾಸರಗೋಡು: ಕಾಸರಗೋಡು ಜಿಲ್ಲಾ ಪ್ರಿನ್ಸಿಪಲ್ ಫಾರಂನ ಆಶ್ರಯದಲ್ಲಿ ಅಭಿನಂದನಾ ಸಭೆ ಆಯೋಜಿಸಲಾಗಿತ್ತು.

ನಗರಸಭೆಯ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ಜರಗಿದ ಸಭೆಯನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಉದ್ಘಾಟಿಸಿ ಮಾತನಾಡಿದರು. ಪ್ರಿನ್ಸಿಪಲ್ ಫಾರಂನ ಜಿಲ್ಲಾಧ್ಯಕ್ಷ ಡಾ.ಎ.ವಿ. ಸುರೇಶ್ ಬಾಬು ಅಧ್ಯಕ್ಷತೆ ವಹಿಸಿದ್ದರು. ಕಣ್ಣೂರು ಆರ್‌ಡಿಡಿ ಎ.ಕೆ. ವಿನೋದ್‌ಕುಮಾರ್ ಮುಖ್ಯ ಅತಿಥಿಯಾಗಿದ್ದರು. ಜಿಲ್ಲಾ ಸಂಯೋಜಕ ಸಿ.ವಿ. ಅರವಿಂದಾಕ್ಷನ್, ಪಿ. ಮೋಹನನ್, ಡಾ.ಎನ್. ವೇಣುನಾಥನ್, ಡಾ.ಟಿ. ಗೀತಾ ಮುಂತಾದವರು ಉಪಸ್ಥಿತರಿದ್ದರು. ಪ್ರಿನ್ಸಿಪಲ್ ಫಾರಂ ಜಿಲ್ಲಾ ಕಾರ್ಯದರ್ಶಿ ಕೆ.ಎನ್.ರಮೇಶನ್ ಸ್ವಾಗತಿಸಿ, ಜಿಲ್ಲಾ ಕೋಶಾಧಿಕಾರಿ ಪಿ.ವಿ.ಲೀನಾ ಧನ್ಯವಾದವಿತ್ತರು.

ಜೂ.12ರಂದು ಅಭಿವೃದ್ಧಿ ಸಮಿತಿ ಸಭೆ

ಕಾಸರಗೋಡು: ವೆಳ್ಳರಿಕುಂಡು ತಾಲೂಕು ಅಭಿವೃದ್ಧಿ ಸಮಿತಿ ಸಭೆಯು ಜೂ.12ಕ್ಕೆ ಬೆಳಗ್ಗೆ 10.30ಕ್ಕೆ ವೆಳ್ಳರಿಕುಂಡು ತಾಲೂಕು ಮಿನಿ ಸಿವಿಲ್ ಸ್ಟೇಷನ್ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ ಎಂದು ತಾಲೂಕು ಆಡಳಿತ ಪ್ರಕಟಣೆಯಲ್ಲಿ ತಿಳಿಸಿದೆ.

ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಜೊತೆ ಆಸ್ಪತ್ರೆಗೆ ಶಾಸಕ ಕಲ್ಲಟ್ರ ಮಾಹಿನ್ ಹಾಜಿ ಭೇಟಿ

ಉಕ್ಕಿನಡ್ಕ ಸರಕಾರಿ ವೈದ್ಯಕೀಯ ಕಾಲೇಜಿನ ಕಟ್ಟಡ ಶೀಘ್ರ ಪೂರ್ಣಕ್ಕೆ ಕ್ರಮ

ಕಾಸರಗೋಡು: ಉಕ್ಕಿನಡ್ಕದ ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜು ಕಟ್ಟಡ ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಮತ್ತು ವೈದ್ಯಕೀಯ ಕಾಲೇಜಿನ ಭಾಗವಾಗಿ ಹೊಸ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಹೊಸ ಆಡಳಿತಾತ್ಮಕ ಬ್ಲಾಕ್ ಮತ್ತು ಒಳಚರಂಡಿ ಸ್ಥಾವರವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಹಾಜಿ ಹೇಳಿದ್ದಾರೆ.

ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನೇತೃತ್ವದಲ್ಲಿ ಮಾಸಿಕ ಪರಿಶೀಲನೆಗಾಗಿ ಕಾಸರಗೋಡು ವೈದ್ಯಕೀಯ ಕಾಲೇಜಿಗೆ ಬುಧವಾರ ಭೇಟಿ ನೀಡಿ, ಬಳಿಕ ಸಭೆಯಲ್ಲಿ ಭಾಗವಹಿಸಿ, ಅವರು ತಿಳಿಸಿದರು.

ಎಂಡೋಸಲ್ಫಾನ್ ಸಂತ್ರಸ್ತರಿಗಾಗಿ ನರರೋಗ ವಿಭಾಗದಲ್ಲಿ ಉತ್ತಮ ಚಿಕಿತ್ಸೆ ಸಿಗುವಂತಾಗಲು ಅಸೋಸಿಯೇಟ್ ಪ್ರೊಫೆಸರ್ ಸೇರಿದಂತೆ ಸೂಪರ್ ಸ್ಪೆಷಾಲಿಟಿ ಚಿಕಿತ್ಸೆಗೆ ಅಗತ್ಯವಾದ ಹುದ್ದೆಗಳನ್ನು ವ್ಯವಸ್ಥೆ ಮಾಡಲು ಕೇರಳ ಸರಕಾರವನ್ನು ವಿನಂತಿಸುವುದಾಗಿ ಶಾಸಕರು ನುಡಿದರು. ಕಟ್ಟಡ ಸಂಪೂರ್ಣವಾಗಿ ಕಾರ್ಯಾರಂಭಗೊಂಡ ನಂತರ ವೈದ್ಯಕೀಯ ಕಾಲೇಜು ಕಾಸರಗೋಡಿನ ಮಲೆನಾಡು ಪ್ರದೇಶಗಳಲ್ಲಿ ವಾಸಿಸುವವರಿಗೆ ಮತ್ತು ಎಂಡೋಸಲ್ಫಾನ್ ಪೀಡಿತರಿಗೆ ಆಶ್ರಯ ತಾಣವಾಗಬೇಕು ಎಂದು ಶಾಸಕರು ಉಲ್ಲೇಖಿಸಿದರು.



ಜಿಲ್ಲಾಧಿಕಾರಿ ನಿರ್ದೇಶನ

ವೈದ್ಯಕೀಯ ಕಾಲೇಜಿನ ಆಂತರಿಕ ರಸ್ತೆಗಳು ಮತ್ತು ಆಸ್ಪತ್ರೆ ಕಟ್ಟಡಗಳ ಕಾಮಗಾರಿಯನ್ನು ತ್ವರಿತಗೊಳಿಸಲು ಹಾಗೂ ಕಟ್ಟಡಗಳ ನಿರ್ಮಾಣವನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದ್ದಾರೆ. ಕುಡಿಯುವ ನೀರಿನ ಸೌಲಭ್ಯಗಳನ್ನು ವ್ಯವಸ್ಥೆ ಮಾಡಲಾಗಿದೆ ಎಂದು ಸಭೆಗೆ ಜಲ ಪ್ರಾಧಿಕಾರ ತಿಳಿಸಿದೆ. ಅಧ್ಯಯನ ರಜೆಯ ನಂತರ ಮರಳುವ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ತೆರೆಯ ಲಾಗುವುದು. ಇಲ್ಲಿ ವಸತಿ ಸೌಲಭ್ಯಗಳನ್ನು ಸಿದ್ಧಪಡಿಸುವ ಕ್ರಮಗಳು ಪೂರ್ಣಗೊಂಡಿವೆ. ಕಳೆದ ತಿಂಗಳು ನಡೆದ ಪರಿಶೀಲನಾ ಸಭೆಯಲ್ಲಿ ಹಾಸ್ಟೆಲ್ ತೆರೆಯಲು ನಿರ್ಧರಿಸಲಾಗಿತ್ತು.

ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಎ.ಅರುಣ್ ಕುಮಾರ್, ಉಪ ಪ್ರಾಂಶುಪಾಲೆ ಪಿ.ಜಿ.ಸಿಂಧು, ವೈದ್ಯಕೀಯ ಕಾಲೇಜು ಅಧೀಕ್ಷಕ ಡಾ.ಪ್ರವೀಣ್, ನರ್ಸಿಂಗ್ ಕಾಲೇಜು ಉಪ ಪ್ರಾಂಶುಪಾಲೆ ಶೋಭಾ, ಉಪ ಕಲೆಕ್ಟರ್ ಲಿಪು ಎಸ್.ಲಾರೆನ್ಸ್, ಕೇರಳ ಜಲ ಪ್ರಾಧಿಕಾರ, ಕೆಎಸ್‌ಇಬಿ, ಪಿಡಬ್ಲ್ಯುಡಿ, ಕಿಟ್ ಕೋ ಮತ್ತು ಯುಎಲ್‌ಸಿಸಿಎಸ್, ಹಾರ್ಬರ್ ಇಂಜಿನಿಯರಿಂಗ್ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಸಭೆಯಲ್ಲಿ ಹಲವು ನಿರ್ಧಾರ

ನರ್ಸಿಂಗ್ ಕಾಲೇಜಿನ ಮಕ್ಕಳಿಗಾಗಿ ಹಾಸ್ಟೆಲ್ ಸ್ಥಾಪಿಸಲು ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. ಈಗಿರುವ ಕಟ್ಟಡದಲ್ಲಿರುವ ಸೌಲಭ್ಯಗಳನ್ನು ಬಳಸಿಕೊಂಡು ಕ್ಯಾಂಟೀನ್ ಕಾರ್ಯಾಚರಣೆ ಪ್ರಾರಂಭಿಸಲು ನಿರ್ಧರಿಸಲಾಯಿತು.

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಗುರುವಾರ 11, ಜೂನ್ 2026

ಸುತ್ತಮುತ್ತ

ಜೂ.14: ಎಸ್ಸೆಸೆಲ್ಸಿ ಪಿಯು ಸಾಧಕರಿಗೆ ಅಭಿನಂದನಾ ಸಮಾರಂಭ

ಕಾರ್ಕಳ: ರಾಜ್ಯ ಅತ್ಯುತ್ತಮ ಯುವ ಮಂಡಲ ಪ್ರಶಸ್ತಿ ಪುರಸ್ಕೃತ ಯುವಕ ಮಂಡಲ ಸಾಣೂರು ಇದರ ವತಿಯಿಂದ 2025-26ನೇ ಸಾಲಿನ ದ್ವಿತೀಯ ಪಿಯುಸಿ ಅಂತಿಮ ಪರೀಕ್ಷೆಯಲ್ಲಿ ಮತ್ತು ಎಸ್ಸೆಸ್ಸೆಲ್ಸಿ ಅಂತಿಮ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಅಧಿಕ ಅಂಕ ಪಡೆದ ಸಾಣೂರು ಗ್ರಾ.ಪಂ.ವ್ಯಾಪ್ತಿಯ ವಿದ್ಯಾರ್ಥಿಗಳಿಗೆ ಹಾಗೂ ಸರಕಾರಿ ಪ.ಪೂ. ಕಾಲೇಜು ಸಾಣೂರು ಮತ್ತು ಇಲ್ಲಿಯ ಹೈಸ್ಕೂಲ್ ವಿಭಾಗದ ವಿದ್ಯಾರ್ಥಿಗಳಿಗೆ ಜೂ. 14ರಂದು ಬೆಳಿಗ್ಗೆ 10.30 ಕ್ಕೆ ಸಾಣೂರು ರಿಜೆನ್ಸಿ ಹಾಲ್‌ನ ಸಭಾಂಗಣದಲ್ಲಿ ಅತಿಥಿ ಗಣ್ಯರ ಉಪಸ್ಥಿತಿಯಲ್ಲಿ ಗೌರವ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಕಾರ್ಕಳ ವಿಧಾನ ಸಭಾ ಕ್ಷೇತ್ರದ ಶಾಸಕ ವಿ. ಸುನೀಲ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ಯುವಕ ಮಂಡಲದ ಪ್ರಕಟಣೆ ತಿಳಿಸಿದೆ.

ಭರತನಾಟ್ಯ: ಸುನಿಧಿ ಉಡುಪ ಬಿ ಗ್ರೇಡ್ ಕಲಾವಿದರಾಗಿ ಆಯ್ಕೆ

ಕುಂದಾಪುರ: ಕುಂದಾಪುರದ ನೃತ್ಯ ವಸಂತ ನಾಟ್ಯಾಲಯ ವಿದ್ಯಾರ್ಥಿನಿ ಸುನಿಧಿ ಉಡುಪ ಅವರು ದೂರದರ್ಶನ ಬೆಂಗಳೂರು ಇದರ ಭರತನಾಟ್ಯ ವಿಭಾಗದಲ್ಲಿ 'ಬಿ' ಗ್ರೇಡ್ ಕಲಾವಿದರಾಗಿ ಆಯ್ಕೆಯಾಗಿದ್ದಾರೆ. ಅವರು ಸಾಧನೆಗೆ ಸಂಸ್ಥೆಯ ಭರತನಾಟ್ಯ ಗುರು ವಿದುಷಿ ಪ್ರವಿತಾ ಅಶೋಕ್, ಅಧ್ಯಕ್ಷರು, ವಿಶ್ವಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.



ಜೂ.14: ಗರ್ಭಕಂಠ ಕ್ಯಾನ್ಸರ್ ರೋಗ ತಪಾಸಣಾ ಶಿಬಿರ

ಕೋಟ: ಶ್ರೀ ಅಘೋರೇಶ್ವರ ಕಲಾ ರಂಗ ಕಾರ್ತಟ್ಟು, ರೋಟರಿ ಕ್ಲಬ್ ಕೋಟ ಸಾಲಿಗ್ರಾಮ, ಶ್ರೀ ಅಘೋರೇಶ್ವರ ದೇವಸ್ಥಾನ ಕಾರ್ತಟ್ಟು, ಸಮುದಾಯ ವೈದ್ಯಕೀಯ ವಿಭಾಗ ಕೆಎಂಸಿ ಮಣಿಪಾಲ, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಮಂಗಳೂರು ಮತ್ತು ಸಮುದಾಯ ಆರೋಗ್ಯ ಕೇಂದ್ರ ಕೋಟ ಇವರ ಸಹಯೋಗದಲ್ಲಿ ಸ್ತನ ಮತ್ತು ಗರ್ಭಕಂಠ ಕ್ಯಾನ್ಸರ್ ಹಾಗೂ ಸಾಂಕ್ರಾಮಿಕ ರೋಗಗಳ ಉಚಿತ ತಪಾಸಣಾ ಶಿಬಿರ ಜೂ.14.ರ ಭಾನುವಾರದಂದು ಕಾರ್ತಟ್ಟು ಶ್ರೀ ಅಘೋರೇಶ್ವರ ಸಭಾಭವನದಲ್ಲಿ ನಡೆಯಲಿದೆ.

ಕಾರ್ಯಕ್ರಮ ಬೆಳಿಗ್ಗೆ 9.30ಕ್ಕೆ ಆರಂಭವಾಗಲಿದ್ದು ಶಿಬಿರದಲ್ಲಿ ಅಧಿಕ ರಕ್ತದೊತ್ತಡ, ನೇತ್ರ ಹಾಗೂ ಅಸಾಂಕ್ರಾಮಿಕ ರೋಗಗಳ ತಪಾಸಣೆ ನಡೆಯಲಿದೆ. ಸ್ತನ -ಗರ್ಭಕಂಠ ಕ್ಯಾನ್ಸರ್ ತಪಾಸಣೆಗೆ ಮೊದಲು ನೋಂದಾಯಿಸಿದ 50 ಮಹಿಳೆಯರಿಗೆ ಮಾತ್ರ ಅವಕಾಶ ಇದೆ. ಸಾರ್ವಜನಿಕರು ಈ ಸೌಲಭ್ಯ ಉಪ ಯೋಗಿಸಿಕೊಳ್ಳ ಬೇಕೆಂದು ಕಲಾರಾಂಗದ ಅಧ್ಯಕ್ಷ ನಿತ್ಯಾನಂದ ನಾಯರಿ ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ.

ಮೊದಲನೇ ಪುಟದಿಂದ

ತ್ರಿಶಂಕು ಸ್ಥಿತಿಯ ಕಟ್ಟಡ

ಜಾತ್ರೆ ವೇಳೆ ಇಲ್ಲಿನ ಉಳ್ಳಾಲ್ತಿ ಕಟ್ಟೆ ಬಳಿ ಭಕ್ತರ ಸಂಖ್ಯೆ ಹೆಚ್ಚಾಗುತ್ತಿದ್ದು, ಕಟ್ಟಡದ ಒಂದು ಭಾಗ ಜನರ ಅನುಕೂಲಕ್ಕೆ ತೆಗೆದುಹಾಕಿದ್ದರು. ಆದರೆ ಬಾಕಿ ಉಳಿದ ಅವಶೇಷ ಅಲ್ಲೇ ಬಿಟ್ಟಿದ್ದಾರೆ. ಈ ಅವಶೇಷಗಳು ಈ ಬಾರಿಯ ಮಳೆಗಾಲಕ್ಕೆ ಬೀಳುವ ಎಲ್ಲಾ ಲಕ್ಷಣಗಳಿದ್ದು, ಇವುಗಳು ಕುಸಿದಲ್ಲಿ ಮುಖ್ಯ ರಸ್ತೆಯಲ್ಲಿ ತೆರಳುವ ಪಾದಾಚಾರಿಗಳ, ಪ್ರಯಾಣಿಕರ ಮೇಲೆ ಬೀಳುವ ಅಪಾಯವಿದೆ.

ಬೌಬೌ ಹಾವಳಿ

ನಾಯಿಗಳು ಎರಗಲು ಮುಂದಾಗುತ್ತಿವೆ. ಈ ನಿಟ್ಟಿನಲ್ಲಿ ದ್ವಿಚಕ್ರ ವಾಹನಗಳು ನಿಯಂತ್ರಣ ತಪ್ಪಿ ಅಪಘಾತಕ್ಕೀಡಾಗುತ್ತಿರುವ ಸನ್ನಿವೇಶ ಬಂದಿದೆ. ಬೀದಿನಾಯಿಗಳ ಉಪಟಳ ಹೆಚ್ಚಿದರೂ ಅವುಗಳ ನಿಗ್ರಹಕ್ಕೆ ಕಾಸರಗೋಡು ನಗರಸಭೆ ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಿದೆ. ಸೋಮವಾರ ಸಂಜೆ ಆಲೂರು ಭಾಗದಲ್ಲಿರುವ ಮೂರು ಮಂದಿಗೂ ಇದೇ ನಾಯಿ ಕಡಿದಿದೆ ಎಂದು ತಿಳಿದುಬಂದಿದೆ. ಬೋವಿಕ್ಕಾನ ಪೇಟೆಯಲ್ಲಿ ಕಳೆದ ಕೆಲವು ತಿಂಗಳುಗಳಿಂದ ಬೀದಿನಾಯಿಗಳ ಕಾಟ ತೀವ್ರಗೊಂಡಿದ್ದು, ಸಂಬಂಧಪಟ್ಟ ಸ್ಥಳೀಯಾಡಳಿತ ಸಂಸ್ಥೆಯು ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾಗರಿಕರು ಆಗ್ರಹಿಸಿದ್ದಾರೆ.

ನರೇಂದ್ರ ಮೋದಿ ಪ್ರಧಾನಿಯಾಗಿ 12 ವರ್ಷಗಳ ಯಶಸ್ವಿ ಪೂರೈಕೆ। ದೀರ್ಘಾಯುಷ್ಯಕ್ಕೆ ಪ್ರಾರ್ಥನೆ

ಜಿಲ್ಲೆಯ ವಿವಿಧ ದೇವಳಗಳಲ್ಲಿ ಸಾಮೂಹಿಕ ವಿಶೇಷ ಪೂಜೆ









ಉಡುಪಿ: ಪ್ರಧಾನಿ ನರೇಂದ್ರ ಮೋದಿ ಅವರು ಪ್ರಧಾನಸೇವಕರಾಗಿ ದೇಶ ಸೇವೆಯಲ್ಲಿ ಯಶಸ್ವಿಯಾಗಿ 12 ವರ್ಷಗಳ ಪೂರೈಸಿ, ಬರೋಬ್ಬರಿ 4,399 ದಿನಗಳ ಸುದೀರ್ಘ ಹಾಗೂ ಯಶಸ್ವಿ ನಾಯಕತ್ವದ ದಾಖಲೆ ನಿರ್ಮಿಸಿರುವ ಹಿನ್ನೆಲೆಯಲ್ಲಿ ಉಡುಪಿ ಕುಂದಾಪುರ, ಕಾಪು ಮತ್ತು ಬೈಂದೂರು ವಿಧಾನಸಭಾ ಕ್ಷೇತ್ರಗಳ ಪ್ರಮುಖ ದೇವಳಗಳಲ್ಲಿ ಬುಧವಾರ ಬಿಜೆಪಿಯಿಂದ ಸಾಮೂಹಿಕ ವಿಶೇಷ ಪೂಜೆ, ದೀರ್ಘಾಯುಷ್ಯಕ್ಕೆ ಪ್ರಾರ್ಥನೆ ಸಲ್ಲಿಸಲಾಯಿತು.

ಕುಂದೇಶ್ವರ ದೇವಳದಲ್ಲಿ

ಬಿಜೆಪಿ ಕುಂದಾಪುರ ಮಂಡಲದ ವತಿಯಿಂದ ಕುಂದಾಪುರದ ಶ್ರೀ ಕುಂದೇಶ್ವರ ದೇಗುಲದಲ್ಲಿ ಸಾಮೂಹಿಕ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ, ಮೋದಿಜಿ ಅವರ ನಾಯಕತ್ವದಲ್ಲಿ ಭಾರತ ವಿಶ್ವಗುರು ವಾಗುವತ್ತ ದಾಪುಗಾಲು ಹಾಕುತ್ತಿದೆ. ಬಡವರ ಕಲ್ಯಾಣ-ಅವರ ಸೇವಾ ಮನೋಭಾವಕ್ಕೆ ಕುಂದೇಶ್ವರನ ಆಶೀರ್ವಾದ ಸದಾ ಇರಲಿ ಎಂದು ಪ್ರಾರ್ಥಿಸಿದ್ದೇವೆ ಎಂದರು.

ಬಿಜೆಪಿ ಕ್ಷೇತ್ರಾಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ ಮಾತನಾಡಿ, ಮೋದಿ ಅವರ 12 ವರ್ಷಗಳ ಆಡಳಿತ ದೇಶಕ್ಕೆ ದಿಕ್ಸೂಚಿಯಾಗಿದೆ. ಅವರ ಸೇವೆ 2047ರ ವಿಕಸಿತ ಭಾರತದ ನಿರ್ಮಾಣಕ್ಕೆ ಮೋದಿ ಅವರ ಕೈ ಬಲಪಡಿಸುವ ಶಕ್ತಿ ನೀಡಲಿ ಎಂದರು.

ಈ ಸಂದರ್ಭ ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಸತೀಶ್ ಪೂಜಾರಿ ವಕ್ವಾಡಿ, ಸುಧೀರ್ ಕೆ.ಎಸ್., ಉಪಾಧ್ಯಕ್ಷರಾದ ಪ್ರಕಾಶ್ ಜಿ. ಪೂಜಾರಿ, ರೂಪ ಬಾಬು ಪೈ, ಜಿಲ್ಲಾ ಕಾರ್ಯದರ್ಶಿ ಸದಾನಂದ ಬಳ್ಕೂರು, ಕುಂದಾಪುರ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ ಯು., ಪ್ರಮುಖರಾದ ಸಂಪತ್ ಕುಮಾರ್ ಶೆಟ್ಟಿ ಶಾನಾಡಿ, ರಾಜೇಶ್ ಕಾವೇರಿ ಕುಂದಾಪುರ, ದಿವಾಕರ್ ಕಡ್ಗಿ, ಸತೀಶ್ ಶೆಟ್ಟಿ ಮತ್ತಿತರರಿದ್ದರು.

ಕಾಪು ಮತ್ತು ಪಡುಬಿದ್ರಿಯಲ್ಲಿ

ಕಾಪು ಮಂಡಲ ಬಿಜೆಪಿ ವತಿಯಿಂದ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ನೇತೃತ್ವದಲ್ಲಿ ಕಾಪು ಶ್ರೀ ಲಕ್ಷ್ಮೀ ಜನಾರ್ದನ ದೇವಸ್ಥಾನದಲ್ಲಿ ನರೇಂದ್ರ ಮೋದಿ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ, ಅವರ ಉತ್ತಮ ಆರೋಗ್ಯ ಮತ್ತು ದೀರ್ಘಾಯುಷ್ಯಕ್ಕಾಗಿ ಪ್ರಾರ್ಥಿಸಲಾಯಿತು. ಕಾಪು ಮಂಡಲ ಬಿಜೆಪಿ ಅಧ್ಯಕ್ಷ ಜಿತೇಂದ್ರ ಶೆಟ್ಟಿ, ಮಾಜಿ ಶಾಸಕರಾದ ಲಾಲಾಜಿ ಆರ್. ಮೆಂಡನ್, ಕಾಪು ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಗೋಪಾಲಕೃಷ್ಣ ರಾವ್, ಶರಣ್ ಕುಮಾರ್ ಮಟ್ಟು ಮತ್ತಿತರರಿದ್ದರು.

ಪಡುಬಿದ್ರೆ ಬಾಲ ಗಣಪತಿ ದೇವಸ್ಥಾನ

ಪಡುಬಿದ್ರಿಯಲ್ಲಿ ಬಿಜೆಪಿ ಕಾಪು ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷರಾದ ನೀತಾ ಗುರುರಾಜ್ ಅವರ ನೇತೃತ್ವದಲ್ಲಿ ಪಡುಬಿದ್ರೆ ಬಾಲ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲಾಯಿತು. ಭಾರತವನ್ನು ವಿಶ್ವ ಗುರುವನ್ನಾಗಿ ಮಾಡಲು ಪ್ರಧಾನಿಯವರಿಗೆ ಇನ್ನಷ್ಟು ಶಕ್ತಿ ಮತ್ತು ಹೆಚ್ಚಿನ ಯಶಸ್ಸು ಸಿಗಲಿ ಎಂದು ಪ್ರಾರ್ಥಿಸಲಾಯಿತು.

ಉಡುಪಿ ಜಿಲ್ಲಾ ಬಿಜೆಪಿ ಮಾಜಿ ಉಪಾಧ್ಯಕ್ಷರಾದ ಪ್ರಕಾಶ್ ಶೆಟ್ಟಿ ಪದೆಬೆಟ್ಟು, ಪಡುಬಿದ್ರೆ ಪಂಚಾಯತ್ ಮಾಜಿ ಅಧ್ಯಕ್ಷರಾದ ರವಿ ಶೆಟ್ಟಿ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮಾರಣಕಟ್ಟೆ ಶ್ರೀ ದೇವಸ್ಥಾನದಲ್ಲಿ

ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಶಾಸಕ ಗುರುರಾಜ್ ಗಂಟಿಹೊಳೆ ಅವರು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರೊಂದಿಗೆ ಇತಿಹಾಸ ಪ್ರಸಿದ್ಧ ಮಾರಣಕಟ್ಟೆ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಆಯುರಾರೋಗ್ಯ, ಸುಖ-ಶಾಂತಿ ಹಾಗೂ ರಾಷ್ಟ್ರದ ಸಮೃದ್ಧಿಗಾಗಿ ವಿಶೇಷ ಪೂಜೆ ಸಲ್ಲಿಸಿದರು. ಇದರ ಜೊತೆಗೆ ಬೈಂದೂರು ವಿಧಾನಸಭಾ ಕ್ಷೇತ್ರದ ವಿವಿಧ ಪ್ರಮುಖ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆಗಳನ್ನು ಸಲ್ಲಿಸಲಾಯಿತು.

ಕೊಡವೂರು ಶ್ರೀ ದೇವಸ್ಥಾನ

ನರೇಂದ್ರ ಮೋದಿ ಅವರಿಗೆ ಒಳಿತಾಗಲಿ ಎಂದು ಕೊಡವೂರು ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ಶಾಸಕ ಯಶ್ ಪಾಲ್ ಸುವರ್ಣ ನೇತೃತ್ವದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಲಾಯಿತು.

ಉಡುಪಿ ಬಿಜೆಪಿ ನಗರಾಧ್ಯಕ್ಷ ದಿನೇಶ್ ಅಮೀನ್, ಪ್ರಮುಖರಾದ ವಿಜಯ ಕೊಡವೂರು, ರವಿರಾಜ್ ಹೆಗ್ಡೆ, ನಾರಾಯಣ ಬಲ್ಲಾಳ್, ಸುಧಾಕರ್ ಎ. ಕುಂದರ್, ಪ್ರಭಾತ್ ಕೊಡವೂರು, ಲಕ್ಷ್ಮೀಶ್ ಬಂಗೇರ, ವಿನಯ ಕುಮಾರ್ ಪಡುಕರೆ, ರಮೇಶ್ ಮಾಸ್ತರ್, ಪ್ರದೀಪ್ ಕುಂದರ್, ಚಂದ್ರಕಾಂತ್ ಶೆಟ್ಟಿಗಾರ್, ಸದಾನಂದ ಶೇರಿಗಾರ್, ಮಹಿಳಾ ಮೋರ್ಚಾದ ಪ್ರಮುಖರಾದ ಸುಲತಾ ಶೆಟ್ಟಿ, ಕೀರ್ತಿ ವಿಜಯ್, ಯಶೋದಾ ರಾಜೇಂದ್ರ, ದೀಪಾ ಪೈ, ಗುಣವತಿ, ಚಂದ್ರಾವತಿ, ಮಾಯಾ ಕಾಮತ್, ತ್ರಿವೇಣಿ, ಸುಜಾತ, ನೀತಾ, ಸುಭದ್ರ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಉಡುಪಿ ನಗರದ ಸಿಟಿ ಬಸ್ ನಿಲ್ದಾಣದ ಮೇಲ್ಛಾವಣಿ ದುರಸ್ತಿ ಕಾಮಗಾರಿ ಆರಂಭ



ಉಡುಪಿ: ನಗರದ ಪ್ರಮುಖ ಸಾರಿಗೆ ಸಂಪರ್ಕ ಕೇಂದ್ರವಾಗಿರುವ ಸಿಟಿ ಬಸ್ ನಿಲ್ದಾಣದ ಮೇಲ್ಛಾವಣಿ (ಟೆರೇಸ್) ದುರಸ್ತಿ ಹಾಗೂ ಮೂಲಸೌಕರ್ಯ ಅಭಿವೃದ್ಧಿಯ ತುರ್ತು ಕಾಮಗಾರಿಗಳು ಚುರುಕಿನಿಂದ ಆರಂಭಗೊಂಡಿವೆ. ಮುಂಗಾರು ಮಳೆಯ ಅವಧಿಯಲ್ಲಿ ಸಾರ್ವಜನಿಕರು ಹಾಗೂ ಪ್ರಯಾಣಿಕರು ಎದುರಿಸುತ್ತಿದ್ದ ತೊಂದರೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಉಡುಪಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಯಶ್‌ಪಾಲ್ ಸುವರ್ಣ ಅವರ ವಿಶೇಷ ಸೂಚನೆಯ ಮೇರೆಗೆ ಈ ನವೀಕರಣ ಕಾರ್ಯಗಳು ಆರಂಭಗೊಂಡಿದ್ದು, ಮಳೆಗಾಲದ ಹಿನ್ನೆಲೆಯಲ್ಲಿ ಕಾಮಗಾರಿ ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ.

ಸೋರಿಕೆ ತಡೆ, ಸುರಕ್ಷತೆಗೆ ಆದ್ಯತೆ

ಪ್ರತಿ ವರ್ಷ ಭಾರಿ ಮಳೆ ಸಂದರ್ಭ ಬಸ್ ನಿಲ್ದಾಣ ಮೇಲ್ಛಾವಣಿ ಸೋರಿ, ಬಸ್ಸಿಗಾಗಿ ಕಾಯುವ ಸಾವಿರಾರು ಪ್ರಯಾಣಿಕರು, ಶಾಲಾ-ಕಾಲೇಜು ವಿದ್ಯಾರ್ಥಿಗಳು ತೀವ್ರ ಸಂಕಷ್ಟ ಎದುರಿಸುತ್ತಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿ, ಈಗ ನಿಲ್ದಾಣದ ಮೇಲ್ಛಾವಣಿ ಸಂಪೂರ್ಣ ದುರಸ್ತಿ, ನೀರು ಸೋರಿಕೆ ತಡೆಗೆ ವಾಟರ್ ಪ್ರೂಫಿಂಗ್ ವ್ಯವಸ್ಥೆ, ಸಾರ್ವಜನಿಕ ಸುರಕ್ಷತಾ ಕ್ರಮಗಳು, ಪ್ರಯಾಣಿಕರಿಗೆ ಅಗತ್ಯವಿರುವ ಇತರ ಮೂಲಭೂತ ಸೌಕರ್ಯಗಳ ಸುಧಾರಣೆಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ.

ಜೂ.18ರಿಂದ ಆನೆಗುಂದಿ ಸ್ವಾಮೀಜಿಯ 'ಚಾತುರ್ಮಾಸ್ಯ ವ್ರತ ಸಂಕಲ್ಪ ಯಾತ್ರೆ'

ಕಾಪು: ಶ್ರೀಮತ್ ಜಗದ್ಗುರು ಆನೆಗುಂದಿ ಮಹಾಸಂಸ್ಥಾನಸರಸ್ವತೀಪೀಠದಪೀಠಾಧೀಶ್ವರರಾದ ಜಗದ್ಗುರು ಅನಂತಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಸ್ವಾಮಿ ಅವರ 22ನೇ ವರ್ಷದ ಪರಾಭವ ಸಂವತ್ಸರ ಚಾತುರ್ಮಾಸ್ಯ ವ್ರತಾಚರಣೆ ಜು.29 ರಿಂದ ಸೆ.26 ರವರೆಗೆ ಪಡುಕುತ್ಯಾರಿನ ಶ್ರೀ ಮಠದಲ್ಲಿ ನಡೆಯಲಿದೆ.



ಚಾತುರ್ಮಾಸ್ಯ ವ್ರತಾಚರಣೆ ಅಂಗವಾಗಿ ಜೂ.18ರಿಂದ ಜುಲೈ 26 ರವರೆಗೆ 'ಚಾತುರ್ಮಾಸ್ಯ ವ್ರತ ಸಂಕಲ್ಪ ಯಾತ್ರೆ' ಹಮ್ಮಿಕೊಳ್ಳಲಾಗಿದೆ. ಯಾತ್ರೆ ಸಂದರ್ಭ ವಿವಿಧ ಕ್ಷೇತ್ರಗಳಲ್ಲಿ ಶ್ರೀ ಬಾಲಸರಸ್ವತೀ ಹೋಮ, ಧಾರ್ಮಿಕ ಕಾರ್ಯಕ್ರಮ, ಆಶೀರ್ವಚನ, ಅನುಗ್ರಹ ಮಂತ್ರಾಕ್ಷತೆ ವಿತರಣೆ ನಡೆಯಲಿದೆ.

ಯಾತ್ರೆ ವೇಳಾಪಟ್ಟಿಯಂತೆ ಜೂ. 18ರಂದು ಧಾರವಾಡ, ಜೂ. 19ರಂದು ಹೊಸಪೇಟೆ, ಜೂ. 21ರಂದು ನವಿಮುಂಬಯಿ, ಜೂ. 24ರಂದು ಹುಬ್ಬಳ್ಳಿ, ಜೂ. 25ರಂದು ಆನೆಗುಂದಿ, ಜೂ. 28ರಂದು ಬಾರ್ಕೂರು, ಜುಲೈ 5ರಂದು ಉಪ್ಪಳ್ಳಿ, ಜು. 10ರಂದು ಮೂಡುಬಿದಿರೆ, ನೆಕ್ಲಾಜೆ, ಜು. 12ರಂದು ಅಂಕೋಲಾ, ಗೋಕರ್ಣ, ಭಟ್ಕಳ, ಜು. 16 ರಂದು ಕೊಲಕಾಡಿ, ಹಳೆಯಂಗಡಿ, ಪಡುಪಣಂಬೂರು, ಜು. 19ರಂದು ಕೋಟೆಕಾರು, ನೆಲ್ಲಿಸ್ಥಳ, ಬಂಗ್ರಮಂಜೇಶ್ವರ, ಕುಂಬಳೆ, ಮಧೂರು, ಕಾಞಂಗಾಡ್, ಜು. 24ರಂದು ಮಂಗಳೂರು, ಜು. 26ರಂದು ಕಾಪು - ಕಟಪಾಡಿ ಕ್ಷೇತ್ರಗಳಿಗೆ ಜಗದ್ಗುರು ಭೇಟಿ ನೀಡಿ ಆಶೀರ್ವಾದ ನೀಡಲಿದ್ದಾರೆ. ಆಯ್ದ ಕ್ಷೇತ್ರಗಳಲ್ಲಿ ಶ್ರೀ ಬಾಲಸರಸ್ವತೀ ಹೋಮ ಗಳು ನಡೆಯಲಿದೆ.

ಜು.26: ಸಮಾರೋಪ

ಜುಲೈ 26ರಂದು ಕಾಪು ಮತ್ತು ಕಟಪಾಡಿಯಲ್ಲಿ ನಡೆಯುವ ಕಾರ್ಯಕ್ರಮಗಳೊಂದಿಗೆ ಸಂಕಲ್ಪ ಯಾತ್ರೆ ಸಮಾಪ್ತಿಗೊಳ್ಳಲಿದೆ. ಕಾರ್ಯಕ್ರಮಗಳಲ್ಲಿ ಸಂಬಂಧಿತ ದೇವಳಗಳ ಧರ್ಮದರ್ಶಿಗಳು, ಆಡಳಿತ ಮಂಡಳಿ ಸದಸ್ಯರು, ಭಕ್ತಾದಿಗಳು ಭಾಗವಹಿಸಿ ಸಹಕರಿಸುವಂತೆ ಚಾತುರ್ಮಾಸ್ಯ ವ್ರತ ನಿರ್ವಹಣಾ ಸಮಿತಿ ವಿನಂತಿಸಿದೆ. ಈ ಕುರಿತು ಚಾತುರ್ಮಾಸ್ಯ ವ್ರತ ನಿರ್ವಹಣಾ ಸಮಿತಿ ಗೌರವಾಧ್ಯಕ್ಷ ಪಿ.ವಿ. ಗಂಗಾಧರ ಆಚಾರ್ಯ, ಅಧ್ಯಕ್ಷ ವಿ. ಶ್ರೀಧರ ಆಚಾರ್ಯ, ಪ್ರಧಾನ ಕಾರ್ಯದರ್ಶಿ ಲೋಕೇಶ್ ಎಂ.ಬಿ. ಆಚಾರ್ಯ, ಖಜಾಂಚಿ ಅರವಿಂದ ವೈ. ಆಚಾರ್ಯ, ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸನಾತನ ಧರ್ಮವನ್ನು ಉಳಿಸುವಲ್ಲಿ ಯುವಕರ ಶ್ರಮ ಅತ್ಯಗತ್ಯ: ಕಾರಂತ



ಕೋಟ: ಇಂದಿನ ಯುವಕರು ದೇವಸ್ಥಾನದ ಆಡಳಿತ ನಡೆಸಲು ಮುಂದೆ ಬರಬೇಕು, ಸನಾತನ ಧರ್ಮ ಉಳಿಸುವಲ್ಲಿ ಯುವಕರು ಶ್ರಮಿಸಬೇಕು ಎಂದು ಸಾಲಿಗ್ರಾಮ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಪ್ರಕಾಶ ಕಾರಂತ ಹೇಳಿದ್ದಾರೆ.

ಅವರು ಯುವ ವೇದಿಕೆ ಕೂಟ ಮಹಾ ಜಗತ್ತು ಸಾಲಿಗ್ರಾಮ ಇದರ ದಶಮಾನೋತ್ಸವದ ಅಂಗವಾಗಿ ದಶಮಾನೋತ್ಸವದ ಲಾಂಛನ ಬಿಡುಗಡೆ ಮಾಡಿ ಯುವ ವೇದಿಕೆಯು ಇನ್ನಷ್ಟು ಜನಪರ ಕೆಲಸವನ್ನು ಮಾಡಲಿ ಎಂದು ಶುಭ ಹಾರೈಸಿದರು.

ಎಲ್ಲರ ಸಹಕಾರ ಅಗತ್ಯ

ಅಧ್ಯಕ್ಷತೆ ವಹಿಸಿದ್ದ ಯುವ ವೇದಿಕೆಯ ಅಧ್ಯಕ್ಷ ಸಚಿನ್ ಹೇರ್ಳೆ ಮಾತನಾಡಿ, ಯುವ ವೇದಿಕೆಯ ಮುಂದಿನ ಕಾರ್ಯಕ್ರಮದ ವಿವರ ತಿಳಿಸಿದರು ಹಾಗೂ ಎಲ್ಲರ ಸಹಕಾರ ಕೋರಿದರು. ಅತಿಥಿಗಳಾಗಿ ಸಾಲಿಗ್ರಾಮ ಶ್ರೀ ಗುರುನರಸಿಂಹ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರಾದ, ಪಿ.ಚಂದ್ರಶೇಖರ ಹೊಳ್ಳ, ತಾರನಾಥ ಹೊಳ್ಳ, ಯುವ ವೇದಿಕೆ ಕೂಟ ಮಹಾಜಗತ್ತು ಸಾಲಿಗ್ರಾಮ ಇದರ ಮಾರ್ಗದರ್ಶಕ ಮಂಜುನಾಥ ಉಪಾಧ್ಯ, ಇವರುಗಳು ಯುವವೇದಿಕೆಗೆ ಶುಭ ಹಾರೈಸಿದರು. ಯುವ ವೇದಿಕೆಯ ಗೌರವಾಧ್ಯಕ್ಷರಾದ ಪಿ. ವೈ. ಕೃಷ್ಣಪ್ರಸಾದ್ ಹೇರ್ಳೆ ಹತ್ತು ವರ್ಷದ ಸಾಧನೆಗಳನ್ನು ತಿಳಿಸಿದರು. ಕೋಶಾಧಿಕಾರಿ ಕೃಷ್ಣ ಐತಾಳ್ ಸ್ವಾಗತಿಸಿದರು. ಕಾರ್ಯದರ್ಶಿ ಸುಧೀಂದ್ರ ಐತಾಳ್ ವಂದಿಸಿದರು. ಕೆ.ಶಶಿಧರ ಮಯ ನಿರೂಪಿಸಿದರು.

ಕೆಸಿಇಟಿಯಲ್ಲಿ ಕ್ರೈಸ್ಟ್‌ಕಿಂಗ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಉತ್ತಮ ಸಾಧನೆ

ಕಾರ್ಕಳ: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಇಂಜಿನಿಯರಿಂಗ್ ಹಾಗೂ ಇನ್ನಿತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿಗಾಗಿ ನಡೆಸುವ ಕೆಸಿಇಟಿ ಪರೀಕ್ಷೆಯಲ್ಲಿ ಕಾರ್ಕಳ ಕ್ರೈಸ್ಟ್‌ಕಿಂಗ್ ಪ.ಪೂ. ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ತೋರಿದ್ದಾರೆ.



ಸಂಸ್ಥೆಯ ವಿದ್ಯಾರ್ಥಿ ವಿಜೇತ್ ಶೆಟ್ಟಿಗಾರ್ 236 ನೇ ರ್‍ಯಾಂಕ್ ಪಡೆದುಕೊಂಡಿದ್ದಾನೆ. ಇನ್ನೋರ್ವ ವಿದ್ಯಾರ್ಥಿ ಸುಮಂತ್ ಎನ್.ಕೆ 959 ನೇ ರ್‍ಯಾಂಕ್ ಪಡೆದಿದ್ದಾನೆ. ಉಳಿದಂತೆ ವಿಜೇತ್ ಆರ್ 1020 ನೇ ರ್‍ಯಾಂಕ್, ರೋಷನ್ ಥೋರಸ್ 2176ನೇ ರ್‍ಯಾಂಕ್, ದಿಶಾ ಡಿಮೆಲ್ಲೊ 2148ನೇ ರ್‍ಯಾಂಕ್, ಅವೇಕ್ಷಾ ಜೈನ್ 2144ನೇ ರ್‍ಯಾಂಕ್, ಹೇಮಂತ್ ಗೌಡ 2100 ನೇ ರ್‍ಯಾಂಕ್, ಅನುಷ್ ಶೆಟ್ಟಿ 2381 ನೇ ರ್‍ಯಾಂಕ್, ಸಿಯಾ ವೆನಿಶಾ ಡಿಸೋಜ 3773 ನೇ ರ್‍ಯಾಂಕ್, ಸ್ಮೃತಿ ಮರಾಠೆ 4094ನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ.

ಒಟ್ಟಾರೆಯಾಗಿ ಸಂಸ್ಥೆ ಈ ಸಾಲಿನಲ್ಲಿ ಅಗ್ರ 500 ರ ಒಳಗೆ ಒಂದು, 1000 ದ ಒಳಗೆ ಎರಡು ರ್‍ಯಾಂಕ್‌ಗಳನ್ನು ಪಡೆದಿದೆ. ಉಳಿದಂತೆ ಐದು ಸಾವಿರದ ಒಳಗೆ 25, ಹತ್ತು ಸಾವಿರದ ಒಳಗೆ 63, ಹದಿನೈದು ಸಾವಿರದ ಒಳಗೆ 93 ಹಾಗೂ ಇಪ್ಪತ್ತು ಸಾವಿರದ ಒಳಗೆ 129 ರ್‍ಯಾಂಕ್‌ಗಳನ್ನು ಸಂಸ್ಥೆ ಪಡೆದುಕೊಂಡಿದೆ.

ಸಂಸ್ಥೆಯ ಹೆಗ್ಗಳಿಕೆ

ಈ ಬಾರಿ ಒಟ್ಟು 152 ವಿದ್ಯಾರ್ಥಿಗಳು ಕೆಸಿಇಟಿ ಪರೀಕ್ಷೆ ಬರೆದಿದ್ದು ವಿಜ್ಞಾನ ವಿಭಾಗಕ್ಕೆ ಅಂಕಗಳ ಯಾವುದೇ ಮಿತಿ ಇಲ್ಲದೆ ದಾಖಲಾತಿ ನೀಡಿ ಅಗ್ರ 20ಸಾವಿರದೊಳಗೆ 129 ರ್‍ಯಾಂಕ್‌ಗಳ ಪಡೆದಿರುವುದು ಸಂಸ್ಥೆ ಹೆಗ್ಗಳಿಕೆಯಾಗಿದೆ.

ಶಿರ್ವ: ನೇತ್ರ-ಮಧುಮೇಹ ತಪಾಸಣಾ ಶಿಬಿರಕ್ಕೆ ಚಾಲನೆ, ಮಾಹಿತಿ ಕಾರ್ಯಕ್ರಮ



ಶಿರ್ವ: ಜಿಲ್ಲಾ ಆರೋಗ್ಯ ಸೊಸೈಟಿ-ಅಂಧತ್ವ ನಿಯಂತ್ರಣ ವಿಭಾಗ, ಸಮುದಾಯ ಆರೋಗ್ಯ ಕೇಂದ್ರ ಶಿರ್ವ, ಜಾಯಿಂಟ್ಸ್ ಗ್ರೂಪ್ ಉಡುಪಿ ಮತ್ತು ಜಿಎಸ್‌ಬಿ ಸಮಾಜ ಶಿರ್ವ ಇವರ ಸಂಯುಕ್ತ ಆಶ್ರಯದಲ್ಲಿ ಶಿರ್ವದ 'ವೈಷ್ಣವಿ' ಶ್ರೀ ಮಹಾಲಸಾ ನಾರಾಯಣೀ ದೇವಳದ ಬಳಿ ಮಂಗಳವಾರ ಏರ್ಪಡಿಸಿದ 'ಉಚಿತ ನೇತ್ರ ಮತ್ತು ಮಧುಮೇಹ ತಪಾಸಣಾ ಶಿಬಿರ'ಕ್ಕೆ ಜಿಎಸ್‌ಬಿ ಸಂಘದ ಅಧ್ಯಕ್ಷ ಜಿ.ಶ್ರೀನಿವಾಸ ಶೆಣೈ, ಶ್ರೀ ಮಹಾಲಸಾ ನಾರಾಯಣೀ ದೇವಳ (ಶ್ರೀ ಕಾಶೀಮಠ ಶಿರ್ವ)ದ ಪ್ರಧಾನ ಅರ್ಚಕರಾದ ಜಿ.ರಘುರಾಮ ಶೆಣೈ ದೀಪ ಪ್ರಜ್ವಲನದ ಮೂಲಕ ಚಾಲನೆ ನೀಡಿದರು.

ಉಡುಪಿ ಜಿಲ್ಲಾಸ್ಪತ್ರೆ ಹಿರಿಯ ನೇತ್ರತಜ್ಞ ಡಾ. ನಿತ್ಯಾನಂದ ನಾಯಕ್, ಶಿರ್ವ ಸಮುದಾಯ ಆರೋಗ್ಯ ಕೇಂದ್ರ ಆರೋಗ್ಯಾಧಿಕಾರಿ ಡಾ. ಗಾಯತ್ರಿ ಸಂತೋಷ್, ಜಾಯಿಂಟ್ಸ್ ವೆಲ್ಫೇರ್ ಫೌಂಡೇಶನ್ ಮುಂಬೈ ಇದರ ಸೆಂಟ್ರಲ್ ಕಮಿಟಿ ಸದಸ್ಯ ದಿನಕರ ಅಮೀನ್ ಮತ್ತಿತರರಿದ್ದರು.

ಶಿಬಿರದಲ್ಲಿ ಉಚಿತ ನೇತ್ರ ತಪಾಸಣೆ, ಕಣ್ಣಿನ ಆರೋಗ್ಯ ಮಾಹಿತಿ, ಮಧುಮೇಹ, ರಕ್ತದೊತ್ತಡ ತಪಾಸಣೆ ನಡೆಸಲಾಯಿತು. ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಆಯ್ಕೆಯಾದ ರೋಗಿಗಳಿಗೆ ಉಡುಪಿ ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ನೀಡಲಾಗುವುದು ಎಂದು ಸಂಘಟಕರು ತಿಳಿಸಿದರು.

ವೈದ್ಯಕೀಯ ಸಿಬ್ಬಂದಿಗಳು, ಜಾಯಿಂಟ್ಸ್ ಗ್ರೂಪ್ ಉಡುಪಿ ಅಧ್ಯಕ್ಷ ವಿನಯ್‌ಕುಮಾರ್ ಪೂಜಾರಿ, ಆಡಳಿತ ನಿರ್ದೇಶಕ ದಿವಾಕರ ಪೂಜಾರಿ, ವೆಂಕಟೇಶ ಕಾಮತ್ ಶಿರ್ವ, ಮಾಧವ ಕಾಮತ್ ಬಂಟಕಲ್ಲು, ಜಿಎಸ್‌ಬಿ ಸಮಾಜ ಮುಖಂಡರು ಶಿಬಿರಾರ್ಥಿಗಳಿದ್ದರು. ದಯಾನಂದ ಶೆಟ್ಟಿ ಸ್ವಾಗತಿಸಿ, ನರಸಿಂಹ ಭಟ್ ಪ್ರಾರ್ಥಿಸಿ, ಇಕ್ಬಾಲ್ ಮನ್ನಾ ವಂದಿಸಿದರು.

ಸುರಕ್ಷಾ ಮಾಸಾಚರಣೆ: ಬಿದ್ಕಲ್‌ಕಟ್ಟೆ ಐಟಿಐಗೆ ರಾಜ್ಯಮಟ್ಟದಲ್ಲಿ ತೃತೀಯ



- **ಬೆಂಗಳೂರಿನ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಸಂಸ್ಥೆಯಿಂದ ನಡೆದ ಸುರಕ್ಷಾ ಮಾಸಾಚರಣೆ ಅಭಿಯಾನ**
- **ಬಿದ್ಕಲ್‌ಕಟ್ಟೆ ಸರಕಾರಿ ಐಟಿಐಗೆ ರಾಜ್ಯಮಟ್ಟದಲ್ಲಿ ಪ್ರಶಸ್ತಿ**

ಕುಂದಾಪುರ: ಬೆಂಗಳೂರಿನ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಸಂಸ್ಥೆ ವತಿಯಿಂದ ಜರಗಿದ ಸುರಕ್ಷಾ ಮಾಸಾಚರಣೆ ಅಭಿಯಾನದಲ್ಲಿ ಬಿದ್ಕಲ್‌ಕಟ್ಟೆ ಸರಕಾರಿ ಐಟಿಐಗೆ ರಾಜ್ಯ ಮಟ್ಟದಲ್ಲಿ ತೃತೀಯ ಸ್ಥಾನ ಲಭಿಸಿದೆ.

ಈ ಅಭಿಯಾನದಲ್ಲಿ ರಾಜ್ಯಾದ್ಯಂತ ಸರಕಾರಿ ಹಾಗೂ ಖಾಸಗಿ ಐಟಿಐಗಳು ಪಾಲ್ಗೊಂಡಿದ್ದವು. ಈ ಬಗ್ಗೆ ವಿವಿಧ ಮೌಲ್ಯಯುತ ಕಾರ್ಯಕ್ರಮ ಮತ್ತು ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಬಿದ್ಕಲ್‌ಕಟ್ಟೆ ಆರೋಗ್ಯ ಕೇಂದ್ರದ ಡಾ. ಪೂರ್ಣಿಮಾ ಶೇಟ್, ಉಡುಪಿ ಪ್ರಾದೇಶಿಕ ಸಾರಿಗೆ ಕಚೇರಿಯ ಶ್ರೇಯಸ್ ಕುಮಾರ್, ಕುಂದಾಪುರ ಅಗ್ನಿಶಾಮಕ ಠಾಣೆಯ ಬಾಲಕೃಷ್ಣ, ಉಡುಪಿ ಸೈಬರ್ ಕ್ರೈಮ್ ಠಾಣೆಯ ನಿಲೇಶ್ ಭಾಗವಹಿಸಿದ್ದರು. ಪ್ರಭಾರ ಪ್ಲೇಸ್‌ಮೆಂಟ್ ಅಧಿಕಾರಿ ಮನೋಹರ್ ಶೆಟ್ಟಿ ಕಾರ್ಯಕ್ರಮ ಸಂಯೋಜಿಸಿದ್ದು ಪ್ರಾಚಾರ್ಯ ಹರೀಶ್ ಮಾರ್ಗದರ್ಶನ ನೀಡಿದ್ದರು. ಸಂಸ್ಥೆಯ ಗಣೇಶ್ ಎಚ್., ಪ್ರಸನ್ನ ಆಚಾರ್ಯ, ಪ್ರಫುಲ್ಲ ಕೆ. ಎನ್., ಬಸವ ನಾಯ್ಕ, ಸುಮಂಗಲ, ರೂಪದೇವಿ, ಸುಮಾರಾಣಿ, ಮನೋಜ್ ಕುಮಾರ್ ಕೆ. ಸಿ., ಅಜಿತ್ ಆಚಾರ್ಯ ಕಾರ್ಯಕ್ರಮಗಳ ಆಯೋಜನೆಯಲ್ಲಿ ಸಹಕರಿಸಿದ್ದರು.

ಪಿಯುಸಿಯಲ್ಲಿ ರಾಜ್ಯಕ್ಕೆ 3ನೇ ರ್‍ಯಾಂಕ್ ಪಡೆದ ಸಮರ್ಥ ಜೋಶಿಗೆ ಸನ್ಮಾನ

ಪರಿಶ್ರಮಪಟ್ಟರೆ ಸಾಧನೆ ಮಾಡಲು ಸಾಧ್ಯ: ಶಾಸಕ ಗುರ್ಮೆ

ಕಾಪು: ಕಾಪು ದಂಡತೀರ್ಥ ಪ.ಪೂ. ಕಾಲೇಜಿನಲ್ಲಿ ಪಿಯುಸಿಯಲ್ಲಿ ರಾಜ್ಯಕ್ಕೆ 3ನೇ ರ್‍ಯಾಂಕ್ ಪಡೆದ ಸಮರ್ಥ ಜೋಶಿ ಇವರನ್ನು ಕಾಪು ಕ್ಷೇತ್ರದ ಶಾಸಕ ಸುರೇಶ್ ಶೆಟ್ಟಿ ಗುರ್ಮೆ ಸನ್ಮಾನಿಸಿದರು. ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿಗಳು ಹೆತ್ತವರ ಹಾಗೂ ಶಿಕ್ಷಕರ ಮಾರ್ಗದರ್ಶನದೊಂದಿಗೆ ಪರಿಶ್ರಮಪಟ್ಟರೆ ಇಂತಹ ಸಾಧನೆ ಮಾಡಲು ಸಾಧ್ಯ. ಪ್ರಸ್ತುತ ಸಮಯದಲ್ಲಿ ವಿದ್ಯಾರ್ಥಿಗಳು ಯಾವುದೇ ಬಾಹ್ಯ ಒತ್ತಡಗಳಿಗೆ ಒಳಗಾಗದೆ ಏಕಾಗ್ರತೆಯೊಂದಿಗೆ ಪಾಠದ ಕಡೆಗೆ ಗಮನಹರಿಸಬೇಕಾದ ಅವಶ್ಯಕತೆಯಿದ್ದು, ಇದರಿಂದ ಪಡೆಯುವ ಸಫಲತೆ ಹೆತ್ತವರಿಗೆ, ವಿದ್ಯಾಸಂಸ್ಥೆಗೆ ಕೀರ್ತಿ ತರುತ್ತದೆ ಎಂದರು.



ಸಂಚಾಲಕ ಡಾ. ಕೆ.ಪ್ರಶಾಂತ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲರಾದ ನೀಲಾನಂದ ನಾಯ್ಕ್ ಇವರು ಹೆತ್ತವರಿಗೆ ಕಲಿಕೆ ಹಾಗೂ ಶೈಕ್ಷಣಿಕ ಮಾರ್ಗದರ್ಶನ ನೀಡಿದರು. ಆಡಳಿತಾಧಿಕಾರಿ ಆಲ್ಬನ್ ರೊಡ್ರಿಗಸ್, ಶಿಕ್ಷಣ ಸಂಯೋಜಕ ಶಿವಣ್ಣ ಬಾಯರ್, ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯರಾದ ಗೇಬ್ರಿಯಲ್ ಮಸ್ಕರೇನ್ಹಸ್ ಉಪಸ್ಥಿತರಿದ್ದರು.

ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ವಿಭಾಗದಲ್ಲಿ ಅತೀ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಉಪನ್ಯಾಸಕಿ ರೋಶಲ್ ಡಿಸೋಜ ಪರಿಚಯಿಸಿದರು. ಉಪನ್ಯಾಸಕ ಸುರಥ್ ಕುಮಾರ್ ಸ್ವಾಗತಿಸಿದರು. ಉಪನ್ಯಾಸಕಿಯರಾದ ಸುಷ್ಮಾ ಕೆ. ವಂದಿಸಿ, ಸುಮನ ದೇವಾಡಿಗ ನಿರೂಪಿಸಿದರು.

ಪ್ರೇರಣೆಯಾಗಿದೆ

ಸಮರ್ಥ ಜೋಶಿಯ ಸಾಧನೆ ಮುಂದಿನ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ, ಹೆತ್ತವರು ಹಾಗೂ ಶಿಕ್ಷಕರು ಮಕ್ಕಳಲ್ಲಿರುವ ಪ್ರತಿಭೆಗೆ ಮಾರ್ಗದರ್ಶನ ನೀಡಬೇಕು.

• ಡಾ. ಕೆ.ಪ್ರಶಾಂತ್ ಶೆಟ್ಟಿ

ಜೂ.12-24ರವರೆಗೆ ಅಂಗಾಂಗ, ಚರ್ಮ, ಕೂದಲು ದಾನದ ಜಾಗೃತಿಗೆ ಹಿಮಾಲಯ ಪ್ರದೇಶದಲ್ಲಿ ಬೈಕ್ ರೈಡ್ ಅಭಿಯಾನ

ಉಡುಪಿ: ಅಂಗಾಂಗ ದಾನ, ಚರ್ಮದಾನ ಹಾಗೂ ಕೂದಲು ದಾನದ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ರೋಟರಿ ಕ್ಲಬ್ ಮಣಿಪಾಲ ಟೌನ್ ಹಾಗೂ ಮಾಹೆ ಮಣಿಪಾಲದ ಸಹಯೋಗದಲ್ಲಿ ವಿಶೇಷ ಬೈಕ್ ರೈಡ್ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ರೋಟರಿ ಕ್ಲಬ್ ಮಣಿಪಾಲ ಟೌನ್ ಅಧ್ಯಕ್ಷರು ಹಾಗೂ ಈ ಅಭಿಯಾನದ ಮುಂದಾಳತ್ವ ವಹಿಸಿರುವ ಡಾ. ದೀಪಕ್ ರಾಮ್ ಬಾಯಿರಿ ತಿಳಿಸಿದ್ದಾರೆ.

ಜೂ.12 - 24ರವರೆಗೆ ನಡೆಯಲಿರುವ ಈ ಅಭಿಯಾನ ಚಂಡೀಗಢದಿಂದ ಆರಂಭಗೊಂಡು ಹಿಮಾಲಯದ ತಪ್ಪಲಿನ ಶಿಮ್ಲಾ, ಕಾಜಾ, ಲೋಸರ್ ಹಾಗೂ ಮನಾಲಿ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಸಂಚರಿಸಲಿದೆ. ಈ ಸಂದರ್ಭ ಅಲ್ಲಿನ ರೋಟರಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಸ್ಥಳೀಯ ಜನರಿಗೆ ಅಂಗಾಂಗ ದಾನ, ಚರ್ಮದಾನ ಹಾಗೂ ಕೂದಲು ದಾನದ ಅಗತ್ಯತೆ ಮತ್ತು ಮಹತ್ವದ ಕುರಿತು ಜಾಗೃತಿ ಮೂಡಿಸಲಾಗುವುದು ಎಂದರು.

ದಾನಗಳ ಮಹತ್ವ ಬಗ್ಗೆ ಮಾಹಿತಿ

ಅಭಿಯಾನದಲ್ಲಿ ಭಾಗವಹಿಸುತ್ತಿರುವ 5 ಮಂದಿ ರೋಟರಿಯನ್ನರು ಸುಮಾರು 1,200 ಕಿ.ಮೀ.ಗಳಷ್ಟು ದೂರ ಬೈಕ್ ಮೂಲಕ ಸಂಚರಿಸಿ, ದಾನಗಳ ಮಹತ್ವ ಹಾಗೂ ಅವುಗಳಿಂದ ಅನೇಕ ಜೀವಗಳಿಗೆ ದೊರೆಯುವ ಹೊಸ ಬದುಕಿನ ಅವಕಾಶಗಳ ಕುರಿತು ಮಾಹಿತಿ ಹಂಚಿಕೊಳ್ಳಲಿದ್ದಾರೆ.

ಅಭಿಯಾನದ ಅಂಗವಾಗಿ ಜೂ.22 ರಂದು ಚಂಡೀಗಢ ವಿವಿ ವಿದ್ಯಾರ್ಥಿಗಳು, ಶಿಕ್ಷಕರೊಂದಿಗೆ ವಿಶೇಷ ಸಂವಾದ ಆಯೋಜಿಸಲಾಗಿದೆ. ಈ ಕಾರ್ಯಕ್ರಮ ಚಂಡೀಗಢ ವಿವಿ ಉಪಕುಲಪತಿ ಡಾ. ರವಿರಾಜ್ ಎನ್.ಎಸ್. ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಅಭಿಯಾನದ ಸವಾರರಾದ ಡಾ. ಶ್ರೀಧರ್, ಡಾ. ಕುಮಾರ್ ಭಟ್, ಡಾ. ಗುರುಮೂರ್ತಿ, ಡಾ. ವಾಸುದೇವ ಪೈ ವೆಂಕಟೇಶ್ ಹಾಗೂ ಪ್ರಶಾಂತ್ ಉಪಸ್ಥಿತರಿದ್ದರು.

ಮಂಗಳೂರು
ಗುರುವಾರ, 11 ಜೂನ್ 2026
ಸಂಪುಟ 48, ಸಂಚಿಕೆ 84 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

20 ದೇಸಿ ನ್ಯಾವಿಗೇಷನ್ ಜಾಮರ್ ಖರೀದಿಗೆ ಸಹಿ | ೦೨
ಮೈಸೂರಿನಲ್ಲಿ ಹುಲಿ ಸೆರೆ | ೦೫
ಭಾರತದ ವಾರ್ಷಿಕ ರಫ್ತು ಶೇ.5.7 | ೦೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ರೇವತಿ

ದಿನದ ಮಾತು

ಮೂರ್ಖ ಒಮ್ಮೆಯೂ ಸಂತೋಷದಿಂದಿರುವುದಿಲ್ಲ. ಓದಿದವನು ಯಾವಾಗಲೂ ಸಂತೋಷದಿಂದಿರುತ್ತಾನೆ.

▲ನಾಣ್ನುಡಿ

ವೃದ್ಧಾಪ್ಯವೂ, ಜನಸಂಖ್ಯೆ ಕಣ್ಮರೆಯೂ...

ಗುರುತರ

• ಸೋಮಶೇಖರ ಸಿ.ಜಿ.

• ಪುಟ ೬

ಕಿರುಸುದ್ದಿ

ಜೂನ್ 21ಕ್ಕೆ ಕೆಪಿಸಿಸಿ ಅಧ್ಯಕ್ಷರಾಗಿ ಹರಿಪ್ರಸಾದ್ ಅಧಿಕಾರ ಸ್ವೀಕಾರ

ನನಗೆ ಶಾಲು, ಹಾರ ಬೇಡ, ಅದೇ ಹಣ ಪಕ್ಷಕ್ಕೆ ಕೊಡಿ

• **ಬೆಂಗಳೂರು:** ನನಗೆ ಶಾಲು, ಹೂ ಹಾಕುವ ಬದಲಾಗಿ ಅದೇ ಹಣವನ್ನು ಕಾಂಗ್ರೆಸ್ ಪಕ್ಷಕ್ಕೆ ಹಾಕಿ. ಆ ಮೂಲಕ ಪಕ್ಷದ ಖಜಾನೆ ತುಂಬಲಿ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ. ಕೆಪಿಸಿಸಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.21ಕ್ಕೆ ಅರಮನೆ ಮೈದಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷನಾಗಿ ಪಕ್ಷದ ಜವಾಬ್ದಾರಿ ವಹಿಸಿಕೊಳ್ಳುತ್ತಿದ್ದೇನೆ. ಅಂದು ಹಲವಾರು ವಿಷಯಗಳ ಬಗ್ಗೆ ಮಾತನಾಡಬೇಕಾಗಿದೆ. ಕಾಂಗ್ರೆಸ್ ಪಕ್ಷದಲ್ಲಿ ಸೌಕರ್ಯವಾಗಿರುವವರಿದ್ದರೂ ಕಾಂಗ್ರೆಸ್ ಬಡವರ ಪಕ್ಷ. ಇಡೀ ದೇಶದಲ್ಲಿ ಕಾಂಗ್ರೆಸ್ ಬಳಿ ಇರುವುದು ಕೇವಲ 700 ಕೋಟಿ ರೂ. ಮಾತ್ರ ಎಂದರು. ➡ಪುಟ ೪

ಸಮಾಜ ಹಿತದ ಧ್ವನಿ ಈಶ್ವರಪ್ಪ: ಪೇಜಾವರ ಶ್ರೀ

• ಪುಟ ೫

ನಾಳೆ ಕೊಲ್ಲೂರು ಕ್ಷೇತ್ರಕ್ಕೆ ತಮಿಳ್ನಾಡು ಸಿಎಂ ವಿಜಯ್

• ಪುಟ ೫

ಕಾಪ್ಟರ್ ಪತನ: 21 ಪಾಕ್ ಸೇನಾ ಸಿಬ್ಬಂದಿ ಸಾವು

• ಪುಟ ೦೨

ಕಾಞಂಗಾಡಿನಲ್ಲಿ ಬಾಂಗ್ಲಾ ಯುವತಿ ಸೆರೆ

• ಪುಟ ೫

ತ್ಯಾಜ್ಯ ಟೆಂಡರ್ ಅವ್ಯವಹಾರ

• ಪುಟ ೫



ದ್ರೋಹಿ ಸದ್ದಡಗಿಸಲು ದ್ವಾದಶ ಅಣು ಸಿಡಿತಲೆ ಸಿದ್ಧ!

• ಪುಟ ೦೨

ಸುದ್ದಿ ಸಮಗ್ರ

ನೆಹರು ದಾಖಲೆ ಹಿಂದಿಕ್ಕಿದ ಮೋದಿ | ಎನ್‌ಡಿಎ ಅಭಿನಂದನೆ | 2047ರ ಭಾರತಕ್ಕೆ ಹೊಸ ಪ್ರತಿಜ್ಞೆ

ಮೋದಿ ದೀರ್ಘಾವಧಿ

ಜವಾಹರಲಾಲ್ ನೆಹರು **4,398** ದಿನ

ನರೇಂದ್ರ ಮೋದಿ **4,399** ದಿನ

- ವಿಕಸಿತ ಭಾರತಕ್ಕಾಗಿ ಒಗ್ಗಟ್ಟಿನಿಂದ ಕೆಲಸ ಮಾಡುವ ಎನ್‌ಡಿಎ ನಿರ್ಣಯ
- 12 ವರ್ಷಗಳಲ್ಲಿ 25 ಕೋಟಿ ಜನ ಬಡತನದಿಂದ ಹೊರಬಂದಿದ್ದಾರೆ: ಪ್ರಧಾನಿ
- ಹಿಂದು ಬೆಳವಣಿಗೆ ದರವಲ್ಲ, ಅದು ಕಾಂಗ್ರೆಸ್ ಬೆಳವಣಿಗೆ ದರ: ಮೋದಿ



• **ಹೊಸದಿಲ್ಲಿ:** ಭಾರತದ ಪ್ರಜಾಸತ್ತಾತ್ಮಕ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದ ಪ್ರಧಾನಿ ನರೇಂದ್ರ ಮೋದಿ, ನಿರಂತರವಾಗಿ ಆಯ್ಕೆಯಾದ ಪ್ರಧಾನಿಯಾಗಿ 4,399 ದಿನಗಳ ಸೇವೆ ಸಲ್ಲಿಸುವ ಮೂಲಕ ಜವಾಹರಲಾಲ್ ನೆಹರು ಅವರ ದಾಖಲೆಯನ್ನು ಹಿಂದಿಕ್ಕಿದ ದಿನವೇ, ಎನ್‌ಡಿಎ ಸರ್ಕಾರದ 12 ವರ್ಷಗಳ ಸಾಧನೆಯ ಸಂಭ್ರಮವೂ ರಾಷ್ಟ್ರ ರಾಜಧಾನಿಯಲ್ಲಿ ಭರ್ಜರಿಯಾಗಿ ನಡೆಯಿತು. ಈ ಸಂದರ್ಭದಲ್ಲಿ ನಡೆದ ಎನ್‌ಡಿಎ ಮಹಾಸಭೆಯಲ್ಲಿ ಪ್ರಧಾನಿ ಮೋದಿ ಅವರು, ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದು, ಹಿಂದೂ ಬೆಳವಣಿಗೆ ದರ ಎಂಬ ಪದಪ್ರಯೋಗ ತಿರಸ್ಕರಿಸಿ, ಅದನ್ನು ಕಾಂಗ್ರೆಸ್ ಬೆಳವಣಿಗೆ ದರ ಎಂದು ಕರೆಯಬೇಕಿತ್ತು ಎಂದು ಹೇಳಿದ್ದಾರೆ.



ಭಾರತ್ ಮಂಟಪಂನಲ್ಲಿ ನಡೆದ ಎನ್‌ಡಿಎ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಆಡಳಿತ ದೇಶವನ್ನು ಅಸಹಾಯಕತೆ, ನಿರಾಶೆ ಹಾಗೂ ಕೀಳರಿಮೆಯ ಮನೋ ಭಾವಕ್ಕೆ ತಳ್ಳಿತ್ತು ಎಂದು ಹೇಳಿದರು. ಅಭಿವೃದ್ಧಿ ನಿಧಾನಗತಿಯಲ್ಲಿ ಸಾಗುವುದು ಭಾರತದ ವಿಧಿ ಎಂಬ ಭಾವನೆಯನ್ನು ಜನರಲ್ಲಿ ಬಿತ್ತಲಾಗಿತ್ತು. ಅದಕ್ಕೆ ಕುತಂತ್ರದಿಂದ ಹಿಂದೂ ಬೆಳವಣಿಗೆ ದರ ಎಂಬ ಹೆಸರು ನೀಡಲಾಗಿತ್ತು. ಆದರೆ ಅದು ಕಾಂಗ್ರೆಸ್‌ನ ಆಡಳಿತ ವೈಫಲ್ಯ, ನೀತಿ ದಿವಾಳಿತನ ಮತ್ತು ದಿಕ್ಕುತೋಚದ ಆಡಳಿತದ ಪರಿಣಾಮವಾಗಿತ್ತು ಎಂದು ಕಿಡಿಕಾರಿದರು.

2014ರಲ್ಲಿ ಎನ್‌ಡಿಎ ಅಧಿಕಾರಕ್ಕೆ ಬಂದಾಗ ದೇಶದಲ್ಲಿ ಹೊಸ ಭರವಸೆ ಮೂಡಿತ್ತು ಇಂದು ಆ ಭರವಸೆ ಆತ್ಮವಿಶ್ವಾಸವಾಗಿ ರೂಪಾಂತರಗೊಂಡಿದೆ. ➡ಪುಟ ೪

ದಾಖಲೆ ದಿನ

- ನಿರಂತರವಾಗಿ ಆಡಳಿತ ನಡೆಸಿ 4,399 ದಿನ ಪೂರೈಸಿದ ಮೋದಿ
- ಜವಾಹರಲಾಲ್ ನೆಹರು ಅವರ 4,398 ದಿನಗಳ ದಾಖಲೆಗೆ ತೆರೆ
- 2014, 2019 ಮತ್ತು 2024ರಲ್ಲಿ ಸತತ ಮೂರು ಬಾರಿ ಪ್ರಧಾನಿಯಾಗಿ ಪ್ರಮಾಣವಚನ
- ಭಾರತದ ಇತಿಹಾಸದಲ್ಲೇ ಅತಿ ದೀರ್ಘಾವಧಿ ಸೇವೆ ಸಲ್ಲಿಸಿದ ಚುನಾಯಿತ ಪ್ರಧಾನಿ

ರಾಜ್ಯಾದ್ಯಂತ ಸಂಭ್ರಮ, ವಿಶೇಷ ಪೂಜೆ

• ಪುಟ ೫

ಎನ್‌ಡಿಎ ಪ್ರಮುಖ ನಿರ್ಣಯಗಳು

1. ಮೋದಿ ನಾಯಕತ್ವಕ್ಕೆ ಏಕಮತದ ಅಭಿನಂದನೆ
2. ಜನಕೇಂದ್ರಿತ ಆಡಳಿತಕ್ಕೆ ಮೆಚ್ಚುಗೆ
3. ವಿಕಸಿತ ಭಾರತ ಗುರಿಗೆ ಪುನರ್‌ಬದ್ಧತೆ
4. ಮೈತ್ರಿಕೂಟದ ಎಲ್ಲಾ ಪಕ್ಷಗಳ ಕೊಡುಗೆಗೆ ಕೃತಜ್ಞತೆ
5. ಅಭಿವೃದ್ಧಿ, ಸುಶಾಸನ ಮತ್ತು ಜನವಿಶ್ವಾಸದ ಮೇಲೆ ಒತ್ತು

ಎದ್ದು ನಿಂತು ಗೌರವ ಸೂಚಿಸಿದ ಸಚಿವ ಸಂಪುಟ

ಪ್ರಧಾನಿ ನರೇಂದ್ರ ಮೋದಿ ಅವರ ದಾಖಲೆಯ ದಿನವನ್ನು ಕೇಂದ್ರ ಸಚಿವ ಸಂಪುಟವೂ ವಿಶೇಷವಾಗಿ ಆಚರಿಸಿತು. ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಪ್ರಧಾನಿ ಮೋದಿಗೆ ಎಲ್ಲ ಸಚಿವರು ಎದ್ದು ನಿಂತು ಗೌರವ ಸಲ್ಲಿಸಿದರು. ಇದೇ ವೇಳೆ ಸಚಿವ ಸಂಪುಟ ಸರ್ವಾನುಮತದಿಂದ ವಿಶೇಷ ನಿರ್ಣಯವೊಂದನ್ನು ಅಂಗೀಕರಿಸಿ, ಮೋದಿ ಅವರ ನಾಯಕತ್ವವನ್ನು ಶ್ಲಾಘಿಸಿತು. ಕಳೆದ 12 ವರ್ಷಗಳಲ್ಲಿ ಜನಕೇಂದ್ರಿತ ಅಭಿವೃದ್ಧಿ, ಸುಶಾಸನ, ರಾಷ್ಟ್ರೀಯ ಭದ್ರತೆ ಹಾಗೂ ಆರ್ಥಿಕ ಪರಿವರ್ತನೆಗೆ ಮೋದಿ ನೀಡಿದ ನಾಯಕತ್ವವನ್ನು ನಿರ್ಣಯದಲ್ಲಿ ಪ್ರಶಂಸಿಸಲಾಗಿದೆ.

ಮೋದಿ ಕಾಲದ ಬದಲಾವಣೆಗಳು

ಜನನ ಸಮಯದ ಲಿಂಗ ಅನುಪಾತ
2014: 918
2026: 929

ಉನ್ನತ ಶಿಕ್ಷಣದಲ್ಲಿ ಮಹಿಳಾ ದಾಖಲಾತಿ
2014: 9.86 ಲಕ್ಷ
2026: 34+ ಲಕ್ಷ

ಶೌಚಾಲಯ ಸೌಲಭ್ಯಕ್ಕೆ ಪ್ರವೇಶ
2014: 39%
2026: 100%

ಸ್ವಸಹಾಯ ಗುಂಪುಗಳ ಸದಸ್ಯತ್ವ
2014: 2.35 ಕೋಟಿ
2026: 10+ ಕೋಟಿ

ತಾಯಂದಿರ ಮರಣ ಪ್ರಮಾಣ
2014: 130
2026: 80

ಸಶಸ್ತ್ರ ಪಡೆ/ಭದ್ರತಾ ಪಡೆಗಳಲ್ಲಿ ಮಹಿಳಾ ಅಧಿಕಾರಿಗಳು
2014: 3,000
2026: 11,000+

ವೇತನಸಹಿತ ಹೆರಿಗೆ ರಜೆ
2014: 12 ವಾರಗಳು
2026: 26 ವಾರಗಳು

ಪಿಎಂ-ಕಿಸಾನ್
ಫಲಾನುಭವಿಗಳಲ್ಲಿ ಶೇ.80 ಸಣ್ಣ ರೈತರು

ಉತ್ಪಾದನೆ ಆಧಾರಿತ ಪ್ರೋತ್ಸಾಹ ಯೋಜನೆ
- 2 ಲಕ್ಷ ಕೋಟಿ ರೂ.ಗೂ ಅಧಿಕ ಹೂಡಿಕೆ
- ಸುಮಾರು 13 ಲಕ್ಷ ಉದ್ಯೋಗ ಸೃಷ್ಟಿ

ವೈದ್ಯಕೀಯ ಶಿಕ್ಷಣ ವಿಸ್ತರಣೆ
- ವೈದ್ಯಕೀಯ ಕಾಲೇಜುಗಳು: 842-2,100+
- ಎಂಬಿಬಿಎಸ್ ಪದವಿ ಸೀಟುಗಳು: 1,28,976
- ಸ್ನಾತಕೋತ್ತರ(ಪಿಜಿ) ಸೀಟುಗಳು: 85,822

ಎಸ್‌ಸಿ/ಎಸ್‌ಟಿ/ಒಬಿಸಿ ಸಬಲೀಕರಣ
- ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಫಲಾನುಭವಿಗಳಲ್ಲಿ ಶೇ.71 ಎಸ್‌ಸಿ/ಎಸ್‌ಟಿ/ಒಬಿಸಿ ರೈತರು

ರಾಜ್ಯ ರಾಜಕಾರಣ ಕುರಿತು ಸಮಾಲೋಚನೆ ನಡೆಸಿದ ಡಿಕೆಶಿ

ಸೋನಿಯಾಗೆ ಧನ್ಯವಾದ ಹೇಳಿದ ಸಿಎಂ

• **ಹೊಸದಿಲ್ಲಿ:** ಎರಡು ದಿನಗಳ ದಿಲ್ಲಿ ಪ್ರವಾಸ ಕೈಗೊಂಡಿರುವ ಸಿಎಂ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿ ಧನ್ಯವಾದ ಅರ್ಪಿಸಿದ್ದಾರೆ.

ಬುಧವಾರ 10 ಜನಪಥ್ ನಿವಾಸಕ್ಕೆ ಭೇಟಿ ನೀಡಿದ ಅವರು, ಸಿಎಂ ಸ್ಥಾನಕ್ಕೆ ಅವಕಾಶ ಕಲ್ಪಿಸಿದ್ದಕ್ಕಾಗಿ ಕೃತಜ್ಞತೆ ತಿಳಿಸಿ, ಕೆಲ ಹೊತ್ತು ರಾಜ್ಯ ರಾಜಕಾರಣದ ಕುರಿತು ಸಮಾಲೋಚನೆ ನಡೆಸಿದರು. ಈ ಸಂದರ್ಭದಲ್ಲಿ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾದ್ರಾ ಉಪಸ್ಥಿತರಿದ್ದರು. ಮಧ್ಯಾಹ್ನ ರಾಷ್ಟ್ರೀಯ ಯುವ ಕಾಂಗ್ರೆಸ್ ಕಚೇರಿ, ಎನ್‌ಎಸ್‌ಯುಐ ಕಚೇರಿ, ಮಹಿಳಾ ಕಾಂಗ್ರೆಸ್ ಕಚೇರಿಗೆ ಸೌಜನ್ಯದ ಭೇಟಿ ನೀಡಿದ ಡಿ.ಕೆ. ಶಿವಕುಮಾರ್, ಪದಾಧಿಕಾರಿಗಳ ಜತೆ ಪಕ್ಷ ಸಂಘಟನೆ ಕುರಿತು ಚರ್ಚಿಸಿದರು. ➡ಪುಟ ೪



ಇಂದು ನೀತಿ ಆಯೋಗದ ಸಭೆ

3 ವರ್ಷ ಬಳಿಕ ಕರ್ನಾಟಕದ ಸಿಎಂ ಭಾಗಿ

ಹೊಸದಿಲ್ಲಿ: ವಿಕಸಿತ ಭಾರತ 2047 ದೃಷ್ಟಿಕೋನದಲ್ಲಿ ಸಮಗ್ರ ಮಾನವ ಅಭಿವೃದ್ಧಿ ಕುರಿತು ಚರ್ಚಿಸಲು ಗುರುವಾರ (ಜೂ.11) ನೀತಿ ಆಯೋಗದ 11ನೇ ಆಡಳಿತ ಮಂಡಳಿ ಸಭೆ ಆಯೋಜಿಸಲಾಗಿದೆ. ➡ಪುಟ ೪

ಅಡಗುದಾಣಗಳ ಮೇಲೆ ದಾಳಿ ಸಮರ್ಥಿಸಿಕೊಂಡ ಪಾಕಿಸ್ತಾನ

ಪಾಕ್ ದಾಳಿಗೆ 26 ಅಫ್ಘಾನ್ ಮಂದಿ ಬಲಿ

• **ಇಸ್ಲಾಮಾಬಾದ್:** ಪೂರ್ವ ಅಫ್ಘಾನಿಸ್ತಾನದಲ್ಲಿ ಪಾಕಿಸ್ತಾನ ಸೇನೆ ನಡೆಸಿದ ವೈಮಾನಿಕ ದಾಳಿಯಲ್ಲಿ 11 ಮಕ್ಕಳು ಸೇರಿ 26 ಮಂದಿ ಮೃತಪಟ್ಟಿದ್ದಾರೆ. ಈ ಅಮಾನುಷ ದಾಳಿಯನ್ನು ತಾಲಿಬಾನ್ ಸರ್ಕಾರ ಬಲವಾಗಿ ಖಂಡಿಸಿದೆ. ಅಫ್ಘಾನ್ ಪ್ರಾದೇಶಿಕ ಸಮಗ್ರತೆಯನ್ನು ಪಾಕಿಸ್ತಾನ ಉಲ್ಲಂಘಿಸುತ್ತಿದ್ದು, ನಾಗರಿಕ ಪ್ರದೇಶಗಳನ್ನು ಗುರಿಯಾಗಿಸಿಕೊಂಡಿದೆ ಎಂದು ಆರೋಪಿಸಿದೆ. ತಾಲಿಬಾನ್ ವಕ್ತಾರ ಜಬಿಹುಲ್ಲಾ ಮುಜಾಹಿದ್ ಪ್ರಕಾರ, ಅಫ್ಘಾನಿಸ್ತಾನದ ಕುನಾರ್, ಖೋಸ್ಟ್ ಮತ್ತು ಪಕ್ತಿಕಾ ಪ್ರಾಂತ್ಯಗಳ ಮೇಲೆ ಪಾಕ್ ದಾಳಿ ನಡೆಸಿದೆ. ದಾಳಿ ಬಗ್ಗೆ ಪಾಕಿಸ್ತಾನ ಸರ್ಕಾರ, ಅಫ್ಘಾನ್ ಬಂಡುಕೋರರ ಅಡಗುದಾಣಗಳು ಮತ್ತು ಇತರ ಸೌಲಭ್ಯಗಳನ್ನು ಗುರಿಯಾಗಿಸಿ ತಾನು ದಾಳಿ ನಡೆಸಿರುವುದಾಗಿ ಸಮರ್ಥಿಸಿಕೊಂಡಿದೆ. ಈ ಹಿಂದೆ ಜೂ.9ರ ಮೂಸಾ ದರಾ ಪ್ರದೇಶದ ಫೆಡರಲ್ ಕಾನ್ಸ್‌ಟೆಬ್ಯುಲರಿ ಠಾಣೆಯ ಮೇಲಿನ ದಾಳಿ, ಜೂ.2ರ ಉತ್ತರ ವಜಿರಿಸ್ತಾನದಲ್ಲಿನ ಸೇನಾ ಠಾಣೆ ಮೇಲಿನ ವಾಹನಾಧಾರಿತ ಆತ್ಮಹತ್ಯಾ ದಾಳಿ, ಮೇ 9ರಂದು ಬನ್ನು ಪೊಲೀಸ್ ಠಾಣೆ ಮೇಲೆ ಪಾಕ್ ದಾಳಿ ನಡೆಸಿತ್ತು.



ಅಮೆರಿಕ-ಇರಾನ್ ಸಂಘರ್ಷ ಮತ್ತೆ ಉಲ್ಬಣ

• **ವಾಷಿಂಗ್ಟನ್:** ಅಮೆರಿಕದ ಮಿಲಿಟರಿ ನೆಲೆಗಳ ಮೇಲೆ ಇರಾನ್ ದಾಳಿ ನಡೆಸಿದ ಬೆನ್ನಲ್ಲೇ, ಶಾಂತಿ ಮಾತುಕತೆಗಳನ್ನು ವಿಳಂಬ ಮಾಡುತ್ತಿರುವ ಇರಾನ್ ಇದಕ್ಕೆ ತಕ್ಕ ಬೆಲೆ ತೆರಬೇಕಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ. ➡ಪುಟ ೪

ಬಂಡಾಯ ಕ್ಯಾಂಪ್ ಸೇರಿದ 19 ಟಿಎಂಸಿ ಸಂಸದರು

ಪಕ್ಷ ಇಬ್ಭಾಗ ಸಾಧ್ಯತೆ ಹೆಚ್ಚಳ, ಎನ್‌ಡಿಎ ಭಾಗವಾಗಲು ಸಿದ್ಧತೆ

• **ಕೋಲ್ಕತ್ತಾ:** ಹತ್ತೊಂಬತ್ತು ತೃಣಮೂಲ ಕಾಂಗ್ರೆಸ್ ಲೋಕಸಭಾ ಸದಸ್ಯರು ಬಂಡಾಯ ಬಣ ಸೇರಿಕೊಂಡಿದ್ದು, ಪಕ್ಷದೊಳಗಿನ ರಾಜಕೀಯ ಬಿಕ್ಕಟ್ಟನ್ನು ತೀವ್ರಗೊಳಿಸಿದ್ದಾರೆ ಮತ್ತು ಪಕ್ಷ ಇಬ್ಭಾಗವಾಗುವ ಸಾಧ್ಯತೆಯನ್ನು ಹೆಚ್ಚಿಸಿದ್ದಾರೆ ಎಂದು ವರದಿಗಳು ತಿಳಿಸಿವೆ. ಮೂಲಗಳ ಪ್ರಕಾರ, ಬಂಡಾಯ ಶಿಬಿರದಲ್ಲಿ ಶತ್ರುಘ್ನ ಸಿನ್ಹಾ, ಯೂಸುಫ್ ಪಠಾಣ್, ಸಾಯೋನಿ ಘೋಷ್, ಕಾಕೋಲಿ ಘೋಷ್ ದಸ್ತಿದಾರ್, ಮಾಲಾ ರಾಯ್, ಶತಾಬ್ದಿ ರಾಯ್, ದೀಪಕ್ ಅಧಿಕಾರಿ, ಜೂನ್ ಮಾಲಿಯಾ ಮತ್ತು ಇತರ ಹಲವು ಸಂಸದರಿದ್ದಾರೆ. ➡ಪುಟ ೪

ಆಸ್ಪತ್ರೆಗಳ ವಿರುದ್ಧ ಕಠಿಣ ಕ್ರಮ: ಸಚಿವ ಖಾದರ್

ರೋಗಿಗಳಿಗೆ ಸಹಾಯವಾಣಿ

• **ಬೆಂಗಳೂರು:** ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳಿಗೆ ಎದುರಾಗುವ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಲು ಆರೋಗ್ಯ ಸೌಧದಲ್ಲಿ ಸಹಾಯವಾಣಿ ಆರಂಭಿಸಲಾಗುವುದು ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದರು.

ಆರೋಗ್ಯಸೌಧದಲ್ಲಿ ಇಲಾಖೆಯ ಕಾರ್ಯಕ್ರಮ/ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ಯಾವುದೇ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ, ಔಷಧಿ ಲಭ್ಯತೆ ಸಮಸ್ಯೆ ಎದುರಾದರೆ ನೇರವಾಗಿ ನಮ್ಮ ಕಚೇರಿಗೆ ಅಥವಾ ಇಲಾಖೆಯ ಕಾರ್ಯದರ್ಶಿಗಳ ಕಚೇರಿಗೆ ಕರೆ ಮಾಡಿ ತಿಳಿಸಿದರೆ ಅದನ್ನು ಸರಿಪಡಿಸಲಾಗುವುದು. ಇದಕ್ಕಾಗಿ ಸಹಾಯವಾಣಿ ತೆರೆಯಲು ಯೋಜಿಸಿದ್ದೇವೆ ಎಂದು ವಿವರಿಸಿದರು.

ರೋಗಿಗಳಿಂದ ದೂರು ಬಂದ ಆಸ್ಪತ್ರೆಗಳ ವಿರುದ್ಧ ಆರೋಗ್ಯ ಇಲಾಖೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ದೂರುಗಳು ಸಾಬೀತಾದಲ್ಲಿ ಸಂಬಂಧಿತ ಅಧಿಕಾರಿಗಳು, ವೈದ್ಯರು ಅಥವಾ ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ➡ಪುಟ ೪



ರಕ್ತಸಂಗ್ರಹ ಬಗ್ಗೆ ಮಾಹಿತಿಗೆ ಮನವಿ

ಗ್ರಾಮೀಣ ಮಟ್ಟದಲ್ಲಿ ರಕ್ತನಿಧಿ ಸಂಗ್ರಹಕ್ಕಾಗಿ ದುಡಿಯುವ ಸಂಸ್ಥೆಗಳು, ಕೇಂದ್ರಗಳಿಗೆ ವಿಶೇಷ ವೆಬ್‌ಸೈಟ್ ಮಾಡಲಾಗುವುದು. ಸಂಸ್ಥೆಗಳು ನೋಂದಣಿ ಮಾಡಿಕೊಂಡು ಎಷ್ಟು ರಕ್ತಸಂಗ್ರಹ ಮಾಡುತ್ತಿದ್ದೇವೆ ಎಂಬ ಮಾಹಿತಿಯನ್ನು ನಿಯಮಿತವಾಗಿ ನೀಡಿದಲ್ಲಿ ಅವರಿಗೆ ಪ್ರಮಾಣಪತ್ರ ನೀಡಲಾಗುವುದು. ➡ಪುಟ ೪

ರಾಜ್ಯಸಭೆಯ ವ್ಯಾಮೋಹವಿಲ್ಲ: ದೇವೇಗೌಡ

ನನ್ನ ಮೋದಿ ಬಾಂಧವ್ಯ ಈ ಸ್ಥಾನ ಮೀರಿದ್ದು

• **ಬೆಂಗಳೂರು:** ಎಪ್ಪತ್ತು ವರ್ಷಗಳ ಸುದೀರ್ಘ ರಾಜಕೀಯ ಜೀವನ ಸವೆಸಿರುವ ನನಗೆ ರಾಜ್ಯಸಭೆ ಸದಸ್ಯನಾಗಬೇಕು ಎಂಬ ವ್ಯಾಮೋಹವಿಲ್ಲ. ನನ್ನ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಡುವಿನ ಬಾಂಧವ್ಯವು ರಾಜ್ಯಸಭೆ ಸ್ಥಾನವನ್ನು ಮೀರಿದ್ದು ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ತಿಳಿಸಿದರು.



ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಬುಧವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು ಅವರು, ನನ್ನ ಮತ್ತು ಪ್ರಧಾನಿ ಮೋದಿ ಅವರ ನಡುವೆ ಉತ್ತಮ ಬಾಂಧವ್ಯ ಇದೆ. ➡ಪುಟ ೪

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಗುರುವಾರ 11 ಜೂನ್ 2026, ಮಂಗಳೂರು

4,399 ದಿನಗಳ ಸತತ ಆಡಳಿತ

ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಜೂನ್ 10, 2026 ಒಂದು ಮೈಲುಗಲ್ಲಿನ ದಿನವಾಗಿ ದಾಖಲಾಯಿತು. ಪ್ರಧಾನಿ ನರೇಂದ್ರ ಮೋದಿ ಅವರು ಅವಿಚ್ಛಿನ್ನವಾಗಿ 4,399 ದಿನಗಳನ್ನು ಅಧಿಕಾರದಲ್ಲಿ ಪೂರೈಸಿ, ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರ ಚುನಾಯಿತ ಅಧಿಕಾರಾವಧಿಯ ದಾಖಲೆಯನ್ನು ಮೀರಿ ನಿಂತರು. ಆರು ದಶಕಗಳಿಗೂ ಹೆಚ್ಚು ಕಾಲ ಅಭೇದ್ಯವಾಗಿ ಉಳಿದಿದ್ದ ಈ ದಾಖಲೆ ಈಗ ಕೇವಲ ಒಂದು ದಿನದ ಅಂತರದಿಂದ ಪತನಗೊಂಡಿದೆ ನೆಹರೂ 4,398 ದಿನ, ಮೋದಿ 4,399 ದಿನ. ಇದು ಬರೀ ಒಂದು ಸಂಖ್ಯೆಯ ಆಚೆಗಿನ ಸಂಗತಿ. ಮೂರು ಸತತ ಲೋಕಸಭಾ ಚುನಾವಣೆಗಳಲ್ಲಿ 2014, 2019, 2024 ಜನಾದೇಶ ಗಳಿಸಿ, ಒಂದೇ ನಾಯಕನ ನೇತೃತ್ವದಲ್ಲಿ ಸರ್ಕಾರ ಮುನ್ನಡೆದ ಅಪರೂಪದ ಪರ್ವ ಇದು. ಅದೇ ಸಂದರ್ಭದಲ್ಲಿ ಕೇಂದ್ರದ ಎನ್‌ಡಿಎ ಸರ್ಕಾರ 12 ವರ್ಷಗಳನ್ನು ಪೂರೈಸಿ 13ನೇ ವರ್ಷಕ್ಕೆ ಕಾಲಿಟ್ಟಿದೆ. ಈ 12 ವರ್ಷಗಳ ಸಾಧನೆಯನ್ನು ಇಲ್ಲಿ ಬಿಂಬಿಸಲಾಗಿದೆ.



ನೆಹರೂ ದಾಖಲೆ ಮುರಿದ ಮೋದಿ

ಮೋದಿ ಹೆಸರಿನ ವಿಶಿಷ್ಟ ದಾಖಲೆಗಳು

- ಸ್ವಾತಂತ್ರ್ಯಾ ನಂತರ ಜನಿಸಿದ ಮೊದಲ ಪ್ರಧಾನಿ.
- ಎರಡು ಪೂರ್ಣ ಅವಧಿ ಮುಗಿಸಿ ಮೂರನೇ ಬಾರಿ ಬಹುಮತದೊಂದಿಗೆ ಮರಳಿದ ಮೊದಲ ಕಾಂಗ್ರೆಸೇತರ ನಾಯಕ.
- ಹಿಂದಿಯೇತರ ರಾಜ್ಯದಿಂದ (ಗುಜರಾತ್) ಬಂದ ಅತಿ ದೀರ್ಘಾವಧಿ ಪ್ರಧಾನಿ.
- ಪ್ರಧಾನಿಯಾಗುವ ಮುನ್ನ ಅತಿ ದೀರ್ಘ ಕಾಲ ಮುಖ್ಯಮಂತ್ರಿ ಅನುಭವ ಹೊಂದಿದ ನಾಯಕ.
- ಸಾಮಾಜಿಕ ಜಾಲತಾಣಗಳಲ್ಲಿ ವಿಶ್ವದ ಅತಿ ಹೆಚ್ಚು ಹಿಂಬಾಲಕರನ್ನು ಹೊಂದಿರುವ ನಾಯಕರಲ್ಲಿ ಒಬ್ಬರು.

ದಾಖಲೆಯ ತಿರುಳು: ಆ ಒಂದು ದಿನದ ಕಥೆ

- ಮೋದಿ ಅವಧಿ: 4,399 ದಿನ (ಮೇ 26, 2014ರಿಂದ ಜೂನ್ 10, 2026ರವರೆಗೆ ಸತತ).
- ನೆಹರೂ ಚುನಾಯಿತ ಅವಧಿ: 4,398 ದಿನ (ಮೇ 13, 1952ರಿಂದ ಮೇ 27, 1964ರವರೆಗೆ).
- ನೆಹರೂ 194752ರ ಅವಧಿಯಲ್ಲಿ ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿದ್ದರು. ಮೊದಲ ಸಾರ್ವತ್ರಿಕ ಚುನಾವಣೆ 195152ರಲ್ಲಿ ನಡೆದ ಬಳಿಕವೇ ಅವರು 'ಚುನಾಯಿತ' ಪ್ರಧಾನಿಯಾದರು. ಆದ್ದರಿಂದ ಹೋಲಿಕೆಗೆ 1952ರ ನಂತರದ ಅವಧಿಯನ್ನು ಪರಿಗಣಿಸಲಾಗಿದೆ.
- ನೆಹರೂ ಅವರ ಒಟ್ಟು ಅವಧಿ (194764): 6,130 ದಿನ ಅಥವಾ ಸುಮಾರು 16 ವರ್ಷ 286 ದಿನ ಒಟ್ಟಾರೆ ಅವಧಿಯಲ್ಲಿ ಇಂದಿಗೂ ಮೊದಲ ಸ್ಥಾನ.

ಸಂಖ್ಯೆ ದಾಟಿದ ಸಂದೇಶ

ಒಂದು ದಿನದ ಅಂತರ, ಆದರೆ ಅದರ ಸಾಂಕೇತಿಕ ತೂಕ ಬೃಹತ್ತಾದದ್ದು. ಭಾರತದ ಚುನಾವಣಾ ಭೂಪಟವನ್ನೇ ಮರುರೂಪಿಸಿದ ಒಂದು ರಾಜಕೀಯ ಯುಗದ ಸ್ಪಷ್ಟ ಗುರುತಾಗಿ ಈ ದಾಖಲೆ ನಿಲ್ಲುತ್ತದೆ. ಒಟ್ಟು ಅವಧಿಯಲ್ಲಿ ನೆಹರೂ ಇನ್ನೂ ಮುಂದಿದ್ದರೂ, 'ಚುನಾಯಿತ ಜನಾದೇಶದ ಸತತ ಆಡಳಿತ' ಎಂಬ ಮಾನದಂಡದಲ್ಲಿ ಮೋದಿ ಹೊಸ ಅಧ್ಯಾಯ ಬರೆದಿದ್ದಾರೆ. ಸ್ವಾತಂತ್ರ್ಯಾ ನಂತರ ಜನಿಸಿದ, ಕಾಂಗ್ರೆಸೇತರ, ಹಿಂದಿಯೇತರ ರಾಜ್ಯದಿಂದ ಬಂದ ನಾಯಕನೊಬ್ಬ ಈ ಸ್ಥಾನಕ್ಕೆ ಏರಿರುವುದು ಭಾರತದ ಪ್ರಜಾಪ್ರಭುತ್ವದ ಬದಲಾದ ಸ್ವರೂಪವನ್ನೂ ಪ್ರತಿಬಿಂಬಿಸುತ್ತದೆ.

ಅಧಿಕಾರಾವಧಿಯ ಏಣಿ: ಯಾರು ಎಷ್ಟು ದಿನ?

ಒಟ್ಟು ಅಧಿಕಾರಾವಧಿಯ ಲೆಕ್ಕದಲ್ಲಿ ನೆಹರೂ, ಇಂದಿರಾ ಗಾಂಧಿ ಮತ್ತು ಮೋದಿ ಈ ಮೂವರೇ ಅಗ್ರ ಮೂರು ಸ್ಥಾನಗಳಲ್ಲಿ ಇದ್ದಾರೆ. ಆದರೆ 'ಅವಿಚ್ಛಿನ್ನ ಚುನಾಯಿತ ಅವಧಿ'ಯ ಮಾನದಂಡದಲ್ಲಿ ಮೋದಿ ಈಗ ಅಗ್ರಸ್ಥಾನ ಗಳಿಸಿದ್ದಾರೆ.

ಪ್ರಧಾನಿ	ಅವಧಿ	ಒಟ್ಟು ದಿನ	ಪಕ್ಷ
ಜವಾಹರಲಾಲ್ ನೆಹರೂ	19471964	6,130	ಕಾಂಗ್ರೆಸ್
ಇಂದಿರಾ ಗಾಂಧಿ	196677, 198084	5,829	ಕಾಂಗ್ರೆಸ್
ನರೇಂದ್ರ ಮೋದಿ	2014ಇಂದಿನವರೆಗೆ	4,399	ಬಿಜೆಪಿ
ಮನಮೋಹನ್ ಸಿಂಗ್	20042014	3,656	ಕಾಂಗ್ರೆಸ್
ಅಟಲ್ ಬಿಹಾರಿ ವಾಜಪೇಯಿ	ಮೂರು ಅವಧಿ	2,272	ಬಿಜೆಪಿ

(ಸೂಚನೆ: ವಾಜಪೇಯಿ ಅವರ 2,272 ದಿನ ಮೂರು ಪ್ರತ್ಯೇಕ ಅವಧಿಗಳ ಒಟ್ಟು ಮೊತ್ತ. ಮೋದಿ ಈ ದಾಖಲೆಯನ್ನು 2020ರಲ್ಲೇ ದಾಟಿ, ದೀರ್ಘಾವಧಿ ಕಾಂಗ್ರೆಸೇತರ ಪ್ರಧಾನಿ ಎನಿಸಿದ್ದರು.)

ಮೋದಿ ದಾಟಿಬಂದ ದಾಖಲೆಗಳು

- **2020** (ಆಗಸ್ಟ್): ವಾಜಪೇಯಿ ಅವರ 2,272 ದಿನಗಳ ದಾಖಲೆ ಮೀರಿ ಅತಿ ದೀರ್ಘಾವಧಿ ಕಾಂಗ್ರೆಸೇತರ ಪ್ರಧಾನಿ.
- **2025** (ಜುಲೈ): ಇಂದಿರಾ ಗಾಂಧಿ ಅವರ ಸತತ ಅವಧಿಯ (11 ವರ್ಷ 59 ದಿನ) ದಾಖಲೆ.
- **2025:** ಸತತ ಅವಧಿಯಲ್ಲಿ ಇಂದಿರಾ ಅವರ 4,077 ದಿನಗಳ ದಾಖಲೆ ದಾಟಿ ಎರಡನೇ ಸ್ಥಾನ.
- **2026** (ಮಾರ್ಚ್): ಸಿಕ್ಕಿಂ ಮಾಜಿ ಸಿಎಂ ಪವನ್ ಕುಮಾರ್ ಚಾಮ್ಲಿಂಗ್ ಅವರ 8,930 ದಿನಗಳ ದಾಖಲೆ ಮೀರಿ (ಸಿಎಂ + ಪಿಎಂ ಸೇರಿ 8,931 ದಿನ) ಚುನಾಯಿತ ಸರ್ಕಾರದ ಅತಿ ದೀರ್ಘಾವಧಿ ಮುಖ್ಯಸ್ಥ.
- **2026** (ಜೂನ್ 10): ನೆಹರೂ ಅವರ ಚುನಾಯಿತ ಅವಧಿ ಮೀರಿ ಅಗ್ರಸ್ಥಾನ.

ಕಾರ್ಯಾಂಗದ ನಾಯಕನಾಗಿ 24 ವರ್ಷ

ಮೋದಿ ಅವರ ಆಡಳಿತ ಯಾನ 2001ರ ಅಕ್ಟೋಬರ್ 7ರಂದು ಗುಜರಾತ್ ಮುಖ್ಯಮಂತ್ರಿಯಾಗಿ ಪ್ರಾರಂಭವಾಯಿತು. ಭೂಕಂಪ, ಬರ, ರಾಜಕೀಯ ಅಸ್ಥಿರತೆಯ ಸವಾಲುಗಳ ನಡುವೆ ಆರಂಭಗೊಂಡ ಆ ಪಯಣ, ಸತತ 13 ವರ್ಷಗಳ ಕಾಲ ಅವರನ್ನು ಗುಜರಾತಿನ ಅತಿ ದೀರ್ಘಾವಧಿ ಮುಖ್ಯಮಂತ್ರಿಯಾಗಿಸಿತು. 2014ರ ಮೇ 26ರಂದು ರಾಷ್ಟ್ರ ರಾಜಕೀಯಕ್ಕೆ ಕಾಲಿಟ್ಟ ಬಳಿಕ, ಅಂದರೆ ಸಿಎಂ ಮತ್ತು ಪಿಎಂ ಎರಡೂ ಸೇರಿ ಒಟ್ಟು ಸುಮಾರು 24 ವರ್ಷಗಳ ಕಾರ್ಯಾಂಗ ಅನುಭವ ಅವರ ಬೆನ್ನಿಗಿದೆ. ಸ್ವಾತಂತ್ರ್ಯಾ ನಂತರ ಜನಿಸಿದ ಮೊದಲ ಪ್ರಧಾನಿ, ಎರಡು ಪೂರ್ಣ ಅವಧಿ ಮುಗಿಸಿ ಮೂರನೇ ಬಾರಿ ಬಹುಮತದೊಂದಿಗೆ ಮರಳಿದ ಮೊದಲ ಕಾಂಗ್ರೆಸೇತರ ನಾಯಕ ಎಂಬ ವಿಶಿಷ್ಟತೆಗಳೂ ಅವರ ಹೆಸರಿನಲ್ಲಿವೆ.

ಮೂರು ಜನಾದೇಶಗಳ ಬಲ

ಈ ದೀರ್ಘಾವಧಿಯ ಅಡಿಪಾಯ ಮೂರು ಸತತ ಲೋಕಸಭಾ ಗೆಲುವುಗಳಲ್ಲಿದೆ. 2014ರಲ್ಲಿ ಬಿಜೆಪಿ ಸ್ವತಂತ್ರ ಬಹುಮತದೊಂದಿಗೆ 282 ಸ್ಥಾನ ಗೆದ್ದರೆ, 2019ರಲ್ಲಿ ಆ ಸಂಖ್ಯೆ 303ಕ್ಕೆ ಏರಿತು. 2024ರಲ್ಲಿ ಮೂರನೇ ಸತತ ಗೆಲುವಿನೊಂದಿಗೆ ಮೋದಿ ಎನ್‌ಡಿಎ ಸರ್ಕಾರವನ್ನು ಮುನ್ನಡೆಸಿದರು. 1984ರ ಕಾಂಗ್ರೆಸ್ ಅಲೆಯ ಬಳಿಕ ಸತತ ಎರಡು ಸಾರ್ವತ್ರಿಕ ಚುನಾವಣೆಗಳಲ್ಲಿ ಸ್ಪಷ್ಟ ಬಹುಮತ ಪಡೆದ ಏಕೈಕ ಪಕ್ಷ ಎಂಬ ಹೆಗ್ಗಳಿಕೆಯೂ ಬಿಜೆಪಿಗೆ ಸಂದಿತು.

ಚುನಾವಣೆ	ಬಿಜೆಪಿ ಸ್ಥಾನ	ಫಲಿತಾಂಶ	ಅವಧಿ
2014	282 ಸ್ಥಾನ	ಸ್ವತಂತ್ರ ಬಹುಮತ	ಮೊದಲ ಅವಧಿ
2019	303 ಸ್ಥಾನ	ಸ್ವತಂತ್ರ ಬಹುಮತ	ಎರಡನೇ ಅವಧಿ
2024	292 ಸ್ಥಾನ	ಎನ್ಡಿಎ ನೇತೃತ್ವ ಸತತ ಮೂರನೇ ಗೆಲುವು	ಮೂರನೇ ಅವಧಿ



ಜಾಗತಿಕ ವೇದಿಕೆಯಲ್ಲಿ ಭಾರತದ ಸ್ಥಾನ

ಈ ರಾಜಕೀಯ ಸ್ಥಿರತೆಯ ಹಿನ್ನೆಲೆಯಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ತನ್ನ ಛಾಪು ಮೂಡಿಸಿದೆ. ವಿಶ್ವದ ಪ್ರಮುಖ ಆರ್ಥಿಕತೆಗಳ ಸಾಲಿನಲ್ಲಿ ಭಾರತ ಸ್ಥಾನ ಪಡೆದಿದ್ದು, ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳಲ್ಲಿ ದೇಶದ ಪಾತ್ರ ಹೆಚ್ಚು ಪ್ರಭಾವಶಾಲಿಯಾಗಿ ಪರಿಗಣಿಸಲ್ಪಡುತ್ತಿದೆ. ಮೈಲುಗಲ್ಲಿನ ಸಂದರ್ಭದಲ್ಲಿ ಅಮೆರಿಕದ ಸೆನೆಟರ್‌ಗಳಿಂದ ಹಿಡಿದು ಜಾಗತಿಕ ಉದ್ಯಮ ನಾಯಕರವರೆಗೆ ಹಲವರಿಂದ ಬಂದ ಅಭಿನಂದನಾ ಸಂದೇಶಗಳು ಈ ಬದಲಾದ ಸ್ಥಾನಮಾನವನ್ನು ಸೂಚಿಸುತ್ತವೆ. ವಿರೋಧ ಪಕ್ಷಗಳು ಆಡಳಿತದ ಸಾಧನೆ–ವೈಫಲ್ಯಗಳ ಬಗ್ಗೆ ತಮ್ಮದೇ ವಿಭಿನ್ನ ಮೌಲ್ಯಮಾಪನ ಮುಂದಿಡುತ್ತವೆ.

ಜಾಗತಿಕ ನಾಯಕತ್ವ

ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ ದೇಶದ ಗಡಿಗಳನ್ನು ಮೀರಿ ಜಾಗತಿಕ ಮಟ್ಟದಲ್ಲಿಯೂ ಅಗ್ರಸ್ಥಾನದಲ್ಲಿದೆ. ಜಾಗತಿಕ ಸಮೀಕ್ಷಾ ಸಂಸ್ಥೆ ಮಾರ್ನಿಂಗ್ ಕನ್ಸಲ್ಟ್ ಪ್ರಕಟಿಸಿರುವ ಗ್ಲೋಬಲ್ ಲೀಡರ್ ಅಪ್ರೂವಲ್ ರೇಟಿಂಗ್ ಟ್ರ್ಯಾಕರ್ ಪ್ರಕಾರ, 2026ರ ಏಪ್ರಿಲ್ ವೇಳೆಗೆ ಪ್ರಧಾನಿ ಮೋದಿ ಅವರು ಶೇ.70 ಅನುಮೋದನೆ ಪಡೆದು ವಿಶ್ವದ ಪ್ರಮುಖ ನಾಯಕರ ಪೈಕಿ ಮೊದಲ ಸ್ಥಾನದಲ್ಲಿದ್ದಾರೆ. ಸಮೀಕ್ಷೆಯ ಪ್ರಕಾರ, ಮೋದಿ ಅವರ ಪರವಾಗಿ ಶೇ.70 ಜನರು ಅಭಿಪ್ರಾಯ ವ್ಯಕ್ತಪಡಿಸಿದ್ದರೆ, ಶೇ.24 ಜನರು ಅಸಮ್ಮತಿ ಸೂಚಿಸಿದ್ದಾರೆ. ಉಳಿದ ಶೇ.6 ಜನರು ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜೇ-ಮ್ಯೂಂಗ್ ಶೇ.63 ಅನುಮೋದನೆ ದರದೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ಜೆಕ್ ಗಣರಾಜ್ಯದ ಆಂಡ್ರೇಜ್ ಬಾಬಿಸ್ ಶೇ.55 ದರದೊಂದಿಗೆ ಮೂರನೇ ಸ್ಥಾನದಲ್ಲಿದ್ದರೆ, ಕೆನಡಾದ ಮಾರ್ಕ್ ಕಾರ್ನಿ ಶೇ.54 ಹಾಗೂ ಜಪಾನ್‌ನ ಸನಾಏ ತಕೈಚಿ ಶೇ.53 ಅನುಮೋದನೆ ದರದೊಂದಿಗೆ ನಂತರದ ಸ್ಥಾನಗಳನ್ನು ಪಡೆದಿದ್ದಾರೆ.



12 ವರ್ಷಗಳ ಮೋದಿ ಸರ್ಕಾರ

1 ಆರ್ಥಿಕ ಬೆಳವಣಿಗೆ

2025–26ರಲ್ಲಿ ಭಾರತದ ಜಿಡಿಪಿ 345 ಲಕ್ಷ ಕೋಟಿ ರೂ. ದಾಟುವ ನಿರೀಕ್ಷೆ.

2014ರಲ್ಲಿ 2 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿದ್ದ ಭಾರತ ಈಗ 4 ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತ ಸಾಗಿದ್ದು, ಮುಂದಿನ ಎರಡು ವರ್ಷಗಳಲ್ಲಿ 5 ಟ್ರಿಲಿಯನ್ ಡಾಲರ್ ಗುರಿ ಸಾಧಿಸುವ ವಿಶ್ವಾಸ ವ್ಯಕ್ತಪಡಿಸಲಾಗಿದೆ.

ವಿಶ್ವ ಬ್ಯಾಂಕ್ ಪ್ರಕಾರ ಜಾಗತಿಕ ಜಿಡಿಪಿ ಬೆಳವಣಿಗೆಗೆ ಎರಡನೇ ಅತಿದೊಡ್ಡ ಕೊಡುಗೆದಾರ ರಾಷ್ಟ್ರವಾಗಿ ಭಾರತ ಹೊರಹೊಮ್ಮಿದೆ.

2 ಫ್ರ್ಯಾಜೈಲ್ ಫೈವ್‌ನಿಂದ ವೇಗದ ಆರ್ಥಿಕತೆ

2013ರಲ್ಲಿ ಫ್ರ್ಯಾಜೈಲ್ ಫೈವ್ ರಾಷ್ಟ್ರಗಳ ಪಟ್ಟಿಯಲ್ಲಿದ್ದ ಭಾರತ ಇಂದು ಜಗತ್ತಿನ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿದೆ.

ಜಿಎಸ್‌ಟಿ, ಬ್ಯಾಂಕಿಂಗ್ ಸುಧಾರಣೆಗಳು ಮತ್ತು ಹಣದುಬ್ಬರ ನಿಯಂತ್ರಣವನ್ನು ಪ್ರಮುಖ ಕಾರಣಗಳಾಗಿ ಉಲ್ಲೇಖಿಸಲಾಗಿದೆ.

3 ತೆರಿಗೆದಾರರಿಗೆ ದೊಡ್ಡ ರಿಯಾಯಿತಿ

2014ರಲ್ಲಿ 2 ಲಕ್ಷ ರೂ.ವರೆಗೆ ಇದ್ದ ಆದಾಯ ತೆರಿಗೆ ವಿನಾಯಿತಿ ಮಿತಿ ಈಗ 12.75 ಲಕ್ಷ ರೂ.ಗೆ ಏರಿಕೆಯಾಗಿದೆ.

ತೆರಿಗೆ ಸ್ಲ್ಯಾಬ್ ಸರಳೀಕರಣದಿಂದ ಮಧ್ಯಮ ವರ್ಗಕ್ಕೆ ಹೆಚ್ಚಿನ ಲಾಭವಾಗಿದೆ.

ದೇಶೀಯ ಬಳಕೆ ಸುಮಾರು 2 ಲಕ್ಷ ಕೋಟಿ ರೂ.ಗೆ ಹೆಚ್ಚಳ ಕಂಡಿದೆ.

4 ಎಲೆಕ್ಟ್ರಾನಿಕ್ಸ್ ಕ್ರಾಂತಿ

- 25 ಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿ.
- ಎಲೆಕ್ಟ್ರಾನಿಕ್ಸ್ ಉತ್ಪಾದನೆ 6 ಪಟ್ಟು ಏರಿಕೆ.
- ಎಲೆಕ್ಟ್ರಾನಿಕ್ಸ್ ರಫ್ತು 8 ಪಟ್ಟು ಏರಿಕೆ.
- ಭಾರತ ಜಾಗತಿಕ ಉತ್ಪಾದನಾ ಕೇಂದ್ರವಾಗಿ ಬೆಳೆಯುತ್ತಿದೆ.
- ಪಿಎಲ್‌ಐ ಯೋಜನೆ ಕೈಗಾರಿಕಾ ಬೆಳವಣಿಗೆಗೆ ಪ್ರಮುಖ ಆಧಾರವಾಗಿದೆ.

5 ಮೊಬೈಲ್ ಉತ್ಪಾದನೆಯಲ್ಲಿ ಜಿಗಿತ

- ಮೊಬೈಲ್ ಉತ್ಪಾದನೆ 28 ಪಟ್ಟು ಹೆಚ್ಚಳ.
- ಮೊಬೈಲ್ ರಫ್ತು 163 ಪಟ್ಟು ಏರಿಕೆ.

6 ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ಹೂಡಿಕೆ

- ಸೆಮಿಕಾನ್ ಇಂಡಿಯಾ ಯೋಜನೆಯಡಿ 1.64 ಲಕ್ಷ ಕೋಟಿ ರೂ. ಹೂಡಿಕೆ.
- 6 ರಾಜ್ಯಗಳಲ್ಲಿ 12 ಸೆಮಿಕಂಡಕ್ಟರ್ ಯೋಜನೆಗಳಿಗೆ ಅನುಮೋದನೆ.
- ಭಾರತವನ್ನು ಜಾಗತಿಕ ಚಿಪ್ ಉತ್ಪಾದನಾ ರಾಷ್ಟ್ರವನ್ನಾಗಿಸುವ ಗುರಿ.

7 ಮುಕ್ತ ವ್ಯಾಪಾರ ಒಪ್ಪಂದಗಳು

- 38 ರಾಷ್ಟ್ರಗಳೊಂದಿಗೆ 9 ಪ್ರಮುಖ ಎಫ್‌ಟಿಎಗಳು.
- 2024–26ರ ಅವಧಿಯಲ್ಲಿ 6 ಹೊಸ ಮುಕ್ತ ವ್ಯಾಪಾರ ಒಪ್ಪಂದಗಳಿಗೆ ಸಹಿ.

ಬಡವರ ಕಲ್ಯಾಣ

25 ಕೋಟಿ ಜನ ಬಡತನದಿಂದ ಹೊರಗೆ

81 ಕೋಟಿಗೆ ಉಚಿತ ಆಹಾರ!

04 ಕೋಟಿ+ ಪಕ್ಕಾ ಮನೆ ನಿರ್ಮಾಣ (ಪಿಎಂ ಆವಾಸ್)

12 ಕೋಟಿ+ ಶೌಚಾಲಯ ನಿರ್ಮಾಣ

16 ಕೋಟಿ+ ಗ್ರಾಮೀಣ ಕುಟುಂಬಗಳಿಗೆ ನಳದ ನೀರಿನ ಸಂಪರ್ಕ

ಹಣಕಾಸು ಕ್ರಾಂತಿ

58 ಕೋಟಿ+ ಜನಧನ್ ಖಾತೆಗಳು

51 ಲಕ್ಷ ಕೋಟಿ ರೂ. - ಜಾಮ್ (ಜನಧನ್-ಆಧಾರ್-ಮೊಬೈಲ್) ಮೂಲಕ ನೇರ ಹಣ ವರ್ಗಾವಣೆ

25 ದಶಲಕ್ಷ ರೂ. ಡಿಬಿಟಿ ಫಲಾನುಭವಿಗಳ ವ್ಯಾಪ್ತಿ



ರೈತರ ಬೆಂಬಲ

- 4 ಲಕ್ಷ ಕೋಟಿ ರೂ. – ಪಿಎಂ-ಕಿಸಾನ್ ಯೋಜನೆಯಡಿ ರೈತರ ಖಾತೆಗಳಿಗೆ ನೇರ ವರ್ಗಾವಣೆ
- ಎಂಎಸ್‌ಪಿ ಏರಿಕೆ – ಬೆಳೆಗಳಿಗೆ ಹೆಚ್ಚಿನ ಕನಿಷ್ಠ ಬೆಂಬಲ ಬೆಲೆ
- ಬೀಜದಿಂದ ಮಾರುಕಟ್ಟೆವರೆಗೆ – ರೈತರಿಗೆ ಸಮಗ್ರ ನೆರವು

ಉದ್ಯಮಶೀಲ ಭಾರತ

57 ಕೋಟಿ+ ಮುದ್ರಾ ಯೋಜನೆಯ ಸಾಲಗಳು

17,000 ಕೋಟಿ ರೂ. ಪಿಎಂ ಸ್ವನಿಧಿ ಯೋಜನೆಯಡಿ ಬೀದಿಬದಿ ವ್ಯಾಪಾರಿಗಳಿಗೆ ಸಾಲ

15,000 ಕೋಟಿ ರೂ. ಸ್ಟ್ಯಾಂಡ್‌ಅಪ್ ಇಂಡಿಯಾ ಯೋಜನೆಯಡಿ ಎಸ್‌ಸಿ/ಎಸ್‌ಟಿ ಉದ್ಯಮಿಗಳಿಗೆ ನೆರವು

ಮಹಿಳಾ ಸಬಲೀಕರಣ

75% ಪಿಎಂ ಆವಾಸ್ ಮನೆಗಳ ಮಾಲೀಕತ್ವ ಮಹಿಳೆಯರ ಹೆಸರಿನಲ್ಲಿ

43 % ಪಿಎಂ ಸ್ವನಿಧಿ ಫಲಾನುಭವಿಗಳಲ್ಲಿ ಮಹಿಳೆಯರು

ಉಜ್ವಲಾ ಯೋಜನೆ – 10 ಕೋಟಿಗೂ ಅಧಿಕ ಉಚಿತ ಎಲ್‌ಪಿಜಿ ಸಂಪರ್ಕಗಳು

ಆರೋಗ್ಯ ಭಾರತ

60 ಕೋಟಿ+ - ಆಯುಷ್ಮಾನ್ ಭಾರತ್ ಫಲಾನುಭವಿಗಳು

5 ಲಕ್ಷ ರೂ. ಒಂದು ಕುಟುಂಬಕ್ಕೆ ಆರೋಗ್ಯ ವಿಮೆ

3 ಪಟ್ಟು, ಏಮ್ಸ್ ಸಂಸ್ಥೆಗಳ ಸಂಖ್ಯೆ ಹೆಚ್ಚಳ, ವೈದ್ಯಕೀಯ ಶಿಕ್ಷಣ - ಹೊಸ ವೈದ್ಯಕೀಯ ಕಾಲೇಜುಗಳು ಏರಿಕೆ

8 ದಾಖಲೆಮಟ್ಟದ ರಫ್ತು

- 2025–26ರಲ್ಲಿ ಒಟ್ಟು ರಫ್ತು79 ಲಕ್ಷ ಕೋಟಿ ರೂ.ಗೆ ತಲುಪಿದೆ.
- 2014ರ 45 ಲಕ್ಷ ಕೋಟಿ ರೂ.ನಿಂದ ಸುಮಾರು ಶೇ.75 ಏರಿಕೆ.
- ರಫ್ತು ವೃದ್ಧಿಯಿಂದ ಕೈಗಾರಿಕಾ ಬೆಳವಣಿಗೆಗೆ ಉತ್ತೇಜನ ದೊರೆತಿದೆ.

9 ವಿದೇಶಿ ವಿನಿಮಯ ಸಂಗ್ರಹ

- 67 ಲಕ್ಷ ಕೋಟಿ ರೂ. ವಿದೇಶಿ ವಿನಿಮಯ ಮೀಸಲು.
- 11 ತಿಂಗಳ ಆಮದು ವೆಚ್ಚವನ್ನು ನಿರ್ವಹಿಸುವ ಸಾಮರ್ಥ್ಯ.
- ಬಾಹ್ಯ ಸಾಲದ ಶೇ.94ಕ್ಕೆ ಸಮಾನ ಭದ್ರತೆ.



10 ಡಿಜಿಟಲ್ ಇಂಡಿಯಾ

- ತಂತ್ರಜ್ಞಾನವನ್ನು ಆಡಳಿತದ ಕೇಂದ್ರಬಿಂದುವಾಗಿಸಲಾಗಿದೆ.
- ಪಾರದರ್ಶಕತೆ ಹೆಚ್ಚಳ, ಭ್ರಷ್ಟಾಚಾರದಲ್ಲಿ ಕಡಿತ.
- ಸರ್ಕಾರಿ ಯೋಜನೆಗಳ ಲಾಭ ನೇರವಾಗಿ ಫಲಾನುಭವಿಗಳಿಗೆ ತಲುಪುತ್ತಿದೆ.

11 ಸಾರ್ವಜನಿಕ ಬ್ಯಾಂಕುಗಳ ಪುನರುತ್ಥಾನ

- 2025–26ರಲ್ಲಿ ಸಾರ್ವಜನಿಕ ಬ್ಯಾಂಕ್‌ಗಳ ದಾಖಲೆಯ 2 ಲಕ್ಷ ಕೋಟಿ ರೂ. ಲಾಭ.
- ಸ್ಥೂಲ ಎನ್‌ಪಿಎ ಪ್ರಮಾಣ 2014ರ ಶೇ.4.4ರಿಂದ ಶೇ.1.93ಕ್ಕೆ ಇಳಿಕೆ.

12 ಭವಿಷ್ಯದ ಭಾರತಕ್ಕೆ ಬುನಾದಿ

ರಸ್ತೆ, ಸೇತುವೆ, ಸಂಸತ್ ಭವನ, ಭಾರತ ಮಂಟಪಂ, ಯಶೋಭೂಮಿ ಮೊದಲಾದ ಯೋಜನೆಗಳು ರಾಷ್ಟ್ರನಿರ್ಮಾಣದ ಸಂಕೇತಗಳಾಗಿ ಬಿಂಬಿತವಾಗಿವೆ. ಭೂಮಿ, ಜಲ ಮತ್ತು ವಾಯು ಸಂಪರ್ಕದಲ್ಲಿ ವೇಗದ ವಿಸ್ತರಣೆ.


ಕಿರುಸುದ್ದಿ

ಜೂ.14ರಂದು ಸನ್ಮಾನ, ಯಕ್ಷಗಾನ ಪ್ರದರ್ಶನ

• **ಮಂಗಳೂರು:** ಕಲಾ ಸಂಗಮ ಚಾರಿಟೆಬಲ್ ಟ್ರಸ್ಟ್ ಮತ್ತು ಕನ್ನಡ ಹಾಗೂ ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ 15ನೇ ವಾರ್ಷಿಕೋತ್ಸವ ಸಂಭ್ರಮಾಚರಣೆಯ ಪ್ರಯುಕ್ತ ಮಂಗಳಾದೇವಿ ದೇವಸ್ಥಾನದಲ್ಲಿ ಸನ್ಮಾನ ಹಾಗೂ ಯಕ್ಷಗಾನ ಪ್ರದರ್ಶನ ಜೂ.14ರಂದು ಸಂಜೆ 4.30ರಿಂದ ರಾತ್ರಿ 9 ಗಂಟೆಯವರೆಗೆ ಜರಗಲಿದೆ. ಸಭಾ ಕಾರ್ಯಕ್ರಮವನ್ನು ಕಸಾಪ ಮಾಜಿ ಅಧ್ಯಕ್ಷ ಡಾ. ಹರಿಕೃಷ್ಣ ಪುನರೂರು ಉದ್ಘಾಟಿಸಲಿದ್ದು, ಮಾಜಿ ಶಾಸಕ ಮೊಯ್ದೀನ್ ಬಾವಾ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಹೃದ್ರೋಗ ತಜ್ಞ ಡಾ. ಪದ್ಮನಾಭ ಕಾಮತ್, ಉದ್ಯಮಿ ದಿನೇಶ್ ಪೈ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಹಿರಿಯ ಲೆಕ್ಕಪರಿಶೋಧಕ ಸಿಎ ಎಸ್.ಎಸ್ .ನಾಯಕ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಟ್ರಸ್ಟ್‌ನ ಅಧ್ಯಕ್ಷ ಕೇಶವ ಹೆಗಡೆ ಮಂಗಳೂರು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಯಕ್ಷಗಾನದ ತೆಂಕುತಿಟ್ಟಿನ ಹಿರಿಯ ಕಲಾವಿದ ಶಿವರಾಮ ಜೋಗಿ ಬಿ.ಸಿ.ರೋಡ್ ಅವರನ್ನು ಈ ವೇಳೆ ಸನ್ಮಾನಿಸಲಾಗುವುದು. ಬಳಿಕ ಬಡಗುತಿಟ್ಟಿನ ಯಕ್ಷಗಾನ ಬಯಲಾಟ 'ಅಂಗದ ಸಂಧಾನ' ಪ್ರದರ್ಶನಗೊಳ್ಳಲಿದೆ ಎಂದರು. ಪ್ರಮುಖರಾದ ಡಾ. ಹರಿಕೃಷ್ಣ ಪುನರೂರು, ಸುಧಾಕರ ರಾವ್ ಪೇಜಾವರ, ರವಿ ಅಲೆವೂರಾಯ, ಚರಣದಾಸ ಕುಮಾರ, ಪ್ರಶಾಂತ ಶೆಟ್ಟಿ ಉಪಸ್ಥಿತರಿದ್ದರು.

ಎಸ್ಎಎಸ್ಎಸ್ ರಾಷ್ಟ್ರೀಯ ಅಧ್ಯಕ್ಷರಾಗಿ ಮುರುಗನ್ ಸೆಲ್ವಮ್‌ಜೀ

• **ಮಂಗಳೂರು:** ಶಬರಿಮಲೆ ಅಯ್ಯಪ್ಪ ಸೇವಾ ಸಮಾಜಂ (ಎಸ್ಎಎಸ್ಎಸ್) ಭಾರತ್‌ನ ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ಯುವ ನೇತಾರ ಹಾಗೂ ಮುಂಬೈಯ ಹಿಂದು ನಾಯಕ ಮುರುಗನ್ ಸೆಲ್ವಮ್‌ಜೀ (ಕರಾಟೆ ಮುರುಗನ್) ಆಯ್ಕೆಯಾಗಿದ್ದಾರೆ. ಬಾಲಿವುಡ್‌ನ ಮಾಜಿ ಆ್ಯಕ್ಷನ್ ಹೀರೋ ಆಗಿರುವ ಇವರು ಮಹಾರಾಷ್ಟ್ರದ ಸಿಯಾನ್ ಕೋಳಿವಾಡ ಕ್ಷೇತ್ರದ ಮಾಜಿ ಶಾಸಕ ಕ್ಯಾ. ತಮಿಳ್ ಸೆಲ್ವನ್ ಅವರ ಸಹೋದರರಾಗಿದ್ದಾರೆ.



ಐದು ಜಿಲ್ಲೆಗಳ ಜನರಿಂದ ಬೆಂಗಳೂರು ಚಲೋ: ಕೊಡಗು ಜಿಲ್ಲಾ ಬಿಜೆಪಿ

• **ಮಡಿಕೇರಿ:** ಕೊಡಗು ಸೇರಿದಂತೆ ರಾಜ್ಯದ 5 ಜಿಲ್ಲೆಗಳಲ್ಲಿ ಕಾಡಾನೆ ಹಾವಳಿ ಮಿತಿ ಮೀರಿದ್ದು, ಇದನ್ನು ನಿಯಂತ್ರಿಸುವಲ್ಲಿ ವಿಫಲವಾಗಿರುವ ರಾಜ್ಯ ಸರಕಾರದ ವಿರುದ್ಧ ಈ ಐದು ಜಿಲ್ಲೆಗಳ ಜನರನ್ನು ಒಗ್ಗೂಡಿಸಿ ಬೆಂಗಳೂರು ಚಲೋ ಮತ್ತು ವಿಧಾನಸೌಧಕ್ಕೆ ಮುತ್ತಿಗೆ ಹೋರಾಟ ರೂಪಿಸಲಾಗುವುದು ಎಂದು ಕೊಡಗು ಜಿಲ್ಲಾ ಬಿಜೆಪಿ ಎಚ್ಚರಿಕೆ ನೀಡಿದೆ. ನಗರದಲ್ಲಿ ಬುಧವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ ಅವರು, ರಾಜ್ಯದ ಕೊಡಗು, ಮೈಸೂರು, ಚಾಮರಾಜನಗರ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದೆ. ವನ್ಯಜೀವಿಗಳ ನಿರಂತರ ದಾಳಿಯಿಂದ ಅಮಾಯಕ ಜೀವಗಳು ಬಲಿಯಾಗುತ್ತಿವೆ. ಇದರಿಂದ ಆತಂಕಗೊಂಡಿರುವ ರೈತರು ಹಾಗೂ ಕಾರ್ಮಿಕರು ತೋಟಗಳಿಗೆ ತೆರಳಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸಮಸ್ಯೆಯನ್ನು ರಾಜ್ಯ ಸರಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದರು. ವಿಧಾನಸಭೆಯ ಮಾಜಿ ಅಧ್ಯಕ್ಷ ಕೆ.ಜಿ.ಬೋಪಯ್ಯ, ಕೊಡಗು ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಸುದ್ದಿಗೋಷ್ಠಿಯಲ್ಲಿ ರಾಜ್ಯ ಬಿಜೆಪಿ ಸದಸ್ಯ ರಾಬಿನ್ ದೇವಯ್ಯ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ವಿ.ಕೆ.ಲೋಕೇಶ್ ಹಾಗೂ ಮಹೇಶ್ ಜೈನಿ ಉಪಸ್ಥಿತರಿದ್ದರು.

ಆಝಾನ್ ಕರೆ ಕೊಡುತ್ತಿದ್ದ ವೇಳೆ ಧಾರ್ಮಿಕ ಗುರು ಕುಸಿದು ಬಿದ್ದು ಮೃತ್ಯು

• **ಬಂಟ್ವಾಳ:** ತಾಲೂಕಿನ ಮಂಚಿ ಗ್ರಾಮದ ಕುಕ್ಕಾಜೆ-ಪುಚ್ಚಕೆರೆ ನಿವಾಸಿ ಧಾರ್ಮಿಕ ಗುರು ಅಬ್ದುಲ್ ಲತೀಫ್ ಮದನಿ (50) ಅವರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಮಸೀದಿಯಲ್ಲಿ ಸಂಜೆಯ ಆಝಾನ್ ಕರೆ ಕೊಡುತ್ತಿದ್ದ ವೇಳೆ ಹೃದಯಾಘಾತಕ್ಕೊಳಗಾಗಿ ಕುಸಿದು ಬಿದ್ದು ಮೃತಪಟ್ಟ ಘಟನೆ ಸಂಭವಿಸಿದೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಮಸೀದಿಯಲ್ಲಿ ಮುಅಝಿನ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಅವರು ಮಂಗಳವಾರ ಸಂಜೆ 4 ಗಂಟೆಗೆ ಆಝಾನ್ (ಬಾಂಗ್) ಕರೆಯುತ್ತಿದ್ದ ವೇಳೆ ಅರ್ಧದಲ್ಲೇ ಕುಸಿದು ಬಿದ್ದರೆನ್ನಲಾಗಿದೆ. ತಕ್ಷಣ ಅವರನ್ನು ಸ್ಥಳೀಯರು ಉಪಚರಿಸಿ ಆಸ್ಪತ್ರೆಗೆ ಸಾಗಿಸಿದರಾದರೂ ಅದಾಗಲೇ ಅವರು ಮೃತಪಟ್ಟಿದ್ದಾರೆನ್ನಲಾಗಿದೆ. ಮಂಗಳವಾರ ರಾತ್ರಿ ವೇಳೆಗೆ ಅವರ ಪಾರ್ಥಿವ ಶರೀರವನ್ನು ಅವರ ಹುಟ್ಟೂರಾದ ಮಂಚಿ-ಪುಚ್ಚಕೆರೆಗೆ ತರಲಾಗಿದೆ ಎಂದು ತಿಳಿದು ಬಂದಿದೆ. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ.





ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಅತ್ತೂರು ಕೊಡೆತ್ತೂರು ಮಾಗಣೆಯ ಭಕ್ತರಿಂದ ಬುಧವಾರ ಲೋಕಕಲ್ಯಾಣಾರ್ಥವಾಗಿ ಮತ್ತು ಮಾಗಣೆಯ ಸಮಸ್ತರ ಸುಭಿಕ್ಷೆಗಾಗಿ ಸೀಯಾಳಾಭಿಷೇಕ ನಡೆಯಿತು.

ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಹೇಳಿಕೆ

ಗೃಹಮಂತ್ರಿಗೆ ಸಿಎಂ ಬುದ್ಧಿ ಹೇಳಲಿ

• **ಮಂಗಳೂರು:** ರಾಜ್ಯದ ಗೃಹ ಮಂತ್ರಿಗೆ ಮುಖ್ಯಮಂತ್ರಿ ಬುದ್ಧಿ ಹೇಳಲಿ ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಹೇಳಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತದ ಆರಂಭ ದಿನದಿಂದಲೂ ಹಿಂದೂ ವಿರೋಧಿ ನೀತಿಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದಂತಹ ರಾಷ್ಟ್ರಭಕ್ತ ಸಂಘಟನೆಯನ್ನು ದೂರುವುದನ್ನೇ ಕಾಂಗ್ರೆಸ್‌ನ ಕೆಲವು ನಾಯಕರು ರೂಢಿ ಮಾಡಿದ್ದಾರೆ. ಸರ್ಕಾರದ ಮುಖ್ಯಸ್ಥ ಬದಲಾದರೂ ಜಾಯಮಾನ ಬದಲಾಗಿಲ್ಲ. ಆರ್.ಎಸ್.ಎಸ್. ಬಗ್ಗೆ ಗಂಧಗಾಳಿಯೂ ಗೊತ್ತಿಲ್ಲದ ರಾಜಕಾರಣಿ ಪ್ರಿಯಾಂಕ ಖರ್ಗೆ ಸಂಘದ ನೋಂದಣಿ ಬಗ್ಗೆ ಮಾತನಾಡುತ್ತಿದ್ದಾರೆ. ಸಂಘವು ರಾಷ್ಟ್ರೀಯ ಸಂಘಟನೆ ಮತ್ತು ಜಗತ್ತಿನ ವಿವಿಧ ದೇಶಗಳಲ್ಲಿಯೂ ಸಂಘದ ಶಾಖೆಗಳಿವೆ. ವಿಶ್ವದ ಯಾವುದೇ ರಾಷ್ಟ್ರ ನೊಂದಾವಣೆ ಕೇಳಿಲ್ಲ. ಕರ್ನಾಟಕದ ಗೃಹಮಂತ್ರಿ ಇದನ್ನು ತಿಳಿದುಕೊಳ್ಳಬೇಕು. 40ಕ್ಕಿಂತಲೂ ಹೆಚ್ಚಿನ ರಾಷ್ಟ್ರೀಯ ಮಟ್ಟದ ಉಪ ಸಂಘಟನೆಗಳು ಸಂಘದ ಅಡಿಯಲ್ಲಿ ವಿವಿಧ ಕಾರ್ಯಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿಕೊಂಡು ಬಂದಿದೆ. ಇಂತಹ ಮಹಾನ್ ಸಂಘಟನೆಯ ಕಾರ್ಯದ ಬಗ್ಗೆ ತಡವಾಗಿಯಾದರೂ ನೆಹರೂ ಅವರ ಅರಿವಿಗೆ ಬಂದಿತ್ತು. ಎಂದರು. ನೂರು ವರುಷ ಇತಿಹಾಸ ಇರುವ ಸಂಘವು ಕೇವಲ ಹಿಂದು ಧರ್ಮದ ರಕ್ಷಣೆಯ ಕೆಲಸ ಮಾತ್ರ ಮಾಡಿಲ್ಲ, ಭಾರತ, ಚೀನಾ ಯುದ್ಧದ ಸಂದರ್ಭದಲ್ಲಿ ಸ್ವಯಂ ಸೇವಕರಾಗಿ ದುಡಿದಿದ್ದಾರೆ. ದೇಶದ ವಿವಿಧ ಕಡೆ ಪ್ರಾಕೃತಿಕ ವಿಕೋಪ ಆದ ಸಮಯದಲ್ಲಿ ಧರ್ಮಾತೀತವಾಗಿ ಸೇವೆ ಸಲ್ಲಿಸಿದೆ. ಅಸ್ಪೃಶ್ಯತೆ ವಿರುದ್ಧ, ಬುಡಕಟ್ಟು ಜನಾಂಗದ ಕಲ್ಯಾಣಕ್ಕಾಗಿ ವನವಾಸಿ ಸಮುದಾಯದ ಉದ್ಧಾರಕ್ಕಾಗಿ ಕಾರ್ಯ ಮಾಡಿದೆ. ಇಂತಹ ಸಂಘಟನೆಯ ಬಗ್ಗೆ ಮಾತನಾಡುವ ಪ್ರಿಯಾಂಕ ಖರ್ಗೆ ಅವರ ಮಾನಸಿಕತೆ ಸರಿಯಿಲ್ಲ ಎಂದು ಕುಂಪಲ ಹೇಳಿದ್ದಾರೆ.



ಜೂ.14ರಂದು ಉಡುಪಿಯಲ್ಲಿ ಆರಂಭ: ಪುತ್ತಿಗೆ ಶ್ರೀ ಘೋಷಣೆ

ಹಸ್ತಪ್ರತಿಗಳ ಲಿಪ್ಯಂತರ ಕಾರ್ಯ

• **ಉಡುಪಿ:** ಭಾರತ ಸರಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ ಜ್ಞಾನ ಭಾರತಂ ಮಿಶನ್‌ನ ಯೋಜನೆಯ ಹಿನ್ನೆಲೆಯಲ್ಲಿ ಈಗಾಗಲೇ ದೇಶದಾದ್ಯಂತ 1 ಕೋಟಿಗೂ ಅಧಿಕ ಸಂಖ್ಯೆಯ ಹಸ್ತಪ್ರತಿಗಳನ್ನು ಸರ್ವೇ ಮಾಡಲಾಗಿದೆ. ವಿವಿಧ ಭಾಷೆಗಳಲ್ಲಿರುವ ವಿವಿಧ ವಿಷಯಗಳ ಹಸ್ತಪ್ರತಿಗಳ ಲಿಪ್ಯಂತರ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಭಾರತ ಸರಕಾರದ ಅಧೀನದಲ್ಲಿರುವ ರಾಷ್ಟ್ರದ ಅತ್ಯುನ್ನತ ಸಂಸ್ಥೆಯಾದ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ಹೊಸದಿಲ್ಲಿ ಮತ್ತು ಕೇಂದ್ರೀಯ ಆಯುರ್ವೇದೀಯ ವಿಜ್ಞಾನ ಅನುಸಂಧಾನ ಪರಿಷತ್, ಹೊಸದಿಲ್ಲಿ ಇವರ ಮಾರ್ಗದರ್ಶನ ಹಾಗೂ ಆರ್ಥಿಕ ಸಹಭಾಗಿತ್ವದಲ್ಲಿ ಶ್ರೀ ಪುತ್ತಿಗೆ ಮಠಾಧೀಶರಾದ ಪರಮಪೂಜ್ಯ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರ ಹಾಗೂ ಕಿರಿಯ ಪಟ್ಟದ ಪರಮಪೂಜ್ಯ ಶ್ರೀ ಸುಶೀಂದ್ರತೀರ್ಥ ಶ್ರೀಪಾದರ ಅನುಗ್ರಹದಿಂದ ಕರಾವಳಿ ಕರ್ನಾಟಕದ ಪ್ರದೇಶದಲ್ಲಿ ದೊರೆಯುವ ತಿಗಳಾರಿ ಲಿಪಿ ಮತ್ತು ಮೋಡಿ ಕನ್ನಡ ಲಿಪಿಯಲ್ಲಿರುವ ಆಯುರ್ವೇದ ಹಸ್ತಪ್ರತಿಗಳ ಲಿಪ್ಯಂತರ ಕಲಿಕಾ ಕಾರ್ಯಾಗಾರವನ್ನು Transliteration Capacity Building Workshop on Manuscripts of Ayurved ಜೂನ್ 14 ರಿಂದ 27 ರ ವರೆಗೆ ಉಡುಪಿಯ ಗೀತಾ ಮಂದಿರದಲ್ಲಿರುವ ಶ್ರೀ ಪುತ್ತಿಗೆ ನೃಸಿಂಹ ಸಭಾಭವನದಲ್ಲಿ ಆಯೋಜಿಸಲಾಗಿದೆ.



ಜೂನ್ 14 ರಂದು ಬೆಳಗ್ಗೆ 10 ನಡೆಯುವ ಸಮಾರಂಭವನ್ನು ಭಾರತ ಸರಕಾರದ ಆಯುಷ್ ಸಚಿವಾಲಯದ ಕೇಂದ್ರೀಯ ಆಯುರ್ವೇದ ವಿಜ್ಞಾನ ಸಂಶೋಧನಾ ಮಂಡಳಿಯ ಮಹಾನಿರ್ದೇಶಕರಾದ ಪ್ರೊ. ವೈದ್ಯ ರಬಿನಾರಾಯಣ ಆಚಾರ್ಯ ಉದ್ಘಾಟಿಸುವರು. ತೆಲಂಗಾಣದ ಹೈದ್ರಾಬಾದ್‌ನಲ್ಲಿ ಇರುವ ರಾಷ್ಟ್ರೀಯ ಭಾರತೀಯ ವೈದ್ಯಕೀಯ ಪರಂಪರೆ ಸಂಸ್ಥೆಯ ಸಹಾಯಕ ನಿರ್ದೇಶಕರಾದ ಡಾ. ಜಿ. ಪಿ. ಪ್ರಸಾದ್, ನಿಟ್ಟೆ ವಿಶ್ವವಿದ್ಯಾಲಯದ ಐಕೆಎಸ್ ಕೇಂದ್ರದ ನಿರ್ದೇಶಕರಾದ ಡಾ ಸುಧೀರ್ ರಾಜ್ ಕೆ. ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಶ್ರೀ ಪುತ್ತಿಗೆ ಮಠದ ಆಡಳಿತಾಧಿಕಾರಿಗಳು ಹಾಗೂ ದಿವಾನರೂ ಆದ ನಾಗರಾಜ ಆಚಾರ್ಯರ ಎಂ. ಇವರ ಅಧ್ಯಕ್ಷತೆಯಲ್ಲಿ ನಡೆಯುವ ಈ ಸಮಾರಂಭದಲ್ಲಿ ಕೇಂದ್ರೀಯ ಆಯುರ್ವೇದೀಯ ಅನುಸಂಧಾನ ಸಂಸ್ಥಾನ, ಬೆಂಗಳೂರು ವಿಭಾಗ ಇದರ ಸಹಾಯಕ ನಿರ್ದೇಶಕರಾದ ಡಾ.ಮಹೇಶ್ವರ ಟಿ, ರಾಜಸ್ಥಾನದ ಎಂ ಎಸ್ ಪ್ರಾದೇಶಿಕ ಆಯುರ್ವೇದ ಸಂಶೋಧನಾ ಸಂಸ್ಥೆಯ ಸಂಶೋಧನಾ ಅಧಿಕಾರಿ ಡಾ. ವಿನೋದ್ ಕುಮಾರ್ ಲಾವಣಿಯಾ, ಹೊಸದಿಲ್ಲಿಯ ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ ಭಾಷಾ ವಿದ್ವಾಂಸರಾದ ಡಾ. ಕೀರ್ತಿಕಾಂತ್ ಶರ್ಮಾ, ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಡಾ .ಆರ್. ಎಲ್. ನಾರಾಯಣ ಸಿಂಹ, ಡಾ. ದಿಲೀಪ್ ಕುಮಾರ್ ಕಾರ್ ಹಾಗೂ ಉದ್ಯಾವರದ ಎಸ್‌ಡಿಎಂ ಆಯುರ್ವೇದ ಮಹಾ ವಿದ್ಯಾಲಯದ ಉಪನ್ಯಾಸಕರಾದ ಡಾ. ಮಹಾಲಕ್ಷ್ಮಿ ಎಂ. ಎಸ್., ಡಾ. ದೀಕ್ಷಿತಾ ಹೆಬ್ಬಾರ್ , ಡಾ. ಸುದರ್ಶನ್ ಹಾಗೂ ಶ್ರೀ ಪುತ್ತಿಗೆ ವಿದ್ಯಾಪೀಠದ ವಿದ್ವಾಂಸರಾದ ಡಾ. ಸುನಿಲ್ ಆಚಾರ್ಯ, ಸುಗುಣ ಮಾಲಾ ಪತ್ರಿಕೆಯ ಸಂಪಾದಕರಾದ ವಿದ್ವಾನ್ ಮಹಿತೋಷ ಆಚಾರ್ಯ , ಉಡುಪಿಯ ಪ್ರಾಚ್ಯ ಸಂಚಯ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ. ಎಸ್. ಎ. ಕೃಷ್ಣಯ್ಯ ಮುಂತಾದ ಪ್ರಸಿದ್ಧ ವಿದ್ವಾಂಸರು ಮಾರ್ಗದರ್ಶನ ನೀಡಲು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವರು.

ಈ ಅತ್ಯಪೂರ್ವವಾದ ಕಾರ್ಯಾಗಾರದಲ್ಲಿ ಸಂಶೋಧಕ ವಿದ್ವಾಂಸರು ಭಾಗವಹಿಸಿ ಕಾರ್ಯಕ್ರಮ ವನ್ನು ಯಶಸ್ವಿಗೊಳಿಸಲು ಈ ಮೂಲಕ ಮನವಿಯನ್ನು ಮಾಡಲಾಗಿದೆ.



36 ಅಭ್ಯರ್ಥಿಗಳಿಗೆ ಮಾತ್ರ..

ಕಾರ್ಯಾಗಾರ ಒಟ್ಟು ಆಯುರ್ವೇದ ಹಾಗೂ ಸಂಸ್ಕೃತ ದ 36 ಅಭ್ಯರ್ಥಿಗಳಿಗೆ ಮಾತ್ರ ಅವಕಾಶವಿದ್ದು ಈಗಾಗಲೇ 30 ಆಯುರ್ವೇದ ಹಾಗೂ ಸಂಸ್ಕೃತ ದ ವಿದ್ಯಾರ್ಥಿ ಗಳು ನೊಂದಣಿ ಆಗಿದ್ದಾರೆ. ವಸತಿ ಊಟೋಪಚಾರದ ಎಲ್ಲಾ ವ್ಯವಸ್ಥೆಗಳೂ ಉಚಿತವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ...

ಡಾ. ಬಿ. ಗೋಪಾಲಾಚಾರ್ ಉಡುಪಿ 7892991690 ಹಾಗೂ ವಿದ್ವಾನ್ ಶ್ರೀಧರ ಆಚಾರ್ಯ +91 94486 23954 ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ಮಾಲ್ದಾರೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಭೇಟಿ

ಕಾಡಾನೆ ಹಾವಳಿ ತಡೆಗೆ ಅಗತ್ಯ ಕ್ರಮದ ಭರವಸೆ



• **ಮಡಿಕೇರಿ:** ಕುಶಾಲನಗರ ವಲಯದ ಮಾಲ್ದಾರೆ ಅರಣ್ಯ ಗಡಿಭಾಗಕ್ಕೆ ಮಡಿಕೇರಿ ಅರಣ್ಯ ಉಪ ಸಂರಕ್ಷಣಾಧಿಕಾರಿ (ಡಿಸಿಎಫ್) ಅಭಿಷೇಕ್ ಅವರು ಭೇಟಿ ನೀಡಿ ಕಾಡಾನೆಗಳ ಸಂಚಾರ ಹಾಗೂ ಅವುಗಳು ತೋಟ ಪ್ರದೇಶಗಳಿಗೆ ದಾಟುವ ಸ್ಥಳಗಳನ್ನು ಪರಿಶೀಲಿಸಿದರು.

ಈ ವೇಳೆ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳೊಂದಿಗೆ ಸ್ಥಳದಲ್ಲೇ ಸಮಾಲೋಚನೆ ನಡೆಸಿದ ಅವರು, ಕಾಡಾನೆಗಳ ಚಲನವಲನ, ಜನವಸತಿ ಪ್ರದೇಶಗಳಿಗೆ ಆಗುತ್ತಿರುವ ತೊಂದರೆ ಹಾಗೂ ಹಾನಿ ತಡೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಿದರು.

ವಿಶೇಷವಾಗಿ ರಾತ್ರಿ ವೇಳೆಯಲ್ಲಿ ಕಾಡಾನೆಗಳು ತೋಟ ಮತ್ತು ಕೃಷಿ ಪ್ರದೇಶಗಳಿಗೆ ನುಗ್ಗದಂತೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಕಾಡಾನೆಗಳ ಸಂಚಾರ ಮಾರ್ಗಗಳನ್ನು ಗುರುತಿಸಿ, ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಜಾರಿಗೊಳಿಸುವುದರೊಂದಿಗೆ ಸ್ಥಳೀಯರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುವಂತೆ ಅವರು ತಿಳಿಸಿದರು.

ಅರಣ್ಯ ಇಲಾಖೆ ವತಿಯಿಂದ ಕಾಡಾನೆ-ಮಾನವ ಸಂಘರ್ಷ ಕಡಿಮೆಗೊಳಿಸಲು ನಿರಂತರ ನಿಗಾ ವಹಿಸಲಾಗುತ್ತಿದ್ದು, ಪರಿಸ್ಥಿತಿಗೆ ಅನುಗುಣವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ಇದೇ ಸಂದರ್ಭ ನುಡಿದರು. ಈ ಸಂದರ್ಭ ಕುಶಾಲನಗರ ವಲಯ ಅರಣ್ಯಾಧಿಕಾರಿ ರಕ್ಷಿತ್, ತಿತಿಮತಿ ವಲಯ ಅರಣ್ಯಾಧಿಕಾರಿ ಗಂಗಾಧರ್ ಹಾಗೂ ಸಿಬ್ಬಂದಿಗಳು ಹಾಜರಿದ್ದರು.

ಜೂ.12ರಿಂದ 14ರವರೆಗೆ ಕುಡ್ಲ ಪೆಲಕಾಯಿ ಪರ್ಬ

• **ಮಂಗಳೂರು:** ಹನಿ ಜೆನಿಕ್ಸ್ ವತಿಯಿಂದ ಜೂ. 12ರಿಂದ 14ರವರೆಗೆ ನಗರದ ಬೆಂದೂರ್‌ವೆಲ್‌ನ ಸೈಂಟ್ ಸೆಬಾಸ್ಟಿಯನ್ ಪ್ಲಾಟಿನಂ ಜುಬಿಲಿ ಆಡಿಟೋರಿಯಂನಲ್ಲಿ ಕುಡ್ಲ ಪೆಲಕಾಯಿ ಪರ್ಬ ಆಯೋಜಿಸಲಾಗಿದೆ.

ಬೆಳಗ್ಗೆ 9.30ರಿಂದ ರಾತ್ರಿ 8.30ರವರೆಗೆ ಈ ಪರ್ಬ ನಡೆಯಲಿದ್ದು, ಮಳಿಗೆಗಳ ಉದ್ಘಾಟನೆ ಜೂ. 12ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಪರ್ಬದ ಸಂಯೋಜಕ ಅಶ್ವಿನ್ ಸಿಕ್ವೇರಾ ಬರಿಮಾರ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹಲಸಿನಿಂದ ತಯಾರಿಸಿದ ವಿವಿಧ ಆಹಾರ ಪದಾರ್ಥಗಳು, ಮೌಲ್ಯವರ್ಧಿತ ಉತ್ಪನ್ನಗಳು ಹಾಗೂ ಹಲಸಿನ ಗಿಡಗಳಪ್ರದರ್ಶನ ಮತ್ತು ಮಾರಾಟ ನಡೆಯಲಿದೆ. ರೈತರ ಉತ್ಪನ್ನಗಳು, ಕಿರು ಉದ್ಯಮಿಗಳ ಉತ್ಪನ್ನಗಳು, ಕರಕುಶಲ ವಸ್ತುಗಳು ಹಾಗೂ ಪರಿಸರ ಸ್ನೇಹಿ ಉತ್ಪನ್ನಗಳ ವಿಶೇಷ ಮಳಿಗೆಗಳು ಇರಲಿವೆ. ದ.ಕ., ತುಮಕೂರು, ಚಿಕ್ಕಬಳ್ಳಾಪುರ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ರೈತರು ಭಾಗವಹಿಸಲಿದ್ದಾರೆ. ಕೊಡಗು ಜಿಲ್ಲೆಯ ಪ್ರಸಿದ್ಧ ಬೆಣ್ಣೆ ಹಣ್ಣು ಹಾಗೂ ರಾಮನಗರ ಜಿಲ್ಲೆಯ ರಾಸಾಯನಿಕ ಮುಕ್ತ ಮಾವಿನ ಹಣ್ಣುಗಳು ಗ್ರಾಹಕರಿಗೆ ಲಭ್ಯವಾಗಲಿವೆ. ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಬೆಳೆಯುವ ರಂಬುಟಾನ್, ಡ್ರ್ಯಾಗನ್ ಫ್ರೂಟ್, ಮ್ಯಾಂಗೋಸ್ಟೀನ್ ಸೇರಿದಂತೆ ವಿವಿಧ ಹಣ್ಣುಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ ಎಂದು ಅವರು ಹೇಳಿದರು.

ಕಳೆದ ವರ್ಷ 60 ಮಳಿಗೆಗಳಿದ್ದು, ಈ ವರ್ಷ 80 ಮಳಿಗೆಗಳು ಇರಲಿವೆ. ಮಕ್ಕಳಿಗಾಗಿ ಚಿತ್ರಕಲೆ, ಸ್ಪರ್ಧೆ ಹಾಗೂ ವಿವಿಧ ಮನರಂಜನಾ ಚಟುವಟಿಕೆಗಳನ್ನು ಆಯೋಜಿಸಲಾಗಿದೆ. ಸಾರ್ವಜನಿಕರಿಗೆ ವಿಶೇಷ ಸ್ಪರ್ಧೆ, ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮಗಳು ಇರಲಿವೆ. ಹಲಸಿನ ಲೈವ್ ಫುಡ್ ಕೌಂಟರ್ ಇರಲಿದೆ ಎಂದರು.

ಪ್ರಮುಖರಾದ ರಿಯಾನ್ ಮೊನಿಸ್, ಭಾಸ್ಕರ ರೈ ಕಟ್ಟ, ಜಾಕ್ಸನ್ ಸಲ್ಡಾನ, ಶೆಲ್ಡನ್ ಕ್ರಾಸ್ತಾ ಉಪಸ್ಥಿತರಿದ್ದರು.

ಬಿಲ್ಲವ ಸಮುದಾಯದ ವಿರುದ್ಧದ ಮಹಿಳೆಯಿಂದ ಅವಹೇಳನಕಾರಿ ಹೇಳಿಕೆ

ರಾಷ್ಟ್ರೀಯ ಬಿಲ್ಲವರ ಮಹಾಮಂಡಲ ಖಂಡನೆ

• **ಮಂಗಳೂರು:** ಬಿಲ್ಲವ ಸಮುದಾಯದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಮಹಿಳೆಯೊಬ್ಬರು ನೀಡಿರುವ ಅವಹೇಳನಕಾರಿ, ಮಾನಹಾನಿಕರ ಹಾಗೂ ದ್ವೇಷಭಾವನೆ ಹರಡುವ ಹೇಳಿಕೆಗಳನ್ನು ತೀವ್ರವಾಗಿ ಖಂಡಿಸುವುದಾಗಿ ರಾಷ್ಟ್ರೀಯ ಬಿಲ್ಲವರ ಮಹಾಮಂಡಲ ಹೇಳಿದೆ.

ಬ್ರಹ್ಮಶ್ರೀ ನಾರಾಯಣ ಗುರುಗಳ ತತ್ವಾದರ್ಶಗಳಿಂದ ಪ್ರೇರಿತವಾದ ಬಿಲ್ಲವ ಸಮುದಾಯವು ಸದಾ ಸಮಾನತೆ, ಸಾಮಾಜಿಕ ನ್ಯಾಯ, ಸಹೋದರತೆ, ಧಾರ್ಮಿಕ ಸಾಮರಸ್ಯ ಹಾಗೂ ರಾಷ್ಟ್ರೀಯ ಏಕತೆಯ ಮೌಲ್ಯಗಳನ್ನು ಎತ್ತಿಹಿಡಿದು ಬಂದಿದೆ. ಸಮಾಜದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಅಭಿವೃದ್ಧಿಯಲ್ಲಿ ಸಮುದಾಯವು ಮಹತ್ತರ ಕೊಡುಗೆ ನೀಡಿದ್ದು, ಎಲ್ಲ ವರ್ಗಗಳ ನಡುವೆ ಶಾಂತಿ ಮತ್ತು ಸೌಹಾರ್ದತೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಇತ್ತೀಚೆಗೆ ನೀಡಲಾದ ಈ ರೀತಿಯ ಹೇಳಿಕೆಗಳು ಕೇವಲ ಬಿಲ್ಲವ ಸಮುದಾಯಕ್ಕೆ ಮಾಡಿದ ಅವಮಾನವಷ್ಟೇ ಅಲ್ಲ, ಭಾರತದ ಸಂವಿಧಾನವು ಪ್ರತಿಪಾದಿಸುವ ಸಮಾನತೆ, ಮಾನವ ಘನತೆ, ಸಹೋದರತೆ ಹಾಗೂ ಪರಸ್ಪರ ಗೌರವದ ಮೌಲ್ಯಗಳ ಮೇಲಿನ ನೇರ ದಾಳಿಯಾಗಿದೆ. ಇಂತಹ ಹೇಳಿಕೆಗಳು ಸಮಾಜದಲ್ಲಿ ಅವಿಶ್ವಾಸ, ಅಸಮಾಧಾನ, ಉದ್ವಿಗ್ನತೆ ಹಾಗೂ ವೈಮನಸ್ಸನ್ನು ಸೃಷ್ಟಿಸುವ ಅಪಾಯವನ್ನು ಹೊಂದಿದ್ದು, ದೇಶದ ಶಾಂತಿ ಮತ್ತು ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆಯನ್ನು ಉಂಟು ಮಾಡಬಹುದು.

ಯಾವುದೇ ಸಮುದಾಯವನ್ನು ಗುರಿಯಾಗಿಸಿಕೊಂಡು ಅವಹೇಳನ ಮಾಡುವುದು, ಅಪಮಾನಿಸುವುದು ಅಥವಾ ಮಾನಹಾನಿ ಮಾಡುವುದು ಸಂಪೂರ್ಣವಾಗಿ ಖಂಡನೀಯವಾಗಿದ್ದು, ಕಾನೂನಿನ ಪ್ರಕಾರ ಕಠಿಣ ಕ್ರಮಕ್ಕೆ ಒಳಪಡಬೇಕಾಗಿದೆ. ದೇಶಾದ್ಯಂತ ಇರುವ ಲಕ್ಷಾಂತರ ಬಿಲ್ಲವ ಸಮುದಾಯದ ಸದಸ್ಯರ ಭಾವನೆಗಳಿಗೆ ನೋವುಂಟುಮಾಡಿರುವ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಸಂಬಂಧಪಟ್ಟವರ ವಿರುದ್ಧ ತಕ್ಷಣ ಮತ್ತು ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ರಾಷ್ಟ್ರೀಯ ಬಿಲ್ಲವರ ಮಹಾ ಮಂಡಲವು ಸಂಬಂಧಿಸಿದ ಅಧಿಕಾರಿಗಳನ್ನು ಆಗ್ರಹಿಸುತ್ತದೆ. ಸಮಾಜದ ಎಲ್ಲ ವರ್ಗದ ನಾಗರಿಕರು ದ್ವೇಷ ಮತ್ತು ವಿಭಜನೆಯ ಮನೋಭಾವವನ್ನು ತಿರಸ್ಕರಿಸಿ, ಬ್ರಹ್ಮಶ್ರೀ ನಾರಾಯಣ ಗುರುಗಳು ಬೋಧಿಸಿದ ಶಾಂತಿ, ಸೌಹಾರ್ದತೆ, ಸಹೋದರತೆ ಮತ್ತು ರಾಷ್ಟ್ರೀಯ ಏಕತೆಯ ಆದರ್ಶಗಳನ್ನು ಉಳಿಸಿ ಬೆಳೆಸುವಂತೆ ರಾಷ್ಟ್ರೀಯ ಬಿಲ್ಲವರ ಮಹಾಮಂಡಲ ಮನವಿ ಮಾಡುತ್ತದೆ ಎಂದು ಮಹಾಮಂಡಲದ ಪ್ರಧಾನ ಕಾರ್ಯದರ್ಶಿ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಬಿಲ್ಲವ ಸೇವಾ ಸಂಘದಿಂದ ಪೊಲೀಸರಿಗೆ ದೂರು



• **ಕಾಸರಗೋಡು:** ಕಳೆದ ಕೆಲವು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಬಿಲ್ಲವ ಸಮಾಜದ ವಿರುದ್ಧ ದ್ವೇಷ ಕಾರುತ್ತಾ ಅಸಭ್ಯ ಭಾಷೆಗಳಿಂದ ನಿಂದಿಸುತ್ತಿರುವ ಅನಿತಾ ಕಾಸರಗೋಡು ಎಂಬ ಮಹಿಳೆಯ ವಿರುದ್ಧ ಕಾಸರಗೋಡು ನಗರ ಪೊಲೀಸ್ ಠಾಣೆಯ ವಲಯ ಅಧಿಕಾರಿಗೆ ಬಿಲ್ಲವ ಸೇವಾ ಸಂಘ ಕಾಸರಗೋಡು ಇದರ ಹೆಸರಿನಲ್ಲಿ ದೂರು ಸಲ್ಲಿಸಲಾಯಿತು.

ಸೇವಾ ಸಂಘದ ಅಧ್ಯಕ್ಷ ರಘು ಕೆ. ಮೀಪುಗುರಿ, ಕಾರ್ಯದರ್ಶಿ ಹರಿಕಾಂತ ಕಾಸರಗೋಡು, ಗೌರವಾಧ್ಯಕ್ಷ ಎ.ಕೇಶವ, ನಗರಸಭಾ ಸದಸ್ಯ, ಸಂಘದ ಉಪಾಧ್ಯಕ್ಷ ಹರೀಶ್ ಕೆ.ಆರ್., ರವೀಂದ್ರ ಪೂಜಾರಿ ಅವರ ನೇತೃತ್ವದಲ್ಲಿ ಸದಸ್ಯರಾದ ಮೈಂದಪ್ಪ, ಸಂತೋಷ್, ಮಹೇಶ್ ಹಾಗೂ ಬಂಟ ಸಮುದಾಯದ ಪ್ರತಿನಿಧಿ ವಿಶ್ವನಾಥ ಶೆಟ್ಟಿ ವಿವೇಕಾನಂದ ನಗರ ಅವರು ದೂರು ಸಮರ್ಪಿಸಿದರು.

ಕಾಸರಗೋಡು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಹತ್ವದ ನಿರ್ಧಾರ

ಅಪಾಯಕಾರಿ ಶಾಲಾ ಕಟ್ಟಡದಿಂದ ಮಕ್ಕಳನ್ನು ಸ್ಥಳಾಂತರಿಸಿ

• **ಮಂಜೇಶ್ವರ:** ಆಳಿವಿನಂಚಿನಲ್ಲಿರುವ ಉದ್ಯಾವರ ತೋಟ ಸರಕಾರಿ ಮುಸ್ಲಿಂ ಎಲ್‌ಪಿ ಶಾಲೆ ಮತ್ತು ಅಂಗನವಾಡಿಯ ಮಕ್ಕಳನ್ನು ಹತ್ತಿರದ ಸುರಕ್ಷಿತ ಕಟ್ಟಡಕ್ಕೆ ಸ್ಥಳಾಂತರಿಸಿ ತರಗತಿ ಚಟುವಟಿಕೆಗಳನ್ನು ಪ್ರಾರಂಭಿಸಲು ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅಧ್ಯಕ್ಷತೆಯಲ್ಲಿ ಶಾಲೆಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳಲಾಯಿತು.

ಅಸುರಕ್ಷಿತ ಕಟ್ಟಡದಲ್ಲಿ ಶಾಲೆಯು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಬಂದ ದೂರಿನ ಮೇರೆಗೆ ಜಿಲ್ಲಾಧಿಕಾರಿಯವರು ಶಿಕ್ಷಣ ಇಲಾಖೆಯಿಂದ ವರದಿ ಕೇಳಿದ್ದರು. ಇದರ ನಂತರ ಮಕ್ಕಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಅಂಗನವಾಡಿ ಮತ್ತು ಎಲ್‌ಪಿ ಶಾಲೆಯನ್ನು ಸಮೀಪದ ಮಸೀದಿ ಕಟ್ಟಡಕ್ಕೆ ಸ್ಥಳಾಂತರಿಸಲು ತೀರ್ಮಾನಿಸಲಾಯಿತು.

ಮಂಜೇಶ್ವರ ಬ್ಲಾಕ್ ಪಂಚಾಯತ್ ಅಧ್ಯಕ್ಷ ಯು.ಕೆ.ಸೈಫುಲ್ಲ ತಂಙಳ್, ಗ್ರಾಮ ಪಂಚಾಯತ್ ಅಧ್ಯಕ್ಷ ವಿ.ಪಿ.ಅಬ್ದುಲ್ ರಹಮಾನ್, ಗ್ರಾಮ ಪಂಚಾಯತ್ ಸದಸ್ಯರು, ಡಿಡಿಇ ಪ್ರಭಾರಿ ಪಿ.ಸವಿತಾ, ಮಂಜೇಶ್ವರ ಎಇಒ ಡಿ.ನಾರಾಯಣ, ಶಾಲಾ ಮುಖ್ಯೋಪಾಧ್ಯಾಯ ಎಂ.ಇಸ್ಮಾಯಿಲ್ ಮುಂತಾದವರು ಪಾಲ್ಗೊಂಡಿದ್ದರು.

ಶಾಲೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳೊಂದಿಗೆ ಮಂಜೇಶ್ವರ ತಹಶೀಲ್ದಾರ್ ಪಿ.ಪ್ರೇಮ್‌ರಾಜ್, ಮಂಜೇಶ್ವರ ಪಂಚಾಯತ್ ಕಾರ್ಯದರ್ಶಿ ಶಾನವಾಸ್, ಸಹಾಯಕ ಇಂಜಿನಿಯರ್ ಅಕ್ಷರಾ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.



ಸಮಗ್ರ ತನಿಖೆಗೆ ಜಿಲ್ಲಾಧಿಕಾರಿ ಆದೇಶ

ಶಿಥಿಲಗೊಂಡ ಕಟ್ಟಡದಲ್ಲಿ ಶಾಲೆ ಮತ್ತು ಅಂಗನವಾಡಿಯ ಕಾರ್ಯವೈಖರಿಯ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಜಿಲ್ಲಾಧಿಕಾರಿಗಳು ಶಿಕ್ಷಣ ಇಲಾಖೆಗೆ ಸೂಚಿಸಿದ್ದಾರೆ. ಹೊಸ ಶಾಲಾ ಕಟ್ಟಡ ನಿರ್ಮಾಣ ಸೇರಿದಂತೆ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಮಂಜೇಶ್ವರ ಗ್ರಾಮ ಪಂಚಾಯತ್, ಶಾಲಾ ರಕ್ಷಕ ಶಿಕ್ಷಕ ಸಂಘ ಮತ್ತು ಶಿಕ್ಷಣ ಇಲಾಖೆ ನಡುವೆ ಜಂಟಿ ಸಭೆ ನಡೆಸುವಂತೆ ಜಿಲ್ಲಾಧಿಕಾರಿ ನಿರ್ದೇಶಿಸಿದ್ದಾರೆ.

ಮುಂದುವರಿದ ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಕಳೆದ ಎರಡು ದಿನಗಳ ಹಿಂದೆಯಷ್ಟೇ ಹಲವು ಐಎಎಸ್ ಅಧಿಕಾರಿಗಳ ವರ್ಗಾವಣೆ ಮಾಡಿ ಆದೇಶ ಮಾಡಿದ್ದ ರಾಜ್ಯ ಸರ್ಕಾರ, ಬುಧವಾರ ಇನ್ನಷ್ಟು ಅಧಿಕಾರಿಗಳನ್ನು ವರ್ಗಾವಣೆ ಮಾಡಿದೆ. ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿರುವ ಅಂಜುಂ ಪರ್ವೇಜ್ ಅವರಿಗೆ ಲೋಕೋಪಯೋಗಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯನ್ನೂ ಸಮವರ್ತಿತ ಪ್ರಭಾರವಾಗಿ ನೀಡಲಾಗಿದೆ.

ರಾಜೇಂದರ್ ಕುಮಾರ್ ಕಠಾರಿಯಾ ಅವರಿಗೆ ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯನ್ನೂ ಸಮವರ್ತಿತ ಪ್ರಭಾರವಾಗಿ ನೀಡಲಾಗಿದೆ. ಕೆ.ಪಿ.ಮೋಹನ ರಾಜ್ ಅವರನ್ನು ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿಯಾಗಿ ನಿಯೋಜಿಸಲಾಗಿದ್ದು, ಸಮವರ್ತಿತ ಪ್ರಭಾರವಾಗಿ ವಸತಿ ಇಲಾಖೆ ಕಾರ್ಯದರ್ಶಿ ಹುದ್ದೆ ವಹಿಸಲಾಗಿದೆ. ಸೆಲ್ವಮಣಿ ಅವರಿಗೆ ಕೆಎಸ್‌ಆರ್‌ಟಿಸಿ ಎಂಡಿಯನ್ನಾಗಿ ಪ್ರಭಾರವಾಗಿ ನೀಡಲಾಗಿದೆ. ಇದರೊಟ್ಟಿಗೆ ಸ್ವಚ್ಛ ಭಾರತ ಮಿಷನ್(ನಗರ)ದ ಮಿಷನ್ ನಿರ್ದೇಶಕ ರಾಗಿಯೂ ಹೆಚ್ಚುವರಿ ಕಾರ್ಯಭಾರ ವಹಿಸಲಾಗಿದೆ. ಹುದ್ದೆ ನಿರೀಕ್ಷೆಯಲ್ಲಿದ್ದ ಡಾ.ಎಂ.ಮಹೇಶ್ ಅವರನ್ನು ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ನೇಮಕ ಮಾಡಲಾಗಿದೆ. ಖುಷ್ಬು ಗೋಯಲ್ ಚೌಧರಿ ಅವರಿಗೆ ಮೂರು ಹೆಚ್ಚುವರಿ ಹುದ್ದೆ ನೀಡಲಾಗಿದೆ. ಇನ್ವೆಸ್ಟ್ ಕರ್ನಾಟಕ ವೇದಿಕೆಯ ಸಿಇಒ, ಎನ್‌ಜಿಇಎಫ್‌ನ ಅಧ್ಯಕ್ಷೆ ಹಾಗೂ ವ್ಯವಸ್ಥಾಪಕ ನಿರ್ದೇಶಕಿ, ಮೈಸೂರು ಲ್ಯಾಂಪ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕಿ ಹುದ್ದೆಗಳನ್ನು ವಹಿಸಲಾಗಿದೆ. ಸಹಕಾರ ಇಲಾಖೆಯ ನಿಬಂಧಕರಾಗಿರುವ ಡಾ.ಎಂ.ವಿ. ವೆಂಕಟೇಶ್ ಅವರಿಗೆ ಯೋಜನೆ, ಕಾರ್ಯಕ್ರಮ ಮೇಲುಸ್ತುವಾರಿ ಹಾಗೂ ಸಾಂಖ್ಯಿಕ ಇಲಾಖೆ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಲಾಗಿದೆ.

ಕರ್ತವ್ಯಲೋಪ ಸಲ್ಲ: ಪೊಲೀಸರಿಗೆ ಸೂಚನೆ

ಬೆಂಗಳೂರು: ಕೆಳಹಂತದ ಪೊಲೀಸ್ ಅಧಿಕಾರಿಗಳು ರೌಡಿಗಳ ಜನ್ಮದಿನದ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಊಟಕ್ಕೆ ಹೋಗುವುದು ಅಥವಾ ಅವರೊಂದಿಗೆ ಸೆಲ್ಫಿ ತೆಗೆದುಕೊಳ್ಳುವಂತಹ ಕೃತ್ಯಗಳಲ್ಲಿ ತೊಡಗಬಾರದು ಎಂದು ಸ್ಪಷ್ಟ ನಿರ್ದೇಶನ ನೀಡಲಾಗಿದೆ. ಇಂತಹ ಲೋಪಗಳು ಕಂಡುಬಂದಲ್ಲಿ ಕಠಿಣ ಶಿಸ್ತುಕ್ರಮ ಕೈಗೊಳ್ಳ ಲಾಗುವುದು ಗೃಹ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಗೆ ಭೇಟಿ ನೀಡಿ, ಹಿರಿಯ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಪ್ರತಿಯೊಂದು ಠಾಣೆಗಳಲ್ಲೂ ಆಂಟಿ ರೌಡಿ ಸ್ಕ್ವಾಡ್ ರಚಿಸಲು ಈಗಾಗಲೇ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಕೆಳಹಂತದ ಪೊಲೀಸ್ ಅಧಿಕಾರಿಗಳು ರೌಡಿಗಳ ಜನ್ಮದಿನದ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಊಟಕ್ಕೆ ಹೋಗುವುದು ಅಥವಾ ಅವರೊಂದಿಗೆ ಸೆಲ್ಫಿ ತೆಗೆದುಕೊಳ್ಳುವಂತಹ ಕೃತ್ಯಗಳಲ್ಲಿ ತೊಡಗಬಾರದು ಎಂದು ಸ್ಪಷ್ಟ ನಿರ್ದೇಶನ ನೀಡಲಾಗಿದೆ. ಇಂತಹ ಲೋಪಗಳು ಕಂಡುಬಂದಲ್ಲಿ ಕಠಿಣ ಶಿಸ್ತುಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ನಗರದ ಪ್ರಮುಖ ಸಮಸ್ಯೆಯಾದ ಟ್ರಾಫಿಕ್ ದಟ್ಟಣೆಯನ್ನು ಕೇವಲ ಮೂಲಸೌಕರ್ಯ ಬದಲಾವಣೆಯಿಂದಲ್ಲದೆ, ವ್ಯವಸ್ಥಿತ ಲೋಪದೋಷಗಳನ್ನು ಸರಿಪಡಿಸುವ ಮೂಲಕ ನಿರ್ವಹಿಸಲು ನಿರ್ಧರಿಸಲಾಗಿದೆ. ಇದಕ್ಕಾಗಿ ಬಿಎಂಟಿಸಿ, ಬಿಎಂಆರ್‌ಸಿಎಲ್ ಮತ್ತು ಖಾಸಗಿ ಸಹಭಾಗಿತ್ವದೊಂದಿಗೆ ಬೆಂಗಳೂರು ಅರ್ಬನ್ ಮೊಬಿಲಿಟಿ ಮಿಷನ್ ತಂಡವನ್ನು ರಚಿಸಲಾಗುವುದು. ಇದರ ಸಂಪೂರ್ಣ ನೀಲಿ ನಕ್ಷೆಯನ್ನು ಮುಂದಿನ 2-3 ದಿನಗಳಲ್ಲಿ ಪ್ರಕಟಿಸಲಾಗುವುದು ಎಂದು ಹೇಳಿದರು.

ಬೆಂಗಳೂರು ಜಾಗತಿಕ ಮಟ್ಟದಲ್ಲಿ 4ನೇ ಅತಿ ದೊಡ್ಡ ತಂತ್ರಜ್ಞಾನ ಕ್ಲಸ್ಟರ್ ಆಗಿರುವುದರಿಂದ ಇಲ್ಲಿ ಸೈಬರ್ ಅಪರಾಧಗಳು ಹೆಚ್ಚುತ್ತಿವೆ. ಸೈಬರ್ ಅಪರಾಧಿಗಳನ್ನು ಮಟ್ಟ ಹಾಕಲು ಗೃಹ ಇಲಾಖೆ, ಐಟಿ-ಬಿಟಿ ಮತ್ತು ಇ-ಆಡಳಿತ ಇಲಾಖೆಗಳನ್ನು ಒಗ್ಗೂಡಿಸಿ ಸಮಗ್ರ ನೀತಿಯನ್ನು ತರಲಾಗುವುದು. ಮುಂದಿನ ವಾರ ಖಾಸಗಿ ತಂತ್ರಜ್ಞಾನ ಸಂಸ್ಥೆ ಗಳೊಂದಿಗೆ ಸಭೆ ನಡೆಸಿ, ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಸೇಫ್ಟಿ ಗಾರ್ಡ್ ರೈಲ್ಸ್ ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಮಾದಕ ದ್ರವ್ಯ ಮುಕ್ತ ಬೆಂಗಳೂರು: ಮಾದಕ ದ್ರವ್ಯ ಜಾಲದ ವಿರುದ್ಧ ಗೃಹ ಇಲಾಖೆ ಸಮರ ಸಾರಿದೆ. ನೆರೆ ರಾಜ್ಯಗಳಾದ ಕೇರಳ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಿಂದ ಸಣ್ಣ ಪ್ರಮಾಣದಲ್ಲಿ ಬರುವ ಮಾತ್ರೆಗಳು ಹಾಗೂ ಸೈಕೋಟ್ರೋಪಿಕ್ ಪದಾರ್ಥಗಳನ್ನು ಪತ್ತೆಹಚ್ಚಲು ಗಡಿಭಾಗಗಳಲ್ಲಿ ಹೆಚ್ಚಿನ ಟೆಸ್ಟಿಂಗ್ ಕಿಟ್‌ಗಳನ್ನು ಒದಗಿಸಲಾಗುವುದು. ವಿದೇಶಿ ಪ್ರಜೆಗಳ ಕಾನೂನುಬಾಹಿರ ವಾಸ್ತವ್ಯ ಹಾಗೂ ಡಿಪೋರ್ಟೇಶನ್ (ಗಡಿಪಾರು) ಪ್ರಕ್ರಿಯೆ ಯನ್ನು ವೇಗಗೊಳಿಸಲು ಕೇಂದ್ರ ಸರ್ಕಾರದ ವಿದೇಶಾಂಗ ಸಚಿವಾಲಯದೊಂದಿಗೆ ಚರ್ಚಿಸಲಾಗುವುದು ಎಂದು ಹೇಳಿದರು.

ಅಮೆರಿಕ-ಇರಾನ್ ಸಂಘರ್ಷ ಮತ್ತೆ ಉಲ್ಬಣ

ಪುಟ ೧➡ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಬುಧವಾರ ಬಹ್ರೇನ್, ಕುವೈತ್ ಮತ್ತು ಜೋರ್ಡಾನ್‌ನಲ್ಲಿರುವ 21 ಅಮೆರಿಕನ್ ಗುರಿಗಳ ಮೇಲೆ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದೆ. ಈ ದಾಳಿಯಲ್ಲಿ ಅಮೆರಿಕದ ಫಿಫ್ತ್ ಫ್ಲೀಟ್, ಅಲಿ ಅಲ್ ಸೇಲಂ ವಾಯುನೆಲೆ ಮತ್ತು ಅಜ್ರಾಕ್‌ನಲ್ಲಿರುವ ವಾಯುನೆಲೆಗಳನ್ನು ಗುರಿಯಾಗಿಸಲಾಗಿದ್ದು, ಯುದ್ಧ ವಿಮಾನದ ಹ್ಯಾಂಗರ್ ಸೇರಿದಂತೆ ನಾಲ್ಕು ಗುರಿಗಳನ್ನು ಧ್ವಂಸಗೊಳಿಸಿರುವುದಾಗಿ ಇರಾನ್ ಹೇಳಿಕೊಂಡಿದೆ. ಮಂಗಳವಾರ ತನ್ನ ಅಪಾಚೆ ಹೆಲಿಕಾಪ್ಟರ್ ಹೊಡೆದುರುಳಿಸಿದ ಹಿನ್ನೆಲೆಯಲ್ಲಿ, ಅಮೆರಿಕ ಸೇನೆ ಹಾರ್ಮುಜ್ ಜಲಸಂಧಿಯ ಕೇಶ್ಮ್ ದ್ವೀಪ ಮತ್ತು ಇರಾನ್ ಬಂದರುಗಳ ಮೇಲೆ ದಾಳಿ ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಇರಾನ್ ಈ ದಾಳಿ ನಡೆಸಿದೆ. ಈ ನಡುವೆ ಟ್ರಂಪ್, ಶಾಂತಿ ಮಾತುಕತೆಯಿಂದ ಇರಾನ್ ಹಿಂದೆ ಸರಿಯುತ್ತಿದೆ ಎಂದು ಆರೋಪಿಸಿದ್ದಾರೆ.

ಯುಎಸ್ ವಾಯು ದಾಳಿ: ಇರಾನ್ ನೆಲೆಗಳು ಧ್ವಂಸ

ವಾಷಿಂಗ್ಟನ್: ಗಲ್ಫ್ ವಲಯದಲ್ಲಿ ಅಮೆರಿಕದ ಅಪಾಚಿ ಹೆಲಿಕಾಪ್ಟರ್ ಹೊಡೆದುರುಳಿಸಿದ ಕ್ರಮಕ್ಕೆ ಪ್ರತಿಯಾಗಿ ಯುಎಸ್ ಸೇನೆ ಇರಾನ್‌ನ ಮಿಲಿಟರಿ ಮತ್ತು ಕಣ್ಗಾವಲು ನೆಲೆಗಳ ಮೇಲೆ ಗುರಿ ಆಧಾರಿತ ವಾಯು ದಾಳಿ ನಡೆಸಿದೆ. ಸ್ಟೇಟ್ ಆಫ್ ಹಾರ್ಮುಜ್ ಬಳಿಯ ವಾಯು ರಕ್ಷಣಾ ವ್ಯವಸ್ಥೆಗಳು, ನಿಯಂತ್ರಣ ಕೇಂದ್ರಗಳು ಮತ್ತು ರಾಡಾರ್ ನೆಲೆಗಳನ್ನು ಗುರಿಯಾಗಿಸಿ ಈ ಕಾರ್ಯಾಚರಣೆ ನಡೆಸಲಾಗಿದೆ ಎಂದು ಸೆಂಟ್ರಲ್ ಕಮಾಂಡ್ ತಿಳಿಸಿದೆ. ಸೋಮವಾರ ಗಸ್ತು ತಿರುಗುತ್ತಿದ್ದ ಹೆಲಿಕಾಪ್ಟರ್ ಅನ್ನು ಇರಾನ್ ಡ್ರೋನ್ ಹೊಡೆದುರುಳಿಸಿದ ನಂತರ ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ದಾಳಿಗೆ ಆದೇಶಿಸಿದ್ದರು. ಹೆಲಿಕಾಪ್ಟರ್‌ನಲ್ಲಿದ್ದ ಇಬ್ಬರು ಸಿಬ್ಬಂದಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್, ಬಹ್ರೇನ್ ಮತ್ತು ಜೋರ್ಡಾನ್‌ನಲ್ಲಿರುವ ಯುಎಸ್ ನೆಲೆಗಳ 21 ಗುರಿಗಳ ಮೇಲೆ ದಾಳಿ ನಡೆಸಿದೆ. ಯುಎಸ್ ದಾಳಿಯಿಂದ ಜಾಸ್ಕ್, ಸಿರಿಕ್ ಮತ್ತು ಕೇಶ್ಮ್‌ನಲ್ಲಿ ಟೆಲಿಕಾಂ ಟವರ್ ಹಾಗೂ ನೀರಿನ ಟ್ಯಾಂಕ್‌ಗಳಿಗೆ ಹಾನಿಯಾಗಿದೆ ಎಂದು ಐಆರ್‌ಜಿಸಿ ಹೇಳಿಕೊಂಡಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

◈ ಎಲ್ಲರೂ ಬದುಕೆಂಬ ಜೀವನ ಸೌಂದರ್ಯವನ್ನು ಸವಿಯುವುದೇ ಧರ್ಮ, ತನ್ನ ಸ್ವಾರ್ಥಕ್ಕಾಗಿ ಅನ್ಯರ ಮೇಲೆ ಬಾಂಬ್ ಹಾಕುವುದು ಧರ್ಮವಲ್ಲ – **ಡಾ. ಚಾರುಕೀರ್ತಿ ಪಂಡಿತಾಚಾರ್ಯ ಮಹಾ ಸ್ವಾಮೀಜಿ**

- ಧರ್ಮದ ಹೆಸರಿನಲ್ಲಿ ಬಾಂಬ್ ಹಾಕುವ ದುಷ್ಟರನ್ನು ದಂಡಿಸುವುದೂ ಧರ್ಮ, ಏಕೆಂದರೆ ಧರ್ಮದಲ್ಲಿ ದುಷ್ಟ ಸಂಹಾರವೂ ಸೇರಿದೆ!

ದಿನ ಭವಿಷ್ಯ

ಮೇಷ ಈ ದಿನ ನಿಮ್ಮದು. ಪೂರ್ಣವಾಗಿ ಆನಂದಿಸಿ. ಗುರಿ ಸಾಧನೆಯ ಹಾದಿ ಸುಗಮ. ವಾದಕ್ಕೆ ಕಿವಿಗೊಡಬೇಡಿ. ಕೌಟುಂಬಿಕ ಸಾಮರಸ್ಯ.

ವೃಷಭ ಎಲ್ಲ ಕೆಲಸ ಸರಾಗವಾಗಿ ಸಾಗುವಂತೆ ಯೋಜನೆ ರೂಪಿಸಿ. ಸಮಸ್ಯೆ ಪರಿಹಾರ ಕಷ್ಟವಲ್ಲ, ಸಮಾಧಾನದ ನಡೆ ಅತ್ಯವಶ್ಯ.

ಮಿಥುನ ವೃತ್ತಿಯಲ್ಲಿ ಫಲಪ್ರದ ಬೆಳವಣಿಗೆ. ನಿರ್ಧಾರ ಫಲ ನೀಡಲಿದೆ. ಹೊಸ ವಾಹನ ಖರೀದಿಯ ಬಯಕೆ ಈಡೇರುವ ಕಾಲ ಬಂದಿದೆ. ಧನಾಗಮ.

ಕಟಕ ಶಾಂತಚಿತ್ತರಾಗಿ ಇಂದು ವರ್ತಿಸಿ. ಸಹನೆ ಕೆಣಕುವ ವಿದ್ಯಮಾನ ಉಂಟಾದೀತು. ಆಪ್ತರಿಂದ ವಿಶ್ವಾಸದ್ರೋಹ. ಭಾವಾವೇಶ ನಿಯಂತ್ರಿಸಿ.

ಸಿಂಹ ಹೆಚ್ಚು ಫಲ ನೀಡದ ದಿನ. ಶ್ರಮ ವ್ಯರ್ಥ. ದೈಹಿಕ ನೋವು ಅನುಭವಿಸುವಿರಿ. ಧ್ಯಾನ, ಯೋಗ ನಿಮಗೆ ಸಹಕಾರಿಯಾದೀತು. ಆರ್ಥಿಕ ಒತ್ತಡ.

ಕನ್ಯಾ ಕೆಲಸದ ಒತ್ತಡ, ನಿಮ್ಮ ದಿನಚರಿಯನ್ನು ಬದಲಿಸಬೇಕಾದೀತು. ಕುಟುಂಬಸ್ಥರ ಜತೆ ತಾಳ್ಮೆಯಿಂದ ವ್ಯವಹರಿಸಿ.

ತುಲಾ ಆತ್ಮವಿಶ್ವಾಸ ಹೆಚ್ಚಿಸುವ ಬೆಳವಣಿಗೆ. ಗುರಿ ಸಾಧನೆಗೆ ಬದ್ಧರಾಗಿ. ನಿಮಗೆ ಅನುಕೂಲಕರ ಪರಿಸ್ಥಿತಿ ನಿರ್ಮಾಣ. ಬಂಧು ಜತೆ ಚಕಮಕಿ.

ವೃಶ್ಚಿಕ ಕೆಲವರ ಮೇಲೆ ಅನುಮಾನ ಪಡುವ ಸ್ವಭಾವ ಬಿಟ್ಟುಬಿಡಿ. ಹಣದ ವಿಚಾರದಲ್ಲಿ ಮಹತ್ವದ ನಿರ್ಧಾರ ತಾಳಬೇಡಿ. ಕಾಯಿರಿ.

ಧನು ಕೆಲವು ಪರಿಸ್ಥಿತಿಯ ಕಾರಣದಿಂದ ಆತ್ಮವಿಶ್ವಾಸ ಕುಂದುವುದು. ಹಿಂಜರಿಕೆ ಬಿಟ್ಟು ಕಾರ್ಯವೆಸಗಿ. ದೈವಬಲ ನಿಮಗಿದೆ. ಕಾರ್ಯಸಿದ್ಧಿ ಆಗಲಿದೆ.

ಮಕರ ಎಂದಿಗಿಂತ ಹೆಚ್ಚು ಕೆಲಸದ ಒತ್ತಡ. ಯಾವುದೇ ವಿಚಾರಕ್ಕೆ ಅತಿರೇಕದ ಪ್ರತಿಕ್ರಿಯೆ ತೋರದಿರಿ. ತಾಳ್ಮೆ ತಪ್ಪಿ ವರ್ತಿಸಬೇಡಿ.

ಕುಂಭ ಮನಸ್ಸಿಗೆ ಶಾಂತಿ ಬೇಕೆ? ಸಣ್ಣಪುಟ್ಟ ಸಂಘರ್ಷಗಳಿಂದ ದೂರ ಇರಿ. ಸಮಸ್ಯೆ ಸೃಷ್ಟಿಸುವ ವ್ಯಕ್ತಿಗಳನ್ನು ನಿಮ್ಮಿಂದ ದೂರ ಇಟ್ಟುಕೊಳ್ಳಿ.

ಮೀನ ಏಕಾಗ್ರತೆ ಕಳಕೊಳ್ಳದೆ ನಿಮ್ಮ ಕೆಲಸ ಮಾಡಿ. ಸಮಯದೊಳಗೆ ಮುಗಿಸಿ. ಸಂಗಾತಿ ಜತೆ ವಾಗ್ವಾದ ನಡೆದೀತು. ತಾಳ್ಮೆ ಕಾಯ್ದುಕೊಳ್ಳಿರಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 0,5,2,7

ಡಬಲ್ ಡೆಕ್ಕರ್ ಮೇಲ್ಸೇತುವೆ ನಿರ್ಮಾಣ | ಕೇಂದ್ರದ ಅನುಮತಿಗೆ ಡಿಕೆಶಿ ಮನವಿ

ಬದಲಾವಣೆ ಪ್ರಸ್ತಾಪ

ಬೆಂಗಳೂರು: ಮೆಟ್ರೋ ಮೂರನೇ ಹಂತ ಯೋಜನೆಯಲ್ಲಿ 44.65 ಕಿ.ಮೀ ಉದ್ದದ ಡಬಲ್‌ಡೆಕ್ಕರ್ ಮೇಲ್ಸೇತುವೆ ನಿರ್ಮಾಣಕ್ಕೆ ಸರ್ಕಾರ ಮುಂದಾಗಿದ್ದು, ಯೋಜನೆಯಲ್ಲಿ ಸಣ್ಣ ಬದಲಾವಣೆ ಪ್ರಸ್ತಾವ ಮಾಡಿದ್ದು, ಇದಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡ ಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.



ಬುಧವಾರ ಹೊಸದಿಲ್ಲಿಯಲ್ಲಿ ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಮನೋಹರಲಾಲ್ ಖಟ್ಟರ್ ಅವರನ್ನು ಭೇಟಿ ಮಾಡಿ ಅಹವಾಲು ಸಲ್ಲಿಸಿದರು ಮೆಟ್ರೋ ಮೂರನೇ ಹಂತ ಯೋಜನೆಯಲ್ಲಿ 44.65 ಕಿ.ಮೀ ಉದ್ದದ ಡಬಲ್ ಡೆಕ್ಕರ್ ಮೇಲ್ಸೇತುವೆ ನಿರ್ಮಾಣಕ್ಕೆ ಸರ್ಕಾರ (ಬಿಎಂಆರ್‌ಸಿಎಲ್) ಮುಂದಾಗಿದೆ. ದೆಹಲಿಯಲ್ಲಿ ರಾಜ್ಯ ಸರಕಾರದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಎಲ್.ಕೆ. ಅತೀಕ್, ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಕಾರ್ಯದರ್ಶಿ ರಾಜೇಂದ್ರ ಚೋಳನ್ ಉಪಸ್ಥಿತರಿದ್ದರು.

“ 2024ರ ಸೆ.13ರಂದು ಕೇಂದ್ರ ಸರ್ಕಾರ ಇದಕ್ಕೆ ಅನುಮತಿ ನೀಡಿತ್ತು. ಈ ಯೋಜನೆಯ ವೆಚ್ಚ 9,700 ಕೋಟಿ ರೂ. ಅನ್ನು ಕರ್ನಾಟಕ ಸರ್ಕಾರವೇ ಭರಿಸಲಿದೆ. ಆದರೆ, ಕಳೆದ ಜ.19ರಂದು ಬಿಎಂಆರ್‌ಸಿಎಲ್ ಮಂಡಳಿಯ 118ನೇ ಸಭೆಯಲ್ಲಿ ಸಣ್ಣ ಬದಲಾವಣೆ ಪ್ರಸ್ತಾಪ ಮಾಡಲಾಗಿದೆ. ಇದಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಬೇಕು.

■ **ಡಿ.ಕೆ.ಶಿವಕುಮಾರ್,** ಸಿಎಂ

ಮನವಿಯಲ್ಲಿರುವ ಇತರೆ ಅಂಶಗಳು

1 **ಮೆಟ್ರೋ ಎರಡನೇ ಹಂತದ ಪರಿಷ್ಕೃತ ಯೋಜನಾ ವೆಚ್ಚಕ್ಕೆ ಅನುಮತಿ:** ಈ ಯೋಜನೆಗೆ ಕೇಂದ್ರ ಸರ್ಕಾರ 21-02-2014ರಂದು 26,405.14 ಕೋಟಿ ರೂ. ಅಂದಾಜು ವೆಚ್ಚಕ್ಕೆ ಅನುಮತಿ ನೀಡಿತ್ತು. 72.095 ಕಿ.ಮೀ ಉದ್ದ ಹಾಗೂ 61 ನಿಲ್ದಾಣಗಳನ್ನು ಒಳಗೊಂಡಿರುವ ಈ ಯೋಜನೆ ಅಂದಾಜು ವೆಚ್ಚ ಈಗ 40,425.02 ಕೋಟಿ ರೂ.ಗೆ ಅಂದರೆ 14,019.88 ಕೋಟಿ ರೂ. ಏರಿಕೆ ಮಾಡಲಾಗಿದ್ದು, ಆದಷ್ಟು ಬೇಗ ಈ ಪರಿಷ್ಕೃತ ಯೋಜನಾ ವೆಚ್ಚಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಬೇಕು.

2 **ಮೆಟ್ರೋ ಮೂರನೇ ಎ ಹಂತಕ್ಕೆ ಅನುಮತಿ:** ಈ ಯೋಜನೆ ಸರ್ಜಾಪುರದಿಂದ ಹೆಬ್ಬಾಳದವರೆಗೆ ಒಟ್ಟು 37.804 ಕಿ.ಮೀ (14.28 ಕಿ.ಮೀ ಸುರಂಗ ಹಾಗೂ 23.524 ಕಿ.ಮೀ ಮೇಲ್ಸೇತುವೆ) ಉದ್ದವಿದ್ದು, ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಕೆಲವು ಮಾರ್ಪಾಡು ಮಾಡಲಾಗಿದ್ದು, 25,999 ಕೋಟಿ ರೂ. ಅಂದಾಜು ವೆಚ್ಚದ ಪರಿಷ್ಕೃತ ಡಿಪಿಆರ್ ಅನ್ನು 29-04-2026ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಕೆ ಮಾಡಲಾಗಿದ್ದು, ಆದಷ್ಟು ಬೇಗ ಇದಕ್ಕೆ ಅನುಮತಿ ನೀಡಬೇಕು.

3 **ಪ್ರಾದೇಶಿಕ ಕ್ಷಿಪ್ರ ರೈಲು ಸಾರಿಗೆ ವ್ಯವಸ್ಥೆ (ಖಖ) ಜಾರಿಗೆ ಅನುಮತಿ:** ಬೆಂಗಳೂರು - ಮೈಸೂರು, ಬೆಂಗಳೂರು-ಕನಕಪುರ, ಬೆಂಗಳೂರು-ತುಮಕೂರು, ಬೆಂಗಳೂರು- ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು- ಕೋಲಾರ ನಡುವೆ ಪ್ರಾದೇಶಿಕ ಕ್ಷಿಪ್ರ ರೈಲು ಸಾರಿಗೆ ವ್ಯವಸ್ಥೆ (RRTS) ಜಾರಿಗೆ ಅನುಮತಿ ನೀಡಬೇಕು.

423 ಕೋಟಿ ರೂ. ಮೌಲ್ಯದ ವಿದ್ಯುತ್ ಮಾರಾಟ: ಜಾರ್ಜ್

ಬೆಂಗಳೂರು: ರಾಜ್ಯವು ಕಳೆದ ಎರಡೂವರೆ ತಿಂಗಳಲ್ಲಿ ಪ್ರತಿ ಯೂನಿಟ್‌ಗೆ 9.08 ಪೈಸೆಯಂತೆ ಬರೋಬ್ಬರಿ 423 ಕೋಟಿ ರೂ. ಮೌಲ್ಯದ ವಿದ್ಯುತ್ತನ್ನು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಮೂಲಕ ರಾಷ್ಟ್ರೀಯ ಗ್ರಿಡ್‌ಗೆ ಮಾರಾಟ ಮಾಡಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ಬೆಸ್ಕಾಂ ಕಾರ್ಪೊರೇಟ್ ಕಚೇರಿಯಲ್ಲಿ ಹಿರಿಯ ಅಧಿಕಾರಿಗಳ ಸಭೆ ಕರೆದಿದ್ದ ಅವರು ಮಾನ್ಸೂನ್ ಸಿದ್ಧತೆ, ಕುಸುಮ್ ಯೋಜನೆ, ಮುಖ್ಯಮಂತ್ರಿ ಸೌರ ಕೃಷಿ ಯೋಜನೆ ಸೇರಿದಂತೆ ವಿವಿಧ ಯೋಜನೆಗಳ ಪ್ರಗತಿ ಪರಿಶೀಲಿಸಿ, ಮಾತನಾಡಿದ ಅವರು, 2026 ಏಪ್ರಿಲ್ ನಿಂದ ಜೂನ್ 8ರವರೆಗಿನ ಅವಧಿಯಲ್ಲಿ 423 ಕೋಟಿ ರೂ. ಮೌಲ್ಯದ ವಿದ್ಯುತನ್ನು ರಾಷ್ಟ್ರೀಯ ಗ್ರಿಡ್‌ಗೆ ಮಾರಾಟ ಮಾಡಿದ್ದೇವೆ. ವಿದ್ಯುತ್ ಉತ್ಪಾದನೆ, ಗ್ರಿಡ್ ನಿರ್ವಹಣೆ ಮತ್ತು ಇಂಧನ ಮಾರುಕಟ್ಟೆಯಲ್ಲಿ ವ್ಯಾವಹಾರಿಕ ಜಾಣ್ಮೆಯ ಫಲ ಇದು ಎಂದು ಹೇಳಿದರು.

2026-27ನೇ ಸಾಲಿನಲ್ಲಿ ಏಪ್ರಿಲ್ 1ರಿಂದ ಜೂನ್ 8ರವರೆಗೆ 21,789 ಮಿಲಿಯನ್ ಯೂನಿಟ್ ಬಳಕೆಯಾಗಿದೆ. ಇದು ಶೇ. 22.39ರಷ್ಟು ಏರಿಕೆಯಾಗಿದ್ದು, ಹಿಂಗಾರು ವೈಫಲ್ಯದಿಂದ ಬಳಕೆ ಹೆಚ್ಚಾಗಿದೆ ಎಂದು ಮಾಹಿತಿ ನೀಡಿದರು.



ಅಗತ್ಯ ಸಾಮಗ್ರಿಗಳ ದಾಸ್ತಾನಿದೆ

ಈವರೆಗೆ ಎಲ್ಲಾ ಎಸ್ಕಾಂಗಳ ವ್ಯಾಪ್ತಿಯಲ್ಲಿ ಹಾನಿಗೊಳಗಾದ 33,400 ಕಂಬಗಳು, 1,441 ಟಿಸಿಗಳು ಮತ್ತು 343.56 ಕಿ.ಮೀ. ವಿದ್ಯುತ್ ಮಾರ್ಗಗಳನ್ನು ಬದಲಾಯಿಸಲಾಗಿದೆ. ಸದ್ಯ 20,012 ಲೈನ್‌ಮ್ಯಾನ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಮಳೆಗಾಲದ ಕಾರ್ಯಾಚರಣೆಗಾಗಿ ಹೆಚ್ಚುವರಿಯಾಗಿ 4,883 ಲೈನ್‌ಮ್ಯಾನ್‌ಗಳನ್ನು ನೇಮಿಸಲಾಗಿದೆ. 99,530 ಕಂಬಗಳು ಮತ್ತು 12,733 ಟಿಸಿಗಳು ಸೇರಿದಂತೆ ಅಗತ್ಯ ಸಾಮಗ್ರಿಗಳ ದಾಸ್ತಾನಿದೆ ಎಂದು ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದರು.

“ ಮಳೆ ಮತ್ತು ಗಾಳಿಯಿಂದಾಗುವ ಹಾನಿ ನಂತರ ವಿದ್ಯುತ್ ಅನ್ನು ತ್ವರಿತವಾಗಿ ಪುನಃಸ್ಥಾಪಿಸಿ ಜನರಿಗೆ ಯಾವುದೇ ರೀತಿ ಸಮಸ್ಯೆ ಆಗದಂತೆ ಎಚ್ಚರವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ.

■ **ಕೆ.ಜೆ. ಜಾರ್ಜ್,** ಇಂಧನ ಸಚಿವ

ರಾಜ್ಯಸಭೆಯ ವ್ಯಾಮೋಹವಿಲ್ಲ: ಎಚ್ಡಿಡಿ

ಪುಟ ೧➡ ಒಂದು ರಾಜ್ಯಸಭೆ ಸ್ಥಾನ ಇಂತಹ ಉತ್ತಮ ಬಾಂಧವ್ಯವನ್ನು ಹಾಳು ಮಾಡುತ್ತದೆ ಎಂದು ಯಾರಾದರೂ ಭಾವಿಸಿದ್ದರೆ ಅದು ಅವರ ಮೂರ್ಖತನ ಎಂದು ನೇರವಾಗಿ ಹೇಳಿದರು.

ಕಾಂಗ್ರೆಸ್ ನಾಟಕದ ಬಗ್ಗೆ ನನಗೆ ಗೊತ್ತು: ಒಂದು ಕಾಲದಲ್ಲಿ ನಾನು ಮೋದಿ ಅವರನ್ನು ಕಟುವಾಗಿ ಟೀಕಿಸಿದ್ದೆ ಎಂಬುದು ನಿಜ. ಆದರೆ ಕಳೆದ ಹಲವು ವರ್ಷಗಳಿಂದ ನಾನು ಅವರನ್ನು ಬಹಳಷ್ಟು ಅರ್ಥ ಮಾಡಿಕೊಂಡಿದ್ದೇನೆ. ಅವರಲ್ಲಿ ವಿಶ್ವಾಸ ಇರಿಸಿದ್ದೇನೆ. ಅವರ ಒಳ್ಳೆಯ ಕೆಲಸಗಳನ್ನು ಹೃದಯಪೂರ್ವಕವಾಗಿ ಶ್ಲಾಘಿಸಿದ್ದೇನೆ ಎಂದರು. ಇವತ್ತು ಒಂದು ವಿಷಯ ಇಟ್ಟುಕೊಂಡು ನನ್ನ ಬಗ್ಗೆ ಇಷ್ಟೆಲ್ಲಾ ಅನುಕಂಪದ ನಾಟಕ ಆಡುತ್ತಿರುವ ಕಾಂಗ್ರೆಸ್ ನಾಯಕರು ಹಿಂದೆಲ್ಲಾ ನನ್ನ ವಿಚಾರದಲ್ಲಿ ಹೇಗೆಲ್ಲಾ ನಡೆದುಕೊಂಡರು ಎಂಬುದು ಗೊತ್ತಿದೆ. ಇದರ ಬಗ್ಗೆ ಹೇಳುತ್ತಾ ಹೋದರೆ ಬಹಳಷ್ಟು ಹೇಳಬಹುದು. ನನಗೆ ಅದರ ಬಗ್ಗೆ ಆಸಕ್ತಿ ಇಲ್ಲ ಎಂದು ತಿಳಿಸಿದರು. ಕೆಲವರು ಸುಖಾಸುಮ್ಮನೆ ಮಾತಾಡುತ್ತಿದ್ದಾರೆ. ಈ ವಿಚಾರದಲ್ಲಿ ನನಗೆ ಅಪಮಾನವಾಗಿದೆ ಎಂಬ ಹೇಳಿಕೆಗಳಿಗೆ ನಾನು ಯಾವುದೇ ಮಹತ್ವ ನೀಡುವು ದಿಲ್ಲ. ಅದರಲ್ಲಿ ಯಾವುದೇ ಅರ್ಥವೂ ಇಲ್ಲ. ಸುದೀರ್ಘ ರಾಜಕೀಯ ಜೀವನದಲ್ಲಿ ಅಧಿಕಾರಕ್ಕಿಂತ ಜನಸೇವೆಯೇ ಮುಖ್ಯವಾಗಿತ್ತು ಎಂಬುದನ್ನು ಅತ್ಯಂತ ವಿನಯಪೂರ್ವಕವಾಗಿ ಹೇಳಲು ಬಯ ಸುತ್ತೇನೆ ಎಂದರು.

ನನ್ನ-ಮೋದಿ ಸಂಬಂಧಕ್ಕಿಲ್ಲ ಧಕ್ಕೆ

ನರೇಂದ್ರ ಮೋದಿ ಅವರ ಬಗ್ಗೆ ಭಾರತ ಅಷ್ಟೇ ಅಲ್ಲ, ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಗೌರವಭಾವ ಇದೆ. ಅದರಿಂದ ರಾಷ್ಟ್ರಕ್ಕೂ ಒಳ್ಳೆಯದಾಗುತ್ತಿದೆ. ಅವರ ಮಟ್ಟಕ್ಕೆ ಯಾವ ನಾಯಕನೂ ಬೆಳೆಯಲು ಸಾಧ್ಯವಿಲ್ಲ. ಅವರೊಂದಿಗೆ ನಾನು ಹೊಂದಿರುವ ಬಾಂಧವ್ಯ ವೈಯಕ್ತಿಕ. ಅದನ್ನು ರಾಜಕೀಯ ಕಾರಣಕ್ಕಾಗಿ ಕಳೆದುಕೊಳ್ಳಲು ಬಯಸುವುದಿಲ್ಲ. ನಾನು ಸಂಸತ್ತಿನಲ್ಲಿ ಇರಲಿ, ಇಲ್ಲದಿರಲಿ ಮೋದಿ ಅವರ ನಡುವಿನ ಸಂಬಂಧಕ್ಕೆ ಧಕ್ಕೆ ಬರುವುದಿಲ್ಲ. ಕೊನೆಯವರೆಗೂ ನಮ್ಮ ಸಂಬಂಧ ಹೀಗೇ ಇರುತ್ತದೆ ಎಂದರು.

ರಾಜ್ಯಸಭೆಗೆ ಬೇಡಿಕೆ ಇಟ್ಟಿರಲಿಲ್ಲ



ಕೆಲವರು ನನ್ನ ಬಗ್ಗೆ ಕಾಳಜಿಯಿಂದ ಮಾತನಾಡುತ್ತಿದ್ದಾರೆ. ಬಹಳ ಅಪಮಾನವಾಯಿತು ಎಂದು ನೋವು ವ್ಯಕ್ತಪಡಿಸುತ್ತಿದ್ದಾರೆ. ಆದರೆ, ನನ್ನ ಹೆಸರು ಪರಿಗಣನೆಗೆ ಬರುತ್ತದೆ ಎಂದು ಮಾಧ್ಯಮಗಳಲ್ಲಿ ಪ್ರಚಾರವಾಗಿದ್ದು ಬಿಟ್ಟರೆ, ನಾನು ಆ ಬಗ್ಗೆ ಎಲ್ಲಿಯೂ ನನಗೆ ರಾಜ್ಯಸಭೆ ಸ್ಥಾನ ಬೇಕೆಂದು ಬೇಡಿಕೆ ಇಟ್ಟಿರಲಿಲ್ಲ. ಈ ಬಗ್ಗೆ ಕುಮಾರಸ್ವಾಮಿ ಅವರು ಸ್ಪಷ್ಟವಾಗಿಯೇ ಹೇಳಿದ್ದಾರೆ. ಇದರಲ್ಲಿ ಮತ್ತೊಮ್ಮೆ ನಾನು ಹೇಳುವಂಥದ್ದು ಏನೂ ಇಲ್ಲ ಎಂದು ದೇವೇಗೌಡ ಹೇಳಿದರು. ರಾಜ್ಯಸಭೆಗೆ ಸ್ಪರ್ಧಿಸುವ ಆಸಕ್ತಿ ನನಗೆ ಇದ್ದಿದ್ದೇ ಆದಲ್ಲಿ ಕಳೆದ ಮೇ 26ರಂದು ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕಾಗಿ ನವದೆಹಲಿಗೆ ಹೋಗಿದ್ದಾಗ ಪ್ರಧಾನಿಗಳಿಗೆ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಮಾತುಕತೆ ನಡೆಸುತ್ತಿದ್ದೆ. ನಾನು ಯಾರೊಂದಿಗೂ ಈ ಬಗ್ಗೆ ಮಾತುಕತೆ ನಡೆಸಲಿಲ್ಲ. ಅಂದಿನ ಕಾರ್ಯಕ್ರಮ ಮುಗಿದ ಕೂಡಲೇ ನಾನು ಬೆಂಗಳೂರಿಗೆ ವಾಪಸ್ ಬಂದೆ ಎಂದರು.

ಜೂ.21ಕ್ಕೆ ಕೆಪಿಸಿಸಿ ಅಧ್ಯಕ್ಷರಾಗಿ ಹರಿಪ್ರಸಾದ್ ಅಧಿಕಾರ ಸ್ವೀಕಾರ

ಪುಟ ೧➡ 2001ರಲ್ಲಿ ಬೆಂಗಳೂರು ಪಾಲಿಕೆ ಚುನಾವಣೆ ನಡೆಸಲು ನನಗೆ ಜವಾಬ್ದಾರಿ ನೀಡಿದ್ದರು. ಹೊಟೇಲ್ ವೇಯ್ಟರ್, ಕಸ ಗುಡಿಸುವವರು ಸೇರಿದಂತೆ ಸಣ್ಣ ಸಮುದಾಯದವರಿಗೆ ಟಿಕೆಟ್ ಕೊಟ್ಟಾಗ ಎಲ್ಲರು ಆಶ್ಚರ್ಯವಾಗಿದ್ದರು. ಆಗ ಎಲ್ಲರೂ ಗೆದ್ದಿದ್ದರು. ನಾವು ಕಾಂಗ್ರೆಸ್ ಪಕ್ಷಕ್ಕಾಗಿ ದುಡಿದಿದ್ದೇವೆ, ನಮಗೆ ಅಧಿಕಾರ ಸಿಗುತ್ತೋ ಇಲ್ಲವೋ ಎಂಬ ಭಾವನೆ ಬೇಡ. ಕಾರ್ಯಾಧ್ಯಕ್ಷರಾದ ಚಂದ್ರಶೇಖರ್ ಹಾಗೂ ಮಂಜುನಾಥ್ ಭಂಡಾರಿ ಅವರು ಸಮೀಕ್ಷೆ ಮಾಡಿಸಿದ್ದಾರೆ. ಹೀಗಾಗಿ ಜಿಬಿಎ ಚುನಾವಣೆಯಲ್ಲಿ ಒಳ್ಳೆಯ ಕಾರ್ಯಕರ್ತ ಗೆಲ್ಲುವ ಅರ್ಹತೆ ಇದ್ದರೆ, ಹಣವಿಲ್ಲದಿದ್ದರೂ ನಿಮಗೆ ಟಿಕೆಟ್ ಸಿಗುವುದು ಗ್ಯಾರಂಟಿ ಎಂದು ಭರವಸೆ ನೀಡಿದರು. ಮುಂದಿನ 2 ವರ್ಷ ಕಾಂಗ್ರೆಸ್ ಕಾರ್ಯಕರ್ತರ ವರ್ಷ. ಈ ಎರಡು ವರ್ಷ ರಾಜ್ಯದ ಚುನಾವಣೆ ಹಾಗೂ ನಂತರದ ಒಂದು ವರ್ಷ ಲೋಕಸಭೆ ಚುನಾವಣೆಯಲ್ಲಿ ನಾವು ಸಕ್ರಿಯವಾಗಿ ಭಾಗವಹಿಸಿ ಬಿಜೆಪಿಯನ್ನು ಮಣಿಸಬೇಕಾಗುತ್ತದೆ ಎಂದರು.

ಇಂದು ನೀತಿ ಆಯೋಗದ ಸಭೆ

ಪುಟ ೧➡ ಸಭೆ ಅಧ್ಯಕ್ಷತೆಯನ್ನು ಪ್ರಧಾನಿ ಮೋದಿ ವಹಿಸಲಿದ್ದು, 3 ವರ್ಷಗಳ ಬಳಿಕ ಇದೇ ಮೊದಲ ಬಾರಿ ಕರ್ನಾಟಕದ ಸಿಎಂ ಡಿಕೆಶಿ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಅವರ ಪ್ರತಿನಿಧಿ ಭಾಗಿಯಾಗಿ ದ್ದರು. ಇದಕ್ಕೂ ಮೊದಲು ಅಂದಿನ ಸಿಎಂ ಬಸವರಾಜ ಬೊಮ್ಮಾಯಿ ಸಭೆಗೆ ಹಾಜರಾಗಿ ದ್ದರು. ಈ ಸಭೆಯಲ್ಲಿ ವಿವಿಧ ರಾಜ್ಯಗಳ ಸಿಎಂ, ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳು ಭಾಗವಹಿಸಿ ಸಮಗ್ರ ಮಾನವ ಅಭಿವೃದ್ಧಿ ಚೌಕಟ್ಟಿನ ಕುರಿತು ಚರ್ಚಿಸಲಿ ದ್ದಾರೆ.

ಈ ಚೌಕಟ್ಟು 4 ಪ್ರಮುಖ ಸ್ತಂಭಗಳಾದ ಮೂಲಭೂತ ಮಾನವ ಸಂಪನ್ಮೂಲ, ಭವಿಷ್ಯಕ್ಕೆ ಸಿದ್ಧ ಕೌಶಲಗಳು, ಉತ್ಪಾದಕ ಉದ್ಯೋಗ, ಉದ್ಯಮಶೀಲತೆ, ಆರೋಗ್ಯ, ಅಭಿವೃದ್ಧಿ, ಸಮಾನತೆ, ಘನತೆ ಆಧಾರಿತವಾಗಿದೆ. ಉದ್ಯಮಶೀಲತೆಯನ್ನು ಉತ್ತೇಜಿ ಸುವುದು, ಕೌಶಲ್ಯಾಭಿವೃದ್ಧಿ, ಸುಸ್ಥಿರ ಉದ್ಯೋಗಾವ ಕಾಶ ಸೃಷ್ಟಿ ಕುರಿತೂ ಚರ್ಚೆ ನಡೆಯಲಿದೆ. ಆಡಳಿತ ಸುಧಾರಣೆಗಳು, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ, ಸಮನ್ವಯ, ಪಾಲುದಾರಿಕೆಗಳು, ದತ್ತಾಂಶ ಆಧಾರಿತ ವ್ಯವಸ್ಥೆಗಳ ನೆರವಿನಿಂದ ಅನುಷ್ಠಾನ ಮಾರ್ಗಸೂಚಿಯನ್ನು ರೂಪಿಸುವುದರ ಮೇಲೆ ಚರ್ಚೆಗಳು ಕೇಂದ್ರೀಕರಿಸಿರಲಿವೆ ಎನ್ನಲಾಗಿದೆ.

ಸೋನಿಯಾಗೆ ಧನ್ಯವಾದ ಹೇಳಿದ ಸಿಎಂ

ಪುಟ ೧➡ ಸಂಜೆ ಐಎಎಸ್ ಅಧಿಕಾರಿಗಳ ಜತೆ ಔತಣಕೂಟದಲ್ಲಿ ಭಾಗಿಯಾದರು. ಔತಣಕೂಟದ ವೇಳೆ ಉಪ ಮುಖ್ಯಮಂತ್ರಿ, ಹೊಸದಿಲ್ಲಿ ವಿಶೇಷ ಪ್ರತಿನಿಧಿ ಇದ್ದರು.

ಬಂಡಾಯ ಕ್ಯಾಂಪ್ ಸೇರಿದ 19 ಟಿಎಂಸಿ ಸಂಸದರು

ಪುಟ ೧➡ ಪಕ್ಷಾಂತರ ವಿರೋಧಿ ನಿಯಮಗಳಡಿ ಅನರ್ಹತೆಯನ್ನು ತಪ್ಪಿಸುವ ಉದ್ದೇಶದಿಂದ, ಈ ಗುಂಪು ಟಿಎಂಸಿಗೆ ರಾಜೀನಾಮೆ ನೀಡದೆ ಎನ್‌ಡಿಎಗೆ ಬೆಂಬಲ ನೀಡುವ ಮೂಲಕ ಪ್ರತ್ಯೇಕ ಬಣವಾಗಿ ಕಾರ್ಯನಿರ್ವಹಿಸಲು ಸಿದ್ಧತೆ ನಡೆಸುತ್ತಿದೆ.

ಸ್ಪೀಕರ್ ಓಂ ಬಿರ್ಲಾಗೆ ಪತ್ರ: ಟಿಎಂಸಿ ಪ್ರಸ್ತುತ 28 ಲೋಕಸಭಾ ಸಂಸದರನ್ನು ಹೊಂದಿದೆ. ಬಸಿರ್‌ಹತ್ ಸಂಸದ ಹಾಜಿ ನೂರುಲ್ ಇಸ್ಲಾಂ ನಿಧನದ ನಂತರ ಒಂದು ಸ್ಥಾನ ತೆರವಾಗಿದೆ. ಎನ್‌ಡಿಎಗೆ ತಮ್ಮ ಗುಂಪಿನ ಬೆಂಬಲ ತಿಳಿಸಲು ಬಂಡಾಯ ನಾಯಕಿ ಕಾಕೋಲಿ ಘೋಷ್ ದಸ್ತಿದಾರ್ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆಯಲು ಯೋಜಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ದಸ್ತಿದಾರ್ ಅವರೇ ಲೋಕಸಭೆಯಲ್ಲಿ ಪಕ್ಷದ ಮುಖ್ಯ ಸಚೇತಕರಾಗಿ ಮುಂದುವರಿದಿದ್ದಾರೆ ಎಂದು ಭಿನ್ನಮತೀಯ ಸಂಸದರು ವಾದಿಸಿದ್ದಾರೆ.

ರಾಹುಲ್- ಅಭಿಷೇಕ್ ಭೇಟಿ: ಇಂಡಿ ಕೂಟದ ಸಮನ್ವಯ ಬಲಪಡಿಸುವ ಪ್ರಯತ್ನಗಳ ನಡುವೆ ರಾಹುಲ್ ಗಾಂಧಿ ಮತ್ತು ಅಭಿಷೇಕ್ ಬ್ಯಾನರ್ಜಿ ದೆಹಲಿಯಲ್ಲಿ ಭೇಟಿಯಾಗಿದ್ದಾರೆ. ಈ ಸಭೆ, ಮಮತಾ ಬ್ಯಾನರ್ಜಿ, ಸೋನಿಯಾ ಗಾಂಧಿ ನಡುವಿನ ಚರ್ಚೆಯ ಬೆನ್ನಲ್ಲೇ ನಡೆದಿದೆ.

ರಾಜ್ಯಸಭಾ ಸದಸ್ಯೆ ಸುಶ್ಮಿತಾ ದೇವ್ ರಾಜೀನಾಮೆ: ರಾಜ್ಯಸಭಾ ಸಂಸದೆ ಸುಶ್ಮಿತಾ ದೇವ್ ತಮ್ಮ ಸಂಸದ ಸ್ಥಾನಕ್ಕೆ ಮತ್ತು ಎಲ್ಲಾ ಟಿಎಂಸಿ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದು, ಸುಖೇಂದು ಶೇಖರ್ ರಾಯ್ ನಂತರ ಈ ವಾರ ರಾಜೀನಾಮೆ ನೀಡಿದ ಎರಡನೇ ಟಿಎಂಸಿ ರಾಜ್ಯಸಭಾ ಸದಸ್ಯರಾಗಿದ್ದಾರೆ. ಅವರ ರಾಜೀನಾಮೆಯನ್ನು ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅಂಗೀಕರಿಸಿದ್ದಾರೆ.

ರೋಗಿಗಳಿಗೆ ಸಹಾಯವಾಣಿ

ಪುಟ ೧➡ **ಮಳೆಗಾಲದ ಆರೋಗ್ಯ ಸಿದ್ಧತೆಗೆ ಕ್ರಮ:** ಸಾಂಕ್ರಮಿಕ ರೋಗಗಳನ್ನು ತಡೆಯುವ ನಿಟ್ಟಿನಲ್ಲಿ ಮಳೆಗಾಲ ಮತ್ತು ಚಳಿಗಾಲದಲ್ಲಿ ಜನಜಾಗೃತಿ ಮೂಡಿಸಲಾಗುತ್ತಿದೆ. ಸಾರ್ವಜನಿಕರು ಸೋಂಕು ಕಾಯಿಲೆಗಳಿಗೆ ಸ್ವಯಂಪ್ರೇರಿತವಾಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಬೇಕು. ಸಾಂಕ್ರಮಿಕ ರೋಗವನ್ನು ತಡೆಯುವ ನಿಟ್ಟಿನಲ್ಲಿ ಅಂಗಡಿ, ಮನೆ ಸೇರಿ ಕಟ್ಟಡಗಳ ಮುಂಭಾಗ ನೀರು ಶೇಖರಣೆ ಮಾಡಿದಂತೆ ಸೂಚನೆ ನೀಡಲಾಗಿದೆ. ಒಂದು ವೇಳೆ ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯ ಸಂಸ್ಥೆಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಯು.ಟಿ. ಖಾದರ್ ಹೇಳಿದರು. ಶಿವಮೊಗ್ಗ, ಶಿರಸಿ, ಸಾಗರದಲ್ಲಿ ಹೆಚ್ಚಾಗಿ ಕಂಡುಬರುವ ಕ್ಯಾಸನೂರು ಅರಣ್ಯ ರೋಗಕ್ಕೆ (ಕೆಎಫ್‌ಡಿ) ಹಿಂದೆ ಇದ್ದ ವ್ಯಾಕ್ಸಿನ್‌ನ್ನು ನಿಷೇಧಿಸಲಾಗಿದ್ದು, ಹೊಸ ವ್ಯಾಕ್ಸಿನ್ ಕಂಡುಹಿಡಿದಿಲ್ಲ. ಹೀಗಾಗಿ ತೈಲ ನೀಡಲಾಗುತ್ತಿದೆ. ಹಾವು ಕಡಿತಕ್ಕೆ ಸಂಬಂಧಿಸಿದಂತೆ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 10 ಆಂಟಿವೆನಂ ಔಷಧ ಇಟ್ಟುಕೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ. ಕೆಎಫ್‌ಡಿ ಹಾಗೂ ಹಾವು ಕಡಿತಕ್ಕೆ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ರಕ್ತಸಂಗ್ರಹ ಬಗ್ಗೆ ಮಾಹಿತಿಗೆ ಮನವಿ

ಪುಟ ೧➡ ಹಾವು ಕಚ್ಚಿದವರನ್ನು ತ್ವರಿತವಾಗಿ ಆಸ್ಪತ್ರೆಗೆ ಸೇರಿಸಿದವರಿಗೆ ಶ್ಲಾಘನೆಯ ಪ್ರಮಾಣಪತ್ರ ನೀಡಿ, ಈ ಕಾರ್ಯವನ್ನು ಪ್ರೋತ್ಸಾಹಿಸಲಾಗುವುದು. ಅಲ್ಲದೆ, ರಾಜ್ಯದಲ್ಲಿ ಕಣ್ಣಿಗೆ ಸಂಬಂಧಿಸಿ ಆರೋಗ್ಯ ಇಲಾಖೆಯಲ್ಲಿ ಯಾವೆಲ್ಲ ಯೋಜನೆಗಳಿವೆ, ಯಾವ ಸಮಸ್ಯೆಗಳಿವೆ, ಪರಿಹಾರ ಹೇಗೆ ಎಂಬ ಬಗ್ಗೆ ವಿಷನ್ ಕಮಿಟಿ ರಚಿಸಲಾಗುವುದು ಎಂದು ತಿಳಿಸಿದರು.

ನರೇಂದ್ರ ಮೋದಿ ದೀರ್ಘಾವಧಿ

ಪುಟ ೧➡ ಸರ್ಕಾರದ ಉದ್ದೇಶ ಸರಿಯಾಗಿದ್ದರೆ ವೇಗದ ಅಭಿವೃದ್ಧಿಯೂ ಸಾಧ್ಯ ಎಂಬುದನ್ನು ಜನರು ಕಳೆದ 12 ವರ್ಷಗಳಲ್ಲಿ ಕಂಡಿದ್ದಾರೆ ಎಂದು ಮೋದಿ ಹೇಳಿದರು. ತಮ್ಮ ಆಡಳಿತಾವಧಿಯಲ್ಲಿ 25 ಕೋಟಿಗೂ ಹೆಚ್ಚು ಜನರನ್ನು ಬಡತನದಿಂದ ಹೊರತಂದಿರುವುದು ಸರ್ಕಾರದ ನೀತಿಗಳ ಯಶಸ್ಸಿನ ಸಾಕ್ಷಿಯಾಗಿದೆ ಎಂದರು.

ಮೋದಿ ತಮ್ಮ ದಾಖಲೆ ಸಾಧನೆಯನ್ನು ವೈಯಕ್ತಿಕ ಯಶಸ್ಸಾಗಿ ಪರಿಗಣಿಸದೆ, ಅದು ಎನ್‌ಡಿಎ ಮೈತ್ರಿಕೂಟದ ಎಲ್ಲ ಪಕ್ಷಗಳು, ಕಾರ್ಯಕರ್ತರು ಹಾಗೂ ಜನರ ವಿಶ್ವಾಸದ ಫಲ ಎಂದು ಹೇಳಿದರು. ರಾಷ್ಟ್ರಸೇವೆ ತಮ್ಮ ಪಾಲಿಗೆ ಸಾಧನೆ ಅಲ್ಲ, ಸಾಧನೆಗಿಂತಲೂ ಒಂದು ಸಾಧನೆ (ಸಾಧನಾ ಮಾರ್ಗ) ಎಂದು ಬಣ್ಣಿಸಿದ ಅವರು, ವಿಕಸಿತ ಭಾರತದ ಗುರಿ ಸಾಧನೆಗಾಗಿ ಇನ್ನಷ್ಟು ಶ್ರಮಿಸುವಂತೆ ಮೈತ್ರಿ ನಾಯಕರಿಗೆ ಕರೆನೀಡಿದರು.

ವಿಕಸಿತ ಭಾರತಕ್ಕೆ ಎನ್‌ಡಿಎ ಸಂಕಲ್ಪ: ಎನ್‌ಡಿಎ ಮಹಾಸಭೆಯಲ್ಲಿ ಅಂಗೀಕರಿಸಲಾದ ನಿರ್ಣಯದಲ್ಲಿ, ಮೋದಿ ಅವರ ದೂರದೃಷ್ಟಿಯ ನಾಯಕತ್ವ ಮತ್ತು ಅವಿರತ ಸಾರ್ವಜನಿಕ ಸೇವೆಯನ್ನು ಶ್ಲಾಘಿಸಲಾಯಿತು. ಕಳೆದ 12 ವರ್ಷಗಳಲ್ಲಿ ಜನಕೇಂದ್ರಿತ ಅಭಿವೃದ್ಧಿ, ಭಾಗವಹಿಸುವ ಪ್ರಜಾಪ್ರಭುತ್ವ ಮತ್ತು ಫಲಿತಾಂಶಾಧಾರಿತ ಆಡಳಿತದ ಸಮನ್ವಯ ಸಾಧಿಸಲಾಗಿದೆ ಎಂದು ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್, ಸಬ್ ಕಾ ಪ್ರಯಾಸ್ ತತ್ತ್ವದಡಿ ದೇಶದಲ್ಲಿ ಪರಿವರ್ತನಾತ್ಮಕ ಆಡಳಿತ ನೀಡಲಾಗಿದೆ. ಜನರ ನಿರಂತರ ಬೆಂಬಲಕ್ಕೆ ಕೃತಜ್ಞತೆ ಸಲ್ಲಿಸುವ ಎನ್‌ಡಿಎ, 2047ರೊಳಗೆ ವಿಕಸಿತ ಭಾರತ ನಿರ್ಮಾಣದ ಗುರಿಯತ್ತ ಇನ್ನಷ್ಟು ಬದ್ಧತೆಯಿಂದ ಕಾರ್ಯನಿರ್ವಹಿಸುವುದಾಗಿ ಘೋಷಿಸಿತು. 22 ಎನ್‌ಡಿಎ ಆಡಳಿತದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಮೈತ್ರಿ ಪಕ್ಷಗಳ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು.

ನಾಯಕರಿಂದ ಭಾರೀ ಪ್ರಶಂಸೆ: ಗೃಹ ಸಚಿವ ಅಮಿತ್ ಶಾ ಅವರು ಮಾತನಾಡಿ, 62 ವರ್ಷಗಳ ದಾಖಲೆಯನ್ನು ಮೋದಿ ಮುರಿದಿದ್ದಾರೆ. ಇಂದಿನ ಕಾರ್ಯಕ್ಷಮತೆಯ ರಾಜಕಾರಣದಲ್ಲಿ ಜನರು ನಿರಂತರವಾಗಿ ವಿಶ್ವಾಸ ವ್ಯಕ್ತಪಡಿಸಿರುವುದು ಅವರ ಜನಮನ್ನಣೆಯ ಸಂಕೇತ ಎಂದು ಹೇಳಿದರು. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಾತನಾಡಿ, ಯಾರನ್ನೂ ಪ್ರಚೋದಿಸುವುದಿಲ್ಲ, ಆದರೆ ಯಾರಾದರೂ ಪ್ರಚೋದಿಸಿದರೆ ಬಿಡುವುದಿಲ್ಲ ಎಂಬ ಸ್ಪಷ್ಟ ರಾಷ್ಟ್ರೀಯ ಭದ್ರತಾ ನೀತಿಯನ್ನು ಮೋದಿ ಸರ್ಕಾರ ಅನುಸರಿಸಿದೆ ಎಂದು ಅಭಿಪ್ರಾಯಪಟ್ಟರು. ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು, ಮೋದಿ ಈ ಶತಮಾನವನ್ನು ಮುನ್ನಡೆಸುತ್ತಿದ್ದಾರೆ ಎಂದು ಶ್ಲಾಘಿಸಿದರು. ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ, 140 ಕೋಟಿ ಭಾರತೀಯರ ಆತ್ಮಗೌರವದ ಪ್ರತೀಕ ಮೋದಿ ಎಂದು ಬಣ್ಣಿಸಿದರು. ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ, 2047ರ ವಿಕಸಿತ ಭಾರತದ ಕನಸು ಮೋದಿ ನೇತೃತ್ವದಲ್ಲೇ ನನಸಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೋದಿ ಕಾಲದ ಬದಲಾವಣೆ

ವಿದ್ಯಾರ್ಥಿವೇತನ

- ಫಲಾನುಭವಿಗಳಲ್ಲಿ ಶೇ.58 ಎಸ್‌ಸಿ/ಎಸ್‌ಟಿ/ಒಬಿಸಿ ಸಮುದಾಯದ ವಿದ್ಯಾರ್ಥಿಗಳು
- ಪ್ರಧಾನಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)
- ಶೇ.44.2 ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಮನೆ

ಜಾಗತಿಕ ನಾಯಕರಿಂದ ಅಭಿನಂದನೆಗಳ ಮಹಾಪೂರ

ಪ್ರಧಾನಿ ಮೋದಿ ಅವರ ದಾಖಲೆಯ ಸಾಧನೆಗೆ ವಿಶ್ವದ ಹಲವು ರಾರಾಷ್ಟ್ರಗಳ ನಾಯಕರು ಅಭಿನಂದನೆ ಸಲ್ಲಿಸಿದ್ದಾರೆ. ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ, ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರ ದಿಸ್ಸಾನಾಯಕೆ, ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮ್ಯುಜು, ದಕ್ಷಿಣ ಕೊರಿಯಾ ಅಧ್ಯಕ್ಷ ಲೀ ಜೇ ಮ್ಯೂಂಗ್, ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಸೇರಿದಂತೆ ಹಲವು ನಾಯಕರು ಸಾಮಾಜಿಕ ಜಾಲತಾಣಗಳ ಮೂಲಕ ಹಾಗೂ ಅಧಿಕೃತ ಸಂದೇಶಗಳ ಮೂಲಕ ಶುಭಾಶಯ ಕೋರಿದ್ದಾರೆ.

ರಾಷ್ಟ್ರಪತಿ ಮುರ್ಮು ಮೆಚ್ಚುಗೆ

ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಅತಿ ದೀರ್ಘಾವಧಿಯ ನಿರಂತರ ಚುನಾಯಿತ ಪ್ರಧಾನಿಯಾಗಿ



ಹೊಸ ದಾಖಲೆ ನಿರ್ಮಿಸಿದ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ವಿಶೇಷ ಅಭಿನಂದನಾ ಪತ್ರ ಬರೆದಿದ್ದಾರೆ. ಮೋದಿ ಆಡಳಿತಾವಧಿಯಲ್ಲಿ ದೇಶದ ಆಡಳಿತ ವ್ಯವಸ್ಥೆ, ಆರ್ಥಿಕ ಸ್ಥಿರತೆ ಹಾಗೂ ಸಾಮಾಜಿಕ ಪರಿವರ್ತನೆಯ ಕ್ಷೇತ್ರಗಳಲ್ಲಿ ಮಹತ್ವದ ಬದಲಾವಣೆಗಳು ಕಂಡುಬಂದಿವೆ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಸಾಮಾನ್ಯ ಕುಟುಂಬದಿಂದ ದೇಶದ ಅತ್ಯುನ್ನತ ಕಾರ್ಯನಿರ್ವಾಹಕ ಹುದ್ದೆಗೆ ಏರಿದ ಮೋದಿ ಅವರ ಪಯಣ ಭಾರತೀಯ ಪ್ರಜಾಪ್ರಭುತ್ವದ ಶಕ್ತಿಗೆ ಸಾಕ್ಷಿಯಾಗಿದೆ ಎಂದು ರಾಷ್ಟ್ರಪತಿ ಬಣ್ಣಿಸಿದ್ದಾರೆ. ಇದೇ ವೇಳೆ ಪ್ರಧಾನಿ ಮೋದಿ ಅವರು, ರಾಷ್ಟ್ರಪತಿಗಳಿಗೆ ಧನ್ಯವಾದ ಅರ್ಪಿಸಿದ್ದಾರೆ.

ಸಮಾಜ ಹಿತದ ಧ್ವನಿ ಈಶ್ವರಪ್ಪ: ಪೇಜಾವರ ಶ್ರೀ

• **ಶಿವಮೊಗ್ಗ:** ಸಮಾಜಕ್ಕಾಗಿ ಬದುಕುವುದೇ ನಿಜವಾದ ಜೀವನವಾಗಿದ್ದು, ಇಂತಹ ಜೀವನವನ್ನು ಸಮಾಜ ಸ್ಮರಿಸುತ್ತದೆ. ಅಂತಹ ಜೀವನ ಈಶ್ವರಪ್ಪನವರದ್ದಾಗಿದೆ ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಹೇಳಿದರು.

ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪನವರ 78ನೇ ಹುಟ್ಟುಹಬ್ಬದ ಪ್ರಯುಕ್ತ ಕೆ.ಎಸ್.ಈಶ್ವರಪ್ಪ ಅಭಿಮಾನಿ ಬಳಗದ ಸಹಕಾರದೊಂದಿಗೆ ಶ್ರೀಗಂಧ ಸಂಸ್ಥೆ, ಮಾರಿಕಾಂಬಾ ಮೈಕ್ರೋ ಫೈನಾನ್ಸ್



ವತಿಯಿಂದ ಮಲ್ಲೇಶ್ವರ ನಗರದಲ್ಲಿ ಬುಧವಾರ ಆಯೋಜಿಸಿದ್ದ ಸಾಮೂಹಿಕ ಸತ್ಯನಾರಾಯಣ ಪೂಜೆ, ಸಾಮೂಹಿಕ ರುದ್ರ ಪಠಣ, ಮಂಗಳನಿಧಿ ಸಮರ್ಪಣೆ, ಸಂಗೀತಾ ಭಿವಂದನೆ ಸಮೂಹ ಗಾಯನ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು. ಧರ್ಮ, ಹಿಂದುತ್ವದ ಪ್ರಶ್ನೆ ಬಂದಾಗ ಅವನ್ನು ಸಮರ್ಥನೆ ಮಾಡಿಕೊಳ್ಳುವ ಅವರು, ಎಂದಿಗೂ ಧರ್ಮ ಹಾಗೂ ಹಿಂದುತ್ವವನ್ನು ಬಿಟ್ಟು ಕೊಡದ ವ್ಯಕ್ತಿಯಾಗಿದ್ದಾರೆ. ಸಮಾಜದ ಪರವಾಗಿ ಬದುಕುವುದೇ ನಿಜವಾದ ಬದುಕೆಂದು ಭಾವಿಸಿದ್ದಾರೆ. ಸಾಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡುತ್ತಾ ಸಮಾಜದೊಂದಿಗೆ ಬೆರೆತು ಜೀವನ ನಡೆಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಮಾದಾರ ಚೆನ್ನಯ್ಯ ಸ್ವಾಮೀಜಿ, ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ, ಶ್ರೀ ನಾದಮಯಾನಂದನಾಥ ಸ್ವಾಮೀಜಿ, ಆರ್‌ಎಸ್‌ಎಸ್ ದಕ್ಷಿಣ ಪ್ರಾಂತ ಸಹಕಾರ್ಯವಾಹ ಪಟ್ಟಾಭಿರಾಮ, ವಿಪ ಶಾಸಕ ಡಿ.ಎಸ್. ಅರುಣ್, ಕೆ.ಇ. ಕಾಂತೇಶ್ ಪಾಲ್ಗೊಂಡಿದ್ದರು.



ಹೊಸದಿಲ್ಲಿಯ ಕರ್ನಾಟಕ ಭವನದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಡಿಸಿಎಂ ಡಾ.ಜಿ ಪರಮೇಶ್ವರ, ಸಚಿವ ಕೃಷ್ಣಬೈರೇಗೌಡ ಸಮ್ಮುಖದಲ್ಲಿ ಐಎಎಸ್ ಅಧಿಕಾರಿಗಳ ಜತೆಗೆ ಸಭೆ ನಡೆಸಿದರು. ಸಭೆಯಲ್ಲಿ ರಾಜ್ಯ ಸರ್ಕಾರದ ವಿಶೇಷ ಪ್ರತಿನಿಧಿ ಟಿ.ಬಿ ಜಯಚಂದ್ರ, ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಇದ್ದರು.

ಕುಟುಂಬದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ: ರೆಡ್ಡಿ

• **ಬಳ್ಳಾರಿ:** ನಮ್ಮ ಕುಟುಂಬದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ, ಬಳ್ಳಾರಿ ನಗರ ಕ್ಷೇತ್ರ ಮಹಿಳಾ ಮೀಸಲಾತಿ ಆದರೆ ಮಾತ್ರ ಪತ್ನಿ ಅರುಣಾಲಕ್ಷ್ಮೀ 2028ರ ಚುನಾವಣೆಯಲ್ಲಿ



ಸ್ಪರ್ಧೆ, ಇಲ್ಲಾಂದ್ರೆ ಸಹೋದರ ಗಾಲಿ ಸೋಮಶೇಖರ್ ರೆಡ್ಡಿ ಅವರೇ ಸ್ಪರ್ಧೆ ಮಾಡುತ್ತಾರೆ. ಇಬ್ಬರೂ ಸಕ್ರಿಯವಾಗಿ ಕೆಲಸ ಮಾಡ್ತಿದ್ದಾರೆ, ಈ ವಿಚಾರದಲ್ಲಿ ನಮ್ಮಲ್ಲಿಯಾವುದೇ ಒಡಕಿಲ್ಲ, ಭಿನ್ನಾಭಿಪ್ರಾಯವಿಲ್ಲ ಎಂದು ಮಾಜಿ ಸಚಿವ, ಗಂಗಾವತಿ ಶಾಸಕ ಗಾಲಿ ಜನಾರ್ಧನ ರೆಡ್ಡಿ ಸ್ಪಷ್ಟಪಡಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದರು. ಕಳೆದ ಬಾರಿ ಕೆಟ್ಟ ಘಳಿಗೆ ಹಿನ್ನೆಲೆ ಕ್ಷೇತ್ರ ಇನ್ನೊಬ್ಬರ ಪಾಲಾಯ್ತು. ಆದರೆ, ಈ ಬಾರಿ ಹಾಗೆ ಆಗೋಕೆ ಬಿಡೋಲ್ಲ. ಕ್ಷೇತ್ರ ಮರು ವಿಂಗಡಣೆಗೆ ಟಿಎಂಸಿ ಅವರ ಬೆಂಬಲ ಸಿಕ್ಕಿದೆ, ಮೀಸಲಾತಿ ಬದಲಾದರೆ ನೋಡೋಣ, ಇಲ್ಲಾಂದ್ರೆ ಸಹೋದರ ಗಾಲಿ ಸೋಮಶೇಖರ್ ರೆಡ್ಡಿ ಅವರೇ ಸ್ಪರ್ಧೆ ಮಾಡುತ್ತಾರೆ. ಕ್ಷೇತ್ರದ ಜನರು ಬಿಜೆಪಿ ಗೆಲ್ಲಿಸಲು ತುದಿಗಾಲ ಮೇಲೆ ನಿಂತಿದ್ದಾರೆ. ಈ ವಿಚಾರದಲ್ಲಿ ಅಪಪ್ರಚಾರ ಬೇಡ ಎಂದರು.

ಮುಂಬರುವ ಚುನಾವಣೆಯಲ್ಲಿ ಗಂಗಾವತಿ ಕ್ಷೇತ್ರದಿಂದಲೇ ಸ್ಪರ್ಧೆ ಮಾಡುತ್ತೀರಾ ಎನ್ನುವ ಪ್ರಶ್ನೆಗೆ ಉತ್ತರಿಸಿದರು. ಇದನ್ನು ಹೈ ಕಮಾಂಡ್ ವರಿಷ್ಠರು ತೀರ್ಮಾನ ಮಾಡುತ್ತಾರೆ. 28ರಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ತರಬೇಕು ಎನ್ನುವ ಗುರಿ ನಮ್ಮದಿದೆ. ಹಳೇ ಬಸ್ ಚಾಲಕ ಮಾತ್ರ ಬದಲಾಗಿದ್ದಾರೆ. ಈಗಲೇ ಎಲ್ಲವನ್ನೂ ಹೇಳೋಕೆ ಆಗೋಲ್ಲ, ರಾಜ್ಯದ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ವಹಿಸಿಕೊಂಡು ಕೆಲದಿನಗಳು ಕಳೆದಿವೆ. ಈಗಲೇ ಮಾತನಾಡುವುದು ಸರಿಯಲ್ಲ, ಕನಿಷ್ಠ 3 ತಿಂಗಳು ಬೇಕು, ಕಾದು ನೋಡೋಣ ಎಂದರು.

ಕಿರುಸುದ್ದಿ

ಮೈಸೂರಿನಲ್ಲಿ ಹುಲಿ ಸೆರೆ

• **ಮೈಸೂರು:** ಜಿಲ್ಲೆಯ ಹುಣಸೂರು ತಾಲೂಕಿನ ತಟ್ಟೆಕೆರೆ ಬಳಿ ಇರುವ ಕಾಂಗ್ರೆಸ್‌ನ ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಅವರ ತೋಟದಲ್ಲಿ ಅರಣ್ಯ ಇಲಾಖೆ ಇಟ್ಟಿದ್ದ ಬೋನಿಗೆ ಹುಲಿ ಸೆರೆಯಾಗಿದೆ. ಕಳೆದ ಒಂದು ತಿಂಗಳಿಂದ ತಟ್ಟೆಕೆರೆ ಗ್ರಾಮ ಹಾಗೂ ಆಸುಪಾಸಿನ ಗ್ರಾಮಗಳಲ್ಲಿ ಹುಲಿ ಕಾಣಿಸಿಕೊಂಡು, ವಾರದ ಹಿಂದೆ ಜಾನುವಾರು ಭೇಟಿಯಾಡಿ ಸ್ಥಳೀಯರಲ್ಲಿ ಆತಂಕ ಸೃಷ್ಟಿಸಿತ್ತು. ಅರಣ್ಯ ಇಲಾಖೆ ಹುಲಿ ಪತ್ತೆ ಕಾರ್ಯಾಚರಣೆಗೆ 10 ಸಿಸಿ ಕ್ಯಾಮೆರಾ ಅಳವಡಿಸಿ, ಅದರ ಚಲನ ವಲನ ಗಮನಿಸಿ ಬೋನು ಇಟ್ಟಿದ್ದರು. ಈಗ ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಅವರ ತೋಟದಲ್ಲಿಟ್ಟಿದ್ದ ಬೋನಿಗೆ ಹೊಕ್ಕ ಹುಲಿ ಸೆರೆಯಾಗಿದೆ. ಸ್ಥಳೀಯರು ಎರಡು ಹುಲಿ ಇವೆ ಎನ್ನುತ್ತಿದ್ದಾರೆ ಈಗ ಒಂದು ಬೋನಿಗೆ ಬಿದ್ದಿದೆ. ಇನ್ನೊಂದು ಹುಲಿ ಇದ್ದರೆ ಅದನ್ನೂ ಸೆರೆ ಹಿಡಿಯಲಾಗುವುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ಗುಂಡು ಹಾರಿಸಿಕೊಂಡು ಗೃಹಿಣಿ ಆತ್ಮಹತ್ಯೆ

• **ಚಿಕ್ಕಮಗಳೂರು:** ನಗರದ ಹಾಲೇನಹಳ್ಳಿ ಬಡಾವಣೆಯಲ್ಲಿ ಗೃಹಿಣಿಯೊಬ್ಬರು ರಿವಾಲ್ವಾರ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತರನ್ನು ಸುಮಾ (55) ಎಂದು ಗುರುತಿಸಲಾಗಿದೆ. ಘಟನೆ ನಡೆದ ವೇಳೆ ಮನೆಯಲ್ಲಿ ಯಾರೂ ಇರಲಿಲ್ಲ ಎಂದು ತಿಳಿದುಬಂದಿದೆ. ಮೃತರ ಪತಿ ರಾಜೇಶ್ ಕಾಫಿ ಉದ್ಯಮಿಯಾಗಿದ್ದಾರೆ. ಪ್ರಾಥಮಿಕ ಮಾಹಿತಿ ಪ್ರಕಾರ, ಸುಮಾ ಅವರು ಡೆತ್ ನೋಟ್ ಬರೆದಿಟ್ಟು ಪರವಾನಗಿ ಹೊಂದಿದ ರಿವಾಲ್ವಾರ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿದ್ದಾರೆ. ಸಾವಿಗೆ ನಿಖರ ಕಾರಣ ತಿಳಿದುಬಂದಿಲ್ಲ. ಆತ್ಮಹತ್ಯೆಗೆ ಅನಾರೋಗ್ಯ ಕಾರಣ ಇರಬಹುದೆಂದು ಶಂಕಿಸಲಾಗಿದೆ. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ದಯಾಮ ಭೇಟಿ ನೀಡಿ ಪರಿಶೀಲಿಸಿದ್ದಾರೆ. ರಿವಾಲ್ವಾರ್ ಮತ್ತು ಡೆತ್ ನೋಟ್ ವಶಕ್ಕೆ ಪಡೆಯಲಾಗಿದೆ. ಮೇಲ್ನೋಟಕ್ಕೆ ಆತ್ಮಹತ್ಯೆಯಂತೆ ಕಾಣುತ್ತಿದೆ. ತನಿಖೆ ಮುಂದುವರಿಸಲಾಗುವುದು ಎಂದು ಈ ವೇಳೆ ಎಸ್ಪಿ ತಿಳಿಸಿದ್ದಾರೆ. ಬಸವನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಲಾರಿಗಳ ಡಿಕ್ಕಿ: ವ್ಯಕ್ತಿ ಸಜೀವ ದಹನ



• **ಬಳ್ಳಾರಿ:** ಲಾರಿಗಳ ಮುಖಾಮುಖಿ ಡಿಕ್ಕಿಯಿಂದ, ಎರಡೂ ಲಾರಿಗಳು ಬೆಂಕಿಗೆ ಆಹುತಿಯಾಗಿದ್ದು, ವ್ಯಕ್ತಿಯೊಬ್ಬ ಸಜೀವ ದಹನವಾದ ದಾರುಣ ಘಟನೆ ಸಮೀಪದ ಗಡಿ ಭಾಗದ ಬಾಚಿಗೆಲ್ಲು ಟೋಲ್ ಪ್ಲಾಜಾ ಬಳಿ ಬುಧವಾರ ನಡೆದಿದೆ. ಡಿ.ಹಿರಾಳ ಹಾಗೂ ಬಳ್ಳಾರಿ ರಸ್ತೆಗೆ ಹೊಂದಿಕೊಂಡ ಆಂಧ್ರಗಡಿ ಭಾಗದ ಆಂಧ್ರದ ಅನಂತಪುರ ಜಿಲ್ಲೆಯ ಡಿ.ಹೀರಾಳ್ ಮಂಡಲ ವ್ಯಾಪ್ತಿಯ ಟೋಲ್ ಪ್ಲಾಜಾ ಬಳಿ ಎರಡೂ ಲಾರಿಗಳ ಡಿಕ್ಕಿಯ ರಭಸಕ್ಕೆ ಕೆಲ ಹೊತ್ತಿನಲ್ಲೇ ಎರಡು ಲಾರಿಗಳಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಲಾರಿಯಲ್ಲಿ ಸಿಲುಕಿದ ಚಾಲಕ ದೀಕ್ಷಿತ್ ಎನ್ನುವ ವ್ಯಕ್ತಿ ಹೊರ ಬರಲಾಗದೇ ಬೆಂಕಿಯ ತೀವ್ರತೆಗೆ ವಾಹನದಲ್ಲಿ ಮೃತಪಟ್ಟಿದ್ದಾನೆ. ರಾಷ್ಟ್ರೀಯ ಹೆದ್ದಾರಿ ಯಲ್ಲಿ ಪಂಚರ್ ಆಗಿದ್ದ ಸಿಮೆಂಟ್ ಟ್ಯಾಂಕರ್ ವೊಂದು ರಸ್ತೆ ಬದಿಯಲ್ಲಿ ನಿಂತಿತ್ತು. ಈ ವೇಳೆ ರಾಂಪುರ ಕಡೆಯಿಂದ ಬಂದ ಲಾರಿ ಟ್ಯಾಂಕರ್ ಡಿಕ್ಕಿ ಹೊಡೆದಿದೆ. ಕ್ಷಣಾರ್ಧದಲ್ಲೇ ಎರಡು ಲಾರಿಗಳು ಸಂಪೂರ್ಣ ಬೆಂಕಿಗೆ ಆಹುತಿಯಾಗಿವೆ.

12 ವರ್ಷಗಳಿಂದ ದೇಶದ ಪ್ರಧಾನ ಸೇವಕರಾಗಿ ಕೆಲಸ ನಿರ್ವಹಿಸಿದ ನರೇಂದ್ರ ಮೋದಿ

ಮೋದಿ ಯಶಸ್ಸಿಗೆ ಪೂಜೆ

• **ಬೆಂಗಳೂರು:** ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಚುನಾಯಿತ ಪ್ರಧಾನಿಗಳಾಗಿ ಕಳೆದ 12 ವರ್ಷಗಳಿಂದ ದೇಶದ ಪ್ರಧಾನ ಸೇವಕರಾಗಿ ಕೆಲಸ ನಿರ್ವಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬುಧವಾರ ರಾಜ್ಯಾದ್ಯಂತ ಬಿಜೆಪಿ ನಾಯಕರು, ಮುಖಂಡರು, ಕಾರ್ಯಕರ್ತರು ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಬೆಂಗಳೂರು ಮಲ್ಲೇಶ್ವರದ ಶ್ರೀ ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು. ಬಳಿಕ ಮಾತನಾಡಿದ ವಿಜಯೇಂದ್ರ, ಮೋದಿ ಅವರು 43,99 ದಿನಗಳು ನಿರಂತರವಾಗಿ ಪ್ರಧಾನಮಂತ್ರಿಗಳಾಗಿ, ದೇಶದ ಪ್ರಧಾನ ಸೇವಕ ಎಂಬ ಭಾವನೆಯಿಂದ ಭಾರತವನ್ನು ಮುನ್ನಡೆಸುತ್ತಿದ್ದಾರೆ. ಇದೊಂದು ದಾಖಲೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬಣ್ಣಿಸಿದ್ದಾರೆ.

ದೇಶದ ಹೆಮ್ಮೆಯ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2014ರ ಮೇ ತಿಂಗಳಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿ, ಸತತ 3 ಬಾರಿಗೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ. ಅಲ್ಲದೇ ಪ್ರಜಾಸತ್ತಾತ್ಮಕವಾಗಿ ಚುನಾಯಿತ ಪ್ರಧಾನಿಯಾಗಿ ಅವರು ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಪ್ರತಿಯೊಬ್ಬ ಭಾರತೀಯರು ಇದು ಹೆಮ್ಮೆ ಪಡುವ ವಿಚಾರ ಎಂದು ಹೇಳಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಿಕಸಿತ ಭಾರತ, ಆತ್ಮನಿರ್ಭರ ಭಾರತದ ಕನಸು ಈಡೇರಲಿ ಎಂದು ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದ್ದೇವೆ. ಮೋದಿ ಅವರಿಗೆ ಇನ್ನಷ್ಟು ಹೆಚ್ಚು ಆಯುಸ್ಸು ಕೊಟ್ಟು, ಹೆಚ್ಚು ಶಕ್ತಿ ಕೊಟ್ಟು, ಹೆಚ್ಚು ದಿನಗಳ ಕಾಲ ಪ್ರಧಾನಿಯಾಗಿ ಕೆಲಸ ಮಾಡುವ ಶಕ್ತಿಯನ್ನು ಭಗವಂತನು ದಯಪಾಲಿಸಲಿ ಎಂದು ಪ್ರಾರ್ಥನೆ ಸಲ್ಲಿಸಿದ್ದಾಗಿ ವಿವರಿಸಿದರು.

ಒಂದು ದಿನವೂ ವಿಶ್ರಾಂತಿ ಪಡೆಯದೇ ಭ್ರಷ್ಟಾಚಾರ ರಹಿತ ಆಡಳಿತವನ್ನು ಮೋದಿ ಅವರು ನೀಡುತ್ತಿದ್ದಾರೆ. ಜಾಗತಿಕ ಸವಾಲುಗಳ ನಡುವೆ ಮೂಲಭೂತ ಸೌಕರ್ಯ, ಕೃಷಿ ಕ್ಷೇತ್ರ, ಆರೋಗ್ಯ ಕ್ಷೇತ್ರ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಭಾರತವನ್ನು ಮುನ್ನಡೆಸುತ್ತಿದ್ದಾರೆ. ಇದರಿಂದ ಭಾರತ ಜಗತ್ತಿನ 4ನೇ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. ಇದಕ್ಕೆ ಮೋದಿ ಅವರ ದಿಟ್ಟ ನಾಯಕತ್ವ ಕಾರಣ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ. ರಾಧಾ ಮೋಹನ್ ದಾಸ್ ಅಗರವಾಲ್, ರಾಜ್ಯ ಸಹ ಉಸ್ತುವಾರಿ ಸುಧಾಕರ್ ರೆಡ್ಡಿ, ಶಾಸಕ ಡಾ. ಸಿ.ಎನ್. ಅಶ್ವತ್ಥ ನಾರಾಯಣ, ರಾಜ್ಯ ಉಪಾಧ್ಯಕ್ಷ ಮುರುಗೇಶ್ ನಿರಾಣಿ, ಶಾಸಕರಾದ ಬಸವರಾಜ ಮತ್ತಿಮಡು, ಡಾ. ಶಿವರಾಜ್ ಪಾಟೀಲ್, ವಿಪ ಸದಸ್ಯ ಪಿ.ಎಚ್. ಪೂಜಾರ್, ಎಸ್‌ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು, ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಸ್. ದತ್ತಾತ್ರೀ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಪಕ್ಷದ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.



ಆಯಸ್ಸು, ಆರೋಗ್ಯ ವೃದ್ಧಿಗೆ ಪ್ರಾರ್ಥನೆ: ಅಗರವಾಲ್

ಶೇಷಾದ್ರಿಪುರ ವಾರ್ಡಿನ (ಹೈಲ್ಯೆನ್) ಶ್ರೀರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ. ರಾಧಾಮೋಹನ್ ದಾಸ್ ಅಗರವಾಲ್ ಅವರು ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾರತದ ಚುನಾಯಿತ ಪ್ರಧಾನಿಗಳಾಗಿ ಸುದೀರ್ಘ ಕಾಲ ಸೇವೆ ಸಲ್ಲಿಸಿದ್ದಾರೆ. ಮೋದಿ ಅವರು ಮಾಡಿದ ಸೇವೆ ಐತಿಹಾಸಿಕ ದಾಖಲೆಯಾಗಿದೆ ಎಂದು ಹೇಳಿದರು. ಪ್ರಧಾನಿಯವರ ಆಯುಸ್ಸು, ಆರೋಗ್ಯ ವೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿ ವಿಶೇಷ ಪೂಜೆ ನೆರವೇರಿಸಲಾಗಿದೆ ಎಂದು ತಿಳಿಸಿದರು.

ಸಂಪೂರ್ಣ ಡಿಜಿಟಲೀಕರಣ



• **ಬೆಂಗಳೂರು:** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) ಮೂಲಕ ನಡೆಯುವ ಭೂಸ್ವಾಧೀನ ಮತ್ತು ನಿವೇಶನ ಮಂಜೂರಾತಿ ಯವರೆಗಿನ ಪ್ರತಿಯೊಂದು ಪ್ರಕ್ರಿಯೆಯೂ ಇನ್ನು ಮುಂದೆ ಡಿಜಿಟಲ್ ರೂಪದಲ್ಲಿ ನಡೆಯಲಿದ್ದು, ಈ ಸಂಬಂಧದ ಕೆಲಸಗಳನ್ನು ಮುಂದಿನ ನೂರು ದಿನಗಳಲ್ಲಿ ಮುಗಿಸಬೇಕು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸೂಚನೆ ನೀಡಿದ್ದಾರೆ.

ನೂತನ ಸರಕಾರ ಅಸ್ತಿತ್ವಕ್ಕೆ ಬಂದ ಬಳಿಕ ಅವರು ಖನಿಜ ಭವನದಲ್ಲಿ ಬುಧವಾರ ತಮ್ಮ ಇಲಾಖೆಯ 2ನೇ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಈ ಸಭೆಯಲ್ಲಿ ಅವರು ನೂರು ದಿನಗಳಲ್ಲಿ ಮಾಡಬೇಕಾದ ಕೆಲಸಗಳೇನೇನು ಎಂದು ಸ್ಪಷ್ಟಪಡಿಸಿದರು. ಡಿಜಿಟಲ್ ರೂಪದಲ್ಲಿ ಕಾರ್ಯನಿರ್ವಹಿಸುವುದರಿಂದ ರೈತರು, ಉದ್ಯಮಿಗಳು ಸೇರಿದಂತೆ ಎಲ್ಲರಿಗೂ ಅನುಕೂಲ ವಾಗಲಿದೆ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಪ್ರತಿಯೊಂದು ಮಾಹಿತಿಯೂ ಶಾಶ್ವತವಾಗಿ ಉಳಿಯುತ್ತದೆ: ಕೈಗಾರಿಕಾ ನಿವೇಶನದ ಮಂಜೂರಾತಿ, ಅದರ ಸ್ಥಿತಿಗತಿ, ಅಲ್ಲಿರುವ ಕೈಗಾರಿಕೆ, ಮಾಡಿರುವ ಹೂಡಿಕೆ, ಆಗಿರುವ ಉದ್ಯೋಗಸೃಷ್ಟಿ, ಸಂತ್ರಸ್ತ ರೈತರಿಗೆ ಕೊಟ್ಟಿರುವ ಪರಿಹಾರ, ಕೋರ್ಟ್ ಕೇಸಿನ ವಿವರಗಳು, ಹೂಡಿಕೆದಾರರಿಗೆ ಕೊಟ್ಟಿರುವ ಕಾಲಾವಕಾಶ ಮುಂತಾದ ವಿವರಗಳು ಡಿಜಿಟಲೀಕರಣದಿಂದ ಕ್ಷಣಾರ್ಧದಲ್ಲಿ ಸಿಗಲಿವೆ. ಬಹಳ ಹಿಂದಿನ ದಾಖಲೆಗಳನ್ನು ಕಾಪಾಡುವ ಕಷ್ಟವೂ ಇದರಿಂದ ತಪ್ಪಲಿದ್ದು, ಪ್ರತಿಯೊಂದು ಮಾಹಿತಿಯೂ ಶಾಶ್ವತವಾಗಿ ಉಳಿಯಲಿದೆ ಎಂದು ಅವರು ವಿವರಿಸಿದ್ದಾರೆ. ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಖುಷ್ಬೂ ಗೋಯಲ್ ಚೌಧರಿ, ಕೆಐಎಡಿಬಿ ಸಿಇಒ ಗೋವಿಂದ ರೆಡ್ಡಿ, ಅರವಿಂದ ಗಲಗಲಿ ಇದ್ದರು.

ಪಾರದರ್ಶಕತೆಗೆ ಒತ್ತು: ಪಾಟೀಲ್

ಹಿಂದೆ ಎಷ್ಟೋ ಪ್ರಕರಣಗಳಲ್ಲಿ ದಾಖಲೆಗಳು ಸರಿಯಾಗಿಲ್ಲದೆ ಒಂದೊಂದೇ ಜಮೀನಿಗೆ ಎರಡೆರಡು ಬಾರಿ ಪರಿಹಾರ ಕೊಟ್ಟಿರುವ ಪ್ರಕರಣಗಳು ಕೂಡ ಸಂಭವಿಸಿವೆ. ಹೊಸ ವ್ಯವಸ್ಥೆಯಿಂದ ಸಂಪೂರ್ಣ ಪಾರದರ್ಶಕತೆ ಬರಲಿದ್ದು, ಹೂಡಿಕೆದಾರರು ತಾವು ಇರುವಲ್ಲಿಂದಲೇ ತಮಗೆ ಬೇಕಾದ ಮಾಹಿತಿ ಪಡೆದುಕೊಳ್ಳಬಹುದು. ಇಲ್ಲಿ ಮಧ್ಯವರ್ತಿಗಳ ಕಾಟ ಇರುವುದಿಲ್ಲ ಎಂದು ಅವರು ನುಡಿದಿದ್ದಾರೆ.

ಮೋದಿಯವರದ್ದು ಅನುಪಮ ಸಾಧನೆ: ರಾಘವೇಶ್ವರ ಭಾರತೀ ಶ್ರೀ

• **ಬೆಂಗಳೂರು:** ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ದೇಶದಲ್ಲಿ ಪ್ರಧಾನಿಯಾಗುವುದೇ ಒಂದು ಸಾಧನೆಯಾಗಿದೆ. ಅದರಲ್ಲೂ ಅತಿಹೆಚ್ಚು ಅವಧಿಗೆ ಪ್ರಧಾನಿಯಾಗಿ ದಾಖಲೆ ನಿರ್ಮಿಸಿರುವ



ನರೇಂದ್ರ ಮೋದಿಯವರದ್ದು ಅನುಪಮ ಸಾಧನೆ ಎಂದು ರಾಮಚಂದ್ರಾಪುರ ಮಠದ ಶ್ರೀರಾಘವೇಶ್ವರ ಭಾರತೀ ಸ್ವಾಮೀಜಿ ತಿಳಿಸಿದ್ದಾರೆ.

ಅತಿಹೆಚ್ಚು ಅವಧಿಗೆ ಪ್ರಧಾನಿಯಾಗಿ ದಾಖಲೆ ನಿರ್ಮಿಸಿರುವ ನರೇಂದ್ರ ಮೋದಿ ಅವರಿಗೆ ಅಭಿನಂದನೆ ಸಲ್ಲಿಸಿರುವ ಅವರು, ಅನೇಕ ಜನಪರ ಕಾರ್ಯಕ್ರಮಗಳ ಜೊತೆಗೆ ದೇಶವನ್ನು ಸರಿಯಾದ ದಿಕ್ಕಿನೆಡೆಗೆ ಕೊಂಡೊಯ್ಯುತ್ತಿರುವುದು ಶ್ಲಾಘನೀಯವಾಗಿದೆ. ದೇಶಕ್ಕೆ ಇನ್ನಷ್ಟು ಸಮಯ ಇನ್ನೂ ಹೆಚ್ಚಿನ ಸೇವೆಸಲ್ಲಿಸುವ ಶಕ್ತಿ ಅವರಿಗೆ ಪ್ರಾಪ್ತವಾಗಲಿ ಎಂದು ಶ್ರೀಕರಾರ್ಚಿತ ದೇವತಾ ಸಾನ್ನಿಧ್ಯದಲ್ಲಿ ಪ್ರಾರ್ಥಿಸುತ್ತೇವೆ ಹಾಗೂ ಮುಂದೆ ದೇಶವನ್ನು ಮುನ್ನಡೆಸುವ ನಾಯಕರೂ ಕೂಡ ಮೋದಿಯವರಂತವರೇ ಬರುವಂತಾಗಲಿ ಎಂದು ಶ್ರೀಗಳು ಶುಭ ಹಾರೈಸಿದ್ದಾರೆ.

ಆರ್‌ಎಸ್‌ಎಸ್‌ಗೆ ಜಗತ್ತಿನ ಮನ್ನಣೆ ಸಿಕ್ಕಿದೆ: ಸಂಸದ ಬೊಮ್ಮಾಯಿ

• **ಗದಗ:** ಆರ್‌ಎಸ್‌ಎಸ್‌ಗೆ ಸುದೀರ್ಘವಾದ ಇತಿಹಾಸ ಇದೆ. ಕಾಂಗ್ರೆಸ್ ವಿದೇಶಿಯರಿಂದ ಸ್ಥಾಪನೆ ಆಗಿರೋದು. ಆರ್‌ಎಸ್‌ಎಸ್ ಸ್ವದೇಶಿಯರಿಂದ ಸ್ಥಾಪನೆಯಾಗಿರೋದು. ಹೀಗಾಗಿ ಇದಕ್ಕೆ ಮನ್ನಣೆ ಎನ್ನುವ ಪ್ರಶ್ನೆ ಬರೋದಿಲ್ಲ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ನಗರದಲ್ಲಿ ಆರ್‌ಎಸ್‌ಎಸ್ ಕುರಿತು ಸಚಿವ ಪ್ರಿಯಾಂಕ ಖರ್ಗೆ ಹೇಳಿಕೆ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಬಸವರಾಜ ಬೊಮ್ಮಾಯಿ ಅವರು, ರಿಜಿಸ್ಟರ್ ಹಾಗೂ ಅನ್ ರಿಜಿಸ್ಟರ್ ಸಂಸ್ಥೆಗಳು ಸಾಕಷ್ಟು ಇವೆ. ಈ ದೇಶದ ಕಾನೂನಿನಲ್ಲಿ ಸಾಕಷ್ಟು ಅವಕಾಶವಿದೆ. ಎಲ್ಲಕ್ಕಿಂತ ಹೆಚ್ಚು ಆರ್‌ಎಸ್‌ಎಸ್ ಜನಸೇವೆಯಲ್ಲಿ ಇಡೀ ಜಗತ್ತಿನಲ್ಲಿ ಶ್ರೇಷ್ಠವಾಗಿದೆ. ಆರ್‌ಎಸ್‌ಎಸ್ ಜಗತ್ತಿನಲ್ಲಿ ಅತೀ ದೊಡ್ಡ ಸಂಸ್ಥೆಯಾಗಿದೆ ಎಂದು ಹೇಳಿದರು. ಕಾಲಕಾಲಕ್ಕೆ ಕೆಲವರು ಈ ರೀತಿ ಪ್ರಶ್ನೆ ಮಾಡುತ್ತಾರೆ. ಅದಕ್ಕೆ ಜಗ್ಗದ ಬಗ್ಗದೆ ಸೇವೆಯನ್ನು ಮುಂದುವರೆಸಿಕೊಂಡು ಹೋಗುತ್ತದೆ. ನಮಗೆ ರಾಜಕೀಯ ಮೌಲ್ಯಗಳು ಆರ್‌ಎಸ್‌ಎಸ್ ಪ್ರೇರಿತ ಎಂದು ಅವರು ಹೇಳಿದರು.

ಲಂಚ ಸ್ವೀಕಾರ: ಎಎಸ್‌ಐ, ಮಹಿಳಾ ಹೆಡ್ ಕಾನ್‌ಸ್ಟೇಬಲ್ ಅಮಾನತು

• **ಕಲಬುರಗಿ:** ನಗರದ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪೋಕ್ಸೋ ಪ್ರಕರಣದಲ್ಲಿ ಸಹಾಯ ಮಾಡುವುದಾಗಿ ಹೇಳಿ ಲಂಚದ ಬೇಡಿಕೆ ಇಟ್ಟ ಆರೋಪದ ಹಿನ್ನೆಲೆಯಲ್ಲಿ ಎಎಸ್‌ಐ ಹಾಗೂ ಮಹಿಳಾ ಹೆಡ್ ಕಾನ್‌ಸ್ಟೇಬಲ್ ಅವರನ್ನು ಅಮಾನತುಗೊಳಿಸಿ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ಆದೇಶ ಹೊರಡಿಸಿದ್ದಾರೆ.

ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯ ಗುನ್ನೆ ಸಂಖ್ಯೆ 61/2026ರಲ್ಲಿ ಬಿಎನ್‌ಎಸ್ ಕಲಂ 64(2)(ಎಂ) ಹಾಗೂ ಪೋಕ್ಸೋ ಕಾಯ್ದೆಯ ಕಲಂ 4 ಮತ್ತು 6ರಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಕಿಯ ಹೇಳಿಕೆ ಪಡೆದುಕೊಳ್ಳುವ ವಿಚಾರದಲ್ಲಿ ತನಿಖಾ ಸಹಾಯಕ ಸಿಬ್ಬಂದಿಯಾಗಿದ್ದ ಜ್ಯೋತಿ (ಮಹಿಳಾ ಹೆಡ್ ಕಾನ್‌ಸ್ಟೇಬಲ್) ಹಾಗೂ ಶಿವಶರಣಪ್ಪ (ಎಎಸ್‌ಐ) ಅವರು ದೂರುದಾರರನ್ನು ಠಾಣೆಗೆ ಕರೆಯಿಸಿಕೊಂಡು ಪ್ರಕರಣದಲ್ಲಿ ಸಹಾಯ ಮಾಡುವುದಾಗಿ ಹೇಳಿ 10,000 ರೂ.ಲಂಚದ ಬೇಡಿಕೆ ಇಟ್ಟಿದ್ದಾರೆ ಎನ್ನಲಾಗಿದೆ. ಈ ಸಂಬಂಧ ದೂರು ಬಂದ ಹಿನ್ನೆಲೆಯಲ್ಲಿ, ಜೂನ್ 7ರಂದು ಬೆಳಿಗ್ಗೆ 11.30 ಗಂಟೆ ಸುಮಾರಿಗೆ ದೂರುದಾರರಿಂದ 9,000 ರೂ. ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಇಬ್ಬರನ್ನೂ ಬಲೆಗೆ ಬೀಳಿಸಿದ್ದಾರೆ.

ನಾಳೆ ಕೊಲ್ಲೂರು ಕ್ಷೇತ್ರಕ್ಕೆ ತಮಿಳ್ನಾಡು ಸಿಎಂ

• **ಬೈಂದೂರು:** ತ.ನಾಡು ಸಿಎಂ ಜೋಸೆಫ್ ವಿಜಯ್ ಅವರು ಜೂನ್ 12 ರಂದು ದಕ್ಷಿಣ ಭಾರತದ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ. ಶುಕ್ರವಾರ ಬೆಳಗ್ಗೆ 12.30ಕ್ಕೆ ಸಿಎಂ ವಿಜಯ್ ಅವರು ವಿಶೇಷ ವಿಮಾನದ ಮೂಲಕ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಅಲ್ಲಿಂದ ರಸ್ತೆ ಮಾರ್ಗದ ಮೂಲಕ ಕೊಲ್ಲೂರಿಗೆ ಪ್ರಯಾಣ ಬೆಳೆಸಲಿದ್ದಾರೆ. ಅಂದು ಸಂಜೆ 3 ಗಂಟೆಗೆ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ತಲುಪಲಿರುವ ಅವರು, ದೇವಿಯ ಸನ್ನಿಧಿಯಲ್ಲಿ ನಡೆಯಲಿರುವ ವಿಶೇಷ ಪೂಜಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ.

ಪೊಲೀಸ್ ಇಲಾಖೆಗೆ ಭದ್ರತೆಯ ಸೂಚನೆ: ತಮಿಳುನಾಡು ಮುಖ್ಯಮಂತ್ರಿಗಳ ಭೇಟಿಯ ಹಿನ್ನೆಲೆಯಲ್ಲಿ ಅವರು ಸಂಚರಿಸಲಿರುವ ರಸ್ತೆ ಮಾರ್ಗ ಹಾಗೂ ದೇವಸ್ಥಾನದ ಆವರಣದಲ್ಲಿ ಯಾವುದೇ ಲೋಪದೋಷಗಳಾಗದಂತೆ ಸೂಕ್ತ ಭದ್ರತಾ ವ್ಯವಸ್ಥೆಯನ್ನು ಕೈಗೊಳ್ಳಬೇಕು ಎಂದು ಪೊಲೀಸ್ ಇಲಾಖೆಗೆ ಈಗಾಗಲೇ ಅಗತ್ಯ ಸೂಚನೆಗಳನ್ನು ನೀಡಲಾಗಿದೆ.

ಕಾಞಂಗಾಡಿನಲ್ಲಿ ಬಾಂಗ್ಲಾ ಯುವತಿ ಸೆರೆ

• **ಕಾಸರಗೋಡು:** ಬಾಂಗ್ಲಾ ದೇಶದಿಂದ ಅಕ್ರಮವಾಗಿ ಕೇರಳಕ್ಕೆ ಬಂದು ವಾಸಿಸುತ್ತಿದ್ದ ಯುವತಿಯನ್ನು ಕಾಞಂಗಾಡಿನಿಂದ ಹೊಸದುರ್ಗ ಪೊಲೀಸರು ಬಂಧಿಸಿದ್ದಾರೆ. ಇದರ ಬೆನ್ನಲ್ಲೇ ಆಕೆಯ ಜತೆಗೆ ಇಲ್ಲಿಗೆ ಬಂದಿರುವ ಕುಟುಂಬದವರ ಪತ್ತೆಗಾಗಿ ಪೊಲೀಸರು ವ್ಯಾಪಕ ಶೋಧ ಕೈಗೊಂಡಿದ್ದಾರೆ. ಬಾಂಗ್ಲಾ ದೇಶದ ಪ್ರಜೆಯಾಗಿರುವ ಸೆಲ್ಮಾ ಕೌತುಲಿಯಾ (31) ಎಂಬಾಕೆಯನ್ನು ಮಂಗಳವಾರ ಕಾಞಂಗಾಡು ರೈಲು ನಿಲ್ದಾಣದಿಂದ ಪೊಲೀಸರು ಬಂಧಿಸಿದ್ದರು. ಈಕೆ ಮಲಪ್ಪುರಂನಿಂದ ಮಲಬಾರ್ ಎಕ್ಸ್‌ಪ್ರೆಸ್ ರೈಲುಗಾಡಿಯಲ್ಲಿ ಕಾಞಂಗಾಡು ರೈಲು ನಿಲ್ದಾಣದಲ್ಲಿ ಬಂದಿಳಿಯುತ್ತಿದ್ದಂತೆ ಸಂಶಯಗೊಂಡ ಪೊಲೀಸರು ವಿಚಾರಣೆಗೊಳಪಡಿಸಿದಾಗ ಆಕೆ ಬಾಂಗ್ಲಾ ದೇಶದ ಪ್ರಜೆಯಾಗಿರುವುದು ಸ್ಪಷ್ಟಗೊಂಡಿತು.

ಜೂ.28ರಂದು ಪೋಲಿಯೋ ಲಸಿಕೆ

• **ಬೆಂಗಳೂರು:** ರಾಜ್ಯದಲ್ಲಿ 5 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆ ನೀಡುವ ಉದ್ದೇಶದಿಂದ ಜೂ.28ರಂದು ರಾಷ್ಟ್ರೀಯ ಲಸಿಕಾ ದಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತ್ವಿಕ್ ಪಾಂಡೆ ತಿಳಿಸಿದ್ದಾರೆ. ಭಾರತವು ಕಳೆದ 14 ವರ್ಷಗಳಿಗೂ ಮೇಲ್ಪಟ್ಟು ಪೋಲಿಯೊ ಮುಕ್ತ ರಾಷ್ಟ್ರ ವಾಗಿದ್ದರೂ, ಜಗತ್ತಿನ ಕೆಲವು ಭಾಗಗಳಲ್ಲಿ ಹಾಗೂ ಭಾರತದ ನೆರೆ ರಾಷ್ಟ್ರಗಳಲ್ಲಿ ವೈಲ್ಡ್ ಪೋಲಿಯೋ ವೈರಸ್ ಹರಡುವಿಕೆ ಈ ಮುನ್ನೆಚ್ಚರಿಕೆ ಕ್ರಮ ಅತ್ಯಗತ್ಯವಾಗಿದೆ ಎಂದರು.

ಕಸ ಸಂಸ್ಕರಣೆಗಾಗಿ ದಿಲ್ಲಿ ಮೂಲದ ಕಂಪನಿಗೆ 39,000 ಕೋಟಿ ರೂ. ಟೆಂಡರ್

ಘನತ್ಯಾಜ್ಯ ಟೆಂಡರ್ ಅವ್ಯವಹಾರ: ಅಶೋಕ

• **ಬೆಂಗಳೂರು:** ಬೆಂಗಳೂರಿನಲ್ಲಿ ಕಸ ಸಂಸ್ಕರಣೆ ಮಾಡುವ ನೆಪದಲ್ಲಿ ಕಾಂಗ್ರೆಸ್ ಸರ್ಕಾರ 39,000 ಕೋಟಿ ರೂ. ಹಗರಣ ನಡೆಸಿದೆ. 35 ವರ್ಷಗಳ ಸುದೀರ್ಘ ಅವಧಿಗೆ ಎಂಎಸ್‌ಡಬ್ಲ್ಯು ಸಲ್ಯೂಶನ್ಸ್ ಲಿಮಿಟೆಡ್‌ಗೆ ನೀಡುತ್ತಿರುವ ಟೆಂಡರ್‌ನ ಒಟ್ಟು ಮೊತ್ತದಲ್ಲಿ 10,000 ಕೋಟಿ ರೂ. ಕಿಕ್‌ಬ್ಯಾಕ್ ಪಡೆಯಲಾಗಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆರೋಪಿಸಿದ್ದಾರೆ.

ವಿಧಾನಸೌಧದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಬಿಜೆಪಿ ಸರ್ಕಾರವಿದ್ದಾಗ ಸ್ವಚ್ಛತೆಯಲ್ಲಿ ಅತ್ಯುತ್ತಮ ನಗರ ಎಂಬ ಹೆಗ್ಗಳಿಕೆ ಬೆಂಗಳೂರಿಗೆ ಸಿಕ್ಕಿತ್ತು. ಈಗ ಬೆಂಗಳೂರು ಬೆಚ್ಚಿಬೀಳುವಂತಹ 39,000 ಕೋಟಿ ರೂ. ಹಗರಣವನ್ನು ಕಾಂಗ್ರೆಸ್ ಸರ್ಕಾರ ಕಸದ ಹೆಸರಲ್ಲಿ ಮಾಡಿದೆ. ದೇಶದ ಇತಿಹಾಸದಲ್ಲಿ ಕಸದಲ್ಲಿ ಲೂಟಿ ಮಾಡಿರುವ ಹಗರಣ ಇದೇ ಮೊದಲು. ಪ್ರತಿ ವರ್ಷ ಬೆಂಗಳೂರಿನಲ್ಲಿ ಕಸ ಸಂಗ್ರಹ ಮತ್ತು ಸಾಗಣೆಗೆ 514 ಕೋಟಿ ರೂ. ಮತ್ತು ಸಂಸ್ಕರಣೆ ಮತ್ತು ವಿಲೇವಾರಿಗೆ 380 ಕೋಟಿ ರೂ. ಖರ್ಚು ಮಾಡಲಾಗುತ್ತಿದೆ. 11,000 ಪೌರಕಾರ್ಮಿಕರಿಗೆ ವರ್ಷಕ್ಕೆ 444 ಕೋಟಿ ರೂ. ಸಂಬಳ ನೀಡಲಾಗುತ್ತಿದೆ. ಎಲ್ಲ ಸೇರಿ ಸೇರಿ ವರ್ಷಕ್ಕೆ ಒಟ್ಟು 1,344 ಕೋಟಿ ರೂ. ಖರ್ಚಾಗುತ್ತದೆ ಎಂದರು. ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಇದ್ದರು.



ರಾಜ್ಯಪಾಲರಿಗೆ ಹಾಗೂ ಲೋಕಾಯುಕ್ತರಿಗೆ ದೂರು

ಪ್ರತಿಪಕ್ಷ ನಾಯಕ ಆರ್.ಅಶೋಕ ಅವರು ಲೋಕಭವನಕ್ಕೆ ತೆರಳಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರನ್ನು ಭೇಟಿಯಾಗಿ ಈ ಕುರಿತು ದೂರು ನೀಡಿದರು. ಬಳಿಕ ಲೋಕಾಯುಕ್ತ ಕಚೇರಿಗೆ ತೆರಳಿ, ಲೋಕಾಯುಕ್ತ ರಿಜಿಸ್ಟ್ರಾರ್ ಅವರಿಗೂ ದೂರು ನೀಡಿದರು.

ಆರ್. ಅಶೋಕ್ ಆರೋಪಕ್ಕೆ ಸಿಎಂ ಡಿಕೆಶಿ ತಿರುಗೇಟು

• **ನವದೆಹಲಿ:** ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್ ಅವರು ಬೆಂಗಳೂರು ಕಸ ಮಾಫಿಯಾ ಗ್ಯಾಂಗಿನ ಏಜೆಂಟರಾಗಿ ಮಾತನಾಡುತ್ತಿದ್ದಾರೆ. ಈ ಮಾಫಿಯಾ ನಿಯಂತ್ರಿಸಬೇಕು ಎಂದು ನಾನು ಈ ಹಿಂದೆ ಅವರೊಂದಿಗೆ ಚರ್ಚೆ ಮಾಡಿದ್ದೆ. ಈಗ ಅಶೋಕ್ ಅವರು ಮಾಫಿಯಾದ ವಕ್ತಾರರಾಗಿರುವುದು ನನಗೆ ಆಶ್ಚರ್ಯವಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿರುಗೇಟು ನೀಡಿದರು. ದೆಹಲಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ್ ಅವರಿಗೆ ಏನೇನು ಕಸ ಬೇಕೋ ಲಾರಿಯಲ್ಲಿ ತುಂಬಿ ಕಳುಹಿಸಿಕೊಡೋಣ ಎಂದು ತಿಳಿಸಿದರು.

ಯಾವ ತನಿಖೆ ಬೇಕಾದರೂ ಮಾಡಿಸಲಿ: ಈಗ ಕಸ ವಿಲೇವಾರಿಗೆ 6 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡುತ್ತಾರೆ. ನಮ್ಮಲ್ಲಿ ಎಲ್ಲೂ ಜಾಗ ಲಭ್ಯವಾಗಲಿಲ್ಲ. ಹೀಗಾಗಿ ದೊಡ್ಡಬಳ್ಳಾಪುರದಲ್ಲಿ ಜಾಗ ಖರೀದಿ ಮಾಡಲು ತೀರ್ಮಾನಿಸಲಾಗಿದೆ. ಅವರು ಯಾವ ತನಿಖೆ ಬೇಕಾದರೂ ಮಾಡಲಿ. ಎಲ್ಲಾದರೂ ವರದಿ ನೀಡಲಿ. ಎದುರಿಸಲು ನಾನು ಸಿದ್ಧ ಎಂದರು.

ಗ್ರಾಮೀಣ ಆರೋಗ್ಯ ಸೇವೆ ಬಲಪಡಿಸಲು ತೀರ್ಮಾನ: ಯು.ಟಿ.ಖಾದರ್

ಡಿಎಚ್‌ಒ ಮೂಲಕ ಸರ್ಕಾರಿ ಹುದ್ದೆಗೆ ನೇಮಕ

• **ಬೆಂಗಳೂರು:** ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿ, ಗುತ್ತಿಗೆ ನೌಕರರ ಖಾಯಂ ನೇಮಕ ಹಾಗೂ ಗ್ರಾಮೀಣ ಆರೋಗ್ಯ ಸೇವೆ ಬಲಪಡಿಸುವ ಕುರಿತು ಶೀಘ್ರದಲ್ಲಿಯೇ ಮಹತ್ವದ ತೀರ್ಮಾನಗಳನ್ನು ಕೈಗೊಳ್ಳುವುದಾಗಿ ಆರೋಗ್ಯಸಚಿವ ಯು.ಟಿ.ಖಾದರ್ ತಿಳಿಸಿದರು.

ಬುಧವಾರ ನಗರದ ಆರೋಗ್ಯಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಲಾಖೆಯ ಕಾರ್ಯಕ್ರಮ/ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಆರೋಗ್ಯ ಸಚಿವ ಯು.ಟಿ.ಖಾದರ್ ಅವರು, ರಾಜ್ಯದಲ್ಲಿ ಪ್ರಸ್ತುತ 1,280 ಎಂಬಿಬಿಎಸ್ ವೈದ್ಯರು, 924 ತಜ್ಞ ವೈದ್ಯರು ಹಾಗೂ 892 ನರ್ಸ್‌ಗಳ ಕೊರತೆ ಇದೆ. ಈ ಹಿನ್ನೆಲೆಯಲ್ಲಿ ನೇರ ಸಂದರ್ಶನದ ಮೂಲಕ ತಕ್ಷಣವೇ 200 ವೈದ್ಯರನ್ನು ನೇಮಕ ಮಾಡಿಕೊಳ್ಳಲು ಸೂಚಿಸಿದರು. ಡಿಎಚ್‌ಒ ಮೂಲಕ ಸರ್ಕಾರಿ ಹುದ್ದೆ ನೇಮಕಕ್ಕೆ ತೀರ್ಮಾನಿಸಿದ್ದು, ನೇಮಕಗೊಳ್ಳುವ ಎಂಬಿಬಿಎಸ್ ವೈದ್ಯರಿಗೆ ತಿಂಗಳಿಗೆ 1.10 ಲಕ್ಷ ರೂ. ವೇತನ ನೀಡಲು ಸರ್ಕಾರ ನಿರ್ಧರಿಸಲಾಗಿದೆ ಎಂದರು.

ಗುತ್ತಿಗೆ ನೌಕರರಿಗೆ ಖಾಯಂ ಸೇವೆಯ ಭರವಸೆ: ಹೊಸದಾಗಿ ನೇಮಕವಾಗುವ ವೈದ್ಯರು ಗ್ರಾಮೀಣ ಭಾಗಗಳಲ್ಲಿ ಕಡ್ಡಾಯ ಸೇವೆ ಸಲ್ಲಿಸಬೇಕು ಎಂದು ಸೂಚಿಸಿದರು. ಜತೆಗೆ 60 ವರ್ಷ ವಯಸ್ಸಿನಲ್ಲಿ ನಿವೃತ್ತರಾಗಿರುವ ವೈದ್ಯರನ್ನು 70 ವರ್ಷ ವಯಸ್ಸಿನವರೆಗೆ ಗುತ್ತಿಗೆ ಆಧಾರದಲ್ಲಿ ಸೇವೆಗೆ ಬಳಸಿಕೊಳ್ಳುವ ಪ್ರಸ್ತಾವನೆ ಇದೆ ಎಂದರು.



ಔಷಧಿ ದರ ಏರಿಕೆ ತಡೆಗೆ ಕೇಂದ್ರಕ್ಕೆ ಮನವಿ

ಔಷಧಿಗಳ ಬೆಲೆ ಏರಿಕೆಯನ್ನು ತಡೆಯಲು ಕುರಿತು ಕೇಂದ್ರ ಸಚಿವರನ್ನು ಭೇಟಿ ಮಾಡಿ ಚರ್ಚಿಸಲಾಗುವುದು. ಸಾರ್ವಜನಿಕರ ಹಿತದೃಷ್ಟಿಯಿಂದ ಔಷಧಿ ದರ ಹೆಚ್ಚಿಸದಂತೆ ಮನವಿ ಮಾಡಲಾಗುತ್ತದೆ. ಸರ್ಕಾರಿ ಆಸ್ಪತ್ರೆಗಳಿಗೆ ಪೂರೈಕೆಯಾಗುವ ಔಷಧಿಗಳ ಗುಣಮಟ್ಟವನ್ನು ಕಡ್ಡಾಯವಾಗಿ ಮರುಪರಿಶೀಲನೆ ನಡೆಸಲು ತೀರ್ಮಾನಿಸಲಾಗಿದೆ. ಈಗಾಗಲೇ 81 ಅತ್ಯಗತ್ಯ ಔಷಧಿಗಳ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಮುಂದಿನ ದಿನಗಳಲ್ಲಿ ಆರೋಗ್ಯ ಸುರಕ್ಷಾ ಸಮಿತಿ ಮೂಲಕ ನೇರ ಖರೀದಿ ವ್ಯವಸ್ಥೆ ಜಾರಿಗೆ ತರಲು ಇಲಾಖೆ ಚಿಂತನೆ ನಡೆಸಿದೆ ಎಂದು ಸಚಿವರು ತಿಳಿಸಿದರು.

ಸಂಪಾದಕೀಯ

ಸಂಭಾವ್ಯ ಅನಾವೃಷ್ಟಿ: ಎಚ್ಚರ ಅಗತ್ಯ

ಭಾರತದಿಂದ ಸಾವಿರಾರು ಮೈಲು ದೂರದಲ್ಲಿ ಪೆಸಿಫಿಕ್ ಸಾಗರದಲ್ಲಿ ಉಂಟಾಗುತ್ತಿರುವ ಪ್ರಕೃತಿ ಸಹಜ ಬೆಳವಣಿಗೆಯೊಂದು ಇಲ್ಲಿ ನಮ್ಮ ದೇಶದಲ್ಲಿ ಹಾಗೂ ಜಗತ್ತಿನಾದ್ಯಂತ ಆತಂಕ ಸೃಷ್ಟಿಸಿರುವುದು ವಿಚಿತ್ರವಾದರೂ ನಿಜ. ಪೆಸಿಫಿಕ್ ಸಾಗರದಲ್ಲಿ 'ಎಲ್ ನಿನೋ' ವಿದ್ಯಮಾನವು ರೂಪು ತಳೆಯುತ್ತಿರುವುದು ಹಾಗೂ ಅದು ಮುಂಗಾರು ಮಾರುತದ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು ಎಂಬ ವಿಷಯವು ರೈತರಲ್ಲಿ ಹಾಗೂ ದೇಶದ ಆರ್ಥಿಕ



ಪರಿಣತರಲ್ಲಿ ಆತಂಕ ಸೃಷ್ಟಿಸುತ್ತಿರುವುದು ಸಹಜವೇ ಆಗಿದೆ. 'ಜಾಗತಿಕ ಆರ್ಥಿಕ ವೇದಿಕೆ' (ಡಬ್ಲ್ಯುಇಇ) ಕೂಡಾ ಎಲ್ ನಿನೋದಿಂದಾಗಿ ಜಗತ್ತಿನಾದ್ಯಂತ ಕೃಷಿಯ ಮೇಲೆ, ಇಂಧನ ಮತ್ತು ಆಹಾರ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಉಂಟಾಗಬಹುದು ಎಂದು ಎಚ್ಚರಿಸಿದೆ. ಎಲ್‌ನಿನೋದ ಪಶ್ಚಾತ್ ಪರಿಣಾಮಗಳು ಜಾಗತಿಕವಾಗಿ ಸವಾಲು ಸೃಷ್ಟಿಸಬಹುದೆಂದು ಹೇಳಿದೆ. ಪ್ರಬಲ ಎಲ್‌ನಿನೋ ಯಾವಾಗಲೂ ಭಾರತದಲ್ಲಿ ಅನಾವೃಷ್ಟಿಗೆ ಕಾರಣವಾಗಿರುವ ನಿದರ್ಶನಗಳಿರುವುದರಿಂದ ಭಾರತವಂತೂ ಈ ಕುರಿತಂತೆ ಹೆಚ್ಚು ಚಿಂತೆ ಪಡುವಂತಾಗಿದೆ.

ಭಾರತವು ಈಗಲೂ ಕೃಷಿ ಪ್ರಧಾನ ರಾಷ್ಟ್ರವಾಗಿರುವುದರಿಂದ ಹಾಗೂ ಇಲ್ಲಿನ ಕೃಷಿಯು ಮುಂಗಾರು ಮಳೆಯನ್ನೇ ಅಧಿಕವಾಗಿ ಅವಲಂಬಿಸಿರುವುದರಿಂದ ಕಡಿಮೆ ಮಳೆಯು ಕೃಷ್ಯುತ್ಪನ್ನದ ಮೇಲೆ ಪರಿಣಾಮ ಬೀರುವುದು ಖಂಡಿತವಾಗಿದೆ. ಈಗಾಗಲೆ ಮುಂಗಾರು ತಡವಾಗಿ ಕೇರಳಕ್ಕೆ ಆಗಮಿಸಿದ್ದು, ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದೆ ನಿರಾಶೆ ಮೂಡಿಸಿದೆ. ದೇಶದ ಇತರ ಭಾಗಗಳಿಗೆ ಅದು ವ್ಯಾಪಿಸುವ ಗತಿಯೂ ನಿಧಾನವಾಗಿದೆ. ಮುಂಗಾರು ಋತುವಿನ ಮಧ್ಯಭಾಗದಲ್ಲಿ ಎಲ್ ನಿನೋ ಪ್ರಭಾವ ಕಂಡುಬರಲಿದೆ ಎನ್ನಲಾಗಿದ್ದು, ಅದರಿಂದ ಮಳೆಯ ವ್ಯಾಪಕತೆ ಮತ್ತು ಪ್ರಮಾಣ ಇನ್ನಷ್ಟು ಕಡಿಮೆಯಾಗಬಹುದು. ಇದರಿಂದಾಗಿ ಕೃಷಿ ಕಾರ್ಯಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಲಿದ್ದು, ಆಹಾರ ಧಾನ್ಯಗಳ ಉತ್ಪಾದನೆಯೂ ಕುಂಠಿತವಾದೀತು. ರೈತರು ಎಂದಿನ ಕೃಷಿಯನ್ನು ಬಿಟ್ಟು ಕಡಿಮೆ ನೀರು ಬಳಸುವ ಪರ್ಯಾಯ ಬೆಳೆ ತೆಗೆಯಲು ಮುಂದಾಗಬಹುದು. ಇದರಿಂದ ಅಗತ್ಯ ವಸ್ತುಗಳ ಕೊರತೆ ಉಂಟಾಗಲಿದ್ದು, ಇದು ಸಹಜವಾಗಿಯೇ ಹಣದುಬ್ಬರಕ್ಕೆ ಕಾರಣವಾಗಲಿದೆ. ಎಲ್ ನಿನೋದಿಂದಾಗಿ ತಾಪಮಾನವೂ ಏರಿಕೆಯಾಗುವ ಸಾಧ್ಯತೆಗಳಿರುವುದರಿಂದ ಅದು ಅಧಿಕ ವಿದ್ಯುತ್ ಬಳಕೆ, ಹೆಚ್ಚು ಇಂಧನ ಬಳಕೆಗೆ ಕಾರಣವಾಗಲಿದೆ.

ಒಟ್ಟಿನಲ್ಲಿ ಎಲ್ ನಿನೋದಿಂದಾಗಬಹುದಾದ ಪ್ರತಿಕೂಲ ಪರಿಣಾಮಗಳನ್ನು ಎದುರಿಸಲು ಸೂಕ್ತ ಮುನ್ನೆಚ್ಚರಿಕೆ ವಹಿಸುವುದಂತೂ ಅಗತ್ಯವಾಗಿದೆ. ಲಭ್ಯ ಮಳೆ ನೀರಿನ ಸಮರ್ಪಕ ಬಳಕೆ, ನೀರಿನ ದುರುಪಯೋಗ ತಡೆ, ನೀರಾವರಿ ವ್ಯವಸ್ಥೆಯನ್ನು ಇನ್ನಷ್ಟು ಯೋಜನಾಬದ್ಧಗೊಳಿಸುವುದು ಮುಂತಾದ ಉಪಕ್ರಮಗಳತ್ತ ಗಮನ ಹರಿಸಬೇಕಾಗಿದೆ. ಇದು ಕೇವಲ ಆಡಳಿತದಿಂದಷ್ಟೇ ಆಗಬೇಕಾದ ಕಾರ್ಯವಲ್ಲ, ಸಾಮಾನ್ಯ ಜನರೂ ಈ ಬಗ್ಗೆ ಅರಿವು ಮೂಡಿಸಿಕೊಳ್ಳುವುದು ಅಗತ್ಯ.

ವೃದ್ಧಾಪ್ಯವೂ, ಜನಸಂಖ್ಯೆ ಕಣ್ಮರೆಯೂ...

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ಮಕ್ಕಳಿರಲವ್ವ ಮನೆತುಂಬಾ ಎಂಬ ಮಾತು ಕೇಳಿ ಬಹು ವರ್ಷಗಳೇ ಆಗಿರಬೇಕು. ಹಿಂದಿನ ಕಾಲದಲ್ಲಿ ಮನೆ ತುಂಬಾ ಇದ್ದ ಮಕ್ಕಳು, ಕೆಲವೊಮ್ಮೆ ಆ ಕುಟುಂಬದ ಹಿರಿಯರಿಗೆ ಮನೆಯ ಮಕ್ಕಳ ಹೆಸರೇ ಮರೆತುಹೋಗುತ್ತಿದ್ದ ಸನ್ನಿವೇಶಗಳು ಎದುರಾಗಿದ್ದವು. ಅಂಥ ಕಾಲದಲ್ಲಿ ಹುಟ್ಟಿಕೊಂಡದ್ದೇ ಆರತಿಗೊಂದು, ಕೀರ್ತಿಗೊಂದು ಎಂಬ ಘೋಷಣೆ. ಭಾರತದಲ್ಲಿನ ಜನಸಂಖ್ಯಾ ಸ್ಫೋಟವನ್ನು ತಡೆಯದಿದ್ದರೆ, ಮುಂದೊಂದು ದಿನ ಇದೇ ಸಮಸ್ಯೆಯಾದೀತು ಎಂಬ ಆತಂಕದಲ್ಲೇ ಜನಸಂಖ್ಯಾ ನಿಯಂತ್ರಣಕ್ಕೆ ಸಾಲು ಸಾಲು ಯೋಜನೆಗಳನ್ನು ಘೋಷಿಸಿ ಅದರಲ್ಲೂ ಸಾಫಲ್ಯವೂ ಆದೆವು.

ಆದರೆ, ಇತ್ತೀಚಿನ ದಿನಗಳಲ್ಲಿ ನಮ್ಮ ಜನಸಂಖ್ಯಾ ನಿಯಂತ್ರಣ ಹಾದಿ ತಪ್ಪಿರುವ ಎಲ್ಲ ಸಾಧ್ಯತೆಗಳೂ ತೆರೆದುಕೊಳ್ಳುತ್ತಿವೆ. ಅಮೆರಿಕದ ಮ್ಯಾಗಜಿನ್ ದಿ ಎಕಾನಾಮಿಸ್ಟ್ ಭಾರತದ ಈ ಅಸಮತೋಲನ ಜನಸಂಖ್ಯಾ ನಿಯಂತ್ರಣದ ಬಗ್ಗೆ ಬಹುವಾಗಿಯೇ ಎಚ್ಚರಿಸಿದೆ. ಈಗಿನ ಬಹುತೇಕ ದೇಶಗಳು ಸಿರಿವಂತರಾದ ಮೇಲೆ ಜನಸಂಖ್ಯಾ ನಿಯಂತ್ರಣದ ಮಗದೊಂದು ಮುಖದ ಸಮಸ್ಯೆ ಅನುಭವಿಸುತ್ತಿದ್ದರೆ, ಭಾರತ ಶ್ರೀಮಂತ ದೇಶವಾಗುವ ಮೊದಲೇ ವೃದ್ಧಾಪ್ಯಕ್ಕೆ ಕಾಲಿಡುವ ಎಲ್ಲ ಸಂಭವಗಳೂ ಇವೆ ಎಂದು ಬಿಟ್ಟಿದೆ. ಇದಕ್ಕೆ ಅದು ತನ್ನದೇ ಆದ ಅಂಕಿ ಅಂಶ, ತರ್ಕಗಳು, ವಿಚಾರಗಳನ್ನೂ ಇಟ್ಟಿದೆ. ಇದನ್ನು ನೋಡಿದರೆ ಅದು ಸುಳ್ಳಲ್ಲ ಎಂದು ಅನ್ನಿಸದೇ ಇರದು.

ನೋಡಿ, ಅದೇ ಪತ್ರಿಕೆ ಕೊಟ್ಟ ಕೆಲವೊಂದು ಉದಾಹರಣೆಗಳನ್ನು ಇಲ್ಲಿಯೂ ಉಲ್ಲೇಖಿಸಿದ್ದೇನೆ. 1970ರ ದಶಕದಲ್ಲಿ ದಿಲ್ಲಿಯ ಕೊಳೆಗೇರಿಯೊಂದರಲ್ಲಿ ಪ್ರತಿ ಓಣಿಯೂ ಮಕ್ಕಳ ಕಲರವದಿಂದ ತುಂಬಿತ್ತು. ಆರು ಮಕ್ಕಳ ತಾಯಂದಿರು, ಹನ್ನೊಂದು ಮಕ್ಕಳ ಅಜ್ಜಂದಿರು ಆ ಕಾಲಕ್ಕೆ ಸಹಜ ಸಂಗತಿ. ಅದೇ ಕೊಳೆಗೇರಿಯಲ್ಲಿ ಬೆಳೆದು, ಹದಿನಾರನೇ ವಯಸ್ಸಿಗೆ ಮದುವೆಯಾದ ಪಾರುಲ್ ಗಾಯೆನ್ ಎಂಬ ಮಹಿಳೆ ಈಗ 58ರ ಹೊಸ್ತಿಲಲ್ಲಿ ನಿಂತಿದ್ದಾರೆ. ಅವರ ಮೂವರು ಮಕ್ಕಳಲ್ಲಿ ಇಬ್ಬರಿಗೆ ಮಾತ್ರ ಸಂತಾನವಾಗಿದೆ. ಇಬ್ಬರಿಗೂ ತಲಾ ಒಂದೇ ಮಗು. 'ಒಂದು ಮಗು ಎಂದರೆ ಏಕಾಂಗಿತನ' ಎಂದು ಅವರು ನಿಟ್ಟುಸಿರು ಬಿಡುತ್ತಾರೆ. ಈ ಒಂದು ನಿಟ್ಟುಸಿರಿನಲ್ಲಿ ಇಡೀ ಭಾರತದ ನಾಳೆಯ ಕಥೆ ಅಡಗಿದೆ ಎಂದು ಇದೇ ಪತ್ರಿಕೆ ತನ್ನ ಮುಖಪುಟಗಳಲ್ಲೇ ತೆರೆದಿಟ್ಟಿದೆ.

ಇದು ಎಂಥ ವಿಪರ್ಯಾಸ ನೋಡಿ. ಅರ್ಧ ಶತಮಾನದ ಹಿಂದೆ ಭಾರತವೆಂದರೆ ಜಗತ್ತಿಗೆ 'ಜನಸಂಖ್ಯಾ ಸ್ಫೋಟ'ದ ಭೀತಿಯ ಪ್ರತೀಕ. ಶಾಲೆಯ ಗೋಡೆಗಳ ಮೇಲೆ 'ಎರಡು ಅಥವಾ ಮೂರು ಮಕ್ಕಳು ಸಾಕು' ಎಂಬ ಘೋಷಣೆಗಳು ರಾರಾಜಿಸುತ್ತಿದ್ದವು. ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ಲಕ್ಷಾಂತರ ಬಡವರ ಮೇಲೆ ಬಲವಂತದ ಸಂತಾನಹರಣ ಶಸ್ತ್ರಚಿಕಿತ್ಸೆ ನಡೆಯಿತು. ಭಾರತ ಹಸಿವಿನಿಂದ ನಾಶವಾಗಲಿದೆ ಎಂದು ಪಾಶ್ಚಾತ್ಯ ಪಂಡಿತರು ಭವಿಷ್ಯ ನುಡಿದಿದ್ದರು. ಆದರೆ ಇಂದು? ಇದೇ ಬೇಸಿಗೆಯಲ್ಲಿ ಮುದ್ರಣವಾಗಲಿರುವ ಹೊಸ ಪಠ್ಯಪುಸ್ತಕಗಳು ಮಕ್ಕಳು 'ಹೆಚ್ಚಾದರೆ' ಅಲ್ಲ, 'ಕಡಿಮೆಯಾದರೆ' ಎದುರಾಗುವ ಅಪಾಯಗಳ ಬಗ್ಗೆ ಎಚ್ಚರಿಸಲಿವೆ. ಕಾಲಚಕ್ರ ಹೀಗೆ ತಿರುಗೀತೆಂದು ಯಾರು ತಾನೇ ಊಹಿಸಿದ್ದರು ಅಲ್ಲವೇ?

ತೀರಾ ಅಂಕಿಅಂಶಗಳ ಗೊಂಡಾರಣ್ಯಕ್ಕೆ ಇಳಿಯುವ ಅಗತ್ಯವಿಲ್ಲ. ಇಲ್ಲಿ ಒಂದೇ ಒಂದು ಸಂಗತಿ ಸಾಕು. ಜನಸಂಖ್ಯೆ ಸ್ಥಿರವಾಗಿರಲು ಪ್ರತಿ ಮಹಿಳೆಗೆ ಸರಾಸರಿ 2.1 ಮಕ್ಕಳು ಜನಿಸಬೇಕು. ಭಾರತದಲ್ಲಿ ಆ ದರ ಈಗಾಗಲೇ 1.9ಕ್ಕೆ ಕುಸಿದಿದೆ, ಅಷ್ಟೇ ಅಲ್ಲ, ಈ ಕುಸಿತ ಮುಂದುವರಿದಿದೆ. ತಮಿಳುನಾಡು, ಪಶ್ಚಿಮ ಬಂಗಾಳದಂಥ ರಾಜ್ಯಗಳ ಜನನ ದರ ಈಗ ಫಿನ್ಲೆಂಡ್, ನಾರ್ವೆಯಂಥ ಯುರೋಪಿನ ವೃದ್ಧ ರಾಷ್ಟ್ರಗಳಿಗೆ ಸಮನಾಗಿದೆ. ಭಾರತದ ಜನಸಂಖ್ಯಾಶಾಸ್ತ್ರಕ್ಕೆ ಇನ್ನು ಮುಂದೆ ಹೋಲಿಕೆ ಸ್ಕ್ಯಾಂಡಿನೇವಿಯಾ ಎಂದರೆ ಆಘಾತವಾಗದೇ ಇರದು. ಬಡ ಉತ್ತರದ ರಾಜ್ಯಗಳಾದರೂ ಈ ಪ್ರವಾಹವನ್ನು ತಡೆದಾವು ಎಂಬ ನಿರೀಕ್ಷೆಯೂ ಹುಸಿಯಾಗುತ್ತಿದೆ. ಶತಮಾನದ ಅಂತ್ಯದೊಳಗೆ ಉತ್ತುಂಗ ತಲುಪಿ, ಬಳಿಕ ಸುಮಾರು 50 ಕೋಟಿಯಷ್ಟು ಜನ ಕರಗಿಹೋಗಬಹುದು ಎಂದು ಹೊಸ ಅಧ್ಯಯನಗಳು ಎಚ್ಚರಿಸುತ್ತಿವೆ. ಐವತ್ತು ಕೋಟಿ ಎಂದರೆ ಸುಮ್ಮನೆ ಅಲ್ಲ, ಒಂದು ಇಡೀ ನಾಗರಿಕತೆಯ ಗಾತ್ರದ ಜನಸಮುದಾಯ ನಿಃಶಬ್ದವಾಗಿ ಮಾಯವಾದಂತೆ.

ಮಹಾಭಾರತದಲ್ಲಿ ಒಂದು ಪ್ರಸಂಗವಿದೆ. ಅಗಸ್ತ್ಯ ಮಹರ್ಷಿ ಪತ್ನಿ ಲೋಪಾಮುದ್ರೆಯನ್ನು ಕೇಳುತ್ತಾನೆ. 'ನಿನಗೆ ಹತ್ತು ಒಳ್ಳೆಯ ಮಕ್ಕಳು ಬೇಕೋ, ಹತ್ತರ ಶೌರ್ಯವುಳ್ಳ ಒಬ್ಬನೇ ಮಹಾಪುತ್ರ ಬೇಕೋ?' ಲೋಪಾಮುದ್ರೆ ಒಬ್ಬನನ್ನೇ ಆರಿಸಿಕೊಳ್ಳುತ್ತಾಳೆ. ಇಂದಿನ ಭಾರತೀಯ ದಂಪತಿಗಳೆಲ್ಲ ಲೋಪಾಮುದ್ರೆಯ ದಾರಿ ಹಿಡಿದಿದ್ದಾರೆ. 'ಎರಡು ಮಕ್ಕಳಾದರೆ ಸಂಪನ್ಮೂಲ ಹಂಚಿಹೋಗುತ್ತದೆ, ಒಂದೇ ಮಗುವಿಗೆ ಎಲ್ಲವನ್ನೂ ಧಾರೆಯೆರೆಯುತ್ತೇವೆ' ಎಂಬುದು ಮಧ್ಯಮ ವರ್ಗದಿಂದ ಹಿಡಿದು ಬಿಹಾರದ ಬಡ ಕುಟುಂಬಗಳವರೆಗೆ ಈ ಚಿಂತನೆ ವ್ಯಾಪಿಸಿದೆ. ಖಾಸಗಿ ಶಾಲೆ, ಟ್ಯೂಷನ್, ಶಿಕ್ಷಣದ ಸ್ಪರ್ಧಾಕಣದಲ್ಲಿ ತನ್ನ ಮಗು ಹಿಂದೆ ಬೀಳಬಾರದೆಂಬ ಹಪಾಹಪಿ ಪೋಷಕರನ್ನು ಒಂದು ಅಥವಾ ಎರಡು ಮಗುವಿನ ಗಡಿಯೊಳಗೆ ಬಂಧಿಸಿದೆ. 'ನೂರು ಗಂಡುಮಕ್ಕಳ ತಾಯಿಯಾಗು' ಎಂಬ ಸಾಂಪ್ರದಾಯಿಕ ಆಶೀರ್ವಾದ ಈಗ ಕೇವಲ ಮದುವೆ ಮಂಟಪದ ಅಲಂಕಾರಿಕ ಮಾತು.

ಇದರ ಜತೆಗೆ ಅವಿಭಕ್ತ ಕುಟುಂಬವೆಂಬ ಭಾರತದ ಭದ್ರಕೋಟೆ ಕುಸಿದು ಬೀಳುತ್ತಿದೆ. ಅಜ್ಜ-ಅಜ್ಜಿ, ದೊಡ್ಡಪ್ಪ-ಚಿಕ್ಕಪ್ಪ, ಅತ್ತೆ-ಮಾವ ಎಲ್ಲರೂ ಒಂದೇ ಸೂರಿನಡಿ ಬದುಕುತ್ತಿದ್ದ ಮನೆಗಳ ಜಾಗದಲ್ಲಿ ಈಗ ಗಂಡ-ಹೆಂಡತಿ-ಒಂದು ಮಗುವಿನ ಪುಟ್ಟ ಫ್ಲ್ಯಾಟ್‌ಗಳು ತಲೆಯೆತ್ತಿವೆ. ಮಗು ನೋಡಿಕೊಳ್ಳಲು ಅಜ್ಜಿಯಿಲ್ಲ, ಅಂತೆಯೇ ವೃದ್ಧರನ್ನು ನೋಡಿಕೊಳ್ಳಲು ಮೊಮ್ಮಕ್ಕಳಿಲ್ಲ. ಟಿವಿ ಧಾರಾವಾಹಿಗಳು, ಸ್ಮಾರ್ಟ್‌ಫೋನ್‌ಗಳ ರೀಲ್‌ಗಳು ಹಳ್ಳಿಹಳ್ಳಿಗೂ 'ಪುಟ್ಟ ಕುಟುಂಬವೇ ಚೆಂದದ ಬದುಕು' ಎಂಬ ಕನಸನ್ನು ಬಿತ್ತುತ್ತಿವೆ. ಕೇರಳದಲ್ಲಿ ಹುಟ್ಟಿದ ಈ ಮನೋಭಾವ ಸಾಂಕ್ರಾಮಿಕದಂತೆ ಬಿಹಾರವನ್ನೂ ತಲುಪಿದೆ ಎನ್ನುತ್ತಾರೆ ಜನಸಂಖ್ಯಾ ತಜ್ಞರು.

ಹಳ್ಳಿಗಳ ಚಿತ್ರವಂತೂ ಇನ್ನಷ್ಟು ಮನಕಲಕುವಂಥದ್ದು. ದುಡಿಯುವ ಕೈಗಳೆಲ್ಲ ಮಹಾನಗರಗಳ ಕಾರ್ಖಾನೆ, ಹೋಟೆಲ್, ಕಚೇರಿಗಳತ್ತ ವಲಸೆ ಹೋಗುತ್ತಿವೆ. ಒಡಿಶಾದ ಹೆಣ್ಣುಮಕ್ಕಳು ಚೆನ್ನೈನ ವೃದ್ಧಾಶ್ರಮಗಳಲ್ಲಿ ಅಪರಿಚಿತ ವೃದ್ಧರ ಸೇವೆ ಮಾಡುತ್ತಿದ್ದರೆ, ಅವರದೇ ಊರಿನಲ್ಲಿ ಅವರ ಅಜ್ಜ-ಅಜ್ಜಿ ಯಾರ ಆಸರೆಯೂ ಇಲ್ಲದೆ ದಿನ ದೂಡುತ್ತಿದ್ದಾರೆ. ಹೆತ್ತ ಮಕ್ಕಳು ಕರೆಗೆ ಸಿಗದಾದಾಗ ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ನೋವು ತೋಡಿಕೊಳ್ಳುವ ವೃದ್ಧ ಪೋಷಕರ ಸಂಖ್ಯೆ ಬೆಳೆಯುತ್ತಿದೆ. ಊರ ಜಗುಲಿಗಳಲ್ಲಿ ಈಗ ಮಕ್ಕಳ ಆಟವಿಲ್ಲ, ಮುಪ್ಪಿನ ಕಾಯುವಿಕೆ ಮಾತ್ರ ಉಳಿದಿದೆ. ನೋಡಿ ಎಂಥಾ ವಿಪರ್ಯಾಸ.

ನಿಜವಾದ ಆತಂಕ ಇರುವುದು ಮುಂದಿನ ಚಿತ್ರದಲ್ಲಿ. ಆರಂಭದಲ್ಲೇ ಹೇಳಿದ ಹಾಗೆ, ಭಾರತ ಶ್ರೀಮಂತವಾಗುವ ಮುನ್ನವೇ ಮುದಿಯಾಗಲಿದೆ. ಯುರೋಪು, ಜಪಾನ್, ಚೀನಾ ವೃದ್ಧಾಪ್ಯದ ಹೊಸ್ತಿಲು ತಲುಪಿದಾಗ ಅವುಗಳ ಬೊಕ್ಕಸ ತುಂಬಿತ್ತು. ಪಿಂಚಣಿ, ಆರೋಗ್ಯ ವ್ಯವಸ್ಥೆ ಸಜ್ಜಾಗಿತ್ತು. ಆದರೆ ನಮ್ಮಲ್ಲಿ ಪಿಂಚಣಿಯ ಭದ್ರತೆ ಇರುವವರು ಬೆರಳೆಣಿಕೆಯಷ್ಟು ಮಂದಿ ಮಾತ್ರ. ಮಕ್ಕಳೇ ಮುಪ್ಪಿನ ಊರುಗೋಲು ಎಂಬ ನಂಬಿಕೆಯ ಮೇಲೆ ನಿಂತಿದ್ದ ಸಮಾಜದಲ್ಲಿ, ಆ ಮಕ್ಕಳೇ ಇಲ್ಲವಾದರೆ, ಇದ್ದರೂ ದುಡಿಮೆ ಅರಸಿ ದೂರದ ನಗರ ಸೇರಿದರೆ ವೃದ್ಧರ ಗತಿಯೇನು? ತಮಿಳುನಾಡಿನಲ್ಲಿ ಕಳೆದ ವರ್ಷವೊಂದರಲ್ಲೇ 1,200 ಶಾಲೆಗಳು ಮಕ್ಕಳಿಲ್ಲದೆ ಬಾಗಿಲು ಮುಚ್ಚಿವೆ. ಕುಂಭಮೇಳದಂಥ ಧಾರ್ಮಿಕ ಜಾತ್ರೆಗಳಲ್ಲಿ ವೃದ್ಧ ತಂದೆ-ತಾಯಂದಿರನ್ನು ಕರೆತಂದು ಕೈಬಿಟ್ಟು ಹೋಗುವ ಪ್ರಕರಣಗಳು ಹೆಚ್ಚುತ್ತಿವೆ ಎಂಬ ವರದಿಯಂತೂ ಕರುಳು ಹಿಂಡುತ್ತದೆ. ಒಂದೆಡೆ ಮಕ್ಕಳಿಲ್ಲದೆ ಮುಚ್ಚುತ್ತಿರುವ ಶಾಲೆಗಳು, ಇನ್ನೊಂದೆಡೆ ತಲೆಯೆತ್ತುತ್ತಿರುವ ವೃದ್ಧಾಶ್ರಮಗಳು. ಇದಕ್ಕಿಂತ ಮಾರ್ಮಿಕ ರೂಪಕ ಬೇಕೆ?

ಸರ್ಕಾರಗಳು ಎಚ್ಚೆತ್ತುಕೊಂಡಿವೆ ನಿಜ. ಆಂಧ್ರಪ್ರದೇಶ ಮೂರನೇ ಮಗುವಿಗೆ ನಗದು ಬಹುಮಾನ ಘೋಷಿಸಿದೆ. ಮಧ್ಯ ಪ್ರದೇಶವೂ ಹೆಚ್ಚಿನ ಮಕ್ಕಳಿಗಾಗಿ ಪ್ರೋತ್ಸಾಹ ನೀಡಲು ಸಿದ್ಧವಾಗಿದೆ. ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ಜನಸಂಖ್ಯಾ ಸ್ಥಿರತೆಗಾಗಿ ಮೂರು ಮಕ್ಕಳನ್ನು ಪಡೆಯುವಂತೆ ಕರೆ ನೀಡಿದ್ದಾರೆ. ಆದರೆ ಜಗತ್ತಿನ ಅನುಭವ ಹೇಳುವ ಕಟು ಸತ್ಯವೆಂದರೆ, ಹಣದ ಆಮಿಷವಾಗಲೀ ಬೇರೊಬ್ಬರ ಉಪದೇಶವಾಗಲೀ ಈ ಪ್ರವಾಹವನ್ನು ಹಿಮ್ಮೆಟ್ಟಿಸಿದ ಉದಾಹರಣೆ ಇಲ್ಲವೇ ಇಲ್ಲ. ಎಪ್ಪತ್ತು ವರ್ಷಗಳಿಂದ ಇಳಿಯುತ್ತಲೇ ಬಂದಿರುವ ಜನನ ದರ ದಿಢೀರನೆ ಮೇಲೇರುವ ಪವಾಡ ಸಂಭವಿಸದು.

ಮುಂಬೈನ ಲೋಕಲ್ ರೈಲುಗಳ ನೂಕುನುಗ್ಗಲು, ಜಾತ್ರೆಗಳ ಜನಜಂಗುಳಿ, ಗಲ್ಲಿಗಲ್ಲಿಗಳ ಗದ್ದಲ ಇವೇ ಭಾರತದ ಗುರುತು ಎಂದು ನಂಬಿಕೊಂಡು ಬಂದವರು ನಾವು. ಜನವೇ ನಮ್ಮ ಶಕ್ತಿ, ಯುವಶಕ್ತಿಯೇ ನಮ್ಮ ಬಂಡವಾಳ ಎಂದು ಬೀಗಿದವರು ನಾವು. ಆದರೆ ಆ ಜನಸಾಗರದ ಅಲೆಗಳು ನಿಧಾನಕ್ಕೆ ಹಿಂದೆ ಸರಿಯುತ್ತಿವೆ. ಮಕ್ಕಳ ಕಲರವ ಕಿರಿದಾಗುತ್ತ, ಮನೆಯ ಜಗುಲಿಯಲ್ಲಿ ಒಬ್ಬಂಟಿ ವೃದ್ಧರ ಮೌನ ದಟ್ಟವಾಗುತ್ತ ಸಾಗಿರುವ ಈ ಪಯಣದ ಗಮ್ಯವೇನು ಎಂಬ ಪ್ರಶ್ನೆಗೆ ಈಗಲೇ ಉತ್ತರ ಹುಡುಕದಿದ್ದರೆ, ನಾಳೆ ಉತ್ತರ ಕೇಳುವವರೂ ಇರಲಿಕ್ಕಿಲ್ಲ. ಪಾರುಲ್ ಗಾಯೆನ್ ಅವರ ಮಾತು ಮತ್ತೆ ಮತ್ತೆ ಕಿವಿಯಲ್ಲಿ ಗುಂಯ್ಗುಡುತ್ತದೆ: 'ಒಂದು ಮಗು ಎಂದರೆ ಏಕಾಂಗಿತನ.' ನಾಳೆ ಇಡೀ ದೇಶಕ್ಕೇ ಆ ಒಂಟಿತನ ಕಾಡದಿರಲಿ.

ಬದಲಾಗದವುಗಳು

ಸುಜೀರ್ಣಮನ್ನಂ ಸುವಿಚಕ್ಷಣಃ ಸುತಃ ಸುಶಾಸಿತಾ ಸ್ತ್ರೀ ನೃಪತಿಃ ಸುಸೇವಿತಃ ।
ಸುಚಿಂತ್ಯ ಚೋಕ್ತಂ ಸುವಿಚಾರ್ಯ ಯತ್ಕೃತಂ ಸುದೀರ್ಘ ಕಾಲೇಪಿ ನ ಯಾತಿ ವಿಕ್ರಿಯಾಂ ॥
– ಹಿತೋಪದೇಶ

ಚೆನ್ನಾಗಿ ಜೀರ್ಣಿಸಿದ ಅನ್ನ, ಚತುರನಾದ ಮಗ, ಚೆನ್ನಾಗಿ ಶಿಕ್ಷಿಸಲ್ಪಟ್ಟ ಸ್ತ್ರೀ, ಚೆನ್ನಾಗಿ ಸೇವಿಸಲ್ಪಟ್ಟ ದೊರೆ, ಪರ್ಯಾಲೋಚಿಸಿ ಆಡಿದ ಮಾತು, ಪೂರ್ವಾಪರ ವಿಮರ್ಶೆಯಿಂದ ಮಾಡಿದ ಕೆಲಸ – ಇವು ಎಷ್ಟು ಕಾಲದ ಮೇಲೂ ಬದಲಾವಣೆ ಹೊಂದುವುದಿಲ್ಲ – ಎಂಬುದು ಶ್ಲೋಕಾರ್ಥ.



ಸಮಾಜದಲ್ಲಿ ಕೆಲವು ವ್ಯಕ್ತಿಗಳು, ಕೆಲವಾರು ವಿಷಯಗಳು ಹಾಗೂ ಹಲವು ವಸ್ತುಗಳು ಬದಲಾಗುತ್ತಿರುವುದನ್ನು ಕಾಣುತ್ತೇವೆ. ಈ ಬದಲಾವಣೆ ತಕ್ಷಣದಲ್ಲಿಯೂ ಆಗಬಹುದು ಅಥವಾ ಕೆಲವಷ್ಟು ಸಮಯವನ್ನು ಪಡೆದುಕೊಳ್ಳಬಹುದು. ವ್ಯಕ್ತಿಯನ್ನು ನೋಡಿ 'ಇವನು ಹಿಂದಿನಂತಿಲ್ಲ ಬದಲಾಗಿದ್ದಾನೆ' ಎನ್ನುತ್ತೇವೆ. ಕೆಲವಷ್ಟು ಪ್ರದೇಶಗಳು ಬದಲಾಗಿರುವುದನ್ನು ಕಂಡಿದ್ದೇವೆ. ಹಾಗಿದ್ದರೆ ಬದಲಾವಣೆ ಜಗದ ನಿಯಮವೆನ್ನೋಣವೇ? ಹೌದು, ಇದು ಎಲ್ಲರ ಅನುಭವಕ್ಕೆ ಬರುವ ಸತ್ಯ.

ಬದಲಾಗುವ ಪ್ರಪಂಚದಲ್ಲಿ ಕೆಲವಷ್ಟು ಬದಲಾಗುವುದಿಲ್ಲ. ಅವುಗಳ ಬಗ್ಗೆ ಈ ಸುಭಾಷಿತ ಬೆಳಕು ಚೆಲ್ಲುತ್ತದೆ. ಚೆನ್ನಾಗಿ ಜೀರ್ಣವಾದ ಅನ್ನ ಶಕ್ತಿಯಾಗಿ ನಮ್ಮನ್ನು ಪೋಷಿಸುತ್ತದೆ. ಇದರಲ್ಲಿ ಯಾವ ಬದಲಾವಣೆಯೂ ಆಗದು. ಉಂಡ ಅನ್ನದ ಸ್ವಭಾವವೇ ಅದು. ತಿಂದ ಆಹಾರ ಜೀವಪೋಷಕವಾಗಿ ನಮ್ಮನ್ನು ಬದುಕಿಸುತ್ತದೆ.

ಮಕ್ಕಳು ದಾರಿ ತಪ್ಪುತ್ತಾರೆ. ಸಹವಾಸದಿಂದ ಬದಲಾಗುತ್ತಾರೆ ಎಂದುಕೊಳ್ಳುತ್ತೇವೆ. ಕೊಡಬೇಕಾದ ಸಂಸ್ಕಾರ ನೀಡಿ ಜೀವನದ ಓರೆ ಕೋರೆಗಳನ್ನು ತಿದ್ದಿ ತೀಡಿ ಚತುರನನ್ನಾಗಿ ಬೆಳೆಸಿದರೆ ಅವನೆಂದೂ ಬದಲಾಗಲಾರ. ಮಗನು ಕರ್ತವ್ಯದಿಂದ ಬದಲಾಗದ ರೀತಿಯಲ್ಲಿ ಚೆನ್ನಾಗಿ ಬೆಳೆಸುವ ಹೊಣೆ ಹೆತ್ತವರದ್ದು. ಅದನ್ನೆಂದೂ ಕಡೆಗಣಿಸಬಾರದು.

ಸಹಜವಾಗಿ ಸ್ತ್ರೀಯರು ಚಂಚಲೆಯರು ಎನ್ನುವ ಮಾತಿದೆ. ಯಾರು ಚಂಚಲರಲ್ಲ? ಎಲ್ಲರೂ ಚಂಚಲಸ್ವಭಾವದವರೇ.

ಆದರೆ ಸರಿಯಾದ ಶಿಕ್ಷಣ ನೀಡಿದರೆ, ಸಂಸ್ಕಾರದ ಜೊತೆಗೆ ತಿಳುವಳಿಕೆ ನೀಡಿದರೆ ಆದರ್ಶ ಗೃಹಿಣಿಯಾಗಬಲ್ಲಳು. ಮನೆಯವರ ಪಾಲಿಗೆ ಅದೃಷ್ಟ ಲಕ್ಷ್ಮಿಯಾಗಬಲ್ಲಳು. ಆಗುವ ಬೇಡದ ಬದಲಾವಣೆಗಳನ್ನು ತಡೆಯಬಲ್ಲಳು.

ರಾಜರ, ರಾಜಕೀಯ ಪುರುಷರ, ಹಿರಿಯರ ಸೇವೆಯನ್ನು ಚೆನ್ನಾಗಿ ಮಾಡಿದರೆ, ಜೊತೆಯಲ್ಲಿ ಸರಿಯಾದ ಮಾರ್ಗದರ್ಶನವಿದ್ದರೆ ಅವರೆಂದು ಬದಲಾಗುವುದಿಲ್ಲ. ಇವುಗಳಲ್ಲಿ ಕೊರತೆಯಾದರೆ ಅಥವಾ ಕರ್ತವ್ಯದಲ್ಲಿ ಲೋಪವೆಸಗಿದರೆ ಬದಲಾಗಬಹುದೇ ವಿನಾ ಕರ್ತವ್ಯವನ್ನು ಮರೆದರೆ ಬದಲಾಗರು.

ಸರಿಯಾಗಿ ಆಲೋಚಿಸಿ ಅರಿತು ಮಾತನಾಡಿದರೆ ಹಾಗೂ ಮಾಡುವ ಕೆಲಸವನ್ನು ಪೂರ್ವಾಪರ ವಿಮರ್ಶಿಸಿ ತೊಡಗಿಕೊಂಡರೆ ಬದಲಾವಣೆಯಾಗುವುದಿಲ್ಲ. ತೂಕದ ಮಾತು, ಎಚ್ಚರದ ನಡಿಗೆ ಇದನ್ನು ಚೆನ್ನಾಗಿ ಮುಂದುವರಿಯುವಂತೆ ಮಾಡುತ್ತದೆ.

ನಮ್ಮ ನಡೆ- ನುಡಿ- ವ್ಯವಹಾರಗಳಲ್ಲಿ ಈ ಸೂತ್ರರೂಪಿ ಅಂಶವನ್ನು ಅಳವಡಿಸಿ ಕೊಂಡರೆ ಮಾರಕ ಬದಲಾವಣೆಗೆ ತೆರೆದುಕೊಳ್ಳದೇ ಚೆನ್ನಾಗಿ ಮುನ್ನಡೆಯಲು ಸಾಧ್ಯ.

ರಿಸರ್ವ್ ಬ್ಯಾಂಕ್ ಚಿನ್ನ ಮಾರಿದೆ ಎನ್ನುವ 'ಬ್ಲೂಮ್' ಸುಳ್ಳು

▸ ನಾರಾಯಣ ಯಾಜಿ

ಬ್ಲೂಮ್‌ಬರ್ಗ್ (Bloomerge) ಎನ್ನುವುದು ಅಮೇರಿಕದ ಹಣಕಾಸು ವಿಶ್ಲೇಷಣಾ ಸಂಸ್ಥೆ. ಪ್ರಪಂಚಾದ್ಯಂತದ ಶೇರು ಮಾರುಕಟ್ಟೆಗಳನ್ನು ವಿಮರ್ಶಿಸುವುದು ತನಗಿರುವ ವಿಶೇಷ ಅಧಿಕಾರ ಎಂದು ಅದು ತನಗೆ ತಾನೇ ಘೋಷಿಸಿಕೊಂಡಿದೆ. ನಮ್ಮ ದೇಶದ ಮಹಾಬುದ್ಧಿವಂತರೆಲ್ಲ ಅದನ್ನು ತಲೆಯ ಮೇಲೆ ಹೊತ್ತುಕುಣಿಯುತ್ತಾರೆ.

ಇದೇ ಬ್ಲೂಮ್‌ಬರ್ಗ್ ಜಾಗತಿಕ ಹಣಕಾಸು ಮಾರುಕಟ್ಟೆಯಲ್ಲಿ ಜೂನ್ 2ರಂದು ಭಾರಿ ಬಿರುಗಾಳಿ ಎಬ್ಬಿಸಿತು. ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ರೂಪಾಯಿಯನ್ನು ರಕ್ಷಿಸಲು ಬರೋಬ್ಬರಿ 12 ಬಿಲಿಯನ್ ಡಾಲರ್ ಮೌಲ್ಯದ ಚಿನ್ನವನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದೆ ಎನ್ನುವ ವರದಿಯನ್ನು ನ್ಯೂಯಾರ್ಕ್‌ನ ಹವಾನಿಯಂತ್ರಿತ ಕೋಣೆಗಳಲ್ಲಿ ಕುಳಿತು ಬರೆದು ಬಿಡುಗಡೆ ಮಾಡಿತು. ಈ ವಿಶ್ಲೇಷಣೆಯ ಹಿಂದಿರುವ ವ್ಯಕ್ತಿ ಬ್ಲೂಮ್ ಬರ್ಗ್ ಹಣಕಾಸು ಸಂಸ್ಥೆಯ ಹಿರಿಯ ಆರ್ಥಿಕ ವಿಶ್ಲೇಷಕ ಅಭಿಷೇಕ್ ಗುಪ್ತ ಎನ್ನುವ ಅನಿವಾಸಿ ಭಾರತೀಯ! ಈ ಸುದ್ದಿ ಭಾರತೀಯ ಮಾಧ್ಯಮಗಳಲ್ಲೂ ತಲ್ಲಣ ಸೃಷ್ಟಿಸಿತು. ಆದರೆ ಇದರ ಹಿಂದಿರುವ ಸತ್ಯವೇನು? ಆರ್‌ಬಿಐ ನಿಜವಾಗಿಯೂ ಬಂಗಾರ ಮಾರಿತೇ ಅಥವಾ ಇದು ಪಾಶ್ಚಾತ್ಯರ ಎಂದಿನ ಅಪಕ್ವ ಅಂದಾಜೇ ಎನ್ನುವುದನ್ನು ಅವಲೋಕಿಸಿದಾಗ ಕಂಡ ಸತ್ಯ, ಇದೊಂದು ಬುರುಡೆ ಎನ್ನುವುದು.

ಲೆಕ್ಕಾಚಾರ ತಲೆಕೆಳಗಾದದ್ದು ಎಲ್ಲಿ?

ಮೇ ತಿಂಗಳ ಅಂತ್ಯದಲ್ಲಿ ಅಮೆರಿಕ-ಇರಾನ್ ಸಂಘರ್ಷದ ಕಾರಣದಿಂದಾಗಿ ಜಾಗತಿಕ ತೈಲ ಮಾರುಕಟ್ಟೆ ಕದಡಿತು. ಭಾರತ ತನ್ನ ಅಗತ್ಯದ ಶೇಕಡಾ 85ರಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುವುದರಿಂದ, ದೇಶದಿಂದ ಡಾಲರ್ ಹೊರಹರಿವು ಹೆಚ್ಚಾಗಿ ರೂಪಾಯಿ ಮೌಲ್ಯ ಪ್ರತಿ ಡಾಲರ್‌ಗೆ 96.96ರ ಐತಿಹಾಸಿಕ ಕುಸಿತ ಕಂಡಿತು. ರಿಸರ್ವ್ ಬ್ಯಾಂಕಿನ ವಿದೇಶಿ ಕರೆನ್ಸಿ ಆಸ್ತಿಗಳು ಇದೇ ಸಮಯಕ್ಕೆ 7.5 ಬಿಲಿಯನ್ ಡಾಲರ್‌ನಷ್ಟು ಹೆಚ್ಚಾಗಿದ್ದವು. ಇದು ಬ್ಲೂಮ್‌ಬರ್ಗ್‌ನ ಗಮನಕ್ಕೆ ಬರಲೇ ಇಲ್ಲ. ರೂಪಾಯಿ ಕುಸಿತ ತಡೆಯಲು ಆರ್‌ಬಿಐ ತುರ್ತಾಗಿ ಚಿನ್ನವನ್ನು ಮಾರಿ ಡಾಲರ್ ಸಂಗ್ರಹಿಸಿದೆ ಎಂದು ಊಹಿಸಿತು. ಇದು ಕೇವಲ ಕಾಗದದ ಮೇಲಿನ ಊಹಾತ್ಮಕ ಲೆಕ್ಕಾಚಾರವೇ ಹೊರತು ವಾಸ್ತವವಲ್ಲ.

ಜಾಗತಿಕ ಮಾರುಕಟ್ಟೆಯ ಕಣ್ಣಾಮುಚ್ಚಾಲೆ ಆಟ

ವಾಸ್ತವವಾಗಿ ಬ್ಲೂಮ್‌ಬರ್ಗ್ ಎಡವಿದ್ದು ಜಾಗತಿಕ ಚಿನ್ನದ ಬೆಲೆಯ ಏರಿಳಿತವನ್ನು ಅರ್ಥೈಸಿಕೊಳ್ಳುವಲ್ಲಿ. ಮೇ ತಿಂಗಳ ಆರಂಭದಲ್ಲಿ ಪ್ರತಿ ಔನ್ಸ್ ಚಿನ್ನದ ಬೆಲೆ ಸುಮಾರು 4,629 ರಷ್ಟಿತ್ತು. ಆದರೆ ಅಮೆರಿಕದ ಡಾಲರ್ ಮತ್ತು ಬಾಂಡ್ ಇಳುವರಿ ಪ್ರಬಲಗೊಂಡಿದ್ದರಿಂದ ಮೇ ತಿಂಗಳ ಕೊನೆಯ ವಾರದಲ್ಲಿ ಚಿನ್ನದ ಬೆಲೆ ಭಾರಿ ಕುಸಿತ ಕಂಡು ಎರಡು ತಿಂಗಳ ಕನಿಷ್ಠ ಮಟ್ಟವಾದ 4,447.71 ಕ್ಕೆ ತಲುಪಿತು. ಆರ್‌ಬಿಐ ಬಳಿಯಿರುವ ಚಿನ್ನದ ಭೌತಿಕ ತೂಕ ಹಾಗೆಯೇ ಇದ್ದರೂ, ಜಾಗತಿಕ ಮಾರುಕಟ್ಟೆಯಲ್ಲಿ ಪ್ರತಿ ಔನ್ಸ್ ಚಿನ್ನದ ಬೆಲೆ ಹೀಗೆ ನೂರಾರು ಡಾಲರ್ ಕುಸಿದಾಗ, ಭಾರತದ ಒಟ್ಟು ವಿದೇಶಿ ವಿನಿಮಯ ಮೀಸಲು ನಿಧಿಯಲ್ಲಿ ಚಿನ್ನದ ಒಟ್ಟು ಡಾಲರ್ ಮೌಲ್ಯ



ಸಹಜವಾಗಿಯೇ ಬಿಲಿಯನ್‌ಗಟ್ಟಲೆ ಡಾಲರ್ ಇಳಿಕೆಯಾಯಿತು. ಇದನ್ನು ಬ್ಲೂಮ್‌ಬರ್ಗ್ 'ಚಿನ್ನದ ಮಾರಾಟ' ಎಂದು ತಪ್ಪಾಗಿ ಬರೆದು ಜಗತ್ತಿನ ದಿಕ್ಕು ತಪ್ಪಿಸಿತು!

ಬ್ಲೂಮ್‌ಬರ್ಗ್ ಭವಿಷ್ಯ ತಲೆಕೆಳಗಾದದ್ದು ಇದೇ ಮೊದಲೇನಲ್ಲ. ಭಾರತದ ಆರ್ಥಿಕತೆಯ ವಿಷಯದಲ್ಲಿ ಬ್ಲೂಮ್‌ಬರ್ಗ್‌ನ ಕಂಪ್ಯೂಟರ್ ಮಾಡೆಲ್‌ಗಳು ಹೀಗೆ ಮುಖಭಂಗ ಅನುಭವಿಸುತ್ತಿರುವುದು ಇದು ಮೊದಲೇನಲ್ಲ. ಹಿಂದೆ ಕೋವಿಡ್ ಸಾಂಕ್ರಾಮಿಕದ ಸಮಯದಲ್ಲಿ, ಭಾರತದ ಆರ್ಥಿಕತೆ ಚೇತರಿಸಿಕೊಳ್ಳಲು ದಶಕಗಳೇ ಬೇಕಾಗಬಹುದು, ಬ್ಯಾಂಕಿಂಗ್ ವಲಯ ಸಂಪೂರ್ಣ ಧೂಳೀಪಟವಾಗುತ್ತದೆ ಎಂದು ಬ್ಲೂಮ್ ಬರ್ಗ್ ಭವಿಷ್ಯ ನುಡಿದಿತ್ತು. ಆದರೆ ಭಾರತದ ಭದ್ರ ಆರ್ಥಿಕ ನೀತಿಗಳು ಮತ್ತು ಯುಪಿಐ ಆಧಾರಿತ ಡಿಜಿಟಲ್ ಕ್ರಾಂತಿ ಅವರ ಹಳಸಲು ಮಾಡೆಲ್ ಗಳಿಗೆ ಅರ್ಥವಾಗಲೇ ಇಲ್ಲ. ಫಲಿತಾಂಶವಾಗಿ, ಜಗತ್ತಿನಲ್ಲೇ ಅತಿ ವೇಗವಾಗಿ ಚೇತರಿಸಿಕೊಂಡ ಆರ್ಥಿಕತೆಯಾಗಿ ಭಾರತ ಜಗತ್ತಿಗೆ ವಿಸ್ಮಯ ಮೂಡಿಸಿತು.

ಅದೇ ರೀತಿ 2022ರಲ್ಲಿ ರಷ್ಯಾ-ಉಕ್ರೇನ್ ಯುದ್ಧದ ವೇಳೆ ಭಾರತದ ಫಾರೆಕ್ಸ್ ನಿಧಿ ಖಾಲಿಯಾಗಿ ರೂಪಾಯಿ ಪಾತಾಳಕ್ಕೆ ಕುಸಿಯುತ್ತದೆ ಎಂದು ಇವರು ಊಹಿಸಿದ್ದರು. ಆದರೆ ಭಾರತ ಅತ್ಯಂತ ಚಾಣಾಕ್ಷತನದಿಂದ ರಷ್ಯಾದಿಂದ ರಿಯಾಯಿತಿ ದರದಲ್ಲಿ ತೈಲ ಖರೀದಿಸಿ ತನ್ನ ಬೊಕ್ಕಸವನ್ನು ಕಾಪಾಡಿಕೊಂಡಿತು.ತದನಂತರಬ್ಲೂಮ್‌ಬರ್ಗ್‌ಸ್ವತಃಮುಖಭಂಗಮರೆತುತನ್ನಜಾಗತಿಕ ಬಾಂಡ್ ಇಂಡೆಕ್ಸ್‌ನಲ್ಲಿ ಭಾರತವನ್ನು ಸೇರಿಸಿಕೊಳ್ಳಬೇಕಾಯಿತು! ಪಾಶ್ಚಾತ್ಯರ ಕೇವಲ 'ಡೇಟಾ ಕೋರಿಲೇಶನ್' ಸಾಫ್ಟ್‌ವೇರ್‌ಗಳಿಗೆ ಭಾರತದ ಸ್ಥಳೀಯ ಮಾರುಕಟ್ಟೆಯ ತಾಕತ್ತು ಅರ್ಥವಾಗುವುದಿಲ್ಲ ಎಂಬುದಕ್ಕೆ ಇವೇ ಸಾಕ್ಷಿ.

ಆರ್‌ಬಿಐ ಕೊಟ್ಟ ಖಡಕ್ ಸ್ಪಷ್ಟನೆ

ಈ ವರದಿ ಹರಡುತ್ತಿದ್ದಂತೆ ಆರ್‌ಬಿಐ ಮತ್ತು ಸರ್ಕಾರದ ಪ್ರೆಸ್ ಇನ್ಫರ್ಮೇಷನ್ ಬ್ಯೂರೋ ತಕ್ಷಣವೇ ರಂಗಕ್ಕಿಳಿದು ಈ ಸುಳ್ಳು ವರದಿಯನ್ನು ಸಾರಾಸಗಟಾಗಿ ತಿರಸ್ಕರಿಸಿದವು. ಆರ್‌ಬಿಐ ತನ್ನ ಅಧಿಕೃತ ಸ್ಪಷ್ಟನೆಯಲ್ಲಿ, ನಮ್ಮ ಭೌತಿಕ ಚಿನ್ನದ ದಾಸ್ತಾನು ಒಂದು ಗ್ರಾಂನಷ್ಟೂ ಕಡಿಮೆಯಾಗಿಲ್ಲ. ಸಾರ್ವಜನಿಕರು ಇಂತಹ ಊಹಾಪೋಹಗಳನ್ನು ನಂಬದೆ ಅಧಿಕೃತ ದತ್ತಾಂಶಗಳನ್ನು ಮಾತ್ರ ನಂಬಬೇಕು ಎಂದು ಖಡಕ್ ಆಗಿ ಎಚ್ಚರಿಸಿತು. ಪ್ರಸ್ತುತ ಜೂನ್ 2026 ರ ಆರ್‌ಬಿಐ ವರದಿಯ ಪ್ರಕಾರ ಕೂಡ ಭಾರತದ ಒಟ್ಟು ಚಿನ್ನದ ದಾಸ್ತಾನು 880.52 ಮೆಟ್ರಿಕ್ ಟನ್ ಭದ್ರವಾಗಿದೆ. ಭಾರತೀಯ ರೂಪಾಯಿಯನ್ನು ರಕ್ಷಿಸಲು ಆರ್‌ಬಿಐ ಬಳಿ ಈಗಾಗಲೇ 600 ಬಿಲಿಯನ್ ಡಾಲರ್‌ಗೂ ಅಧಿಕ ಬಲಿಷ್ಠ ವಿದೇಶಿ ವಿನಿಮಯ ನಿಧಿಯಿದೆ. ಹಾಗಿರುವಾಗ ಭಾರತ ಹೆಮ್ಮೆಯಿಂದ ಕಾಯ್ದುಕೊಂಡಿರುವ ಬಂಗಾರದ ದಾಸ್ತಾನನ್ನು ಮುಟ್ಟುವ ಯಾವ ಅಗತ್ಯವೂ ಆರ್‌ಬಿಐಗೆ ಇಲ್ಲ.

> ಬ್ಲೂಮ್ ಬರ್ಗ್‌ನ ಕಂಪ್ಯೂಟರ್ ಮಾಡೆಲ್‌ಗಳು ಭಾರತದ ಆರ್ಥಿಕತೆಯ ವಿಷಯದಲ್ಲಿ ಪದೇಪದೇ ಮುಖಭಂಗ ಅನುಭವಿಸುತ್ತಿವೆ.

ಸ್ವದೇಶಕ್ಕೆ ಮರಳುತ್ತಿದೆ ಭಾರತದ ಭಾಗ್ಯಲಕ್ಷ್ಮಿ!

ಬ್ಲೂಮ್‌ಬರ್ಗ್ ಚಿನ್ನ ಮಾರಾಟದ ಕಟ್ಟುಕಥೆ ಹೆಣೆಯುತ್ತಿದ್ದರೆ, ಆರ್‌ಬಿಐ ಮಾತ್ರ ಮತ್ತೊಂದು ಐತಿಹಾಸಿಕ ಕಾರ್ಯಾಚರಣೆಯಲ್ಲಿ ನಿರತವಾಗಿತ್ತು. 1991ರ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ಅಡವಿಟ್ಟ ಮತ್ತು ನಂತರದ ದಿನಗಳಲ್ಲಿ ಸುರಕ್ಷತೆಗಾಗಿ ವಿದೇಶಗಳಲ್ಲಿ ಇಡಲಾಗಿದ್ದ ಚಿನ್ನವನ್ನು ಭಾರತ ಈಗ ಅತ್ಯಂತ ವ್ಯವಸ್ಥಿತವಾಗಿ ಸ್ವದೇಶಕ್ಕೆ ತರುತ್ತಿದೆ. 2022ರ ರಷ್ಯಾ-ಉಕ್ರೇನ್ ಯುದ್ಧದ ಬಳಿಕ ಪಾಶ್ಚಾತ್ಯ ದೇಶಗಳು ರಷ್ಯಾದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡ ರೀತಿ ನೋಡಿ ಎಚ್ಚೆತ್ತ ಆರ್‌ಬಿಐ, ತನ್ನ ಆಸ್ತಿಯನ್ನು ತನ್ನದೇ ಸುಪರ್ದಿಯಲ್ಲಿ ಇರಿಸಿಕೊಳ್ಳುವುದು ಸುರಕ್ಷಿತ ಎಂದು ನಿರ್ಧರಿಸಿತು. ಈ ವಿಷಯದಲ್ಲಿ ಕಳೆದ ಮೂರು ವರ್ಷಗಳಿಂದ ಈ ಕಾರ್ಯಾಚರಣೆ ತೀವ್ರಗೊಂಡಿದ್ದು, ಕೇವಲ 2025-26ರ ಆರ್ಥಿಕ ವರ್ಷವೊಂದರಲ್ಲೇ ಆರ್‌ಬಿಐ ಬರೋಬ್ಬರಿ 168.06 ಮೆಟ್ರಿಕ್ ಟನ್ ಚಿನ್ನವನ್ನು ಬ್ಯಾಂಕ್ ಆಫ್ ಇಂಗ್ಲೆಂಡ್‌ನಿಂದ ಭಾರತಕ್ಕೆ ಯಶಸ್ವಿಯಾಗಿ ತಂದಿದೆ. ವಿದೇಶಿ ಕೇಂದ್ರ ಬ್ಯಾಂಕ್ ಈ ಚಿನ್ನವನ್ನು ಧರ್ಮಕ್ಕೆ ಇರಿಸಿಕೊಳ್ಳುತ್ತಿರಲಿಲ್ಲ. ಅವುಗಳಲ್ಲಿ ಇರಿಸಿದ್ದಕ್ಕೆ ಚಿನ್ನದ ಬಾರೊಂದಕ್ಕೆ ಪ್ರತಿ ದಿನಕ್ಕೆ ಸುಮಾರು 3.5 ಪೆನ್ನಿಯಷ್ಟು ಬಾಡಿಗೆಯನ್ನು ವಿಧಿಸುತ್ತವೆ ಎನ್ನಲಾಗಿದೆ. ಈಗ ಒಟ್ಟು 880.52 ಟನ್‌ಗಳಲ್ಲಿ ಬರೋಬ್ಬರಿ ಶೇ.77 (ಸುಮಾರು 680.05 ಮೆಟ್ರಿಕ್ ಟನ್) ಚಿನ್ನ ಭಾರತದ ಮುಂಬಯಿ ಮತ್ತು ನಾಗ್ಪುರದ ಖಜಾನೆಯಲ್ಲಿ ಅತ್ಯಂತ ಸುರಕ್ಷಿತವಾಗಿರಿಸಲ್ಪಟ್ಟಿದೆ.

ಪಾಶ್ಚಾತ್ಯರ ಅಸಹನೆ

ಪಾಶ್ಚಾತ್ಯ ಹಣಕಾಸು ಮಾಧ್ಯಮಗಳು ಭಾರತದಂತಹ ಉದಯೋನ್ಮುಖ ಆರ್ಥಿಕತೆಗಳನ್ನು ಸದಾ 'ಅಪಾಯದ' ಕಣ್ಣುಗಳಿಂದಲೇ ನೋಡುತ್ತವೆ. ಸ್ಥಳೀಯ ನೀತಿಗಳು, ಆರ್‌ಬಿಐನ ಆಂತರಿಕ ಆರ್ಥಿಕ ತಂತ್ರಗಳು ಮತ್ತು ಭಾರತದ ಆರ್ಥಿಕತೆಯ ನೈಜ ಶಕ್ತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಬ್ಲೂಮ್‌ಬರ್ಗ್‌ನಂತಹ ಜಾಗತಿಕ ಸಂಸ್ಥೆಗಳು ವಿಫಲವಾಗಿವೆ ಎಂಬುದಕ್ಕೆ ಈ ಘಟನೆಯೇ ಸಾಕ್ಷಿ. ಭಾರತ ತನ್ನ ಚಿನ್ನವನ್ನು ಮಾರುತ್ತಿಲ್ಲ, ಬದಲಿಗೆ ತನ್ನ ಆರ್ಥಿಕ ಸಾರ್ವಭೌಮತ್ವವನ್ನು ಎತ್ತಿಹಿಡಿಯಲು ಬಂಗಾರವನ್ನು ಸ್ವದೇಶಕ್ಕೆ ತಂದು ಭದ್ರಪಡಿಸುತ್ತಿದೆ. ಇದೆಲ್ಲ ಪಾಶ್ಚಾತ್ಯರಿಗೆ ಅಸಹನೆ ಸೃಷ್ಟಿಸುತ್ತಿದೆ. ಭಾರತದ ವಿರುದ್ಧ ಅಪಪ್ರಚಾರ ಮಾಡಲು ಇದೂ ಒಂದು ಕಾರಣವಾಗಿದೆ.

ನೆಹರೂಗಿಂತ ಮೋದಿಗೆ ಸವಾಲುಗಳು ಹೆಚ್ಚು...ಯಶಸ್ಸೂ ಹೆಚ್ಚು!

▸ ಸಾಲ್ವಟೋರ್ ಬಾಬೋನ್ಸ್

ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಜೂನ್ 10ರಂದು, ಅತಿ ದೀರ್ಘ ಕಾಲ ಆಡಳಿತ ನಡೆಸಿದ ದಾಖಲೆ ಮಾಡಿದರೆಂದೂ, ಈ ನಿಟ್ಟಿನಲ್ಲಿ ಜವಾಹರ್‌ಲಾಲ್ ನೆಹರೂ ದೀರ್ಘಕಾಲ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ ದಾಖಲೆಯನ್ನು ಮುರಿದರೆಂದೂ ಅಂತರ್ಜಾಲದಲ್ಲಿ ಸುದ್ದಿಗಳು ಹರಿದಾಡಿದ್ದನ್ನು ಗಮನಿಸಿದೆ.

ನೆಹರೂ ಚುನಾವಣೆಯಲ್ಲಿ ಸ್ಪರ್ಧಿಸಿ ಪ್ರಧಾನಿಯಾಗುವುದಕ್ಕಿಂತಲೂ ಮೊದಲು ನಾಲ್ಕೂವರೆ ವರ್ಷ ಕಾಲ ಆಡಳಿತ ನಡೆಸಿದ್ದರು. ಭಾರತಕ್ಕೆ ಸ್ವಾತಂತ್ರ್ಯ ದೊರಕಿದಾಗಲೆ ಅವರು ಪ್ರಧಾನಿಯಾಗಿದ್ದು, ಚುನಾಯಿತ ಪ್ರಧಾನಿಯಾಗಿ ಅವರು 1952ರಲ್ಲಷ್ಟೇ ಅಧಿಕಾರ ಸ್ವೀಕರಿಸಿದರು. ಅವರ ಪುತ್ರಿ ಇಂದಿರಾಗಾಂಧಿ ಎರಡು ಅವಧಿಗೆ ಪ್ರಧಾನಿಯಾಗಿದ್ದರು. ಮೊದಲ ಅವಧಿ ಹಲವಾರು ವಿವಾದಗಳಿಂದ ಕೊನೆಗೊಂಡರೆ, ಎರಡನೆಯದು ಅವರ ಹತ್ಯೆಯಿಂದ ಕೊನೆಗೊಂಡಿತು.

ಇವರಿಗೆ ಹೋಲಿಸಿದರೆ ನರೇಂದ್ರ ಮೋದಿಯವರು ಅತ್ಯಂತ ಯಶಸ್ವಿ 'ಆಧುನಿಕ ರಾಜಕಾರಣಿ' ಎಂಬ ಹಿರಿಮೆ ಪಡೆದಿದ್ದಾರೆ. ಅವರದು ನೆಹರೂ ಮತ್ತು ಇಂದಿರಾ ಗಾಂಧಿಗಿಂತಲೂ ಹೆಚ್ಚಾಗಿ ಜರ್ಮನಿಯ ಏಂಜೆಲಾ ಮಾರ್ಕೆಲ್ ಅವರ ಮಾದರಿಯ ಆಡಳಿತ ಎಂದು ಹೇಳಬಹುದು. ಪ್ರಧಾನಿ ಮೋದಿಯವರು ಕಬ್ಬಿಣದ ಹಸ್ತದಿಂದ ದೇಶವಾಳುತ್ತಾರೆ ಎಂಬುದಾಗಿ ಅವರ ಟೀಕಾಕಾರರು ಹೇಳುವುದುಂಟು. ಆದರೆ ಭಾರತವನ್ನು ಆಳಲು ಕಬ್ಬಿಣದ ಹಸ್ತವೇ ಬೇಕಾಗುತ್ತದೆ.

ನಿಜವಾಗಿ ನೆಹರೂ ಭಾರತದಲ್ಲಿ ಆಡಳಿತ ನಡೆಸಿದವರಲ್ಲ. ಕೇವಲ ಆಳ್ವಿಕೆ ನಡೆಸಿದ್ದಷ್ಟೇ ಎಂದು ಹೇಳಬಹುದು. ಮೋದಿಯವರು ಹಾಗಲ್ಲ. ಅವರು ದೇಶದ ಚುಕ್ಕಾಣಿ ಹಿಡಿದು ಅದನ್ನು ಮುನ್ನಡೆಸಿದವರು. ದೇಶವೆಂಬ ಹಡಗಿನ ಚುಕ್ಕಾಣಿ ಹಿಡಿದು ಈ ರೀತಿ ಮುನ್ನಡೆಸಬಲ್ಲ ನಾಯಕನು ರಾಜಕೀಯ ಗಾಳಿ ಬೀಸುವ ದಿಕ್ಕನ್ನು ಅರಿಯುವ ಮತ್ತು ಚುನಾವಣಾ ಅಲೆಗಳನ್ನು ನಿಭಾಯಿಸುವ ಸಾಮರ್ಥ್ಯ ಹೊಂದಿರಬೇಕಾಗುತ್ತದೆ. ಮೋದಿ ಅಂತಹ ಸಾಮರ್ಥ್ಯ ಹೊಂದಿದವರು.



ದೇಶದ ಆಳ್ವಿಕೆಯನ್ನು ಯಾವನೇ ಸರ್ವಾಧಿಕಾರಿ ಕೂಡಾ ನಡೆಸಬಲ್ಲ. ಈ ರೀತಿ ಆಳುವವನು ಸಮಾಜಕ್ಕಾಗಿ ಏನಾದರೂ ಮಾಡುವ ಬದಲಾಗಿ ಸಮಾಜವನ್ನೆ ತನಗೆ ತಕ್ಕಂತೆ ಬದಲಿಸಿಕೊಳ್ಳುತ್ತಾನೆ. ಆತ ಸಮಾಜಕ್ಕೆ ತನ್ನನ್ನು ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ಸಮಾಜವೇ ಆತನಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ.

ನೆಹರೂ ಭಾರೀ ಬಹುಮತದೊಂದಿಗೆ ಸ್ವತಂತ್ರ ಭಾರತದ ಪ್ರಧಾನಿಯಾಗಿ ಅಧಿಕಾರ ಹಿಡಿದರು. ಅವರ ಆಳ್ವಿಕೆಯುದ್ದಕ್ಕೂ ಈ ಬಹುಮತ ಅವರೊಂದಿಗೇ ಇತ್ತು. ಪತ್ರಿಕೆಗಳು ಅವರನ್ನು ಟೀಕಿಸಿದಾಗ ಆ ಪತ್ರಿಕೆಗಳ ಮೇಲೆಯೇ ಸೆನ್ಸಾರ್‌ಶಿಪ್ ಹೇರಿದರು. ಕೈಗಾರಿಕೋದ್ಯಮಿಗಳು ಅವರ ಪಂಚವಾರ್ಷಿಕ ಯೋಜನೆಯನ್ನು ವಿರೋಧಿಸಿದಾಗ ಅವರು ಕೈಗಾರಿಕೆಗಳನ್ನೇ ರಾಷ್ಟ್ರೀಕರಣಗೊಳಿಸಿದರು. ತಮಗೆ ಬೇಕಾದಂತೆ ನಡಕೊಂಡರು. ಆದರೆ ಮೋದಿಯವರು ಅಂತಹ ಹೆಜ್ಜೆಯಿಡಲಿಲ್ಲ.

ಮೋದಿಯವರು ಮೂರು ಪ್ರಮುಖ ಗುರಿಗಳೊಂದಿಗೆ ಪ್ರಧಾನಿ ಪಟ್ಟಕ್ಕೇರಿದ್ದರು. ಆ ಗುರಿಗಳಲ್ಲಿ ಒಂದಾದ ಸಂವಿಧಾನದ 370ನೇ ವಿಧಿ ರದ್ದತಿಗೆ ಅವರಿಗೆ 5 ವರ್ಷಗಳು ಬೇಕಾದವು. ಮತ್ತೊಂದು ಗುರಿಯಾದ ಅಯೋಧ್ಯೆ ಶ್ರೀರಾಮ ಮಂದಿರ ನಿರ್ಮಿಸಲು ಸುಮಾರು 10 ವರ್ಷಗಳು ಬೇಕಾದವು. ಸಮಾನ ನಾಗರಿಕ ಸಂಹಿತೆ ಜಾರಿಗೊಳಿಸುವ ಅವರ ಮತ್ತೊಂದು ಗುರಿ ಇನ್ನೂ ಈಡೇರದೆ ಬಾಕಿ ಉಳಿದಿದೆ. ಬಹುಶಃ 2029ರೊಳಗೆ ಅದು ಸಾಧ್ಯವಾಗುವುದು ಕಷ್ಟ ಏಕೆಂದರೆ ಮೋದಿ ಮತ್ತು ಬಿಜೆಪಿ ಎಚ್ಚರಿಕೆಯ ನಡೆ ಇಡಬೇಕಾಗಿದೆ. ಆಗಿಂದಾಗ್ಗೆ ಭಾರತದಲ್ಲಿ ಚುನಾವಣೆಗಳು ನಡೆಯುತ್ತಲೇ ಇರುತ್ತವೆ. ಕೇಂದ್ರದಲ್ಲಿ ಅಲ್ಲದಿದ್ದರೂ ರಾಜ್ಯಗಳಲ್ಲಿ ಚುನಾವಣೆ ನಡೆಯುತ್ತಿದ್ದು, ಬಿಜೆಪಿ ಅದನ್ನು ಗೆಲ್ಲಬೇಕಾಗುತ್ತದೆ.

ತಾವು ಎದುರಿಸಿದ 3 ಲೋಕಸಭಾ ಚುನಾವಣೆಗಳಲ್ಲಿ ನೆಹರೂ ಯಾವತ್ತಿಗೂ ಶೇ. 40ಕ್ಕಿಂತ ಕಡಿಮೆ ಓಟು ಪಡೆದವರಲ್ಲ. ಲೋಕಸಭೆಯಲ್ಲಿ ಅವರಿಗೆ ಯಾವಾಗಲೂ ಮೂರನೇ ಎರಡರಷ್ಟು ಬಹುಮತ ಇರುತ್ತಿತ್ತು. 1951ರಿಂದ 1962ರ ಚುನಾವಣೆ ತನಕ ಯಾವುದೇ ವಿರೋಧ ಪಕ್ಷವು ಶೇ. 11ಕ್ಕಿಂತ ಹೆಚ್ಚು ಮತ ಗಳಿಸಲಿಲ್ಲ. ನೆಹರೂ ಚುನಾವಣೆಗಳನ್ನು ಎದುರಿಸಿದರು ನಿಜ. ಆದರೆ ಅವರು ವಿರೋಧ ಪಕ್ಷಗಳನ್ನು ಎದುರಿಸಲಿಲ್ಲ.

ಇದಕ್ಕೆ ಹೋಲಿಸಿದರೆ, ನರೇಂದ್ರ ಮೋದಿಯವರ ಬಿಜೆಪಿ ಚುನಾವಣೆಗಳಲ್ಲಿ ಶೇ. 40ಕ್ಕಿಂತ ಹೆಚ್ಚು ಮತ ಗಳಿಸಲಿಲ್ಲ. ವಿರೋಧ ಪಕ್ಷಗಳು ದುರ್ಬಲಗೊಂಡಿದ್ದರೂ ಸದಾ ಕಾಲ ಮೋದಿ ಸರಕಾರಕ್ಕೆ ಅಪಾಯವೊಡ್ಡುತ್ತಲೇ ಇರುತ್ತವೆ.

ಭಾರತದ ಚುನಾವಣಾ ವಿಶ್ಲೇಷಕರು (ಮೋದಿ ಪರ ಮತ್ತು ಮೋದಿ ವಿರೋಧಿ ಇಬ್ಬರೂ) ಬಿಜೆಪಿ ಈಗ ಭಾರತೀಯ ರಾಜಕಾರಣದ ಬಹುದೊಡ್ಡ ಶಕ್ತಿಯಾಗಿದ್ದು ಅದನ್ನು ತಡೆಯುವವರಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಅವರು 2024ರ ಜೂನ್‌ನ ಮನಸ್ಥಿತಿಯನ್ನು ಮರೆಯುತ್ತಿದ್ದಾರೆ. ಅಂದು ಇದೇ ವಿಶ್ಲೇಷಣಾಕಾರರು ಬಿಜೆಪಿ ದುರ್ಬಲಗೊಳ್ಳುತ್ತಿವೆ ಹಾಗೂ ಮೋದಿ ಪ್ರಧಾನಿ ಪಟ್ಟದಿಂದ ಕೆಳಗಿಳಿಯಬಹುದು ಎಂದು ಹೇಳುತ್ತಿದ್ದರು.

ವಿದೇಶಿ ವಿಶ್ಲೇಷಣಾಕಾರರ ಅಭಿಮತದಂತೆ ನರೇಂದ್ರ ಮೋದಿಯವರು ಒಬ್ಬ ಅಪರೂಪದ ರಾಜಕಾರಣಿ. ಅವರೆ ನಿರಂಕುಶ ಆಡಳಿತಗಾರನಲ್ಲ. ಬಿಜೆಪಿ ಸಮಯಕ್ಕೆ ತಕ್ಕಂತೆ ಬಾಗಲು ಸಿದ್ಧವಿರುವುದರಿಂದಲೇ ಅದು ಗೆಲ್ಲುತ್ತಿದೆಯೇ ಹೊರತು ಬೇರಾವ ವಾಮಮಾರ್ಗದಿಂದಲ್ಲ. ಪ್ರಧಾನಿ ನರೇಂದ್ರ ಮೋದಿಯವರು ಸ್ಥಿತಿಸ್ಥಾಪಕತ್ವ ಗುಣ ಹೊಂದಿರುವುದೇ ಅವರು ದೀರ್ಘಕಾಲ ಆಡಳಿತದಲ್ಲಿ ಉಳಿದಿರುವುದಕ್ಕೆ ಕಾರಣವಾಗಿದೆ. ಅವರು ಅತ್ಯಂತ ಕಠಿಣ ಆಡಳಿತಗಾರರಾಗಿ ಕಂಡುಬಂದರೂ ಅತ್ಯಂತ ಕೌಶಲದಿಂದ ಆಡಳಿತ ನಡೆಸುತ್ತಾರೆ. ನಿಜ, ಅವರಿಗೂ ಹಲವಾರು ಗುರಿಗಳಿವೆ. ಅದನ್ನು ಅವರು ಸಾಧಿಸಲೂ ಬಹುದು. ಆದರೆ ಅವರು ನೇರ ದಾರಿಯಲ್ಲಿ ನಡೆದು ಅದನ್ನು ಸಾಧಿಸಲಾಗದಂತೆ ಭಾರತೀಯ ವ್ಯವಸ್ಥೆಯಲ್ಲಿ ಹಲವಾರು ತೊಡಕುಗಳಿವೆ.

ಜರ್ಮನಿಯ ಚಾನ್ಸೆಲರ್ ಆಗಿ ಏಂಜೆಲಾ ಮಾರ್ಕೆಲ್ 5,860 ದಿನ ಆಡಳಿತ ನಡೆಸಿದ್ದರು. ಆಕೆಯ ದಾಖಲೆಯನ್ನು ಮುರಿಯಲು ಪ್ರಧಾನಿ ಮೋದಿಯವರು 2029ರ ಚುನಾವಣೆಯನ್ನೂ ಗೆಲ್ಲಬೇಕಾಗುತ್ತದೆ ಹಾಗೂ 2030ರ ಜೂನ್ 10ರ ವರೆಗೆ ತಮ್ಮ ಪ್ರಧಾನಿ ಪಟ್ಟವನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಇದೊಂದು ಅತೀ ದೊಡ್ಡ ಸವಾಲು. ಆದರೆ ಅವರು ಈ ಸವಾಲನ್ನು ಗೆಲ್ಲುವರೆಂದು ನಾನಂತೂ ಬೆಟ್ ಕಟ್ಟಬಲ್ಲೆ.

(ಲೇಖಕರು ಸಿಡ್ನಿ ವಿಶ್ವವಿದ್ಯಾಲಯದ ಪ್ರೊಫೆಸರ್)

ಚುನಾಯಿತ ಪ್ರಧಾನಿಯಾಗಿ ದೀರ್ಘ ಸೇವೆ

ಪ್ರಧಾನಿಗೆ ಕೇಂದ್ರ ಸಂಪುಟ ಗೌರವ



ಭಾರತ್ ಮಂಟಪಂನಲ್ಲಿ ನಡೆದ ಎನ್‌ಡಿಎ ಸಭೆಯಲ್ಲಿ ಪ್ರಧಾನಿ ಮೋದಿ ಹಾಗೂ ಇತರ ಬಿಜೆಪಿ ನಾಯಕರು.

• **ಹೊಸದಿಲ್ಲಿ:** ದೇಶದಲ್ಲಿ ಸತತ ಚುನಾಯಿತ ಪ್ರಧಾನಿಯಾಗಿ ಸುದೀರ್ಘ ಸೇವೆ ಸಲ್ಲಿಸಿದ ದಾಖಲೆ ಬರೆದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೇಂದ್ರ ಸಂಪುಟ ಬುಧವಾರ ಗೌರವ ಸಲ್ಲಿಸಿದೆ. ಸಂಪುಟ ಸಭೆಯಲ್ಲಿ ಎದ್ದು ನಿಂತು ಚಪ್ಪಾಳೆ ತಟ್ಟಿ ಸಂಪುಟ ಸದಸ್ಯರು ತಮ್ಮ ನಾಯಕನಿಗೆ ಅಭಿನಂದನೆ ಸಲ್ಲಿಸಿದರು.

ದೇಶದಲ್ಲಿ ಸುದೀರ್ಘಾವಧಿಗೆ ಸೇವೆ ಸಲ್ಲಿಸುತ್ತಿರುವ ಚುನಾಯಿತ ಪ್ರಧಾನಿಯಾಗಿ ಸೇವೆ ಸಲ್ಲಿಸುತ್ತಿರುವ ನೆಲೆಯಲ್ಲಿ ತಮಗೆ ಅಭಿನಂದನೆ ಸಲ್ಲಿಸಿರುವುದಕ್ಕಾಗಿ ತಮ್ಮನ್ನು ಅಭಿನಂದಿಸಿದ ಸಂಪುಟ ಸಹೋದ್ಯೋಗಿಗಳಿಗೆ ಮೋದಿಯವರು ಕೃತಜ್ಞತೆ ಸಲ್ಲಿಸಿದರಲ್ಲದೆ ಆ ಕ್ಷಣಗಳನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ. ಇದೇ ವೇಳೆ, 140ಕೋಟಿ ಭಾರತೀಯರ ಆಕಾಂಕ್ಷೆಗಳನ್ನು ಪ್ರತಿನಿಧಿಸುವ ವಿಕಸಿತ ಭಾರತದ ಸಾಕಾರದೆಡೆಗೆ ಇನ್ನಷ್ಟು ಹೆಚ್ಚಿನ ಹುರುಪು ಮತ್ತು ವೇಗದೊಂದಿಗೆ ಕೆಲಸ ಮಾಡುವ ನಮ್ಮ ಪ್ರಯತ್ನಗಳು ಮುಂದುವರಿಯಲಿವೆ ಎಂದಿದ್ದಾರೆ.

ದೇಶ ಮೊದಲು ಎಂಬ ಸಂಕಲ್ಪತೊಟ್ಟ ನಾಯಕನಿಗೆ ಜನಬೆಂಬಲ: ಇದೇ ವೇಳೆ ಸಂಪುಟ ಕೈಗೊಂಡ ನಿರ್ಣಯವೊಂದರಲ್ಲಿ, "ಈ ಸಂದರ್ಭವು ಭಾರತೀಯ ಪ್ರಜಾತಾಂತ್ರಿಕ ಪ್ರಜ್ಞೆ, ಸಾರ್ವಜನಿಕ ನಂಬಿಕೆ, ಸಾರ್ವಜನಿಕ ಭಾಗೀದಾರಿಕೆಯ ಶಕ್ತಿಯ ಸಂಕೇತವಾಗಿ ನಿಂತಿದೆ. ಇದು 'ರಾಷ್ಟ್ರವೇ ಮೊದಲು 'ಎಂಬ ಸಂಕಲ್ಪದಿಂದ ಮಾರ್ಗದರ್ಶಿತವಾದ ನಾಯಕನೊಬ್ಬನ ಮೇಲೆ ದೇಶದ ಜನತೆ ಇಟ್ಟ ನಂಬಿಕೆ ಮತ್ತು ಅವರಿಗೆ ನೀಡಿದ ಅಭೂತಪೂರ್ವ ಬೆಂಬಲವನ್ನು ಪ್ರತಿಬಿಂಬಿಸುತ್ತದೆ "ಎಂದು ತಿಳಿಸಿದೆ.

ಅಲ್ಲದೆ ಪ್ರಧಾನಿ ಮೋದಿಯವರು ಸರಕಾರದ ಮುಖ್ಯಸ್ಥರಾಗಿ ಸತತ ನೆಲೆಯಲ್ಲಿ 25ವರ್ಷಗಳನ್ನು ಪೂರೈಸುತ್ತಿರುವ ಐತಿಹಾಸಿಕ ಮೈಲುಗಲ್ಲನ್ನು ಸಮೀಪಿಸಿದ ಬಗೆಗೂ ಸಂಪುಟ ಉಲ್ಲೇಖಿಸಿದೆ. ಸೂಕ್ಷ್ಮ ಸಂವೇದನೆ, ಸಂಯಮ, ಸದುದ್ದೇಶ ಮತ್ತು ದೃಢಬದ್ಧತೆಗಳನ್ನು ಹೊಂದಿದ ನಾಯಕತ್ವವನ್ನು ಅಭಿನಂದಿಸಿ 6 ದಶಕಗಳ ಬಳಿಕ ದೇಶದ ಜನತೆ ಎನ್‌ಡಿಎ ಸರಕಾರಕ್ಕೆ ಸತತ 3ನೇ ಬಾರಿಗೆ ಜನಾದೇಶ ನೀಡಿರುವುದನ್ನು ಒತ್ತಿ ಹೇಳಿದೆ.

ಪ್ರಧಾನಿ ಮೋದಿಯವರ ಜೀವನವು ರಾಷ್ಟ್ರ ನಿರ್ಮಾಣ ಮತ್ತು ಸೇವೆಗೆ ನಿರಂತರ ಸಮರ್ಪಣೆಯ ಸಂಕೇತವಾಗಿದೆ. 2014ರಲ್ಲಿ ಅವರು ಮಾಡಿದ "ಪ್ರಧಾನ್ ಸೇವಕ್"ಘೋಷಣೆಯನ್ನು ನಿರ್ಣಯ ಬೊಟ್ಟು ಮಾಡಿದ್ದು, 'ಸಬ್‌ಕಾ ಸಾಥ್, ಸಬ್ ಕಾ ವಿಕಾಸ್'ಮಂತ್ರಕ್ಕೆ ಕಂಕಣಬದ್ಧರಾಗಿ ಕಾರ್ಯ ನಿರ್ವಹಿಸುತ್ತಿರುವುದಕ್ಕಾಗಿ ಅಭಿಮಾನ ವ್ಯಕ್ತಪಡಿಸಿದೆ. ನರೇಂದ್ರ ಮೋದಿಯವರು ಬುಧವಾರ ಪ್ರಜಾತಾಂತ್ರಿಕವಾಗಿ ಅತ್ಯಂತ ಸುದೀರ್ಘಾವಧಿಗೆ ಆಯ್ಕೆಯಾದ ಭಾರತದ ಪ್ರಧಾನಿ ಎಂಬ ದಾಖಲೆ ಮಾಡಿದ ನರೇಂದ್ರ ಮೋದಿಯವರು 4,399ದಿನಗಳನ್ನು ಅಧಿಕಾರದಲ್ಲಿ ಪೂರೈಸುವ ಮೂಲಕ ಪ್ರಥಮ ಪ್ರಧಾನಿ ಜವಹರಲಾಲ್ ನೆಹರೂ ಅವರ ಧಾಖಲೆಯನ್ನು ಮುರಿದರು. 1947ರಿಂದ 1952ರವರೆಗೆ ಯಾವುದೇ ಚುನಾವಣೆ ಇಲ್ಲದೆಯೇ ಮಧ್ಯಂತರ ಸರಕಾರದ ನೇತೃತ್ವ ವಹಿಸಿದ್ದ ನೆಹರೂ 1952ರ ಮೇ 13ರಂದು ಮೊದಲ ಚುನಾಯಿತ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡರು.ಅವರು 1964ರ ಮೇ 27ರವರೆಗೆ ಅಧಿಕಾರದಲ್ಲಿದ್ದರು. ಈ ಮೂಲಕ ಅವರು 4,398ದಿನಗಳ ಕಾಲ ಅಧಿಕಾರದಲ್ಲಿದ್ದು ದಾಖಲೆ ಮಾಡಿದ್ದರು. ಇದೀಗ ಅವರ ದಾಖಲೆಯನ್ನು ನರೇಂದ್ರ ಮೋದಿಯವರು ಮೀರಿ ಹೊಸ ದಾಖಲೆ ಬರೆದಿದ್ದಾರೆ. ಮೋದಿಯವರು 2014ರ ಮೇ26ರಂದು ಸಾರ್ವತ್ರಿಕ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿ ಅಧಿಕಾರಕ್ಕೆ ಬಂದು 2019ರಲ್ಲಿ ಇನ್ನಷ್ಟು ಬಲಿಷ್ಠ ಬಹುಮತದೊಂದಿಗೆ ಮರಳಿ ಅಧಿಕಾರಕ್ಕೆ ಬಂದು, 2024ರ ಜೂ.9ರಂದು ಮೂರನೇ ಬಾರಿಗೆ ಅಧಿಕಾರಕ್ಕೆ ಬಂದು ದೇಶದ ಕಾಂಗ್ರೆಸ್ಸೇತರ ಪ್ರಧಾನಿಯಾಗಿ ಇಂತಹ ಒಂದು ಅಪೂರ್ವ ಸಾಧನೆಗೈದಿದ್ದಾರೆ . ಎನ್‌ಡಿಎ ಬುಧವಾರ ದಿಲ್ಲಿಯಲ್ಲಿ ಈ ಬಗ್ಗೆ ವಿಶೇಷ ಸಂಭ್ರಮಾಚರಣೆ ನಡೆಸಿತು.

ಬತ್ತಳಿಕೆಯಲ್ಲಿ 190 ಸಿಡಿತಲೆಗಳು

2026ರ ಜನವರಿಯವರೆಗೆ ಭಾರತ 190 ಸಿಡಿತಲೆಗಳನ್ನು ದಾಸ್ತಾನು ಇರಿಸಿದೆ. ಹಿಂದಿನ ವರ್ಷಕ್ಕಿಂತ ಸಿಡಿತಲೆಗಳ ಸಂಖ್ಯೆ ಹೆಚ್ಚಾಗಿವೆ. ಯುದ್ಧ ವಿಮಾನಗಳು (ಆಕಾಶ), ಭೂ ಆಧಾರಿತ ಕ್ಷಿಪಣಿಗಳು (ಭೂಮಿ) ಮತ್ತು ಅಣ್ವಸ್ತ್ರ ಕ್ಷಿಪಣಿ ಸಾಮರ್ಥ್ಯವುಳ್ಳ ಸಬ್‌ಮೆರಿನ್‌ಗಳಲ್ಲಿ (ಸಮುದ್ರ) ನಿಯೋಜನೆ ಮಾಡಲಾಗಿದೆ ಎಂದು ಸಿಪ್ರಿ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ನೋ ಫಸ್ಟ್ ಯೂಸ್ ಭಾರತದ ಪರಮಾಣು ನೀತಿ

12 ಪರಮಾಣು ಸಿಡಿತಲೆಗಳ ಸಕ್ರಿಯ ನಿಯೋಜನೆ



ಬದಲಾಗುವುದೇ ಭಾರತದ ಹಳೆಯ ಶಾಂತಿ ನೀತಿ?

ಭಾರತ ಇದೇ ಮೊದಲ ಬಾರಿಗೆ 12 ಪರಮಾಣು ಸಿಡಿತಲೆಗಳನ್ನು ನಿಯೋಜನೆ ಮಾಡಿರುವುದಾಗಿ ಸ್ಟಾಕ್‌ಹೋಮ್ ಅಂತಾರಾಷ್ಟ್ರೀಯ ಶಾಂತಿ ಸಂಶೋಧನಾ ಸಂಸ್ಥೆ (ಸಿಪ್ರಿ) ತನ್ನ ಇತ್ತೀಚಿನ ವರದಿಯಲ್ಲಿ ಉಲ್ಲೇಖಿಸಿದೆ. ಮೊದಲು ಪ್ರಯೋಗಿಸುವುದಿಲ್ಲ ಎಂಬುದು ಭಾರತದ ಪರಮಾಣು ನೀತಿಯಾಗಿದೆ. ಆದರೆ ಈ ನೀತಿಯಲ್ಲಿ ಕೇಂದ್ರ ಸರ್ಕಾರ ಮಹತ್ವದ ಬದಲಾವಣೆ ಮಾಡಿಕೊಂಡಂತೆ ಕಂಡುಬರುತ್ತಿದೆ. ಯಾಕೆಂದರೆ, ಇದೇ ಮೊದಲ ಬಾರಿಗೆ ಭಾರತವು 12 ಪರಮಾಣು ಸಿಡಿತಲೆಗಳನ್ನು ನಿಯೋಜನೆ ಮಾಡಿದ್ದು, ಈ ಬೆಳವಣಿಗೆಯಿಂದ ಭಾರತದ ಪರಮಾಣು ನೀತಿ ಬದಲಾಗುತ್ತಿರುವ ಮುನ್ಸೂಚನೆ ಎಂದು ವಿಶ್ಲೇಷಿಸಲಾಗುತ್ತಿದೆ. ದ್ರೋಹಿ ಪಾಕಿಸ್ತಾನ ಹಾಗೂ ಚೀನಾ ಸೇರಿದಂತೆ ಯಾವುದೇ ವೈರಿ ಆಕ್ರಮಣವನ್ನು ಎದುರಿಸಲು ಭಾರತದ ಸನ್ನದ್ಧತೆಯನ್ನು ಇದು ಸಾರಿದೆ. ಭಾರತದ ಪರಮಾಣು ನೀತಿ ವಿಚಾರವಾದ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ದ್ರೋಹಿ ಸದ್ದಡಗಿಸಲು ದ್ವಾದಶ ಅಣು ಸಿಡಿತಲೆ

ಮೊದಲು ಬಳಸುವುದಿಲ್ಲ

ಭಾರತವು ಇನ್ನೂ ಸಹ ಮೊದಲು ಬಳಸುವುದಿಲ್ಲ (ನೋ ಫಸ್ಟ್ ಯೂಸ್ - ಎನ್‌ಎಫ್‌ಯು) ನೀತಿಯನ್ನೇ ಅನುಸರಿಸುತ್ತಿದೆ. ಇದರ ಪ್ರಕಾರ, ಭಾರತ ಯಾವುದೇ ರಾಷ್ಟ್ರಗಳ ಮೇಲೆ ಪರಮಾಣು ದಾಳಿಯನ್ನು ಮೊದಲು ಮಾಡದಿರುವ ಬದ್ಧತೆಯನ್ನು ಪಾಲಿಸಲಿದೆ. ಆದರೆ 12 ಸಿಡಿತಲೆಗಳ ಸಕ್ರಿಯ ನಿಯೋಜನೆ ಹಿಂದೆ ಭಾರತದ ನೀತಿ ಬದಲಾಗುವುದೇ ಎಂಬ ಪ್ರಶ್ನೆ ಮೂಡಿಸುತ್ತದೆ.

12 ಸಿಡಿತಲೆಗಳ ನಿಯೋಜನೆ, ಸನ್ನದ್ಧ

ಭಾರತ ಇದೇ ಮೊದಲ ಬಾರಿಗೆ 12 ಪರಮಾಣು ಸಿಡಿತಲೆಗಳನ್ನು ನಿಯೋಜನೆ ಮಾಡಿಕೊಂಡಿದೆ. ಪರಮಾಣು ಸಂಗ್ರಹಾಗಾರಗಳಲ್ಲಿ ಸಿಡಿತಲೆಗಳನ್ನು ದಾಸ್ತಾನು ಸಂಗ್ರಹಿಸಿಟ್ಟಿಲ್ಲ. ನಿಯೋಜಿಸಿದ 12 ಸಿಡಿತಲೆಗಳು ಸಕ್ರಿಯವಾಗಿ ಕಾರ್ಯಾಚರಣೆಗೆ ಸಿದ್ಧವಾಗಿವೆ. ಶಾಂತಿಯ ಸಂದರ್ಭದಲ್ಲೂ ಕೆಲವು ಪರಮಾಣು ಸಿಡಿತಲೆಗಳನ್ನು ಅವುಗಳ ಉಡಾವಣಾ ವಾಹನಗಳಿಗೆ ಜೋಡಿಸುವ ಸಾಧ್ಯತೆಯಿದೆ. ಇತ್ತೀಚೆಗೆ ಸಾಗರೋತ್ತರ ಗಸ್ತಿನಲ್ಲಿ ಪರಿಸರಕ್ಕೆ ಕಡಿಮೆ ಹಾನಿ ಮಾಡುವ ಕ್ಷಿಪಣಿಗಳು ಮತ್ತು ಅಣ್ವಸ್ತ್ರ ಕ್ಷಿಪಣಿಗಳನ್ನು ನಿಯೋಜಿಸಲ್ಪಟ್ಟ ಜಲಾಂತರ್ಗಾಮಿಗಳ ಬಳಕೆಯನ್ನು ಭಾರತ ಹೆಚ್ಚಿಸಿರುವುದು ಈ ಬೆಳವಣಿಗೆಯ ಭಾಗವಾಗಿದೆ.

ಯುದ್ಧ ಸನ್ನದ್ಧತೆ ಯಾಕೆ?

ಭಾರತದ ಪ್ರಮುಖ ಶತ್ರುಗಳಾದ ಪಾಕಿಸ್ತಾನ ಮತ್ತು ಚೀನಾ ಎರಡೂ ಪರಮಾಣು ರಾಷ್ಟ್ರಗಳಾಗಿವೆ. ಚೀನಾ (620) + ಪಾಕಿಸ್ತಾನ (170) ಸೇರಿದರೆ ಒಟ್ಟು 790 ಅಣು ಸಿಡಿತಲೆಗಳನ್ನು ಹೊಂದಿವೆ. ಇತ್ತೀಚೆಗೆ ಚೀನಾ ತನ್ನ ಪರಮಾಣು ಸಾಮರ್ಥ್ಯವನ್ನು ಹೆಚ್ಚಿಸುತ್ತಲೇ ಬಂದಿದೆ. ಆಪರೇಷನ್ ಸಿಂದೂರ ಬಳಿಕ ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ ರಕ್ಷಣಾ ಉತ್ಪಾದನೆ ಮತ್ತು ಖರೀದಿಗೆ ಹೆಚ್ಚು ಉತ್ತೇಜನವನ್ನು ನೀಡಲಾಗುತ್ತಿದ್ದು, ಭಾರತ ಯಾವುದೇ ಸವಾಲೆದುರಿಸಲು ಸಜ್ಜಾಗುತ್ತಿದೆ.

ಸುದ್ದಿ ಸಮಗ್ರ

ವಿಶ್ವದ ಅಣ್ವಸ್ತ ವೆಚ್ಚ ಶೇ.19 ಏರಿಕೆ!

ಜಪಾನ್‌ನ ಹಿರೋಶಿಮಾ ಮತ್ತು ನಾಗಸಾಕಿ ಮೇಲೆ ಅಮೆರಿಕ ಪರಮಾಣು ಬಾಂಬ್ ದಾಳಿಗಳನ್ನು ನಡೆಸಿದ 8 ದಶಕಗಳ ಬಳಿಕವೂ ವಿಶ್ವದಲ್ಲಿ ಪರಮಾಣು ಸೂಪರ್ ಪವರ್ ಕಡಿಮೆಯಾಗಿಲ್ಲ. ಎಲ್ಲಾ ರಾಷ್ಟ್ರಗಳೂ ಪರಮಾಣು ಶಕ್ತಿ



ಶೇಖರಣೆಗಾಗಿ ಹೆಚ್ಚಿನ ವ್ಯಯ ಮಾಡುತ್ತಿವೆ. ಒಂಭತ್ತು ಪರಮಾಣು ರಾಷ್ಟ್ರಗಳಾದ ಅಮೆರಿಕ, ರಷ್ಯಾ, ಚೀನಾ, ಬ್ರಿಟನ್, ಫ್ರಾನ್ಸ್, ಭಾರತ, ಪಾಕಿಸ್ತಾನ, ಇಸ್ರೇಲ್ ಮತ್ತು ಉತ್ತರ ಕೊರಿಯಾ 2025ರಲ್ಲಿ ಅಣ್ವಸ್ತ್ರಗಳಿಗಾಗಿ 119 ಶತಕೋಟಿ ಡಾಲರ್ ವೆಚ್ಚ ಭರಿಸಿವೆ ಎಂದು ಪರಮಾಣು ಶಸ್ತ್ರಾಸ್ತ್ರ ನಿಷೇಧಕ್ಕಾಗಿ ಅಂತಾರಾಷ್ಟ್ರೀಯ ಅಭಿಯಾನ (ಐಸಿಎಎನ್) ಎಂಬ ಸಂಘಟನೆ ವರದಿ ಮಾಡಿದೆ. ಇದರ ಪ್ರಕಾರ, ಈ ವೆಚ್ಚವು 2024ರಿಂದ ಶೇ.19ರಷ್ಟು ಏರಿಕೆಯಾಗಿದೆ. ಒಂದೇ ವರ್ಷದಲ್ಲಿ ವಿಶ್ವದ ಅಣ್ವಸ್ತ್ರ ವೆಚ್ಚವು 16.8 ಶತಕೋಟಿ ಡಾಲರ್ ಹೆಚ್ಚಳವಾಗಿದೆ.

ಅಣ್ವಸ್ತ್ರಕ್ಕಾಗಿ ಪಾಕಿಸ್ತಾನ ಕೋಟ್ಯಂತರ ಖರ್ಚು!

ಸೌದಿ ಅರೇಬಿಯಾ, ಅಮೆರಿಕ ಸೇರಿದಂತೆ ಎಲ್ಲೇ ಹೋದರೂ ಸಾಲ ಮಾಡಿಕೊಳ್ಳುವ ಭಿಕಾರಿ ಪಾಕಿಸ್ತಾನವು ಕಳೆದೊಂದು ವರ್ಷ ದಲ್ಲಿ ಪರಮಾಣು ಚಟುವಟಿಕೆಗಳಿಗಾಗಿ 1.5 ಶತಕೋಟಿ ಡಾಲರ್ ಖರ್ಚು ಮಾಡಿದೆ. ಇದು ಭಾರತಕ್ಕಿಂತ ಕಡಿಮೆಯಿ ದ್ದರೂ, ಪಾಕ್ ವೆಚ್ಚವು ಆತಂಕಕಾರಿ. ತನ್ನ ಬಳಿ 170 ಪರಮಾಣು ಸಿಡಿತಲೆಗಳನ್ನು ಇರುವ ಪಾಕಿಸ್ತಾನ, ಇನ್ನಷ್ಟು ಶೇಖರಣೆಗಾಗಿ ಹಣ ವ್ಯಯಿಸು ತ್ತಿದೆ. ವರದಿಗಳ ಪ್ರಕಾರ, ಅದು ತನ್ನ ಭೂ ಖಂಡಾಂತರ ಕ್ಷಿಪಣಿಗಳು, ಯುದ್ಧ ವಿಮಾನಗಳಲ್ಲಿ ಅಣ್ವಸ್ತ್ರ ನಿಯೋಜನೆ ಮಾಡಿಕೊಂಡಿದೆ.

190 ಭಾರತದ (2026ರ ಜನವರಿವರೆಗೆ) ಒಟ್ಟು ಸಿಡಿತಲೆಗಳು

12 ಭಾರತ ನಿಯೋಜಿಸಿದ ಸಿಡಿತಲೆಗಳು

620 ಚೀನಾ ಸಿಡಿತಲೆಗಳು

170 ಪಾಕಿಸ್ತಾನದ ಸಿಡಿತಲೆಗಳು

246.7 ಶತಕೋಟಿ ರೂ.
2025ರಲ್ಲಿ ಭಾರತದ ಅಣ್ವಸ್ತ್ರ ವೆಚ್ಚ

ಚೀನಾ ವೆಚ್ಚ 13.5 ಶತಕೋಟಿ ಡಾಲರ್!

ಅಮೆರಿಕ ನಂತರ ವಿಶ್ವದ ಎರಡನೇ ಅತಿ ದೊಡ್ಡ ಅಣ್ವಸ್ತ್ರ ರಾಷ್ಟ್ರವಾದ ಚೀನಾ 2025ರಲ್ಲಿ 13.5 ಶತಕೋಟಿ ಡಾಲರ್ ಖರ್ಚು ಮಾಡಿದೆ. ಇದು ಭಾರತದ 2.8 ಶತಕೋಟಿ ಡಾಲರ್‌ಗಿಂತ ಐದು ಪಟ್ಟು ಅಧಿಕ. ಚೀನಾದ ಅಣ್ವಸ್ತ್ರಾಗಾರದಲ್ಲಿ ಒಟ್ಟು 620 ಅಣು ಬಾಂಬ್‌ಗಳಿವೆ. ಆದರೆ ಚೀನಾ ತನ್ನ ವೆಚ್ಚಗಳ ಮಾಹಿತಿ ರಹಸ್ಯವಾಗಿ ಇಡುವುದರಿಂದ ಐಸಿಎಎನ್ ಸಂಸ್ಥೆಗೆ ಹೆಚ್ಚಿನ ಮಾಹಿತಿಗಳು ಲಭ್ಯವಾಗಿಲ್ಲ. ಚೀನಾ 2025ರ ಪ್ರತಿ ನಿಮಿಷಕ್ಕೆ 25,744 ಡಾಲರ್ ಖರ್ಚು ಮಾಡಿದೆ.

ಭಾರತದ ಕತೆಯೇನು? ಭಾರತ ಎಲ್ಲಿದೆ?

2025ರ ಅಣ್ವಸ್ತ್ರ ವೆಚ್ಚದ ಲೆಕ್ಕಾಚಾರದ ಪ್ರಕಾರ, ವಿಶ್ವದ 9 ಪರಮಾಣು ರಾಷ್ಟ್ರಗಳಲ್ಲಿ ಭಾರತ 6ನೇ ಸ್ಥಾನ ಸಂಪಾದಿಸಿದೆ. ಕಳೆದೊಂದು ವರ್ಷದಲ್ಲಿ ಭಾರತದ ಅಣ್ವಸ್ತ್ರ ವೆಚ್ಚ ಶೇ.12ರಷ್ಟು ಏರಿಕೆಯಾಗಿದ್ದು, ಒಂದೇ ವರ್ಷದಲ್ಲಿ ಭಾರತ 2.8 ಶತಕೋಟಿ ಡಾಲರ್ ಅಂದರೆ, 246.7 ಶತಕೋಟಿ ರೂ. ಖರ್ಚು ಮಾಡಿದೆ. ಇದು ದೇಶದ ಒಟ್ಟು ರಕ್ಷಣಾ ಬಜೆಟ್‌ನ ಶೇ.3 ವೆಚ್ಚವಾಗಿದೆ. ಅಂದರೆ, 2025ರಲ್ಲಿ ಅಣ್ವಸ್ತ್ರ ಚಟುವಟಿಕೆಗಳಿಗೆ ಕೇಂದ್ರ ಸರ್ಕಾರವು ನಿಮಿಷವೊಂದಕ್ಕೆ 4,69,396 ರೂ. ಖರ್ಚು ಮಾಡಿರುವುದಾಗಿ ಎಂದು ಐಸಿಎಎನ್ ಉಲ್ಲೇಖಿಸಿದೆ.

ಕಿರುಸುದ್ದಿ

ಸೆಟ್ಟೆಬೆಲ್ಲೊ ನೌಕೆಗೆ ದಾಳಿ: ಭಾರತದ ಖಂಡನೆ


• **ಹೊಸದಿಲ್ಲಿ:** ಒಮಾನ್ ಕರಾವಳಿ ಪ್ರದೇಶದಲ್ಲಿ ವಾಣಿಜ್ಯ ಹಡಗು ಸೆಟ್ಟೆಬೆಲ್ಲೊ ಮೇಲೆ ನಡೆದ ದಾಳಿಯನ್ನು ಬುಧವಾರ ಭಾರತ ಖಂಡಿಸಿದೆ. ಸೆಟ್ಟೆಬೆಲ್ಲೊ ಮೇಲಿನ ದಾಳಿಗೆ ಮೂವರು ಭಾರತೀಯ ನೌಕಾ ಸಿಬ್ಬಂದಿ ಕಾಣೆಯಾಗಿದ್ದಾರೆ. ದಾಳಿ ಸಂದರ್ಭದಲ್ಲಿ ಸೆಟ್ಟೆಬೆಲ್ಲೊ ಹಡಗಿನಲ್ಲಿ 24 ಭಾರತೀಯರಿದ್ದರು. 21 ಮಂದಿಯನ್ನು ರಕ್ಷಿಸಲಾಗಿದೆ. ಆದರೆ ಮೂವರು ಇನ್ನೂ ಪತ್ತೆಯಾಗಿಲ್ಲ. ಭಾರತೀಯರನ್ನು ಗುರಿಯಾಗಿಸಿ ನಡೆಸುವ ದಾಳಿಗಳನ್ನು ತಕ್ಷಣ ನಿಲ್ಲಿಸಬೇಕೆಂದು ವಿದೇಶಾಂಗ ವಕ್ತಾರ ರಣಧೀರ್ ಜೈಸ್ವಾಲ್ ಖಂಡಿಸಿದ್ದಾರೆ. ನಮ್ಮ ಒಮಾನ್ ರಾಯಭಾರ ಕಚೇರಿ ರಕ್ಷಣಾ ಕಾರ್ಯದಲ್ಲಿ ನೆರವು ನೀಡಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾಕ್ ಸೇನಾ ಕಾಪ್ಟರ್ ಪತನ: 21 ಸೇನಾ ಸಿಬ್ಬಂದಿ ಸಾವು

• **ಇಸ್ಲಾಮಾಬಾದ್:** ಪಾಕಿಸ್ತಾನ ಆರ್ಮಿ ಏವಿಯೇಷನ್‌ನ ಎಂಐ–17 ಹೆಲಿಕಾಪ್ಟರ್ ಬುಧವಾರ ಮುಜಾಫರಾಬಾದ್ ಬಳಿ ಟೇಕ್–ಆಫ್ ವೇಳೆ ತಾಂತ್ರಿಕ ದೋಷದಿಂದಾಗಿ ಅಪಘಾತಕ್ಕೀಡಾಗಿದೆ. ಈ ಅಪಘಾತದಲ್ಲಿ ವಿಮಾನದಲ್ಲಿದ್ದ ಎಲ್ಲಾ 21 ಸಿಬ್ಬಂದಿ ಮೃತಪಟ್ಟಿದ್ದಾರೆ. ಪ್ರಾಥಮಿಕ ವರದಿಗಳ ಪ್ರಕಾರ, ಹೆಲಿಕಾಪ್ಟರ್ ಪಾಕಿಸ್ತಾನದ ಭದ್ರತಾ ಪಡೆಗಳ ಸೈನಿಕರನ್ನು ಹೊತ್ತೊಯ್ಯುತ್ತಿತ್ತು. ಪಾಕಿಸ್ತಾನ ಆಕ್ರಮಿತ ಕಾಶ್ಮೀರದ (ಪಿಒಕೆ) ನೀಲಂ ಕಣಿವೆ ವಲಯಕ್ಕೆ ಹೆಚ್ಚುವರಿ ಸೈನಿಕರನ್ನು ಸಾಗಿಸುತ್ತಿತ್ತು. ಅಪಘಾತದ ನಿಖರವಾದ ತಾಂತ್ರಿಕ ಕಾರಣವನ್ನು ನಿರ್ಧರಿಸಲು ತನಿಖಾ ಮಂಡಳಿಗೆ ಆದೇಶಿಸಲಾಗಿದೆ.

ಮಾತುಕತೆ ವಿಳಂಬ: ಟ್ರಂಪ್ ತೀವ್ರ ಅಸಮಾಧಾನ

• **ವಾಷಿಂಗ್ಟನ್:** ಮಧ್ಯಪ್ರಾಚ್ಯ ಯುದ್ಧ ಆರಂಭಗೊಂಡು 100 ದಿನಗಳೂ ಯುದ್ಧ ನಿಲ್ಲುವ ಯಾವುದೇ ಸೂಚನೆಗಳು ಕಾಣುತ್ತಿಲ್ಲ.



ಇಸ್ರೇಲ್‌ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಾರ್ನಿಂಗ್ ಕೊಟ್ಟಿದ್ದರು.ಇದೀಗ ಈ ಬೆನ್ನಲ್ಲೇ ಇರಾನ್‌ಗೂ ಎಚ್ಚರಿಕೆ ಕೊಟ್ಟು ಸಂಧಾನ ವಿಳಂಬ ಆಗುತ್ತಿರುವುದಕ್ಕೆ ಅಸಮಾಧಾನ ಹೊರಹಾಕಿದ್ದಾರೆ. ಟ್ರುಥ್ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

20 ದೇಸಿ ನ್ಯಾವಿಗೇಷನ್ ಜಾಮರ್ ಖರೀದಿಗೆ ಸಹಿ

• **ಹೊಸದಿಲ್ಲಿ:** ಭಾರತೀಯ ನೌಕಾಪಡೆಗಾಗಿ 20 ಸುಧಾರಿತ ಸಾಮರ್ಥ್ಯದ ಜಾಗತಿಕ ನ್ಯಾವಿಗೇಷನ್ ಉಪಗ್ರಹ ವ್ಯವಸ್ಥೆಯ (ಜಿಎನ್‌ಎಸ್‌ಎಸ್) ಜಾಮರ್‌ಗಳನ್ನು ಖರೀದಿಸಲು ರಕ್ಷಣಾ ಸಚಿವಾಲಯ ಬುಧವಾರ 449 ಕೋಟಿ ರೂ.ಗಳ ಒಪ್ಪಂದಕ್ಕೆ ಸಹಿ ಹಾಕಿದೆ.

ಬೆಂಗಳೂರಿನ ಅಕಾರ್ಡ್ ಸಾಫ್ಟ್‌ವೇರ್ ಆಂಡ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ಹೊಸದೆಹಲಿಯಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಈ ಖರೀದಿಯನ್ನು ಸ್ವದೇಶಿಯಾಗಿಯೇ ವಿನ್ಯಾಸಗೊಳಿಸಿದ, ಅಭಿವೃದ್ಧಿಪಡಿಸಿದ ಮತ್ತು ತಯಾರಿಸಿದ ಉತ್ಪನ್ನಗಳ ವರ್ಗದ ಅಡಿಯಲ್ಲಿ ಮಾಡಲಾಗಿದೆ. ರಾಷ್ಟ್ರೀಯ ಉತ್ಪಾದನಾ ಯೋಜನೆಗೆ ಪೂರಕವಾಗಿ ಈ ಉಪಕರಣ ಕನಿಷ್ಠ ಶೇ. 75 ರಷ್ಟು ಸ್ವದೇಶಿ ವಸ್ತುಗಳನ್ನು ಒಳಗೊಂಡಿದೆ.ಈ ಜಾಮರ್‌ಗಳು ಶತ್ರುಗಳ ರಿಸೀವರ್‌ಗಳ ಉಪಗ್ರಹ ಸಂಕೇತಗಳ ಗ್ರಹಿಕೆ ಮತ್ತು ಟ್ರ್ಯಾಕಿಂಗ್ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತವೆ. ಅಲ್ಲದೆ, ನೌಕಾಪಡೆಯ ಹಡಗುಗಳ ಸುರಕ್ಷಿತ ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳಲು ಈ ವ್ಯವಸ್ಥೆ ಸಿಗ್ನಲ್ ವಂಚನೆ ಮತ್ತು ಶತ್ರುಗಳನ್ನು ದಾರಿತಪ್ಪಿಸುವ ಜ್ಯಾಮಿಂಗ್ ತಂತ್ರಜ್ಞಾನವನ್ನು ಒದಗಿಸುತ್ತದೆ. ಅಪಾಯದ ವಾತಾವರಣದಲ್ಲಿ ಕಾರ್ಯನಿರ್ವಹಿಸುವ ನೌಕಾಪಡೆಯ ಹಡಗುಗಳಿಗೆ ಈ ಜಾಮರ್‌ಗಳು ಸಹಕಾರಿಯಾಗಲಿವೆ. ಈ ತಂತ್ರಜ್ಞಾನದ ಸ್ವದೇಶೀಕರಣ, ರಾಷ್ಟ್ರೀಯ ರಕ್ಷಣಾ ಸಾಮರ್ಥ್ಯಗಳನ್ನು ಬಲಪಡಿಸುತ್ತದೆ ಮತ್ತು ದೇಶದ ಕಡಲ ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ, ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತದ ವಾರ್ಷಿಕ ರಫ್ತು ಶೇ.5.7 ಭಾರೀ ಅಭಿವೃದ್ಧಿ

• **ಚಂಡೀಗಢ:** ವಿತ್ತೀಯ ವರ್ಷ 2025–26ರಲ್ಲಿ ಭಾರತದ ರಫ್ತು ದಾಖಲೆಯ 863 ಶತಕೋಟಿ ಡಾಲರ್ ತಲುಪಿರುವುದಾಗಿ ಕೇಂದ್ರ ವಾಣಿಜ್ಯೋದ್ಯಮ ಸಚಿವಾಲಯ ಬುಧವಾರ ಹೇಳಿದೆ. ವಿತ್ತೀಯ ವರ್ಷ 2014–15ರಲ್ಲಿ 468 ಶತಕೋಟಿ ಡಾಲರ್ ಇದ್ದ ಭಾರತದ



ರಫ್ತು 2025–26ರ ವೇಳೆಗೆ 863 ಶತಕೋಟಿ ಡಾಲರ್ ತಲುಪಿದೆ. ಒಟ್ಟಾರೆ ವಾರ್ಷಿಕ ರಫ್ತು ದರ ಶೇ.5.7 ಏರಿಕೆಯಾಗಿದೆ. ರಫ್ತುದಾರರು, ಉದ್ಯಮ ಮಂಡಳಿಗಳು ಮತ್ತು ರೈತ ಉತ್ಪಾದಕ ಸಂಘಗಳ ಸಮ್ಮೇಳನದಲ್ಲಿ ಮಾತನಾಡಿದ ವಾಣಿಜ್ಯೋದ್ಯಮ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ನಿತಿನ್ ಕುಮಾರ್ ಯಾದವ್ ಅಂಕಿ–ಅಂಶಗಳನ್ನು ಮುಂದಿಟ್ಟಿದ್ದಾರೆ.

ಈ ಅವಧಿಯಲ್ಲಿ, ಭಾರತದ ಸರಕು ರಫ್ತು 310 ಶತಕೋಟಿ ಡಾಲರ್‌ನಿಂದ 442 ಶತಕೋಟಿ ಡಾಲರ್‌ಗೆ ಏರಿಕೆಯಾಗಿದೆ. ಸೇವಾ ರಫ್ತು 158 ಶತಕೋಟಿ ಡಾಲರ್‌ನಿಂದ 421 ಶತಕೋಟಿಗೆ ಜಿಗಿತ ಕಂಡಿದೆ. ಇಂಧನೇತರ ರಫ್ತು 387.9 ಶತಕೋಟಿ ಡಾಲರ್ ತಲುಪಿ ಹೊಸ ದಾಖಲೆಯನ್ನು ನಿರ್ಮಿಸಿದ್ದು, ಭಾರತದ ರಫ್ತು ಕ್ಷೇತ್ರದ ಆಳ ಮತ್ತು ವೈವಿಧ್ಯತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಯಾದವ್ ಹೇಳಿದರು. ಭಾರತ–ಐರೋಪ್ಯ ಮುಕ್ತ ಸಂಘದ ನಡುವಿನ ವ್ಯಾಪಾರ ಮತ್ತು ಆರ್ಥಿಕ ಪಾಲುದಾರಿಕೆ ಒಪ್ಪಂದ (ಟಿಇಪಿಎ, 2025) ಪ್ರಕಾರ, 100 ಶತಕೋಟಿ ಡಾಲರ್ ನೇರ ವಿದೇಶಿ ಹೂಡಿಕೆ(ಎಫ್‌ಡಿಐ) ಬದ್ಧತೆಯ ಬೆಂಬಲವಿದ್ದು, ಭಾರತದ ಸುಮಾರು ಶೇ.98 ರಫ್ತುಗಳಿಗೆ ಸುಂಕಮುಕ್ತ ಪ್ರವೇಶವನ್ನು ಒದಗಿಸುತ್ತದೆ ಎಂದು ತಿಳಿಸಿದ್ದಾರೆ.

ರೈಲು ನಿಲ್ದಾಣಗಳಲ್ಲಿ ಸುರಕ್ಷತೆಗೆ ಹೆಚ್ಚಿನ ಕ್ರಮ

• **ಹೊಸದಿಲ್ಲಿ:** ಸುರಕ್ಷತೆ ಮತ್ತು ಭದ್ರತಾ ಕ್ರಮಗಳನ್ನು ಮತ್ತಷ್ಟು ಬಲಪಡಿಸಲು ಭಾರತೀಯ ರೈಲ್ವೆ ದೇಶದಾದ್ಯಂತ ರೈಲು ನಿಲ್ದಾಣಗಳಲ್ಲಿ ಅಗ್ನಿ ಸುರಕ್ಷತಾ ಪರಿಶೋಧನೆಗಳನ್ನು ನಡೆಸಲಿದೆ. ರೈಲ್ವೆ ಸಚಿವಾಲಯದ ಪ್ರಕಾರ, ಈ ಯೋಜನೆಯು ಅಸ್ತಿತ್ವದಲ್ಲಿರುವ ಅಗ್ನಿ ಸುರಕ್ಷತಾ ವ್ಯವಸ್ಥೆಗಳನ್ನು ನಿರ್ಣಯಿಸುವ ಮತ್ತು ಪ್ರಯಾಣಿಕರ ಸುರಕ್ಷತೆ ಹೆಚ್ಚಿಸಲು ಮತ್ತು ರೈಲ್ವೆ ಆಸ್ತಿಗಳನ್ನು ರಕ್ಷಿಸಲು ಸುಧಾರಣೆಯ ಅಗತ್ಯವಿರುವ ಪ್ರದೇಶಗಳನ್ನು ಗುರುತಿಸುವ ಗುರಿ ಹೊಂದಿದೆ.

ಈ ಕಾರ್ಯಾಚರಣೆಯ ಭಾಗವಾಗಿ, ನಿಲ್ದಾಣಗಳಲ್ಲಿ ಅಸ್ತಿತ್ವದಲ್ಲಿರುವ ಅಗ್ನಿ ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಲಾಗುವುದು ಮತ್ತು ಪ್ರಯಾಣಿಕರು ಮತ್ತು ರೈಲ್ವೆ ಆಸ್ತಿಗಳ ಸುರಕ್ಷತೆ ಖಚಿತಪಡಿಸಿಕೊಳ್ಳಲು ಎಲ್ಲೆಲ್ಲಿ ಸುಧಾರಣೆಗಳು ಅಗತ್ಯವಿದೆಯೋ ಅಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ನಿಲ್ದಾಣದ ಕಟ್ಟಡಗಳು, ವಿದ್ಯುತ್ ಸ್ಥಾಪನೆಗಳು, ಹವಾನಿಯಂತ್ರಣ ಮತ್ತು ವಾತಾಯನ ವ್ಯವಸ್ಥೆಗಳು, ತುರ್ತು ನಿರ್ಗಮನಗಳು, ಅಗ್ನಿಶಾಮಕ ಉಪಕರಣಗಳು, ನೀರಿನ ಲಭ್ಯತೆ, ಪಂಪಿಂಗ್ ವ್ಯವಸ್ಥೆಗಳು ಮತ್ತು ಸ್ಪ್ರಿಂಕ್ಲರ್ ವ್ಯವಸ್ಥೆಗಳು ಸೇರಿದಂತೆ ಎಲ್ಲಾ ನಿರ್ಣಾಯಕ ಸುರಕ್ಷತಾ ಮೂಲಸೌಕರ್ಯಗಳನ್ನು ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ.

ಬೆಂಕಿಯ ಘಟನೆಗಳು ಸೇರಿದಂತೆ ತುರ್ತು ಪರಿಸ್ಥಿತಿಗಳಿಗೆ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸಲು ರೈಲ್ವೆ ನಿಲ್ದಾಣಗಳು ಸಂಪೂರ್ಣವಾಗಿ ಸಿದ್ಧವಾಗಿವೆ ಎಂದು ಖಚಿತಪಡಿಸಿಕೊಳ್ಳುವುದು ಇದರ ಉದ್ದೇಶವಾಗಿದೆ.

ಬೆಲೆ ಏರಿಕೆ ತಡೆಗೆ 1.23ಲಕ್ಷ ಕೋ. ರೂ.ಖರ್ಚು !

• **ಹೊಸದಿಲ್ಲಿ :** ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಉಂಟಾಗಿರುವ ಜಾಗತಿಕ ತೈಲ ಬೆಲೆ ಹೆಚ್ಚಳದ ಹೊರತಾಗಿಯೂ ಭಾರತದಲ್ಲಿ ಎರಡು ತಿಂಗಳ ಕಾಲ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಾಗದಂತೆ ತಡೆದು ಜನಹಿತ ಕಾಯಲು ಕೇಂದ್ರ ಸರಕಾರವೇ ತೈಲ ಕಂಪೆನಿಗಳಿಗೆ 1.23ಲಕ್ಷ ಕೋಟಿ ರೂ.ಗಳನ್ನು ನೀಡಿದೆ ಎಂಬುದೀಗ ಬಹಿರಂಗಗೊಂಡಿದೆ. ಜಾಗತಿಕ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳದಿಂದ ದೇಶದ ಜನರಿಗೆ ಆರ್ಥಿಕ ಹೊರೆ ಬೀಳಬಾರದು ಎಂಬ ಕಾರಣಕ್ಕೆ ಸ್ವತಃ ಕೇಂದ್ರ ವಿತ್ತ ಸಚಿವಾಲಯವೇ ಮಧ್ಯಪ್ರವೇಶಿಸಿ 78ದಿನಗಳ ಕಾಲ ತೈಲ ಕಂಪೆನಿಗಳ ನಷ್ಟ ಸರಿದೂಗಿಸಲು 1.23ಲಕ್ಷ ಕೋಟಿ ರೂ.ಗಳನ್ನು ನೀಡಿದೆ ಎಂದು ಸರಕಾರಿ ಮೂಲಗಳು ಬಹಿರಂಗಪಡಿಸಿವೆ. ಅಷ್ಟೇ ಅಲ್ಲದೆ ಈ ಅವಧಿಯಲ್ಲಿ ತೈಲ ಕಂಪೆನಿಗಳಿಂದ ಯಾವುದೇ ತೆರಿಗೆಯನ್ನೂ ಪಡೆದಿರಲಿಲ್ಲ .ಇದರಿಂದ ಸರಕಾರಕ್ಕೆ ಅಷ್ಟು ಆರ್ಥಿಕ ಹೊರೆ ಬಿದ್ದಿದೆ.

ಸುದೀರ್ಘಾವಧಿಯ ದಾಖಲೆ | ಪ್ರಧಾನಿ ಸ್ನೇಹಮಯ ಗುಣಕ್ಕೆ ಶ್ಲಾಘನೆ

ಪ್ರಧಾನಿಗೆ ಜಾಗತಿಕ ನಾಯಕರ ಅಭಿನಂದನೆ

• **ರೋಮ್/ಮಾಲೆ:** ಭಾರತದ ಚುನಾಯಿತ ಪ್ರಧಾನಿಯಾಗಿ ಸತತ ನೆಲೆಯಲ್ಲಿ ಸುದೀರ್ಘಾವಧಿಯ ದಾಖಲೆ ಬರೆದ ನರೇಂದ್ರ ಮೋದಿಯವರಿಗೆ ವಿಶ್ವದ ನಾಯಕರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಬುಧವಾರ ಮೋದಿಯವರು ತಮ್ಮ ಅಧಿಕಾರದಲ್ಲಿ 4,399ದಿನಗಳನ್ನು ಪೂರೈಸಿ ಪ್ರಥಮ ಪ್ರಧಾನಿ ನೆಹರೂ ದಾಖಲೆಯನ್ನು ಮೀರಿದ ಸಾಧನೆಗೈದುದಕ್ಕಾಗಿ ಇಟೆಲಿ ಪ್ರಧಾನಿ ಜಾರ್ಜಿಯಾ ಮೆಲೋನಿ, ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜ್ಜು, ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜಾಯೇ –ಮ್ಯೆಯಂಗ್, ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ, ಭೂತಾನ್ ಪ್ರಧಾನಿ ತ್ಶೆರಿಂಗ್ ಟೊಬ್‌ಗಾಯ್, ಶ್ರೀಲಂಕಾ ಅಧ್ಯಕ್ಷ ಆರುಣ ಕುಮಾರ ದಿಸ್ಸನಾಯಕೆ, ಮಾಜಿ ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರ್ರಿಸನ್ ಸೇರಿದಂತೆ ವಿವಿಧ ಜಾಗತಿಕ ನಾಯಕರು ಅಭಿನಂದಿಸಿ ಶುಭಕೋರಿದ್ದಾರೆ.

ಮೆಲೋನಿ ಅವರು ಮೋದಿಯವರ ಇತ್ತೀಚಿನ ಇಟೆಲಿ ಭೇಟಿ ಮತ್ತು ಭಾರತ-ಇಟೆಲಿ ನಡುವೆ ವಿಶೇಷ ವ್ಯೂಹಾತ್ಮಕ ಪಾಲುದಾರಿಕೆ ಒಪ್ಪಂದ ಮಾಡಿಕೊಂಡಿರುವುದನ್ನು ನೆನಪಿಸಿಕೊಂಡು ಭಾರತೀಯ ನಾಯಕನ ಮುತ್ಸದ್ದಿತನವನ್ನು ಶ್ಲಾಘಿಸಿದ್ದಾರೆ.ಈ ಒಪ್ಪಂದ ನಮ್ಮ ದೇಶಗಳ ಮತ್ತು ನಮ್ಮ



ಜನರ ಉಜ್ವಲ ಭವಿಷ್ಯಕ್ಕಾಗಿ ಹೊಸ ಅವಕಾಶಗಳನ್ನು ಸೃಷ್ಟಿಸಲಿದೆ ಎಂದು ಸಾಮಾಜಿಕ ಮಾಧ್ಯಮದ ಮೂಲಕ ತಿಳಿಸಿದ್ದಾರೆ. ಮಾಲ್ದೀವ್ಸ್ ನಾಯಕ ಮುಯಿಜ್ಜು, ಭಾರತದೊಂದಿಗೆ ಪರಸ್ಪರ ಗೌರವ,ಕ ಸಾರ್ವಭೌಮ ಸಮಾನತೆ, ಹಿತಾಸಕ್ತಿಗಳ ಹಂಚಿಕೆಯೊಂದಿಗೆ ಸಹಕಾರವನ್ನು ಇನ್ನಷ್ಟು ಬಲಪಡಿಸುವುದನ್ನು ಎದುರು ನೋಡುತ್ತಿರುವುದಾಗಿ ಹೇಳಿದ್ದಾರೆ. ಇಬ್ರಾಹಿಂ ಅವರು ಮೋದಿ ನಾಯಕತ್ವವನ್ನು ಹೊಗಳಿದ್ದು,ಅವರ ಇಷ್ಟು ವರ್ಷಗಳ ಸಾರ್ವಜನಿಕ ಸಮರ್ಪಿತ ಸೇವೆ , ಭಾರತದ ಅಭಿವೃದ್ಧಿ , ಉನ್ನತಿ ಮತ್ತು ಜಾಗತಿಕ ಮಟ್ಟಕ್ಕೆ ಭಾರತವನ್ನು ಬೆಳೆಸುವಲ್ಲಿ ಅವರ ನಾಯಕತ್ವ ಅನನ್ಯವಾದುದು ಎಂದಿದ್ದಾರೆ. ಭಾರತದೊದಿಗಿನ ಮಲೇಶ್ಯಾದ ದೀರ್ಘಾವಧಿಯ ಸ್ನೇಹ ಮತ್ತು ಆಪ್ತ ಬಾಂಧವ್ಯ ಅಮೂಲ್ಯವಾದುದು ಎಂದಿದ್ದಾರೆ.

ಮೋದಿ ನಂಬಿಗಸ್ಥ ಮಿತ್ರ: ನರೇಂದ್ರ ಮೋದಿಯವರು "ಯಾವಾಗಲೂ ನಂಬಬಹುದಾದ ಒಬ್ಬ ವಿಶ್ವಾಸಾರ್ಹ ಮಿತ್ರ"ನೆಂದು ಬಣ್ಣಿಸಿದ ನೈಜೀರಿಯಾ ಅಧ್ಯಕ್ಷ ಬೋಲಾ ಅಹ್ಮದ್ ಟಿನುಬು ಅವರು, ಭಾರತದ ಜನತೆ ಸತತ ಮೂರು ಬಾರಿ ಅವರಿಗೆ ಜನಾದೇಶ ನೀಡಿರುವುದು ದೇಶದ ನಾಗರಿಕರು ಅವರಲ್ಲಿ ಇಟ್ಟ ವಿಶ್ವಾಸ ಮತ್ತು ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕೇನ್ಯಾದ ಅಧ್ಯಕ್ಷ ವಿಲಿಯಂ ಸಮೋಯಿ ರುಟೋ ಅಭಿನಂದನೆಯಲ್ಲಿ, ತೀರಾ ಸಾಮಾನ್ಯ ನೆಲೆಯಿಂದ ಆರಂಭಿಸಿ ಈ ಹಂತಕ್ಕೆ ಬಂದಿರುವುದು ನಿಮ್ಮ ಸಮರ್ಪಣೆ, ಪರಿಶ್ರಮ ಮತ್ತು ಸಾರ್ವಜನಿಕ ಸೇವೆಗೆ ಸಾಕ್ಷಿ ಎಂದಿದ್ದಾರೆ. ಆಸ್ಟ್ರೇಲಿಯಾದ ಮಾಜಿ ಪ್ರಧಾನಿ ಮಾರಿಸನ್ ಅವರು ಮೋದಿಯವರು ಭಾರತದ ಆರ್ಥಿಕತೆಯನ್ನೇ ಪರಿವರ್ತಿಸಿ ಒಬ್ಬ ನಿಜವಾದ ಮುತ್ಸದ್ದಿಯಾಗಿ ಭಾರತವನ್ನು ವಿಶ್ವದಲ್ಲಿ ತಲೆ ಎತ್ತಿ ನಿಲ್ಲುವಂತೆ ಮಾಡಿದ್ದಾರೆ. ನಾವು ಒಟ್ಟಾಗಿ ರೂಪಿಸಿದ ಸಮಗ್ರ ವ್ಯೂಹಾತ್ಮಕ ಪಾಲುದಾರಿಕೆಯ ಬಗ್ಗೆ ಹೆಮ್ಮೆ ಪಡುತ್ತೇನೆ ಎಂದಿದ್ದಾರೆ.

ಝಾಲ್ಮುರಿ ಸವಿದ ಮೋದಿ



• **ಹೊಸದಿಲ್ಲಿ:** ನವಭಾರತ ಮಂಟಪಂನಲ್ಲಿ ಆಯೋಜಿಸಲಾಗಿದ್ದ ಎನ್‌ಡಿಎ ಸಭೆಯ ವೇಳೆ ಪ್ರಧಾನಿ ನರೇಂದ್ರ ಮೋದಿ ಪ್ರಸಿದ್ಧ ಪಶ್ಚಿಮ ಬಂಗಾಳ ಬೀದಿ ತಿನಿಸು ಝಾಲ್ಮುರಿ ಸವಿದರು. ಮೋದಿ ಸರ್ಕಾರ 12 ವರ್ಷ ಪೂರೈಸಿದ ಸಂದರ್ಭ ಎನ್‌ಡಿಎ ಅಗ್ರ ಗಣ್ಯ ನಾಯಕರು ಸಭೆ ಸೇರಿದ್ದರು. ಇಂದು ಎನ್‌ಡಿಎ ಸಭೆಯಲ್ಲಿ ಎನ್‌ಡಿಎ ನಾಯಕರ ಜತೆ ಝಾಲ್ಮುರಿ ಹಂಚಿದ ಕ್ಷಣ ಎಂದು ಪ್ರಧಾನಿ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ವಿಡಿಯೋವೊಂದನ್ನು ಹಂಚಿಕೊಂಡಿದ್ದಾರೆ. ಪಶ್ಚಿಮ ಬಂಗಾಳ ನೂತನ ಮುಖ್ಯಮಂತ್ರಿ ಸುವೇಂದು ಅಧಿಕಾರಿ ನಾಯಕರಿಗೆ ಝಾಲ್ಮುರಿ ಹಂಚುತ್ತಿರುವುದನ್ನು ಕಾಣಬಹುದು. ಅದೇ ರೀತಿ ಮೋದಿ, ಬಿಜೆಪಿ ಅಧ್ಯಕ್ಷ ನಿತಿನ್ ನವಿನ್ ಝಾಲ್ಮುರಿ ಸವಿದರು. ಸಚಿವ ಎಚ್‌ಡಿ ಕುಮಾರಸ್ವಾಮಿ ಮೋದಿ ಜತೆಗಿದ್ದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಧನಲಕ್ಷ್ಮೀ (ನಂ.DL-56) ಡ್ರಾ ಜೂನ್ 10ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DT 927572 (CHITTUR)

Consolation Prize Rs.5,000/-
DN 927572 DO 927572 DP 927572 DR 927572
DS 927572 DU 927572 DV 927572 DW 927572
DX 927572 DY 927572 DZ 927572

2nd Prize Rs.30,00,000/- [30 Lakhs]
DS 280490 (PUNALUR)

3rd Prize Rs.5,00,000/- [5 Lakhs]
DV 826575 (WAYANADU)

FOR THE TICKETS ENDING WITH THE FOLLOWING NUMBERS

4th Prize Rs.5,000/-
0027 1124 1809 2123 2158 2650 3379 3775 4277 4463
4572 4897 5604 5824 6380 6810 7622 7673 8152

5th Prize Rs.2,000/-
0477 1275 5500 5575 5841 6719

6th Prize Rs.1,000/-
0017 2053 2451 3080 3239 3677 4433 4509 5257 5383
5504 5650 5981 6234 6286 7557 7598 7888 8136 8441
8582 8996 9251 9340 9473

7th Prize Rs.500/-
0491 0492 0653 0710 0800 0824 0967 1144 1206 1233
1339 1355 1436 1756 1831 2035 2099 2333 2382 2501
2608 2609 2975 2986 3286 3296 3522 3638 3694 3846
4441 4597 4636 4856 4946 5047 5361 5648 5665 5729
6183 6541 6670 6703 6722 6727 6923 7001 7142 7323
7325 7333 7354 7524 7543 7651 7654 7703 7806 7902
7992 8073 8192 8289 8611 8661 8876 8928 8986 9020
9114 9329 9460 9530 9765 9802

8th Prize Rs.200/-
0193 0260 0283 0322 0423 0690 0696 0711 1019 1025
1051 1113 1211 1249 1314 1440 1485 1512 2023 2242
2466 2502 2621 2699 2718 2857 2945 2989 3324 3344
3484 3624 3740 3771 3843 3853 3892 4240 4315 4414
4672 4784 4819 5140 5592 5601 5755 5771 6007 6054
6112 6206 6300 6351 6466 6498 6626 6847 6929 7113
7160 7306 7503 7675 7712 7751 7795 7800 8008 8055
8097 8141 8256 8484 8514 8556 8563 8642 8653 8763
8831 8932 9229 9236 9245 9259 9275 9334 9431 9548
9732 9776 9783 9858 9932 9942

9th Prize Rs.100/-
0035 0253 0269 0284 0300 0372 0514 0548 0645 0751
0855 0891 0961 0980 1028 1117 1262 1299 1412 1428
1503 1572 1574 1597 1631 1881 2001 2095 2162 2191
2247 2261 2266 2408 2448 2533 2719 2728 2758 2784
2825 2862 2933 2952 3069 3205 3226 3269 3711 3793
3960 4054 4069 4087 4177 4207 4256 4310 4342 4473
4590 4746 4823 4887 4919 4924 4964 5026 5101 5109
5115 5152 5166 5204 5229 5301 5357 5433 5462 5517
5527 5666 5669 5715 5870 6291 6316 6326 6475 6562
6619 6693 6776 6866 6920 6951 6956 6977 6999 7002
7020 7070 7301 7517 7672 7783 7879 7949 7978 8006
8047 8128 8165 8218 8226 8235 8284 8301 8365 8369
8391 8424 8481 8656 8687 8808 8957 8962 9017 9046
9091 9302 9576 9580 9610 9659 9704 9705

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಪರಿಸರ ಭವನ, ನಂ.49, ಚರ್ಚ್ ರಸ್ತೆ, ಬೆಂಗಳೂರು-560001
ದೂರವಾಣಿ : 080-25581383, ಫ್ಯಾಕ್ಸ್ : 080-25586321

ಸಂಖ್ಯೆ: ಮಾನಿಮಂ/87/ಕ/2025/2026-27/626 ದಿನಾಂಕ: 21/05/2026

ಟೆಂಡರ್‌ಗಾಗಿ ಆಹ್ವಾನ – ಕರೆ-1

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ http://kppp.karnataka.gov.in ಮುಖಾಂತರ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಸದಸ್ಯ ಕಾರ್ಯದರ್ಶಿಗಳು ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ http://kppp.karnataka.gov.in ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

ಕೆಲಸದ ಹೆಸರು: ಮಂಗಳೂರಿನ ಕೆಎಸ್‌ಪಿಸಿಬಿ ಆರ್‌ಎಸ್‌ಇಓ ಸಹಿತ ಪ್ರಯೋಗಾಲಯ ಕಟ್ಟಡ ಮತ್ತು ಪ್ರಾದೇಶಿಕ ಕಛೇರಿ ಕಟ್ಟಡದ ಗೃಹಸೇವಾಗಾಗಿ (ಹೌಸ್‌ಕೀಪಿಂಗ್) ವಾರ್ಷಿಕ ನಿರ್ವಹಣೆ ಗುತ್ತಿಗೆ (ಎಎಂಸಿ) (1 ವರ್ಷ). ಕೆಲಸದ ಅಂದಾಜು ಮೌಲ್ಯ: **ರೂ.17.95 ಲಕ್ಷಗಳು**. ಟೆಂಡರ್ ಬೆಲೆ, ಇಎಂಡಿ ಇತ್ಯಾದಿ, ಮುಂತಾದ ಪಾವತಿಗಳನ್ನು ಇ-ಪಾವತಿ ವಿಧಾನದಲ್ಲಿ ಮಾತ್ರ ಪಾವತಿಸಬೇಕು.

ಹೆಚ್ಚಿನ ವಿವರಗಳಿಗೆ, ದಯವಿಟ್ಟು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಲ್ಲಿ ವೀಕ್ಷಿಸುವುದು.

ಸಹಿ/-
ಮುಖ್ಯ ಪರಿಸರ ಅಧಿಕಾರಿ-2

ವಾ.ಸಾ.ಸಂ.ಇ/ವಾಪ್ರ/1092/ಆಕಾರ್/2026-27

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ : ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

IN THE COURT OF THE CIVIL JUDGE DIVISON (MUNSEF COURT) OF KASARAGOD

O.N.No.390/2025

Between :
Ramesha K. ....*Plaintiff*
And
K. Padmanabha Gatty & Others ...*Defendants*

To
2. K. Sadashiva Gatty S/o. Poovakke C/o. Jayalakshmi R/at Koustuba, House Basaveshwara Lay Our, Hargi road Kushal Nagar Village and Post Madikeri Taluk. Kodagu District.
4. Lalitha, D/o. Poovakke W/o. Purushothama Gatty, R/Near Shakthi Nagar Mangalore, Dakshina Kannada District.

Please take notice that the above suit is posted for your appearance on **06-07-2026 at 11 A.M.** in the above court. It you failed to appear before the Court personally or by authorized agent. the suil will be heard and determined in your absence

(By Order of Court)
Sd/- **Shivashankar Bhat**
Advocate, Kasaragod
Kasaragod 21-05-2026

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/ AE-1 /2026-27/888 ದಿ:- 06.06.2026.

ಅಲ್ಪಾವಧಿ ಇ-ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ/KPP Portal ನಿಂದ ಮಾಹಿತಿಯನ್ನು ಪಡೆಯಬಹುದು. ಕಾಮಗಾರಿಗಳ ಇಂಡೆಂಟ್ ಸಂಖ್ಯೆ (11 ನಂ) 36365, 36366, 36121, 36389, 36305, 36304, 36303, 36302, 36301, 36371&36370. ಟೆಂಡರ್ ಸಲ್ಲಿಸುವ/ಪ್ರೀ ಬಿಡ್/ಬಿಡ್‌ಗಳನ್ನು ತೆರೆಯುವ ಅಂತಿಮ ದಿನಾಂಕವನ್ನು ಈ ಕಛೇರಿಯಿಂದ ಹಾಗೂ ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಿಷೇಶ ಸೂಚನೆ:- ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ , ಮರುಟೆಂಡರ್ ಅಹ್ವಾನಿಸಿದ್ದಲ್ಲಿ ಹಾಗೂ ಇನ್ನೀತರೆ ಬದಲಾವಣೆಇದ್ದಲ್ಲಿ ಗುತ್ತಿಗೆದಾರರು KPP Portal ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/-ಕಾರ್ಯನಿರ್ವಾಹಕ ಅಭಿಯಂತರು, ಲೋ.ಇ ವಿಭಾಗ ಹೊಸಪೇಟೆ.

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/131

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ

ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಭದ್ರಾವತಿ

Email: cmobdvt@gmail.com Phone No. 9986570474 & 7349760984 & 9964306757 & 7353603442

ಸಂ/ಸಾಆಭ/ಔರಾಟೆಂ/01/2026-27 ದಿನಾಂಕ :09/06/2026

:: ಟೆಂಡರ್ ಅಧಿಸೂಚನೆ ::

ವಿಷಯ:- ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಭದ್ರಾವತಿಗೆ ಇಲ್ಲಿಗೆ 2026-27ನೇ ಸಾಲಿಗೆ ಔಷಧ ಮತ್ತು ಪರಿಕರಗಳ ಸರಬರಾಜು ಕುರಿತು ಇ-ಟೆಂಡರ್ ಆಹ್ವಾನಿಸಿರುವ ಬಗ್ಗೆ.

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಭದ್ರಾವತಿಗೆ ಇಲ್ಲಿಗೆ 2026- 27ನೇ ಸಾಲಿಗೆ ಔಷಧ ಮತ್ತು ಪರಿಕರಗಳ ಸರಬರಾಜು ಕುರಿತು, ಕರ್ನಾಟಕ ಪಾರದರ್ಶಕತೆಯ ಅಧಿನಿಯಮ 1999 ಮತ್ತು ನಿಯಮಗಳು 2000ರಂತೆ ದ್ವಿ-ಲಕೋಟೆ ಪದ್ಧತಿಯ (Two Cover system) ಪ್ರಕಾರ ಅರ್ಹ ಸಂಸ್ಥೆಗಳಿಂದ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ, ಇ.ಎಂ.ಡಿ, ಟೆಂಡರ್ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ಮತ್ತು ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ವೆಬ್ ಸೈಟಿನಲ್ಲಿ ನೋಡಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:29/06/2026 ಬೆಳಗ್ಗೆ 11-00 ಗಂಟೆ. ಟೆಂಡರ್ ಅಂದಾಜು ಮೌಲ್ಯ ರೂ 80.00ಲಕ್ಷಗಳು (ಎಂಭತ್ತು ಲಕ್ಷ ರೂಪಾಯಿಗಳು ಮಾತ್ರ

ಸಹಿ/- ಮುಖ್ಯ ವೈದ್ಯಾಧಿಕಾರಿಗಳು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಭದ್ರಾವತಿ

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/26-27/51/06/352

ಕರ್ನಾಟಕ ಸರಕಾರ
(ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿ ಇಲಾಖೆ)

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ. 574238

ಇ-ಮೈಲ್: eokukkesubrahmanya@gmail.com ವೆಬ್‌ಸೈಟ್: https://temples.karnataka.gov.in
Phone: STD: 08257 - 236200, 281224, 281423, 295400, 281700, 281265, 295300

ಕೆ.ಎಸ್.ಎಸ್.ಟಿ ನಂ: ತಾ.ವಿ 06/2026-27 ದಿನಾಂಕ: 02-06-2026

ಇ-ಟೆಂಡರ್ ಪ್ರಕಟಣೆ

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಸರ್ಪಸಂಸ್ಕಾರ ನೆರವೇರಿಸುವ ಭಕ್ತಾದಿಗಳಿಗೆ ಭೋಜನ ಸ್ವೀಕರಿಸಲು ಸರ್ಪಸಂಸ್ಕಾರ ಭೋಜನಶಾಲೆಗೆ 304 ಗ್ರೇಡ್‌ನ ಸ್ಟೈನ್‌ಲೆಸ್ ಸ್ಟೀಲ್ ಟೇಬಲ್‌ಗಳು ಮತ್ತು ಚಯರ್‌ಗಳ ವಿನ್ಯಾಸ, ತಯಾರಿಕೆ, ಪೂರೈಕೆ ಮತ್ತು ಅಳವಡಿಕೆಗಾಗಿ ಅಧಿಕೃತ ಸ್ಟೀಲ್ ಪೀಠೋಪಕರಣ ತಯಾರಿಕಾ ಸಂಸ್ಥೆಗಳಿಂದ ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. (ಟೆಂಡರು ನಂ. HRICE/2026-27/IND1057). ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ಅಥವಾ ಸಹಾಯವಾಣಿ ಸಂಖ್ಯೆ +91-8046010000, 8068948777 ಸಂಪರ್ಕಿಸತಕ್ಕದ್ದು. ಟೆಂಡರು ಸಲ್ಲಿಸಲು ಕೊನೆಯ ದಿನಾಂಕ: 30-06-2026 ಸಾಯಂಕಾಲ 4.00 ಗಂಟೆವರೇಗೆ. ಟೆಂಡರ್ ತೆರೆಯುವ ದಿನಾಂಕ: 01-07-2026 ಸಾಯಂಕಾಲ 4.01 ಗಂಟೆಗೆ. ಇ.ಎಂ.ಡಿ. ಮೊತ್ತ ರೂ. 1,00,000.00. ಹಿಂದೂಯೇತರರಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಶ್ರೀ ದೇವಳದ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಹಣಾಧಿಕಾರಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಹಿಂದೂ ಧಾರ್ಮಿಕ ದತ್ತಿ ಇಲಾಖೆ, ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ.

DIPR/DK/KSMCA/348/26-27 dt. 10.06.2026

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರವರ ಕಛೇರಿ, ನೀಸ&ಒಚ (ಪಶ್ಚಿಮ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು-570020

ಟೆಂಡರ್ ಪ್ರಕಟಣೆ ಸಂಖ್ಯೆ:ಮೈನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಸ.ಅ/ಟಿಎನ್-05/260/2026-27 ದಿನಾಂಕ:10.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ)	ಸಂಜೆ 5.30 ಗಂಟೆ ನಂತರ	ಸಂಜೆ 4.30 ಗಂಟೆ ಒಳಗೆ	ಸಂಜೆ 4.30 ಗಂಟೆ ನಂತರ
				ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	Kw-1, Kw-2, Kw-3 & Goods Tendar	08 ಸಂಖ್ಯೆಗಳು	265.71	10.06.2026	17.06.2026	18.06.2026

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/-
ಕಾರ್ಯಪಾಲಕ ಅಭಿಯಂತರರು
ನೀಸ&ಒಚ (ಪಶ್ಚಿಮ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/293/ಶಿರಡಿಸಾಯಿ/2026-27

ಪುರಸಭಾ ಕಾರ್ಯಾಲಯ, ಹೊಳೆನರಸೀಪುರ

ದೂರವಾಣಿ ಮತ್ತು ಫ್ಯಾಕ್ಸ್ ಸಂಖ್ಯೆ:08175-273229 email: tstaff_ulb_holenarasipur@yahoo.co.in
ನಂ:ಪುಸ.ಹೊನಪು/ತಾ.ಶಾ/ಎನ್‌ಎಂಪಿಸಿ/01/2026-27 ದಿನಾಂಕ: 09.06.2026

:: ಅಲ್ಪಾವಧಿ ಟೆಂಡರ್ ಪ್ರಕಟಣೆ :: (ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ)

ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999-2000 ನಿಯಮಗಳಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ-ಪ್ರೊಕ್ಯೂರ್‌ಮೆಂಟ್ ಸೆಲ್, ಬೆಂಗಳೂರುರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಅರ್ಹ ಗುತ್ತಿಗೆದಾರರು ತಮ್ಮ ದರಗಳನ್ನು ಇ-ಪ್ರಕ್ಯೂರ್‌ಮೆಂಟ್ https://kppp.karnataka.gov.in/ಪೋರ್ಟಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿ ವಿವರಗಳು ಈ ಕೆಳಕಂಡಂತಿರುತ್ತದೆ. 2023-24 ಮತ್ತು 2024-25ನೇ ಸಾಲಿನ Million plus city (BBMP) ಗೆ ಹಂಚಿಕೆಯಾದ 15ನೇ ಹಣಕಾಸು ಆಯೋಗದ ಘನತ್ಯಾಜ್ಯ ವಸ್ತು ನಿರ್ವಹಣೆಯ ಅನುದಾನವನ್ನು Non-Million Plus City ಗಳಿಗೆ ಮರು ಹಂಚಿಕೆ ಮಾಡಿ ಬಿಡುಗಡೆಗೊಳಿಸಿರುವ ಅನುದಾನ ಕ್ರ.ಸಂ.1)ಕಾಮಗಾರಿಯ ವಿವರ ಹೊಳೆನರಸೀಪುರ ಪುರಸಭಾ ವ್ಯಾಪ್ತಿಯ ತಾಲ್ಲೂಕು ಕಛೇರಿ ಆವರಣದಲ್ಲಿ ಓವರ್‌ಹೆಡ್ ಟ್ಯಾಂಕ್ ನಿರ್ಮಾಣ ಕಾಮಗಾರಿ. Indent No: DMA/2026-27/OW/WORK_INDENT59593 ಅಂದಾಜು ಮೊತ್ತ (ಲಕ್ಷಗಳಲ್ಲಿ)15.00 ಇಎಂಡಿ ಮೊತ್ತ (ರೂ.ಗಳಲ್ಲಿ)37500-00 1.ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.06.2026 ಸಂಜೆ 5.30 ಗಂಟೆಗೆ 2.ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಸ್ವೀಕರಿಸಲಾದ ತಾಂತ್ರಿಕ ಬಿಡ್ ಟೆಂಡರ್‌ನ್ನು ತೆರೆಯುವ ದಿನಾಂಕ: 18.06.2026 ಬೆಳಿಗ್ಗೆ: 11.00 ಗಂಟೆಗೆ 3.ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರ್‌ದಾರರ ಆರ್ಥಿಕ ಬಿಡ್ ಟೆಂಡರ್‌ನ್ನು ತೆರೆಯುವ ದಿನಾಂಕ: 20.06.2026 ಬೆಳಿಗ್ಗೆ: 11.00 ಗಂಟೆಗೆ 4.ನಿಗಧಿಪಡಿಸಿದ ದಿನಾಂಕಗಳಲ್ಲಿ ಟೆಂಡರ್‌ನ್ನು ತೆರೆಯದಿದ್ದಲ್ಲಿ ಮುಂದಿನ ದಿನಾಂಕವನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು.

ಸಹಿ/-ಮಾನ್ಯ ಆಡಳಿತಾಧಿಕಾರಿಗಳು, (ಪುರಸಭೆ ಹೊಳೆನರಸೀಪುರ) ಹಾಸನ ಉಪವಿಭಾಗ, ಹಾಸನ.
ಸಹಿ/- ಮುಖ್ಯಾಧಿಕಾರಿ. ಪುರಸಭೆ, ಹೊಳೆನರಸೀಪುರ

ವಾಸಾಸಂಇ/ಹಿಸನಿ/ಹಾಸನ/212/ಕೆಎಸ್‌ಎಂಸಿಎ/2026-27

ಪುತ್ತೂರು ಮಾರುಕಟ್ಟೆ ಧಾರಣೆ

10-06-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	420 - 470	ಹಳೆ ಕರಿಗೋಟು	245 - 275
ಚೋಲ್ ಅಡಿಕೆ	525 - 550	ಹಸಿ ಕೊಕ್ಕೋ	70 - 105
ಡಬಲ್ ಚೋಲ್	525 - 550	ಒಣ ಕೊಕ್ಕೋ	270 - 320
ಹೊಸ ಪಟೋರ	340 - 390	**ಕಾಳುಮೆಣಸು ಧಾರಣೆ**	
ಹಳೆ ಪಟೋರ	360 - 390	ಕಾಳುಮೆಣಸು	450 - 665
ಹೊಸ ಉಳ್ಳಿ	140 - 285	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	130 - 285	ಆರ್‌ಎಸ್‌ಎಸ್ 1	263.00
ಹೊಸ ಕೋಕಾ	315 - 335	ಆರ್‌ಎಸ್‌ಎಸ್ 2	211.00
ಹಳೆ ಕೋಕಾ	315 - 335	ಸ್ಕ್ರಾಪ್ 1	152.00
ಹೊಸ ಕರಿಗೋಟು	245 - 275	ಸ್ಕ್ರಾಪ್ 2	140.00

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನೀಯರರು ಲೋಕೋಪಯೋಗಿ, ಇಲಾಖೆ ಶಿರಸಿ ವಿಭಾಗ ಶಿರಸಿ

ಕ್ರಸಂ: ಪಿಬಿ/5054 KRDCL/ಅಧಿಸೂಚನೆ: 2026-27/781 ದಿನಾಂಕ: 05.06.2026

ಇ-ಟೆಂಡರ್ ಅಧಿಸೂಚನೆ IFT-KW-4
ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ-ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ-ಪ್ರೋಕ್‌ನಲ್ಲಿ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. (ಒಟ್ಟು 1 ಕಾಮಗಾರಿ)

(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 22-06-2026 (16.00 ಗಂಟೆವರೆಗೆ) (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 23-06-2026 (16.00 ಗಂಟೆವರೆಗೆ) (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 24-06-2026 (16.30 ಗಂಟೆಗೆ) (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 25-06-2026 (16.00 ಗಂಟೆಗೆ)

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಶಿರಸಿ(ಉತ್ತರ ಕನ್ನಡ ಜಿಲ್ಲೆ)

DIPR/KWR/KSMCA/200/26-27 dt. 09.06.2026

ಕಾರ್ಯಪಾಲಕ ಅಭಿಯಂತರರು

ಲೋಕೋಪಯೋಗಿ ಇಲಾಖೆ

ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-560 001. ದೂರವಾಣಿ: 080-22133370

ಸಂಖ್ಯೆ: 06/2026-27 ದಿನಾಂಕ: 09.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ದೊಡ್ಡಬಳ್ಳಾಪುರ ಉಪವಿಭಾಗಕ್ಕೆ** ಸಂಬಂಧಿಸಿದಂತೆ **01 ಸಂಖ್ಯೆಯ (ರೂ. 350.00 ಲಕ್ಷಗಳ)** ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. **ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ-ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.**

(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 24.06.2026 ಸಂಜೆ 4.00 ಗಂಟೆಯವರೆಗೆ.**
(2) ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 25.06.2026 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಸಹಿ/- ಕಾರ್ಯಪಾಲಕ ಅಭಿಯಂತರರು.

ವಾಸಾಸಂಇ/ಉನಿ-ಸಿ.ಪಿ/1084/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹಾವೇರಿ

ಸಂ.ಕಾನಿಇಂಹಾ/ಪಿಬಿ/ಗುತ್ತಿಗೆ/4059-8443/2026-27/1016 ದಿನಾಂಕ: 09-06-206

ಇ-ಟೆಂಡರ್ ಪ್ರಕಟಣೆ

ದಿನಾಂಕ: 09-06-2026ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿಗಳ **ಇಂಡೆಂಟ್ ಸಂಖ್ಯೆ 35076**ರ ಕಾಮಗಾರಿ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 23-06-2026 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ)** ಮತ್ತು ಕಾಮಗಾರಿಗಳ **ಇಂಡೆಂಟ್ ಸಂಖ್ಯೆ 34375-2ನೇ** ಕರೆ ಕಾಮಗಾರಿ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 17-06-2026 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ, ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ **http://www.kppp.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಪಡಿಸಿದ ಗುತ್ತಿಗೆ ದಿನಾಂಕಗಳು ಬದಲಾದಲ್ಲಿ, ಮರು ಗುತ್ತಿಗೆ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/-
(ಎನ್.ಎನ್.ಪಾಟೀಲ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ,

ವಾ.ಸಾ.ಸಂ.ಇ/ಹಾವೇರಿ/148/ ದೇಶಪಾಂಡೆಪಬ್ಲಿಸಿಟಿ/2026-27

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ

ಸಂ: ಕಾಪಾಅ/ಗ್ರಾ.ಕು.ನೀ. & ನೈರ್ಮಲ್ಯ ವಿಭಾಗ/ಚಿ.ಪುರ/ತಾ.ಶಾ/ಟೆಂಡರ್/2025-26/ಟೆಂ.ಪ್ರ ಸಂಖ್ಯೆ-16/Call-2 ದಿನಾಂಕ: 06.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 16/2025-26/ಎರಡನೇ ಕರೆ ದಿನಾಂಕ : 06.06.2026 (ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ರವರು ರಾಜ್ಯ ಸರ್ಕಾರದ 2023-24ನೇ ಸಾಲಿನ ಆಯವ್ಯಯದ ಘೋಷಣೆಯಂತೆ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿ ಚಿಕ್ಕಬಳ್ಳಾಪುರ ಜಿಲ್ಲೆಯ ಮಂಚೇನಹಳ್ಳಿ ತಾಲ್ಲೂಕಿನ ಗೌಡಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವರವಣಿ ಗ್ರಾಮದಲ್ಲಿ ನಿರ್ಮಾಣ ಮಾಡಲಾಗಿರುವ MRF(Material Recovery Facility) ಘಟಕವನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ಯಂತ್ರೋಪಕರಣಗಳನ್ನು ಸರಬರಾಜು ಮಾಡಲು ಉತ್ಪಾದಕರು/ಅಧಿಕೃತವಿತರಕರು/ನೋಂದಾಯಿತ ಸರಬರಾಜುದಾರರು ಹಾಗೂ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ನ್ನು ಸ್ಟ್ಯಾಂಡರ್ ಟೆಂಡರ್ ಡಾಕ್ಯೂಮೆಂಟ್ KW-3 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್‌ನಲ್ಲಿ (Credit Card/Direct Debit/ NEFT & OTC ಮುಖೇನ) ಅಥವ ಚಾಲನ್ ಮೂಲಕ ಭರ್ತಿ ಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕ ಕ್ಕಿಂತ 2 ದಿನ ಮುಂಚಿತವಾಗಿ ಸಲ್ಲಿಸುವುದು. (1) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ **ಕೊನೆಯ ದಿನಾಂಕ ಮತ್ತು ಸಮಯ: 12.06.2026 ರ ಸಂಜೆ 4.30 ಗಂಟೆಯ ನಂತರ.** (2) ಟೆಂಡರ್‌ಗಳನ್ನು ಸ್ವೀಕರಿಸಲು **ಕೊನೆಯ ದಿನಾಂಕ ಮತ್ತು ಸಮಯ: 15.06.2026 ಸಂಜೆ 4.00 ಗಂಟೆಯ ವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:17.06.2026 ಬೆಳಗ್ಗೆ 11.00 ಗಂಟೆಯ ನಂತರ.** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 19.06.2026 ಬೆಳಗ್ಗೆ 11.00 ಗಂಟೆಯ ನಂತರ.**

ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:97/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ ಕೊಪ್ಪಳ

ಸಂಖ್ಯೆ: ಸನೀಅಅವಿ/ಕೊಪ್ಪಳ/ತಾಶಾ-2/2026-27/762 ದಿನಾಂಕ: 05/06/2026

ಅಲ್ಪಾವಧಿ ಕೊಟೇಷನ್ ಟೆಂಡರ್ ಪ್ರಕಟಣೆ

ವಿಷಯ: ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ರೌಡಕುಂದ-ಸೋಮಲಾಪುರ ಏತ ನೀರಾವರಿ ಯೋಜನೆಯ (ಮುಂದುವರೆದ) ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಲು ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಕಾಂಪೋನೆಂಟಗಳ ದರಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವ ಅಲ್ಪಾವಧಿ ಕೊಟೇಶನ್ ಕರೆಯುವ ಕುರಿತು.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಎಂಐಡಿ/54/ಎಲ್‌ಐಎಸ್/2025 ದಿನಾಂಕ: 04-07-2025.

ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ, ಈ ವಿಭಾಗದ ವ್ಯಾಪ್ತಿಯಲ್ಲಿ ಬರುವ ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ರೌಡಕುಂದ-ಸೋಮಲಾಪುರ ಏತ ನೀರಾವರಿ ಯೋಜನೆಯ (ಮುಂದುವರೆದ) ಕಾಮಗಾರಿಯ ಅಂದಾಜು **ಪಟ್ಟಿ ಮೊತ್ತ 650.00 ಲಕ್ಷಗಳು** ತಯಾರಿಸಲು ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಕಾಂಪೋನೆಂಟ್ಸ್‌ಗಳ ದರಗಳ ಆಹ್ವಾನಕ್ಕಾಗಿ ಸೀಲ್ ಕೊಟೇಶನ್ನಗಳನ್ನು ಕರೆಯಲಾಗಿದೆ. ಕೊಟೇಶನ್‌ಗಳಲ್ಲಿ 2026-27ನೇ ಸಾಲಿನ ಮಾರುಕಟ್ಟೆಯ ದರಗಳನ್ನು ಅಳವಡಿಸಿ ಅಂದಾಜು ಪಟ್ಟಿಗಳನ್ನು ತಯಾರಿಸಲು ಮಾತ್ರ ಪರಿಗಣಿಸಲಾಗುವುದು. ಸಲ್ಲಿಸುವ ಕೊಟೇಶನ್‌ಗಳಲ್ಲಿ ಪ್ರತ್ಯೇಕವಾಗಿ/ಐಟಂವಾರು ದರಗಳನ್ನು ನಮೂದಿಸಿ ಸಲ್ಲಿಸುವುದು.

ಆದರಿಂದ ಗುತ್ತಿಗೆದಾರರು ಒಂದು ಮುಚ್ಚಿದ ಲಕೋಟೆಯಲ್ಲಿ ಈ ಕೆಳಗೆ ಗೊತ್ತು ಪಡಿಸಿದ ಕಾಂಪೋನೆಂಟ್ಸ್‌ಗಳ ದರಗಳನ್ನು ನಮೂದಿಸಿ ಈ ಕಚೇರಿಗೆ ಸಲ್ಲಿಸಬೇಕಾಗಿದೆ,

ಗುತ್ತಿಗೆದಾರರು ದಾಖಲೆಗಳೊಂದಿಗೆ ಕೊಟೇಷನ್‌ಗಳನ್ನು ಮುಚ್ಚಿದ ಲಕೋಟೆಯಲ್ಲಿ ಕಚೇರಿಗೆ ಕೊನೆಯ ದಿನಾಂಕ: **-15-06-2026** ರಂದು ಸಮಯ 16.00 ಗಂಟೆವರೆಗೆ ಸಲ್ಲಿಸಬಹುದಾಗಿದೆ, ಕೊಟೇಷನ್‌ಗಳನ್ನು ತೆರೆಯುವ ದಿನಾಂಕ: **16-06-2026**ರಂದು ಸಮಯ 11.00 ಗಂಟೆಗೆ.

ಗುತ್ತಿಗೆದಾರರು ಈ ಕೆಳಗಿನ ನಮೂನೆಯಲ್ಲಿ ಹೆಚ್ಚುವರಿ ಮಾಹಿತಿಯನ್ನು ಸಲ್ಲಿಸುವ ವಿವರ

ಕ್ರ.ಸಂ	ಐಟಂ ವಿವರ	ಗುತ್ತಿಗೆದಾರರು ನಮೂದಿಸುವ ದರ
1	Design, manufacture, supply, erection, trail running, performance testing and commissioning of vertical turbine pump of approved make conforming to IS: 1710 having specified pump output under specified operating head coupled to LT motor of adequate HP rating operating at 0.433 KV with flexible coupling, self water lubricated thrust bearings, discharge Tee with flanged end for connecting delivery pipe with all other standard accessories and safety devices and all other ancillary operations complete as per specifications, terms and conditions of contract per HP.	
2	Supplying at site of Work Erection and Commissioning of FCMA SOFT STARTER 300HP/225KW-INDOOR TYPE-AL BUSBAR including labour, material, machinery, loading and unloading complete with all lead and lift as per direction of Engineer In charge.	
3	Supplying at site of Work Erection and Commissioning of MOTOR CAPACITOR FEEDER 120kVAR-INDOOR TYPE-AL BUSBAR including labour, material, machinery, loading and unloading complete with all lead and lift as per direction of Engineer In charge.	
4	Supply, delivery and erection at site brand new pilot operated pressure relief valve of 100mm dia with maximum permissible pressure (7.1 kg/cm2) with the following specifications.1. The valve should be activated by line pressure and controlled by 2 way diaphragm operated, adjustable pilot valve. 2. The valve should have direct sealing diaphragm.3. Pressure Relief Valve should be installed on a tee junction, which should modulate automatically to maintain preset inlet pressure and relieve the excess pressure out of the net work.4. Pressure gauge of 0-24 kg/cm2 range and shall comply with BS 1780.Material of Construction.a) Body and Bonnet - Ductile Iron ISO 1083 grade 450-10 b) Diaphragm - Natural rubber (N.R) Standard c) Spring SST 302 d) Pilot Valve - Brass ISO 426e) Coating - Electrically applied oven baked polyester f) End Connection - Flanges as per IS with loading and unloading charges.complete as per the direction of Engineer In charge.	
5	SET OF TOOLS Supply and delivery at site of brand new set of tools for operation and maintenance of pumping machineries. Tool kit set comprise a)double end spanner 1/4"inch to 1"-1set b) 11"insulated screw driver-1no and 8" insulated screw driver-1no c)Line tester-1no d)8" insulated cutting pillar-1 no, e)hammer with handle-1kg and 5kg-1no each f)pipe wrench 24",18" and 12"-1 no each g)wire brush-1set, h)ring spanner 1/4" to 1"-1set,puller insulated 8"-1 no j)grease gun-1no k)testing equipment oil testing kit,motorised megger of 5KV,mannual megger of 1KV,digital multi meter, tung tester-1no, including cost of all materials, labour etc..	

ರುಜು
ಅರ್ಜಿದಾರರ ಹೆಸರು

ಕೊಟೇಷನ್‌ಗಳನ್ನು ಸ್ವಿಕರಿಸುವ ಕೊನೆಯ ದಿನಾಂಕ : **15-06-2026** : ಸಮಯ 16.00 ಗಂಟೆಯ ವರೆಗೆ
ಕೊಟೇಷನ್‌ಗಳನ್ನು ತೆರೆಯುವ ದಿನಾಂಕ : **16-06-2026** : ಸಮಯ 11.00 ಗಂಟೆಗೆ ಸಾಧ್ಯವಾದಲ್ಲಿ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/151/ಕೆಎಸ್‌ಎಂಸಿಎ/2026-27

ಕಿರು ಸುದ್ದಿ

ಕಾರ್ಮಿಕ ಆತ್ಮಹತ್ಯೆ

ಕಾಸರಗೋಡು: ಪೆರಿಯ ಆಯಂಪಾರ ವಿಲ್ಲಾರಂಪದಿಯಲ್ಲಿ ನಿರ್ಮಾಣ ಕಾರ್ಮಿಕನಾಗಿದ್ದ ವ್ಯಕ್ತಿಯೋರ್ವ ಮನೆಯೊಳಗೆ ನೇಣು ಬಿಗಿದು ಆತ್ಮಹತ್ಯೆಗೈದ ಘಟನೆ ನಡೆದಿದೆ. ಚಾಪಕ್ಕಲ್ ನಿವಾಸಿ ದಾಮೋದರ ಎಂಬವರ ಪುತ್ರ ಎ.ಕೆ.ಪ್ರಶಾಂತ್‌ಕುಮಾರ್ (45) ಸಾವಿಗೀಡಾದ ವ್ಯಕ್ತಿ. ಬೇಕಲ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿದ್ದಾರೆ. ಮೃತರು ತಂದೆ, ತಾಯಿ ಪ್ರೇಮಾ, ಪತ್ನಿ ಶ್ರುತಿ, ಪುತ್ರಿ ಋತಿಕಾ, ಸಹೋದರಿ ಪ್ರಸೀದಾ ಅವರನ್ನು ಅಗಲಿದ್ದಾರೆ.

ಜೂ. 15: ಉಡುಪಿಯಲ್ಲಿ ಅಂಚೆ ಪಿಂಚಣಿ ಅದಾಲತ್

ಉಡುಪಿ: ಅಂಚೆ ಇಲಾಖೆಯ ವತಿಯಿಂದ ಜೂನ್ 15 ರಂದು ಬೆಳಗ್ಗೆ 10 ಗಂಟೆಗೆ ಉಡುಪಿ ವಿಭಾಗದ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಅಂಚೆ ಪಿಂಚಣಿ ಅದಾಲತ್ ನಡೆಯಲಿದೆ. ಅಂಚೆ ಇಲಾಖೆಯ ಪಿಂಚಣಿದಾರರು ತಮ್ಮ ಅಹವಾಲುಗಳನ್ನು ಜೂನ್ 14 ರ ಒಳಗಾಗಿ ಮೇಲ್ಕಂಡ ಕಚೇರಿಗೆ ತಲುಪಿಸಬಹುದಾಗಿದೆ ಎಂದು ಉಡುಪಿ ವಿಭಾಗದ ಅಂಚೆ ಅಧೀಕ್ಷಕರ ಕಚೇರಿ ಪ್ರಕಟಣೆ ತಿಳಿಸಿದೆ.

ನಿಧನ ಸುದ್ದಿ

ಅಭಿಜ್ಞಾ ಭಟ್



ಸುಳ್ಯ: ಸುಳ್ಯದ ಹೆಸರಾಂತ ಇಎನ್‌ಟಿ ವೈದ್ಯ ಡಾ. ರವಿಶಂಕರ್ ಅವರ ಪುತ್ರಿ ಅಭಿಜ್ಞಾ ಭಟ್(19) ಅಲ್ಪಕಾಲದ ಅಸೌಖ್ಯದಿಂದ ಬುಧವಾರ ಸುಳ್ಯದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತ ಅಭಿಜ್ಞಾ ಭಟ್ ಇತ್ತೀಚೆಗೆ ಪಿಯುಸಿ ವಿದ್ಯಾಭ್ಯಾಸ ಮುಗಿಸಿದ್ದು 596 ಅಂಕಗಳೊಂದಿಗೆ ರಾಜ್ಯದಲ್ಲಿ 4ನೇ ರ‍್ಯಾಂಕ್ ಪಡೆದಿದ್ದರು. ಮೃತರು ತಂದೆ ಡಾ. ರವಿಶಂಕರ, ತಾಯಿ ಅನುಪಮ, ಸಹೋದರಿ ಅನುಜ್ಞ, ಕುಟುಂಬಸ್ಥರು, ಬಂಧು ಮಿತ್ರರನ್ನು ಅಗಲಿದ್ದಾರೆ.

ಗುರುಸ್ವಾಮಿ ರೇಜಯ್ಯ ದೇವಾಡಿಗ



ಕಡಬ: ಬಲ್ಯ ಗ್ರಾಮದ ದೇರಾಜೆ ಗಾಣದಕೊಟ್ಟಿಗೆ ನಿವಾಸಿ ಹಾಗೂ ದೇರಾಜೆ ಅಯ್ಯಪ್ಪ ಮಂದಿರದ ಗುರುಸ್ವಾಮಿ ರೇಜಯ್ಯ ದೇವಾಡಿಗ(70) ಅವರು ಅನಾರೋಗ್ಯದಿಂದ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಜೂ.9ರಂದು ನಿಧನ ಹೊಂದಿದರು. ಮೃತರು ಪತ್ನಿ, ಮೂವರು ಪುತ್ರರು ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಅಯ್ಯಪ್ಪ ಭಕ್ತರ ನೆಚ್ಚಿನ ಗುರುಸ್ವಾಮಿಯಾಗಿ ಸುಮಾರು ನಾಲ್ಕು ದಶಕಗಳ ಕಾಲ ಅಯ್ಯಪ್ಪ ಮಾಲಧಾರಿಯಾಗಿ ಶಬರಿಮಲೆ ಯಾತ್ರೆ ಕೈಗೊಂಡಿದ್ದ ರೇಜಯ್ಯ ದೇವಾಡಿಗ ಅವರು ಅಯ್ಯಪ್ಪ ಭಕ್ತ ಸಮುದಾಯದಲ್ಲಿ ಅಪಾರ ಗೌರವ ಹಾಗೂ ಪ್ರೀತಿಗೆ ಪಾತ್ರರಾಗಿದ್ದರು. ಬಲ್ಯ ದೇರಾಜೆ ಅಯ್ಯಪ್ಪ ಭಜನಾ ಮಂದಿರದ ಮೂಲಕ ಅನೇಕ ವರ್ಷಗಳಿಂದ ಅಯ್ಯಪ್ಪ ಭಕ್ತರನ್ನು ಶಬರಿಮಲೆ ಯಾತ್ರೆಗೆ ಕರೆದೊಯ್ಯುವ ಮೂಲಕ ಧಾರ್ಮಿಕ ಸೇವೆ ಸಲ್ಲಿಸುತ್ತಿದ್ದರು. ಭಕ್ತರಿಗೆ ಧಾರ್ಮಿಕ ಮಾರ್ಗದರ್ಶನ ನೀಡುತ್ತಿದ್ದ ಅವರು ತಮ್ಮ ಸರಳತೆ, ಸೇವಾ ಮನೋಭಾವ ಹಾಗೂ ಭಕ್ತಿಪರ ಜೀವನಶೈಲಿಯಿಂದ ಎಲ್ಲರ ಪ್ರೀತಿಯನ್ನು ಗಳಿಸಿದ್ದರು. ಅಯ್ಯಪ್ಪ ಭಕ್ತರ ವಲಯದಲ್ಲಿ ವಿಶೇಷ ಸ್ಥಾನಮಾನ ಹೊಂದಿದ್ದ ಅವರು ಅನೇಕ ಭಕ್ತರ ಜೀವನದಲ್ಲಿ ಪ್ರೇರಣೆಯಾಗಿದ್ದರು.

ಡಾ. ವೆಂಕಟ್ರಮಣ ಭಟ್ ಕೊಣಲೆ



ಕೊಣಾಜೆ: ಡಾ. ವೆಂಕಟ್ರಮಣ ಭಟ್ ಕೊಣಲೆ (ಆಯುರ್ವೇದ) ಅವರು ಜೂ. 6ರಂದು ವಯೋಸಹಜ ಕಾಯಿಲೆಯಿಂದ ನಿಧನರಾದರು. ಅವರಿಗೆ 85 ವರ್ಷ ವಯಸ್ಸಾಗಿತ್ತು. ಕನ್ಯಾನ ಕೊಣಲೆ ಮೂಲದ ಇವರು ಪ್ರಸ್ತುತ ಕೊಣಾಜೆ ಗ್ರಾಮಚಾವಡಿ ನಿವಾಸಿಯಾಗಿದ್ದರು. ಮೃತರು ಪತ್ನಿ ಕುಸುಮಾ ವಿ. ಭಟ್, ಮಕ್ಕಳಾದ ಜಯಗೋವಿಂದ , ತೇಜಸ್ವಿನಿ, ನೀತಿಮಾಲಾ, ಸೌಮ್ಯ ಅವರನ್ನು ಅಗಲಿದ್ದಾರೆ. ವೈದ್ಯ ವೃತ್ತಿ ನಿಲ್ಲಿಸಿ ಮಗನೊಂದಿಗೆ ಗ್ರಾಮಚಾವಡಿಯಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದರು. ಅಪಾರ ದೇಶಭಕ್ತರಾಗಿದ್ದ ಇವರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಡೆದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು.

ದೇಶದ ಪ್ರಧಾನಿಯಾಗಿ ನರೇಂದ್ರ ಮೋದಿ 12 ವರ್ಷಗಳ ದಾಖಲೆಯ, ಯಶಸ್ವಿ ಆಡಳಿತ

ಅಲ್ಲಲ್ಲಿ ವಿಶೇಷ ಪ್ರಾರ್ಥನೆ, ಪೂಜೆ ಸಲ್ಲಿಕೆ

ಮಂಗಳೂರು: ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ 12 ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ, ಪ್ರಧಾನಿ ನರೇಂದ್ರ ಮೋದಿಯವರ 4,399 ದಿನಗಳ ಯಶಸ್ವಿ ಆಡಳಿತ ಹಾಗೂ ದೇಶದ ದೀರ್ಘಾವಧಿಯ ಚುನಾಯಿತ ಪ್ರಧಾನಿ ಎಂಬ ಮೈಲಿಗಲ್ಲು ಸ್ಥಾಪನೆಯಾದ ಹಿನ್ನೆಲೆಯಲ್ಲಿ, ಅವರಿಗೆ ಉತ್ತಮ ಆರೋಗ್ಯ, ದೀರ್ಘಾಯುಷ್ಯ ಸಹಿತ ದೇಶವನ್ನು ಮುನ್ನಡೆಸಲು ಇನ್ನಷ್ಟು ಶಕ್ತಿ ನೀಡಲಿ ಎಂಬ ಪ್ರಾರ್ಥನೆಯೊಂದಿಗೆ ಬಿಜೆಪಿ ಮಂಗಳೂರು ನಗರ ದಕ್ಷಿಣ ಮಂಡಲದ ವತಿಯಿಂದ ಇತಿಹಾಸ ಪ್ರಸಿದ್ಧ ಕದ್ರಿ ದೇವಸ್ಥಾನದಲ್ಲಿ ಬುಧವಾರ ವಿಶೇಷ ರಂಗ ಪೂಜೆ ನಡೆಯಿತು.

ಈ ವೇಳೆ ಮಾತನಾಡಿದ ಶಾಸಕ ವೇದವ್ಯಾಸ ಕಾಮತ್, ಮೋದಿ ಸರ್ಕಾರವು ಹನ್ನೆರಡು ವರ್ಷಗಳ ಕಾಲ ನಿರಂತರ ಹಾಗೂ ಕಳಂಕ ರಹಿತ ಜನಪರ ಆಡಳಿತ ನೀಡಿ ವಿಕಸಿತ ಭಾರತದ ಸಂಕಲ್ಪದೊಂದಿಗೆ ದಾಪುಗಾಲಿಡುತ್ತಿದೆ. ಅವರಿಗೆ ದೇಶದ ಸಮಸ್ತ ಜನತೆಯ ಆಶೀರ್ವಾದ ಸದಾ ಕಾಲ ಇರಲಿದೆ ಎಂದರು.

ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಮಾತನಾಡಿ, ಪ್ರಧಾನಿ ಮೋದಿ ಅವರ ಯಶಸ್ವಿ ಆಡಳಿತದ 12ನೇ ವರ್ಷದ ಸಂಭ್ರಮಾಚರಣೆ ಅಂಗವಾಗಿ ಇದೇ ಶನಿವಾರ ದಕ್ಷಿಣ ಕನ್ನಡ ಜಿಲ್ಲೆಗೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯಸಭಾ ಸದಸ್ಯ ಡಾ. ರಾಧಾಮೋಹನ್ ದಾಸ್ ಅಗರ್ವಾಲ್ ಅವರು ಆಗಮಿಸಲಿದ್ದು, ಮಾರ್ಗನ್ಸ್‌ಗೇಟ್‌ನ ಪಾಲೆಮಾರ್ ಗಾರ್ಡನ್‌ನಲ್ಲಿ ನಡೆಯಲಿರುವ ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ ಎಂದರು.



» ಮೋದಿ ಅವರಿಗೆ ಉತ್ತಮ ಆರೋಗ್ಯ, ದೀರ್ಘಾಯುಷ್ಯ ಸಹಿತ ದೇಶವನ್ನು ಮುನ್ನಡೆಸಲು ಇನ್ನಷ್ಟು ಶಕ್ತಿ ನೀಡಲಿ

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪ್ರೇಮಾನಂದ ಶೆಟ್ಟಿ, ಯತೀಶ್ ಆರ್ವಾರ್, ಮಂಡಲದ ಅಧ್ಯಕ್ಷ ರಮೇಶ್ ಕಂಡೆಟ್ಟು, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಂಜುಳಾ ರಾವ್, ಯುವ ಮೋರ್ಚಾ ಜಿಲ್ಲಾಧ್ಯಕ್ಷ ನಂದನ್ ಮಲ್ಯ, ಪ್ರಮುಖರಾದ ಮೋನಪ್ಪ ಭಂಡಾರಿ, ಸುಧೀರ್ ಶೆಟ್ಟಿ ಕಣ್ಣೂರು, ನಿತಿನ್ ಕುಮಾರ್, ಸಂಜಯ್ ಪ್ರಭು, ರಾಜ್ ಗೋಪಾಲ್ ರೈ, ನಿಕಟಪೂರ್ವ ಪಾಲಿಕೆ ಸದಸ್ಯರು ಸೇರಿದಂತೆ ವಿವಿಧ ಪದಾಧಿಕಾರಿಗಳು, ಪ್ರಮುಖರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಮೋದಿ ಫ್ಯಾನ್ಸ್ ಕಾಸರಗೋಡು ವತಿಯಿಂದ ವಿಶೇಷ ಕಾರ್ತಿಕ ಪೂಜೆ

ಕಾಸರಗೋಡು: ವಿಶ್ವನಾಯಕ, ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಪ್ರಮಾಣ ವಚನ ಸ್ವೀಕರಿಸಿದ ದಿನಾಂಕದಂದು ಕಾಸರಗೋಡು ನಗರದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಕಳೆದ 12 ವರ್ಷಗಳಿಂದ ಪ್ರತಿ ತಿಂಗಳು ವಿಶೇಷ ಕಾರ್ತಿಕ ಪೂಜೆ, ವರ್ಷದಲ್ಲಿ ವಿಶೇಷ ಭಜನೆ ಮತ್ತು ಕುಣಿತ ಭಜನೆ ಇತ್ಯಾದಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ವಿವಿಧೆಡೆ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಗರದ ಮೋದಿ ಫ್ಯಾನ್ಸ್ ಕಾಸರಗೋಡು ಇದರ ನೇತೃತ್ವದಲ್ಲಿ ಕಾರ್ಯಕ್ರಮಗಳನ್ನು ನೆರವೇರಿಸಲಾಗುತ್ತಿದೆ12 ವರ್ಷ ಗಳನ್ನು ಪೂರೈಸಿದ ಹಾಗೂ ಭಾರತದ ಪ್ರಧಾನಮಂತ್ರಿ ಸ್ಥಾನದಲ್ಲಿ ಅತೀ ಹೆಚ್ಚು ಕಾಲಾವಧಿ ಆಡಳಿತ ನಡೆಸಿ ದಾಖಲೆ ನಿರ್ಮಿಸಿದ ಅಂಗವಾಗಿ ಮೋದಿಯವರ ಹೆಸರಿನಲ್ಲಿ ಮಂಗಳವಾರ ಶ್ರೀ ಮಲ್ಲಿಕಾರ್ಜುನ ದೇವರಿಗೆ ವಿಶೇಷ ಕಾರ್ತಿಕ ಪೂಜೆ ನಡೆಸಲಾಯಿತು.





ಶ್ರೀ ಕ್ಷೇತ್ರದ ಪ್ರಧಾನ ಅರ್ಚಕ ಶಿವಶಂಕರ ಅಡಿಗ ಪೂಜೆ ನೆರವೇರಿಸಿ ಮೋದಿಯವರಿಗೆ ದೇಶ ಸೇವೆ ಮಾಡಲು ದೀರ್ಘ ಆಯುರಾರೋಗ್ಯ ಭಾಗ್ಯ ಕರುಣಿಸಲಿ ಎಂದು ಪ್ರಾರ್ಥನೆಗೈದರು. ಈ ಸಂದರ್ಭದಲ್ಲಿ ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಅಶ್ವಿನಿ ಎಂ.ಎಲ್., ಪ್ರಧಾನ ಕಾರ್ಯದರ್ಶಿ ಸುನೀಲ್ ಪಿ.ಆರ್., ಉಪಾಧ್ಯಕ್ಷ ಪಿ.ರಮೇಶ್, ಜಿಲ್ಲಾ ಸೆಲ್ ಕೋ ಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ, ಕಾಸರಗೋಡು ಮಂಡಲಾಧ್ಯಕ್ಷ ಕೆ.ಗುರುಪ್ರಸಾದ್ ಪ್ರಭು, ಶ್ರೀಲತಾ ಟೀಚರ್, ವರಪ್ರಸಾದ್ ಕೋಟೆಕಣಿ, ಕಲ್ಮಾಡಿ ಸದಾಶಿವ ಆಚಾರ್ಯ, ಲಕ್ಷ್ಮೀಕಾಂತ ನೆಲ್ಲಿಕುಂಜೆ, ನಮೋ ಫ್ಯಾನ್ಸ್‌ನ ಪ್ರಮುಖರಾದ ಹಿರಿಯ ಧಾರ್ಮಿಕ ಮುಂದಾಳು ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ಕಿಶೋರ್ ಕುಮಾರ್ ಎಸ್‌ವಿಟಿ, ರವಿ ಕೇಸರಿ, ಪುರಂದರ ಶೆಟ್ಟಿ, ಶಂಕರನಾರಾಯಣ ಹೊಳ್ಳ, ನವೀನ್ ಬಟ್ಟಂಪಾರೆ, ಸುಜಯ್, ತುಕಾರಾಮ ಆಚಾರ್ಯ ಕೆರೆಮನೆ, ಪ್ರಮೋದ್ ಕುಮಾರ್, ಪ್ರೇಮ್‌ಜಿತ್, ನಾಮದೇವ ಪೈ, ವಸಂತ್ ಕೆರೆಮನೆ, ವಿಜಯ ಶೆಟ್ಟಿ, ಶಾರದಾ ರಾವ್, ಸವಿತಾ ಕಿಶೋರ್, ಶ್ರೀದೇವಿ, ಸೌಮ್ಯಾ, ಲೀಲಾ, ಸವಿತಾ ಮುಂತಾದವರು ನೇತೃತ್ವ ವಹಿಸಿದ್ದರು.

ಶ್ರೀ ವೆಂಕಟ್ರಮಣ ಮಹಿಳಾ ಭಜನಾ ತಂಡದಿಂದ ಭಜನಾ ಸಂಕೀರ್ತನೆ ನಡೆಯಿತು. ಭಕ್ತಾದಿಗಳಿಗೆ ಉಪಹಾರ ವ್ಯವಸ್ಥೆ ಮಾಡಲಾಯಿತು.

ಕುಡುಪು ದೇವಳದಲ್ಲಿ ತುಳು ‘ಮಂದಾರ ರಾಮಾಯಣ’ ಸಪ್ತಾಹ

ಮಹಾಕಾವ್ಯ ವಾಚನದಿಂದ ಪುರಾಣದ ಅರಿವು

ಮಂಗಳೂರು: ನಮ್ಮ ಹಿರಿಯರು ಅವಿದ್ಯಾವಂತರಾಗಿದ್ದರೂ ಪುರಾಣ ಪುಣ್ಯ ಕಥೆಗಳನ್ನು ತಿಳಿದುಕೊಂಡದ್ದು ಭಾರತೀಯ ಮಹಾಕಾವ್ಯಗಳ ವಾಚನ – ಪ್ರವಚನಗಳಿಂದ ಎಂದು ನಿಟ್ಟೆ ವಿಶ್ವವಿದ್ಯಾಲಯದ ನಿಕಟಪೂರ್ವ ಉಪಕುಲಪತಿ ಡಾ. ಸತೀಶ್ ಕುಮಾರ್ ಭಂಡಾರಿ ಹೇಳಿದ್ದಾರೆ.

ಕರ್ನಾಟಕ ಗಮಕ ಕಲಾ ಪರಿಷತ್ತು ಮಂಗಳೂರು ತಾಲೂಕು ಘಟಕ ಮತ್ತು ತುಳು ಅಧ್ಯಯನ ಕೇಂದ್ರ ನಿಟ್ಟೆ ವಿಶ್ವವಿದ್ಯಾಲಯ ಸಹಯೋಗದಲ್ಲಿ ಕುಡುಪು ಶ್ರೀ ಅನಂತ ಪದ್ಮನಾಭ ದೇವಸ್ಥಾನದಲ್ಲಿ ಆಯೋಜಿಸಿದ್ದ ಕವಿ ಮಂದಾರ ಕೇಶವ ಭಟ್ಟ ವಿರಚಿತ ತುಳು ಮಹಾಕಾವ್ಯ ‘ಮಂದಾರ ರಾಮಾಯಣ’ ಸಪ್ತಾಹದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ವೇದಮೂರ್ತಿ ಕೃಷ್ಣರಾಜ ತಂತ್ರಿ ಕುಡುಪು, ವೇದಮೂರ್ತಿ ಹರಿ ಉಪಾಧ್ಯಾಯ ವಾಮಂಜೂರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ. ಹರಿಕೃಷ್ಣ ಪುನರೂರು ಅಧ್ಯಕ್ಷತೆ ವಹಿಸಿದ್ದರು. ಪ್ರದೀಪ ಕುಮಾರ ಕಲ್ಕೂರ ಶುಭ ಹಾರೈಸಿದರು.



ಮಂದಾರರ ಪುತ್ರಿ ಶಾರದಾ ಮಣಿ ಅವರು ‘ನಾ ಕಂಡಂತೆ ನನ್ನ ಅಪ್ಪ’ ಎಂಬ ವಿಚಾರವಾಗಿ ಮಂದಾರ ಕೇಶವ ಭಟ್ಟರ ಕುರಿತು ನುಡಿ ನಮನ ಸಲ್ಲಿಸಿದರು. ಪರಿಷತ್ತಿನ ಅಧ್ಯಕ್ಷ ಸುರೇಶ್ ರಾವ್ ಅತ್ತೂರು ಉಪಸ್ಥಿತರಿದ್ದರು.

‘ಪುಂಚದ ಬಾಲೆ’ ವಾಚನ – ವ್ಯಾಖ್ಯಾನ:

ಸಪ್ತಾಹದ ಮೊದಲ ದಿನ ಪ್ರಥಮ ಅಧ್ಯಾಯ ‘ಪುಂಚದ ಬಾಲೆ’ ಎಂಬ ಕಾವ್ಯ ಭಾಗವನ್ನು ಗಮಕಿ ಸುರೇಶ್ ರಾವ್ ಅತ್ತೂರು ವಾಚಿಸಿದರು. ಯಕ್ಷಗಾನ ಅರ್ಥಧಾರಿ ಭಾಸ್ಕರ ರೈ ಕುಕ್ಕುವಳ್ಳಿ ವ್ಯಾಖ್ಯಾನ ಮಾಡಿದರು.

ನಿಟ್ಟೆ ವಿಶ್ವವಿದ್ಯಾಲಯದ ‘ತಿರ್ಲಜಕೆ’ ತುಳು ಅಧ್ಯಯನ ಕೇಂದ್ರದ ಸಂಶೋಧನಾ ಮಾರ್ಗದರ್ಶಿ ಡಾ. ಸಾಯಿಗೀತ ಸ್ವಾಗತಿಸಿ, ಪ್ರಸ್ತಾವನೆಗೈದರು. ಜಯಲಕ್ಷ್ಮಿ ರಾಜೇಂದ್ರ ಶೆಟ್ಟಿ ಕಾರ್ಯಕ್ರಮ ನಿರೂಪಿಸಿ, ಸುರೇಶ್ ರಾವ್ ಅತ್ತೂರು ವಂದಿಸಿದರು. ಗಮಕಲಾ ಪರಿಷತ್ ಮಂಗಳೂರು ತಾಲೂಕು, ಜಾನಪದ ಪರಿಷತ್, ತುಳು ಅಧ್ಯಯನ ಕೇಂದ್ರ ಹಾಗೂ ಮಂದಾರ ಪ್ರತಿಷ್ಠಾನದ ಸದಸ್ಯರು ಉಪಸ್ಥಿತರಿದ್ದರು.

ಜೂನ್ 14 ರಂದು ಸುರತ್ಕಲ್ ಬಂಟರ ಸಂಘದ ಮಹಾಸಭೆ, ಅಭಿನಂದನೆ, ಸಹಾಯಹಸ್ತ ಕಾರ್ಯಕ್ರಮ

ಮಂಗಳೂರು: ಬಂಟರ ಸಂಘ ಸುರತ್ಕಲ್ ಇದರ ವಾರ್ಷಿಕ ಮಹಾಸಭೆ ಮತ್ತು ಅಭಿನಂದನೆ, ಸಹಾಯ ಹಸ್ತ ವಿದ್ಯಾರ್ಥಿ ವೇತನ ವಿತರಣಾ ಸಮಾರಂಭ ಜೂ. 14 ರಂದು ನಡೆಯಲಿದೆ.

ಬೆಳಿಗ್ಗೆ 9 ಗಂಟೆಗೆ ಮಕ್ಕಳಿಂದ ವೈವಿಧ್ಯಮಯ ಕಾರ್ಯಕ್ರಮ ನಡೆಯಲಿದೆ. ಬೆಳಿಗ್ಗೆ 10 ಗಂಟೆಗೆ ವಿಶೇಷ ಮಹಾಸಭೆ, 11 ಗಂಟೆಗೆ ವಾರ್ಷಿಕ ಮಹಾಸಭೆ ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಗ್ರಾಮವಾರು ಸಾಂಸ್ಕೃತಿಕ ಸ್ಪರ್ಧೆ ನಡೆಯಲಿದೆ. ಸಂಜೆ 4.30ಕ್ಕೆ ಸಭಾ ಕಾರ್ಯಕ್ರಮ, ಅಭಿನಂದನೆ, ಸಹಾಯಹಸ್ತ ಮತ್ತು ವಿದ್ಯಾರ್ಥಿ ವೇತನ ವಿತರಣಾ ಸಮಾರಂಭ ನಡೆಯಲಿದೆ.

ಸಂಘದ ಅಧ್ಯಕ್ಷ ಬಾಳ ಜಗನ್ನಾಥ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಬಂಟರ ಯಾನೆ ನಾಡವರ ಮಾತೃ ಸಂಘದ ಅಧ್ಯಕ್ಷ ಅಜಿತ್ ಕುಮಾರ್ ರೈ ಮಾಲಾಡಿ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮುಂಬೈ ವಿ.ಕೆ ಸಮೂಹ ಸಂಸ್ಥೆಯ ಆಡಳಿತ ನಿರ್ದೇಶಕ ಕರುಣಾಕರ ಎಂ. ಶೆಟ್ಟಿ ಮಧ್ಯಗುತ್ತು, ಮುಂಬೈ ಬಂಟರ ಸಂಘದ ಮಾಜಿ ಅಧ್ಯಕ್ಷ ಡಾ ಪಿ.ವಿ. ಶೆಟ್ಟಿ ಮುಂಬೈ, ಮುಂಬೈ ಬಂಟರ ಸಂಘದ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ, ಬೆಂಗಳೂರು ಬಂಟರ ಸಂಘದ ಅಧ್ಯಕ್ಷ ಸಿಎ ಅಶೋಕ್ ಶೆಟ್ಟಿ ಎಂ., ಪಡುಬಿದ್ರೆ ಬಂಟರ ಸಂಘದ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು, ಭಾರತೀಯ ಭೂಸೇನೆಯ ನಿವೃತ್ತ ಸೇನಾಧಿಕಾರಿ ಕರ್ನಲ್ ನಿಟ್ಟೆಗುತ್ತು ಶರತ್ ಭಂಡಾರಿ ಭಾಗವಹಿಸಲಿದ್ದಾರೆ.

ಸಮಾರಂಭದಲ್ಲಿ ಭಿನ್ನ ಸಾಮರ್ಥ್ಯ ಹಾಗೂ ವಿಕಲಚೇತನರಿಗೆ ಸಹಾಯಹಸ್ತ, ನಿರಂತರ ವಿದ್ಯಾರ್ಥಿ ವೇತನ, ದತ್ತಿನಿಧಿ ವಿತರಣೆ, ಶೈಕ್ಷಣಿಕ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಅಭಿನಂದನೆ, ಸನ್ಮಾನ ನಡೆಯಲಿದೆ ಎಂದು ಸುರತ್ಕಲ್ ಬಂಟರ ಸಂಘದ ಪ್ರಧಾನ ಕಾರ್ಯದರ್ಶಿ ಲೀಲಾಧರ ಶೆಟ್ಟಿ ಕಟ್ಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರೋಟರಿ ಶಾಲೆಯಲ್ಲಿ ಯಕ್ಷಗಾನ ತರಬೇತಿ

ಕಿನ್ನಿಗೋಳಿ: ರೋಟರಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಉಚಿತ ಯಕ್ಷಗಾನ ತರಬೇತಿ ತರಗತಿಯನ್ನು ಉದ್ಘಾಟಿಸಲಾಯಿತು. ಯಕ್ಷ ಧ್ರುವಪಟ್ಲ ಫೌಂಡೇಶನ್, ಕಿನ್ನಿಗೋಳಿ ಇದರ ಅಧ್ಯಕ್ಷ ಪುರುಷೋತ್ತಮ ಶೆಟ್ಟಿ, ಯಕ್ಷಗಾನ ತರಬೇತುದಾರೆ ಅನ್ವಿತ ಕೆರೆಕಾಡು, ರೋಟರಿಯ ಹಿರಿಯ ಸದಸ್ಯ ಟಿ.ಎಚ್. ಮಯ್ಯದಿ, ಶರತ್ ಶೆಟ್ಟಿ, ಆಡಳಿತ ಮಂಡಳಿಯ ಸದಸ್ಯ ಸತೀಶ್ ಚಂದ್ರ ಹೆಗ್ಡೆ, ಹರೀಶ್ ಶೆಟ್ಟಿ , ಶಾಲೆಯ ಆಡಳಿತಾಧಿಕಾರಿ ಭರತ್ ಕುಮಾರ್ ಉಪಸ್ಥಿತರಿದ್ದರು. ಮುಖ್ಯ ಶಿಕ್ಷಕಿ ಸುನೀತಾ ಗುರುರಾಜ್ ಸ್ವಾಗತಿಸಿದರು. ಗಂಗಾದೇವಿ ನಿರೂಪಿಸಿದರು. ರೇಷ್ಮ ವಂದಿಸಿದರು.

ಅಡಿಕೆ ಎಲೆ ಚುಕ್ಕಿ, ಹಳದಿ ಎಲೆ ರೋಗ; ತುರ್ತು ಸ್ಪಂದಿಸಲು ಕೇಂದ್ರ ಸರ್ಕಾರಕ್ಕೆ ಸಂಸದ ಕ್ಯಾ. ಚೌಟ ಮನವಿ

ಮಂಗಳೂರು: ದಕ್ಷಿಣ ಕನ್ನಡ ಸೇರಿದಂತೆ ಕರಾವಳಿ ಮತ್ತು ಮಲೆನಾಡು ಭಾಗದ ಸಾವಿರಾರು ಅಡಿಕೆ ಬೆಳೆಗಾರರಿಗೆ ತೀವ್ರ ಆತಂಕ ತಂದೊಡ್ಡಿರುವ ‘ಹಳದಿ ಎಲೆ ರೋಗ’ ಮತ್ತು ‘ಎಲೆ ಚುಕ್ಕಿ ರೋಗ’ ಸಮಸ್ಯೆಗೆ ತುರ್ತು ಪರಿಹಾರ ಕ್ರಮ ಕೈಗೊಳ್ಳುವಂತೆ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಮನವಿ ಸಲ್ಲಿಸಿದ್ದಾರೆ.



ರಾಜ್ಯದ ಪ್ರಮುಖ ಅಡಿಕೆ ಬೆಳೆಯುವ ಪ್ರದೇಶಗಳಲ್ಲಿ ಈ ರೋಗಗಳ ವ್ಯಾಪಕ ಹರಡುವಿಕೆಯಿಂದಾಗಿ ರೈತರು ಎದುರಿಸುತ್ತಿರುವ ಗಂಭೀರ ಆರ್ಥಿಕ ಮತ್ತು ಕೃಷಿ ಸಮಸ್ಯೆಗಳನ್ನು ಅವರು ವಿವರವಾಗಿ ಮನವಿಯಲ್ಲಿ ಪ್ರಸ್ತಾಪಿಸಿದ್ದಾರೆ.

ದಕ್ಷಿಣ ಕನ್ನಡ, ಚಿಕ್ಕಮಗಳೂರು, ಕೊಡಗು ಸೇರಿದಂತೆ ಹಳದಿ ಎಲೆ ರೋಗವು ಪ್ರಸ್ತುತ ಸುಮಾರು 16,000 ಹೆಕ್ಟೇರ್ ಪ್ರದೇಶವನ್ನು ಬಾಧಿಸಿದ್ದು, ಇದು ಲಕ್ಷಾಂತರ ರೈತರ ಆರ್ಥಿಕ ಪರಿಸ್ಥಿತಿಯನ್ನು ಹದಗೆಡುವಂತೆ ಮಾಡಿದೆ. ರೋಗಕ್ಕೆ ಕಾರಣವಾಗಿರುವ ‘ಫೈಟೋಪ್ಲಾಸ್ಮಾ’ ಸೋಂಕು ನಿರ್ಮೂಲನೆಗೆ ಕ್ರಮಗಳಿಲ್ಲ. ಐಸಿಎಆರ್–ಸೆಂಟ್ರಲ್ ಪ್ಲಾಂಟೇಷನ್ ಕ್ರಾಪ್ಸ್ ರಿಸರ್ಚ್ ಇನ್ಸ್ಟಿಟ್ಯೂಟ್ ಸಂಸ್ಥೆಯು ಅಭಿವೃದ್ಧಿಪಡಿಸಿರುವ ನಿರ್ವಹಣಾ ವಿಧಾನಗಳೇ ಬಾಧಿತ ಬೆಳೆಗಾರರ ಪಾಲಿನ ಏಕೈಕ ಆಶಾಕಿರಣವಾಗಿದೆ. ಇಂತಹ ಸವಾಲಿನ ಪರಿಸ್ಥಿತಿಯಲ್ಲಿ ಸಿಪಿಸಿಆರ್‌ಐ ಸಂಸ್ಥೆಯು ಗಮನಾರ್ಹ ಪ್ರಗತಿ ಸಾಧಿಸಿರುವುದು ಶ್ಲಾಘನೀಯ. ಇದಕ್ಕೆ ಪೂರಕವಾಗಿ ವಿಟ್ಲದಲ್ಲಿ ಅತ್ಯಾಧುನಿಕ ರೋಗನಿರ್ಣಯ ಪ್ರಯೋಗಾಲಯ ಸ್ಥಾಪಿಸಲಾಗಿದೆ. ಹಳದಿ ಎಲೆ ರೋಗವನ್ನು ತಡೆದುಕೊಳ್ಳುವ ಸಾಮರ್ಥ್ಯವಿರುವ ಗಿಡಗಳ ಅಂಗಾಂಶ ಕೃಷಿ ತಂತ್ರಜ್ಞಾನದ ಮೂಲಕ ಯಶಸ್ವಿ ಮರುಸೃಷ್ಟಿ ಮಾಡಲಾಗಿದೆ. ಈ ಹಿನ್ನಲೆಯಲ್ಲಿ ಹಳದಿ ರೋಗ ನಿಯಂತ್ರಣಕ್ಕೆ ಸುಧಾರಿತ ತಂತ್ರಜ್ಞಾನಗಳು, ಹೈಟೆಕ್ ನೀರಾವರಿ ವ್ಯವಸ್ಥೆ ಮತ್ತು ಸಮತೋಲಿತ ಪೋಷಕಾಂಶ ನಿರ್ವಹಣಾ ಪದ್ಧತಿಗಳನ್ನು ರೈತರು ದೊಡ್ಡ ಪ್ರಮಾಣದಲ್ಲಿ ಅಳವಡಿಸಿಕೊಳ್ಳಲು ಭಾರಿ ಸಾಂಸ್ಥಿಕ ಹಾಗೂ ಆರ್ಥಿಕ ನೆರವಿನ ಅಗತ್ಯವಿದೆ. ಆದ್ದರಿಂದ ಬಾಧಿತ ರೈತರಿಗೆ ನೆರವಾಗಲು ಸಮಗ್ರ ಬೆಂಬಲ ಪ್ಯಾಕೇಜ್ ಘೋಷಿಸಬೇಕು ಎಂದು ಅವರು ಸಚಿವರಲ್ಲಿ ಮನವಿ ಮಾಡಿದ್ದಾರೆ.

ಕೇಂದ್ರ ಕೃಷಿ ಸಚಿವರಿಗೆ ಆಹ್ವಾನ

ಕರಾವಳಿ ಕರ್ನಾಟಕದ ಆರ್ಥಿಕತೆಯಲ್ಲಿ ಅಡಿಕೆ ಕೃಷಿಯ ಪ್ರಾಮುಖ್ಯತೆಯನ್ನು ಮನಗಂಡು, ರೈತ ಸಮುದಾಯದಲ್ಲಿ ಮೂಡಿರುವ ತೀವ್ರ ಆತಂಕವನ್ನು ಪರಿಗಣಿಸಿ, ಇಲ್ಲಿರುವ ವಾಸ್ತವಿಕ ಪರಿಸ್ಥಿತಿಯನ್ನು ಖುದ್ದಾಗಿ ಪರಿಶೀಲಿಸಲು ಆದಷ್ಟು ಬೇಗ ಮಂಗಳೂರಿಗೆ ಭೇಟಿ ನೀಡುವಂತೆ ಸಂಸದರು ಕೇಂದ್ರ ಕೃಷಿ ಸಚಿವರಲ್ಲಿ ಮನವಿ ಮಾಡಿಕೊಂಡಿದ್ದಾರೆ. ಕೇಂದ್ರ ಕೃಷಿ ಸಚಿವಾಲಯ, ಐಸಿಎಆರ್, ಸಿಪಿಸಿಆರ್‌ಐ ಮತ್ತು ರಾಜ್ಯ ಸರ್ಕಾರದ ಸಂಸ್ಥೆಗಳ ಸಮನ್ವಯದೊಂದಿಗೆ ಜಂಟಿ ಕ್ರಮ ಕೈಗೊಂಡು, ವಿಜ್ಞಾನಿ ಗಳು ಮತ್ತು ತೊಂದರೆಗೊಳಗಾದ ರೈತರೊಂದಿಗೆ ಸಂವಾದ ನಡೆಸುವುದರಿಂದ ಈ ಸಮಸ್ಯೆಯ ಕುರಿತು ವಾಸ್ತವಿಕ ನಿಖರ ಮಾಹಿತಿ ಲಭ್ಯವಾಗಲಿವೆ; ಇದು ರೋಗ ನಿಯಂತ್ರಣ ಕಾರ್ಯ ಬಲಪಡಿಸಿ ರೈತರ ಹಿತರಕ್ಷಿಸಲು ಮತ್ತು ಅಡಿಕೆ ವಲಯವನ್ನು ರಕ್ಷಿಸಲು ಪ್ರಬಲ ರಾಷ್ಟ್ರೀಯ ಯೋಜನೆಯನ್ನು ರೂಪಿಸುವ ಮೂಲಕ ಭಾರತದ ಅಡಿಕೆ ವಲಯದ ಸುಸ್ಥಿರತೆಯನ್ನು ಕಾಯ್ದುಕೊಳ್ಳಲು ಸಹಕಾರಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇದರ ಜೊತೆಗೆ ದಕ್ಷಿಣ ಕನ್ನಡ ಹಾಗೂ ಒಟ್ಟಾರೆ ಮಲೆನಾಡು ಭಾಗದಲ್ಲಿ ವ್ಯಾಪಕವಾಗಿ ಹರಡುತ್ತಿರುವ ‘ಎಲೆ ಚುಕ್ಕಿ ರೋಗ’ ನಿಯಂತ್ರಣದ ಕುರಿತಂತೆ ಸಂಸದರು ಕೃಷಿ ಸಚಿವರ ಗಮನಕ್ಕೆ ತಂದಿದ್ದಾರೆ. 2023ರಲ್ಲಿ ಸಂದರ್ಭ ಕೇಂದ್ರ ಸರ್ಕಾರವು ಐಸಿಎಆರ್–ಸಿಪಿಸಿಆರ್‌ಐ ತಜ್ಞರ ಸಮಿತಿಯ ವರದಿ ಆಧಾರಿಸಿ ವೈಜ್ಞಾನಿಕ ನಿರ್ವಹಣಾ ಮಾರ್ಗಸೂಚಿಗಳನ್ನು ಸಿದ್ಧಪಡಿಸಿತ್ತು. ಇದೇ ವೇಳೆ ಶೋಭಾ ಕರಂದ್ಲಾಜೆ ಕೇಂದ್ರ ಕೃಷಿ ಸಹಾಯಕ ಸಚಿವೆಯಾಗಿದ್ದ ಸಂದರ್ಭದಲ್ಲಿ 60:40ರ ಅನುಪಾತದ ಧನಸಹಾಯದ ಸೂತ್ರದಡಿ ರೂ. 225 ಕೋಟಿ ಅನುದಾನವನ್ನೂ ಮಂಜೂರು ಮಾಡಿತ್ತು. ಆದರೆ, ಈ ಅನುದಾನವನ್ನು ‘ಮಿಷನ್ ಫಾರ್ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ಹಾರ್ಟಿಕಲ್ಚರ್’ ಮಾರ್ಗಸೂಚಿಗಳಿಗೆ ಲಿಂಕ್ ಮಾಡಲಾಗಿತ್ತು. ಇದರ ನಿಯಮಾವಳಿಗಳ ಪ್ರಕಾರ ಸಸ್ಯ ಸಂರಕ್ಷಣೆಗೆ ಪ್ರತಿ ಹೆಕ್ಟೇರ್‌ಗೆ ಗರಿಷ್ಠ ರೂ. 1,500 ಮಾತ್ರ ವೆಚ್ಚ ಮಾಡಲು ಅವಕಾಶವಿತ್ತು. ಆದರೆ, ಸಿಪಿಸಿಆರ್‌ಐ ಲೆಕ್ಕಾಚಾರದ ಪ್ರಕಾರ, ವಿಶೇಷ ಶಿಲೀಂಧ್ರನಾಶಕಗಳು ಮತ್ತು ಪೋಷಕಾಂಶಗಳ ನಿರ್ವಹಣೆಯನ್ನೊಳಗೊಂಡ ಸಮಗ್ರ ನಿಯಂತ್ರಣದ ನೈಜ ವೆಚ್ಚವು ಈ ಮಿತಿಗಿಂತ ತೀರಾ ಹೆಚ್ಚಾಗಿತ್ತು. ಈ ತಾಂತ್ರಿಕ ಅಡಚಣೆಯಿಂದಾಗಿ ನಿಗದಿತ ಉದ್ದೇಶಕ್ಕೆ ಬಳಸಲು ಸಾಧ್ಯವಾಗದೇ 2023ರ ಅನುದಾನವು ಸರ್ಕಾರಕ್ಕೆ ವಾಪಾಸ್ಸಾಗಿತ್ತು. ಹೀಗಿರುವಾಗ ಇದು ರೈತರನ್ನು ಮತ್ತಷ್ಟು ಕಂಗಾಲಾಗುವಂತೆ ಮಾಡಿದೆ.

ಈ ವಿಶೇಷ ಪರಿಸ್ಥಿತಿಯನ್ನು ಪರಿಗಣಿಸಿ, ಎಲೆ ಚುಕ್ಕಿ ರೋಗಕ್ಕೆ ಮಾತ್ರ ಅನ್ವಯವಾಗುವಂತೆ ಸಾಮಾನ್ಯ ಎಂಐಡಿಹೆಚ್ ವೆಚ್ಚದ ಮಿತಿಯಿಂದ ವಿಶೇಷ ವಿನಾಯಿತಿ ನೀಡಿ ಈ ಹಿಂದೆ ಬಿಡುಗಡೆಗೊಂಡಿದ್ದ, ಅನುದಾನವನ್ನು ಮರುಬಿಡುಗಡೆ ಮಾಡಲು ತಾವು ತುರ್ತಾಗಿ ಮಧ್ಯಪ್ರವೇಶಿಸಬೇಕು. ಸಿಪಿಸಿಆರ್‌ಐ ಶಿಫಾರಸು ಮಾಡಿದ ನಿಜವಾದ ವೆಚ್ಚಕ್ಕೆ ಅನುಗುಣವಾಗಿ ಆರ್ಥಿಕ ಸಹಾಯವನ್ನು ಒದಗಿಸುವುದು ರೋಗ ನಿಯಂತ್ರಣ ಕಾರ್ಯಕ್ರಮದ ಯಶಸ್ಸಿಗೆ ಮತ್ತು ಅಡಿಕೆ ವಲಯದ ಉಳಿವಿಗೆ ಅತ್ಯಂತ ಅತ್ಯಗತ್ಯವಾಗಿದೆ ಎಂದು ಸಂಸದರು ಕೃಷಿ ಸಚಿವರಿಗೆ ಮನವಿ ಮಾಡಿದ್ದಾರೆ.

ಕಿರುಸುದ್ದಿ

ಕರ್ತವ್ಯದಲ್ಲಿದ್ದಾಗಲೇ ಮೆಸ್ಕಾಂ ಉದ್ಯೋಗಿ ಸಾವು

ಬಂಟ್ವಾಳ: ಕರ್ತವ್ಯದಲ್ಲಿದ್ದಾಗಲೇ ಮೆಸ್ಕಾಂ ಉದ್ಯೋಗಿಯೋರ್ವ ಹೃದಯಾಘಾತದಿಂದ ಮೃತಪಟ್ಟ ಘಟನೆ ಬಂಟ್ವಾಳ ತಾಲೂಕಿನ ಪಾಣೆಮಂಗಳೂರು ಸಮೀಪದ ಶಂಭೂರು ಎಂಬಲ್ಲಿ ನಡೆದಿದೆ. ಮೂಲತಃ ಮಿತ್ತೂರು ನಿವಾಸಿ ಚಂದ್ರಶೇಖರ ನಾಯ್ಕ (55) ಮೃತಪಟ್ಟವರಾದ್ದಾರೆ. ಮೆಸ್ಕಾಂ ಪಾಣೆಮಂಗಳೂರು ಶಾಖೆಯಲ್ಲಿ ಸಹಾಯಕ ಮ್ಯಾಕಾನಿಕ್ ಆಗಿ ಕಾರ್ಯನಿರ್ವಹಿಸುತ್ತಿದ್ದು, ಬುಧವಾರ ಮಧ್ಯಾಹ್ನ ಶಂಭೂರು ಸಮೀಪದ ಕುಂದಾಯಗೋಳಿ ಎಂಬಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿರುವ ಹಿನ್ನೆಲೆಯಲ್ಲಿ ವಿದ್ಯುತ್ ತಂತಿಗಳನ್ನು ಎಳೆದು ಸಂಪರ್ಕ ಕಲ್ಪಿಸಿದ್ದರು. ಬಳಿಕ ಇಲ್ಲಿಂದ ವಿದ್ಯುತ್ ಸಮಸ್ಯೆಗೆ ಕರೆ ಬಂದ ಕಾರಣ ಸಹದ್ಯೋಗಿ ಸಿಬ್ಬಂದಿ ಜೊತೆ ಬೈಕಿನಲ್ಲಿ ತೆರಳುತ್ತಿದ್ದ ವೇಳೆ ಕುಂದಾಯಗೋಳಿ ಎಂಬಲ್ಲಿ ಕೆಳಗೆ ಬಿದ್ದಿದ್ದಾರೆ. ಕೂಡಲೇ ಅವರನ್ನು ಬಿ.ಸಿ.ರೋಡಿನ ಖಾಸಗಿ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ಇವರನ್ನು ಪರೀಕ್ಷಿಸಿದ ವೈದ್ಯರು ಚಂದ್ರಶೇಖರ್ ಅವರು ಹೃದಯಾಘಾತದಿಂದ ಮೃತಪಟ್ಟ ಬಗ್ಗೆ ಖಚಿತಪಡಿಸಿದ್ದಾರೆ ಎಂದು ತಿಳಿದು ಬಂದಿದೆ. ಮೃತರು ಪತ್ನಿ , ಇಬ್ಬರು ಪುತ್ರರ ಸಹಿತ ಬಂಧು ಮಿತ್ರರನ್ನು ಅಗಲಿದ್ದಾರೆ.

ಎಸ್.ಡಿ.ಎಂ. ಕಾಲೇಜಿನಲ್ಲಿ ಬೃಹತ್ ಉದ್ಯೋಗ ಮೇಳ

ಮಂಗಳೂರು: ನಗರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಕಾಲೇಜಿನಲ್ಲಿ ಜೂ. 12 ಮತ್ತು 13ರಂದು ಬೃಹತ್ ಉದ್ಯೋಗ ಮೇಳ ನಡೆಯಲಿದೆ. ಬೆಂಗಳೂರಿನ ಎ.ಟಿ.ವಿ ಲೀಗಲ್‌ನ ಆಡಳಿತ ಪಾಲುದಾರ ತಿಮ್ಮಣ್ಣ ಪಿ.ಪಿ. ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಕಾಲೇಜಿನ ಪ್ರಾಂಶುಪಾಲ ಡಾ.ತಾರಾನಾಥ ಅಧ್ಯಕ್ಷತೆ ವಹಿಸಲಿದ್ದಾರೆ. ಕಾನೂನು ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿರುವ ಈ ಕಾರ್ಯಕ್ರಮದಲ್ಲಿ ರಾಜ್ಯದ 25ಕ್ಕಿಂತಲೂ ಹೆಚ್ಚು ಪ್ರತಿಷ್ಠಿತ ಕಾನೂನು ಹಾಗೂ ಇನ್ನಿತರ ಕಂಪೆನಿಗಳು ಪಾಲ್ಗೊಳ್ಳಲಿವೆ. ಹೆಚ್ಚಿನ ಮಾಹಿತಿ ಗಾಗಿ ಕಾರ್ಯಕ್ರಮದ ಸಂಯೋಜಕಿ ಡಾ.ಶಾರಿಕಾ ರೈ ಅವರನ್ನು ಕಾಲೇಜು ಕಚೇರಿ ಸಂಖ್ಯೆ –0824–4294360 ಮೂಲಕ ಸಂಪರ್ಕಿಸಬಹುದಾಗಿದೆಂದು ಕಚೇರಿ ಪ್ರಕಟಣೆ ತಿಳಿಸಿದೆ.

ವಿವಾಹಿತೆಯ ಅತ್ಯಾಚಾರ: ಆರೋಪಿಯ ಬಂಧನ

ಬೆಳ್ತಂಗಡಿ : ವಿವಾಹಿತ ಮಹಿಳೆಯನ್ನು ಬಲವಂತವಾಗಿ ಅತ್ಯಾಚಾರ ಮಾಡಿದ ಪ್ರಕರಣ ಸಂಬಂಧ ಧರ್ಮಸ್ಥಳ ಪೊಲೀಸರು ಆರೋಪಿಯನ್ನು ಬಂಧಿಸಿ ಜೈಲಿಗಟ್ಟಿದ್ದಾರೆ. ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯ ವಿವಾಹಿತ ಮಹಿಳೆಯನ್ನು 2023ರ ಡಿಸೆಂಬರ್‌ನಲ್ಲಿ ಅತ್ಯಾಚಾರ ಮಾಡಿದ್ದ ಎನ್ನಲಾಗಿದೆ. ಈ ಪ್ರಕರಣ ಸಂಬಂಧ ಸಂತ್ರಸ್ತ ಮಹಿಳೆ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಜೂ.7 ರಂದು ದೂರು ನೀಡಿದ್ದರು. ಪ್ರಕರಣದ ಬಗ್ಗೆ ತನಿಖೆ ನಡೆಸಿದ ಧರ್ಮಸ್ಥಳ ಪೊಲೀಸರು ಆರೋಪಿ ಕಳೆಂಜ ಗ್ರಾಮದ ಕುತ್ತೋಡಿ ನಿವಾಸಿ ಪ್ರಸ್ತುತ ಅರಸಿಮಕ್ಕಿ ಗ್ರಾಮದ ಗ್ರಾಮೀಣ ಅಂಚೆ ವಿತರಕ ಆಗಿರುವ ಸುರೇಶ್ (35) ಎಂಬಾತನನ್ನು ಕಳೆಂಜದಲ್ಲಿ ಜೂ.8 ರಂದು ರಾತ್ರಿ ಬಂಧಿಸಿ ವಿಚಾರಣೆ ನಡೆಸಿ ಜೂ.9 ರಂದು ಬೆಳ್ತಂಗಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು. ನ್ಯಾಯಾಲಯ ಆರೋಪಿಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿದೆ. ಬೆಳ್ತಂಗಡಿ ವೃತ್ತ ನಿರೀಕ್ಷಕ ರವಿ ಬಿ.ಎಸ್. ನೇತೃತ್ವದ ಧರ್ಮಸ್ಥಳ ಪ್ರಭಾರ ಸಬ್ ಇನ್ ಸ್ಪೆಕ್ಟರ್ ಕಿಶೋರ್ ಪಿ, ಸಬ್ ಇನ್‌ಸ್ಪೆಕ್ಟರ್ ಸಮರ್ಥ ಆರ್. ಗಾಣಿಗೇರ ತಂಡದ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಜೂ.13ರಂದು ಪತ್ರಕರ್ತರ ಮಕ್ಕಳಿಗೆ ವಿದ್ಯಾನಿಧಿ ವಿತರಣೆ

ಮಡಿಕೇರಿ: ಕೊಡಗು ಪತ್ರಿಕಾ ಭವನ ಟ್ರಸ್ಟ್ ವತಿಯಿಂದ ಜೂ.13 ರಂದು ಅಪರಾಹ್ನ 3 ಗಂಟೆಗೆ ಪತ್ರಕರ್ತರ ಮಕ್ಕಳಿಗೆ ವಿದ್ಯಾನಿಧಿ ವಿತರಣಾ ಕಾರ್ಯಕ್ರಮ ನಗರದ ಪತ್ರಿಕಾ ಭವನದ ಸಭಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಡಗು ಪತ್ರಿಕಾ ಭವನ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಎಂ.ಪಿ.ಕೇಶವ ಕಾಮತ್ ವಹಿಸಲಿದ್ದಾರೆ. ಕಲ್ಲಡ್ಕದ ನಿವೃತ್ತ ಉಪನ್ಯಾಸಕ ನಾರಾಯಣ ಗೌಡ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಎಸ್.ಜಿ.ಉಮೇಶ್, ಕೋಶಾಧಿಕಾರಿ ಕೆ. ತಿಮ್ಮಪ್ಪ, ಟ್ರಸ್ಟಿಗಳಾದ ಟಿ.ಪಿ.ರಮೇಶ್, ಜಿ.ಚಿದ್ವಿಲಾಸ್, ಜೀವನ್ ಚಿಣ್ಣಪ್ಪ, ಅನಿಲ್ ಎಚ್.ಟಿ., ವಿ.ಪಿ.ಸುರೇಶ್, ಶ್ರೀಧರ್ ಹೂವಲ್ಲಿ, ಮಧೋಶ್ ಪೂವಯ್ಯ ಅವರುಗಳ ಗೌರವ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಲಿದೆ.

ರೈಲು ಹರಿದು ವ್ಯಕ್ತಿ ಸಾವು

ಉಡುಪಿ: ಜೂ.1 ರಂದು ಮಧ್ಯಾಹ್ನ 1.10 ರ ಸುಮಾರಿಗೆ ಮಂಗಳೂರು ಎಕ್ಸ್‌ಪ್ರೆಸ್ ರೈಲು ಬ್ರಹ್ಮಾವರ ತಾಲೂಕು ಹೇರೂರು ಗ್ರಾಮದ ರೈಲ್ವೆ ಬ್ರಿಡ್ಜ್ ಹಳಿ ಮೇಲೆ ಹಾದು ಹೋಗುವಾಗ, ರೈಲಿಗೆ ಎಮರ್ಜೆನ್ಸಿ ಬ್ರೇಕ್ ಇಲ್ಲದ ಕಾರಣ, ರೈಲ್ವೆ ಹಳಿಯ ಮೇಲೆ ಮಲಗಿದ್ದ ಸುಮಾರು 50 ವರ್ಷದ ಅಪರಿಚಿತ ವ್ಯಕ್ತಿಯ ಮೇಲೆ ರೈಲು ಹರಿದು ಮೃತಪಟ್ಟಿದ್ದಾರೆ. ಮೃತರ ವಾರಸುದಾರರು ಯಾರಾದರೂ ಇದ್ದಲ್ಲಿ ಉಡುಪಿ ಪೊಲೀಸ್ ಕಂಟ್ರೋಲ್ ರೂಂ ದೂ.ಸಂಖ್ಯೆ: 0820–2526444, ಬ್ರಹ್ಮಾವರ ಪೊಲೀಸ್ ವೃತ್ತ ನಿರೀಕ್ಷಕರು ದೂ.ಸಂಖ್ಯೆ: 0820–2561966, ಮೊ.ನಂ: 9480805432, ಬ್ರಹ್ಮಾವರ ಪೊಲೀಸ್ ಠಾಣೆಯ ಉಪ ನಿರೀಕ್ಷಕರು ದೂ.ಸಂಖ್ಯೆ: 08250–2561044 ಹಾಗೂ ಮೊ.ನಂ: 9480805453 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಬ್ರಹ್ಮಾವರ ಪೊಲೀಸ್ ಠಾಣೆಯ ಉಪನಿರೀಕ್ಷಕರ ಕಚೇರಿ ಪ್ರಕಟಣೆ ತಿಳಿಸಿದೆ.

ಪೋಷಕ- ಶಿಕ್ಷಕರ ಸಭೆ

ಕುಂದಾಪುರ : ಚಿರಂತನ ಎಜುಕೇಷನಲ್ ಇನ್ಸ್ಟಿಟ್ಯೂಷನ್ಸ್ ಸಂಸ್ಥೆಯ ಆಡಳಿತಕ್ಕೊಳಪಟ್ಟ ಕುಂದಾಪುರ ಕೋಟೇಶ್ವರದ ಪ್ರಿಮ್‌ರೋಸ್ ಫೌಂಡೇಶನ್ ಶಾಲೆಯಲ್ಲಿ ಶಾಲಾ ವರ್ಷದ ಪ್ರಥಮ ಪೋಷಕ- ಶಿಕ್ಷಕರ ಸಭೆ ಶನಿವಾರ ಜರುಗಿತು. ಸಭಾಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ನಿರ್ದೇಶಕಿ ಡಾ. ಚಿಂತನಾ ರಾಜೇಶ್ ಅವರು ಪೋಷಕತ್ವ ಮತ್ತು ಮಕ್ಕಳ ಪಾಲನೆ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿ, ಇಂದಿನ ದಿನಗಳಲ್ಲಿ ಮಕ್ಕಳನ್ನು ಮಾನಸಿಕ ಹಾಗೂ ಸಾಮಾಜಿಕವಾಗಿ ಹೇಗೆ ಸದೃಢರಾಗಿ ಬೆಳೆಸಬೇಕು ಎನ್ನುವ ಕುರಿತು ಪೋಷಕರಿಗೆ ಉಪಯುಕ್ತ ಮಾರ್ಗದರ್ಶನ ನೀಡಿದರು. ಪ್ರಾಂಶುಪಾಲೆ ವಿನುತಾ ಬಿ. ಶೆಟ್ಟಿ ಸ್ವಾಗತಿಸಿ, ಶಾಲೆಯ ಹಿನ್ನೆಲೆ, ಉದ್ದೇಶ ಹಾಗೂ ಶೈಕ್ಷಣಿಕ ದೃಷ್ಟಿಕೋನದ ಪರಿಚಯ ನೀಡಿದರು. ಶೈಕ್ಷಣಿಕ ಮುಖ್ಯಸ್ಥೆ ವಿಲ್ಮಾ ಡಿಸಿಲ್ವಾ ಅವರು ಪ್ರಸಕ್ತ ಸಾಲಿನ ವಾರ್ಷಿಕ ಶೈಕ್ಷಣಿಕ ಯೋಜನೆ ಮತ್ತು ಚಟುವಟಿಕೆಗಳ ರೂಪುರೇಷೆಗಳನ್ನು ಮಂಡಿಸಿದರು. ಮಂಜುಳಾ ಪ್ರಾರ್ಥಿಸಿ, ಕಾರ್ಯಕ್ರಮ ನಿರೂಪಿಸಿದರು. ಪ್ರಶಾಂತ್ ಹಾಗೂ ರೇಷ್ಮಾ ಸಹಕರಿಸಿದರು.



ಉಡುಪಿ ಶ್ರೀಕೃಷ್ಣಮಠದಲ್ಲಿ ಪ್ರಧಾನಿ ಮೋದಿ ಅವರಿಗೆ ಯಶಸ್ಸನ್ನು ಕೋರಿ ಪರ್ಯಾಯ ಶ್ರೀ ಶೀರೂರು ವೇದವರ್ಧನ ತೀರ್ಥ ಶ್ರೀಪಾದರು ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಬಿಜೆಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ, ಶಾಸಕ ಯಶ್‌ಪಾಲ್ ಸುವರ್ಣ, ಶೀರೂರು ಮಠದ ದಿವಾನ ಉದಯ ಕುಮಾರ್ ಸರಳತ್ತಾಯ, ಬಿಜೆಪಿ ಪ್ರಮುಖರು ಉಪಸ್ಥಿತರಿದ್ದರು.

ವಿದ್ಯಾಮಾತಾ ಅಕಾಡೆಮಿಯಿಂದ ವಸತಿಯುತ ತರಬೇತಿ

3395 ಕಾನ್‌ಸ್ಟೇಬಲ್ ಹುದ್ದೆಗಳಿಗೆ ಆಹ್ವಾನ

ಪುತ್ತೂರು: ಕಳೆದ ಹಲವು ವರ್ಷಗಳ ಅವಧಿಯಲ್ಲಿ ಯುವ ಜನತೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರಕಾರಿ ಮತ್ತು ಸರಕಾರಿ ಸ್ವಾಮ್ಯದ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಯನ್ನು ನೀಡುತ್ತಾ ಯಶಸ್ವಿಯಾಗಿ ಮುನ್ನಡೆಯುತ್ತಿರುವ ವಿದ್ಯಾಮಾತಾ ಅಕಾಡೆಮಿಯು ಈಗಾಗಲೇ ಪ್ರಾರಂಭವಾಗಿರುವ 2026ನೇ ಸಾಲಿನ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಕಾನ್ ಸ್ಟೇಬಲ್ ನೇಮಕಾತಿಯ ಆಯ್ಕೆ ಪ್ರಕ್ರಿಯೆಗಳಿಗೆ ಪೂರಕವಾಗಿ ವಿದ್ಯಾಮಾತಾ ಅಕಾಡೆಮಿಯು ನೇರ ತರಗತಿ ಮತ್ತು ಆನ್ ಲೈನ್ ತರಗತಿಗಳ ಮೂಲಕ ತರಬೇತಿಯನ್ನು ನೀಡಲಿದ್ದು, ಜೂ.16ರಿಂದ ತರಬೇತಿಗಳು ಪ್ರಾರಂಭವಾಗಲಿದೆ.

ನೇಮಕಾತಿಗೆ ಅರ್ಜಿ ಸಲ್ಲಿಸಲು ಅರ್ಹತೆ, ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. ವಯಸ್ಸಿನ ಮಿತಿ: ಕನಿಷ್ಠ 18 ವರ್ಷ, ಗರಿಷ್ಠ: 33(ಸಾಮಾನ್ಯ ಅಭ್ಯರ್ಥಿಗಳಿಗೆ), 35 ವರ್ಷ(ಒಬಿಸಿ, ಎಸ್ಸಿ, ಎಸ್ಟಿ), ದೈಹಿಕ ಸಾಮರ್ಥ್ಯ: ★168 ಸೆಂ.ಮೀ. ಎತ್ತರ(ಪುರುಷ ಅಭ್ಯರ್ಥಿ), 157 ಸೆಂ.ಮೀ. ಎತ್ತರ(ಮಹಿಳಾ ಅಭ್ಯರ್ಥಿ)

ಅವಶ್ಯಕ ದಾಖಲೆಗಳು

ಫೋಟೋ, ಅಂಕಪಟ್ಟಿಗಳು, ಆಧಾರ್ ಕಾರ್ಡ್, ಜಾತಿ ಪ್ರಮಾಣಪತ್ರ, ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ, ಕನ್ನಡ ಮಾಧ್ಯಮ ಪ್ರಮಾಣ ಪತ್ರ. ಅರ್ಜಿ ಸಲ್ಲಿಸಲು ಜು.3 ಕೊನೆಯ ದಿನಾಂಕವಾಗಿದೆ. ವಿದ್ಯಾಮಾತಾ ಅಕಾಡೆಮಿಯಲ್ಲಿ ದಾಖಲಾತಿ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದ್ದು, ತರಬೇತಿಯ ಕುರಿತು ಹೆಚ್ಚಿನ ಮಾಹಿತಿಗಾಗಿ ಪುತ್ತೂರಿನ ಎಪಿಎಂಸಿ ರಸ್ತೆಯಲ್ಲಿರುವ ವಿದ್ಯಾಮಾತಾ ಅಕಾಡೆಮಿಯನ್ನು ಸಂಪರ್ಕಿಸಲು ಸಂಸ್ಥೆಯ ಪ್ರಕಟಣೆ ತಿಳಿಸಿದೆ. ಫೋನ್: 9620468869 / 9148935808 /99451 82516 / 9448527606.

ಕೊಡಗು ಜಿಲ್ಲೆಯ ಪ್ರಮುಖ ರಸ್ತೆಗಳ ಅಭಿವೃದ್ಧಿ : ಸಂಸದ ಯದುವೀರ್ ಒಡೆಯರ್

ಕೇಂದ್ರದಿಂದ 22 ಕೋಟಿ ರೂ. ಬಿಡುಗಡೆ

ಮಡಿಕೇರಿ: ಕೊಡಗು ಜಿಲ್ಲೆಯ ರಸ್ತೆ ಮೂಲಸೌಕರ್ಯ ಅಭಿವೃದ್ಧಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಕೇಂದ್ರ ರಸ್ತೆ ಮತ್ತು ಮೂಲಸೌಕರ್ಯ ನಿಧಿ (ಸಿ ಆರ್ ಎಫ್) ಅಡಿಯಲ್ಲಿ ಜಿಲ್ಲೆಯ ಮೂರು ಪ್ರಮುಖ ರಾಜ್ಯ ಹೆದ್ದಾರಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ 22 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ.

ಈ ಕುರಿತು ಮಾಹಿತಿ ನೀಡಿರುವ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು, ಕೊಡಗಿನ ಬಹುಕಾಲದ ರಸ್ತೆ ಅಭಿವೃದ್ಧಿ ಅಗತ್ಯಗಳಿಗೆ ಸ್ಪಂದಿಸಿದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹಾಗೂ ಕೇಂದ್ರ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.

ಕೊಡ್ಲಿಪೇಟೆ–ಹೆಬ್ಬಾಲೆ ರಸ್ತೆ (ಎಸ್ ಎಚ್–244)ಯ ಕಿ.ಮೀ. 16.70 ರಿಂದ 30.00ರವರೆಗೆ, ಗೋಪಾಲಪುರ–ಬಾಣಾವರ ಹೆಬ್ಬಾಲೆ ಮಾರ್ಗವಾಗಿ ಮುಳ್ಳೂರು ಹಾಗೂ ಮಾಲಂಬಿ (ಆಯ್ದ ಭಾಗಗಳು) ಸಂಪರ್ಕಿಸುವ ಸೋಮವಾರಪೇಟೆ ತಾಲೂಕಿನ ರಸ್ತೆ ಅಭಿವೃದ್ಧಿಗೆ 6 ಕೋಟಿ ರೂ, ಮಡಿಕೇರಿ–ಕುಟ್ಟ ರಸ್ತೆ (ಎಸ್‌ಎಚ್–89)ಯ ಚಡನೇಜ್ 4ರಿಂದ 8, 10.50 ರಿಂದ 12 ಹಾಗೂ 21 ರಿಂದ 24.43ರವರೆಗಿನ ಭಾಗಗಳಲ್ಲಿ, ಕುಶಾಲನಗರ ಮತ್ತು ಮಡಿಕೇರಿ ತಾಲೂಕುಗಳನ್ನು ಸಂಪರ್ಕಿಸುವ ರಸ್ತೆ ಅಭಿವೃದ್ಧಿಗೆ 10 ಕೋಟಿ, ತಲಕಾವೇರಿ ರಸ್ತೆ (ಎಸ್‌ಎಚ್–90)ಯ ಕಿ.ಮೀ. 51ರಿಂದ 61ರವರೆಗಿನ ವೀರಾಜಪೇಟೆ ತಾಲೂಕಿನ ಆಯ್ದ ಭಾಗಗಳ ರಸ್ತೆ ಅಭಿವೃದ್ಧಿಗೆ 6 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ಯದುವೀರ್ ಒಡೆಯರ್ ಅವರು ವಿವರಿಸಿದ್ದಾರೆ.

> ▸▸ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹಾಗೂ ಕೇಂದ್ರ ಸರ್ಕಾರಕ್ಕೆ ಕೃತಜ್ಞತೆ
>
> ▸▸ ಈ ರಸ್ತೆಗಳು ಕೊಡಗು ಜಿಲ್ಲೆಯ ನಿವಾಸಿಗಳು, ರೈತರು, ವಿದ್ಯಾರ್ಥಿಗಳು, ಪ್ರವಾಸಿಗರು ಹಾಗೂ ವ್ಯಾಪಾರ ವಲಯದವರಿಗೆ ಅತ್ಯಂತ ಪ್ರಮುಖ ಸಂಪರ್ಕ ಮಾರ್ಗ

ಈ ರಸ್ತೆಗಳು ಕೊಡಗು ಜಿಲ್ಲೆಯ ನಿವಾಸಿಗಳು, ರೈತರು, ವಿದ್ಯಾರ್ಥಿಗಳು, ಪ್ರವಾಸಿಗರು ಹಾಗೂ ವ್ಯಾಪಾರ ವಲಯದವರಿಗೆ ಅತ್ಯಂತ ಪ್ರಮುಖ ಸಂಪರ್ಕ ಮಾರ್ಗಗಳಾಗಿವೆ. ಈ ಕಾಮಗಾರಿಗಳ ಅನುಷ್ಠಾನದಿಂದ ರಸ್ತೆ ಸುರಕ್ಷತೆ, ಪ್ರಯಾಣಿಕರ ಅನುಕೂಲತೆ ಹಾಗೂ ಸಾರಿಗೆ ದಕ್ಷತೆ ಹೆಚ್ಚುವುದರ ಜೊತೆಗೆ ಪ್ರವಾಸೋದ್ಯಮ ಮತ್ತು ಆರ್ಥಿಕ ಚಟುವಟಿಕೆಗಳಿಗೂ ಉತ್ತೇಜನ ದೊರೆಯಲಿದೆ ಎಂದು ಅವರು ತಿಳಿಸಿದ್ದಾರೆ.

ಕರ್ನಾಟಕದ ಪ್ರಮುಖ ಪ್ರವಾಸಿ ಜಿಲ್ಲೆಗಳಲ್ಲಿ ಒಂದಾದ ಕೊಡಗು ಜಿಲ್ಲೆಗೆ ಸ್ಥಳೀಯರ ಹಾಗೂ ಪ್ರವಾಸಿಗರ ಹೆಚ್ಚುತ್ತಿರುವ ಅಗತ್ಯಗಳನ್ನು ಪೂರೈಸಲು ಉತ್ತಮ ಗುಣಮಟ್ಟದ ರಸ್ತೆ ಮೂಲಸೌಕರ್ಯ ಅತ್ಯಗತ್ಯವಾಗಿದೆ. ಸಿಆರ್‌ಎಫ್ ಅಡಿಯಲ್ಲಿ ದೊರೆತಿರುವ ಈ ಅನುದಾನವು ಬಹುಕಾಲದಿಂದ ಅಭಿವೃದ್ಧಿಗೆ ಕಾಯುತ್ತಿದ್ದ ಪ್ರಮುಖ ರಸ್ತೆ ಭಾಗಗಳ ಉನ್ನತೀಕರಣಕ್ಕೆ ಸಹಕಾರಿಯಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಇನ್ನಷ್ಟು ಮೂಲಸೌಕರ್ಯ ಹೂಡಿಕೆಗಳು ಹಾಗೂ ಅಭಿವೃದ್ಧಿ ಯೋಜನೆಗಳನ್ನು ತರುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದ ಯದುವೀರ್ ಒಡೆಯರ್ ಅವರು, ಈ ಮಂಜೂರಾತಿ ದೊರಕಲು ಸಹಕರಿಸಿದ ಕೇಂದ್ರ ಸರ್ಕಾರ, ಸಂಬಂಧಿತ ಇಲಾಖೆ ಅಧಿಕಾರಿಗಳು ಹಾಗೂ ಎಲ್ಲಾ ಪಾಲುದಾರರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಸಂಸದರಿಂದ ಬಿಜೆಪಿ ವೀರಾಜಪೇಟೆ ಮಂಡಲ ಕಚೇರಿ ಉದ್ಘಾಟನೆ



ಗೋಣಿಕೊಪ್ಪ: ಗೋಣಿಕೊಪ್ಪ ಪಟ್ಟಣದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ರಸ್ತೆಯಲ್ಲಿರುವ ಟಾಸ್ ಕಟ್ಟಡದಲ್ಲಿ ಭಾರತೀಯ ಜನತಾ ಪಾರ್ಟಿಯ ವೀರಾಜಪೇಟೆ ಮಂಡಲ ಕಚೇರಿಯನ್ನು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಒಡೆಯರ್ ಮಂಗಳವಾರ ಲೋಕಾರ್ಪಣೆಗೊಳಿಸಿದರು.

ಈ ಸಂದರ್ಭ ಮಾತನಾಡಿದ ಅವರು, ಪಕ್ಷದ ಕಚೇರಿ ಉದ್ಘಾಟನೆಯೊಂದಿಗೆ ಪಕ್ಷದ ಬೆಳವಣಿಗೆಯ ಭಾವನೆ ಹೆಚ್ಚಾಗಬೇಕು. ಕೊಡಗು ಜಿಲ್ಲೆಯಲ್ಲಿ ಪಕ್ಷ ಬಲವರ್ಧನೆ ದೃಷ್ಟಿಯಿಂದ ಹೆಚ್ಚು ಕಾರ್ಯಾಲಯಗಳ ಅವಶ್ಯಕತೆಯಿದೆ. ಮುಂಬರುವ ಚುನಾವಣೆಗಳನ್ನು ಎದುರಿಸಲು ಹಾಗೂ ಕಾರ್ಯತಂತ್ರಗಳನ್ನು ರೂಪಿಸಲು ಕಾರ್ಯಾಲಯಗಳು ಶಕ್ತಿ ತುಂಬಲಿವೆ ಎಂದರು.

ಈ ಸಂದರ್ಭ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ವೀರಾಜಪೇಟೆ ಮಂಡಲ ಅಧ್ಯಕ್ಷ ಮಾಚಿಮಂಡ ಸುವಿನ್ ಗಣಪತಿ, ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಮಾಜಿ ಶಾಸಕ ಕೆ.ಜಿ ಬೋಪಯ್ಯ, ಮಂಡಲ ಕಾರ್ಯದರ್ಶಿ ಕುಟ್ಟಂಡ ಅಜಿತ್ ಕರುಂಬಯ್ಯ, ಜಿಲ್ಲಾ ಉಪಾಧ್ಯಕ್ಷರುಗಳಾದ ಅರುಣ್ ಭೀಮಯ್ಯ, ಗುಮ್ಮಟ್ಟೀರ ಕಿಲನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನೆಲ್ಲೀರ ಚಲನ್ ಕುಮಾರ್ ಮತ್ತಿತರರು ಹಾಜರಿದ್ದರು.

ಬೆಳ್ತಂಗಡಿ: ಉಚಿತ ಶ್ರವಣ ತಪಾಸಣೆ, ಶ್ರವಣ ಯಂತ್ರಕ್ಕೆ ಸಹಾಯಧನ

ಬೆಳ್ತಂಗಡಿ : ಬೆಳ್ತಂಗಡಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘ, ಬೆಳ್ತಂಗಡಿ ಲಯನ್ಸ್ ಕ್ಲಬ್, ಬೆಳ್ತಂಗಡಿ ಮಂಜುಶ್ರೀ ಸೀನಿಯರ್ ಛೇಂಬರ್, ಬೆಳ್ತಂಗಡಿ ವರ್ತಕರ ಸಂಘ, ಬೆಳ್ತಂಗಡಿ ಪ್ರೇರಣಾ ಸೌಹಾರ್ದ ಸಹಕಾರಿ ಮತ್ತು ಸ್ವಸಹಾಯ ಸಂಘ ನಿಯಮಿತ ಇವುಗಳ ಸಂಯುಕ್ತ ಆಶ್ರಯದಲ್ಲಿ ಟೀಮ್ ಈಶ್ವರ ಮಲ್ಪೆ ಇವರ ಸಹಯೋಗದೊಂದಿಗೆ ಕಿವಿಯ ಉಚಿತ ಶ್ರವಣ ತಪಾಸಣೆ ಮತ್ತು ಶ್ರವಣ ಯಂತ್ರಕ್ಕೆ ಸಹಾಯಧನ ಕಾರ್ಯಕ್ರಮ ಹಾಗೂ ವಿತರಣಾ ಕಾರ್ಯಕ್ರಮ ಬೆಳ್ತಂಗಡಿ ಲಯನ್ಸ್ ಭವನದಲ್ಲಿ ಭಾನುವಾರ ನಡೆಯಿತು.

ಬೆಳ್ತಂಗಡಿ ಲಯನ್ಸ್ ಕ್ಲಬ್ ಅಧ್ಯಕ್ಷ ಮುರಳಿ ಬಲಿಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, 'ಸೇವಾ ಕಾರ್ಯ ಮನುಷ್ಯನ ಮನುಷ್ಯತ್ವದ ಮುಖ್ಯ ಕಾರ್ಯ. ನಮ್ಮಿಂದ ಸಾಧ್ಯವಾಗುವುದನ್ನು ಸಮಾಜಕ್ಕೆ ಅರ್ಪಿಸುವ ಗುಣವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು. ಯಾವುದೋ ರೀತಿಯಲ್ಲಿ ಹತ್ತಾರು ಮಂದಿಗೆ ಪ್ರಯೋಜನವಾಗುವ ಕೆಲಸವನ್ನು ಮಾಡಿದಾಗ ಮನುಷ್ಯನಾಗಿ ಬದುಕಿ ಬಾಳಿದ್ದಕ್ಕೆ ಸಾರ್ಥಕ್ಯ ಸಿಗುವುದು' ಎಂದರು.



ಬೆಳ್ತಂಗಡಿ ಮಂಜುಶ್ರೀ ಸೀನಿಯರ್ ಛೇಂಬರ್ ಅಧ್ಯಕ್ಷ ಜಾನ್ ಅರ್ವಿನ್ ಡಿಸೋಜಾ ಮಾತನಾಡಿ, ಪ್ರತಿಯೊಬ್ಬರೂ ಕಷ್ಟದ ಜತೆ ಬದುಕನ್ನು ಕಂಡುಕೊಂಡವರು. ನಮ್ಮ ದುಡಿಮೆಯಿಂದ ಬರುವ ಲಾಭದ ಕಿಂಚಿತ್ತು ಪಾಲನ್ನಾದರೂ ಸಮಾಜಕ್ಕೆ ಅರ್ಪಿಸುವುದೇ ನಿಜವಾದ ಸೇವೆ ಎಂದರು.

ಟೀಮ್ ಈಶ್ವರ ಮಲ್ಪೆ ಸಂಚಾಲಕ ಲವ ಬಂಗೇರ ಮಾತನಾಡಿ, ' ಕಿವಿಯ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಆಗುವ ಶಿಬಿರಗಳು ಅತ್ಯಂತ ಕಡಿಮೆ. ಆದರೆ ಟೀಮ್ ಈಶ್ವರ ಮಲ್ಪೆ ವತಿಯಿಂದ ವ್ಯಕ್ತಿಯೋರ್ವ ಮನುಷ್ಯನಾಗಿ ಸಮಾಜದಲ್ಲಿ ಚೆನ್ನಾಗಿ ಬಾಳಿ ಬದುಕಲು ಇಂತಹ ಶಿಬಿರಗಳನ್ನು ಮಾಡುತ್ತಾ ಬರುತ್ತಿದ್ದು, ಈಗಾಗಲೇ 20 ತಿಂಗಳಲ್ಲಿ 120 ಶಿಬಿರಗಳನ್ನು ಹಮ್ಮಿಕೊಂಡು ನೂರಾರು ಜನರಿಗೆ ಬದುಕಿನ ಹೊಸ ದಿಕ್ಕನ್ನು ತೋರಿಸಿದ್ದೇವೆ' ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ತುಕರಾಮ್ ಬಿ. ವಹಿಸಿದ್ದರು.

ವೇದಿಕೆಯಲ್ಲಿ ಬೆಳ್ತಂಗಡಿ ಪ್ರೇರಣಾ ಸೌಹಾರ್ದ ಸಹಕಾರಿ ಮತ್ತು ವ್ಯವಸಾಯ ಸೇವಾ ಸಂಘದ ಅಧ್ಯಕ್ಷ ಲ್ಯಾನ್ಸಿ ಪಿರೇರಾ, ಬೆಳ್ತಂಗಡಿ ವರ್ತಕರ ಸಂಘದ ಉಪಾಧ್ಯಕ್ಷ ಶಶಿಧರ ಪೈ, ಶ್ರವಣ ತಜ್ಞ ಡಾ. ಪವನ್ ಮಂಗಳೂರು ಇದ್ದರು.

ಬೆಳ್ತಂಗಡಿ ಪ್ರೆಸ್ ಕ್ಲಬ್ ಅಧ್ಯಕ್ಷ ಪುಷ್ಪರಾಜ ಶೆಟ್ಟಿ ಸ್ವಾಗತಿಸಿದರು. ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಮನೋಹರ್ ಬಳಂಜ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಪುತ್ತೂರು ಮೆಡಿಕಲ್ ಕಾಲೇಜ್ ಬೈಲಾ ಕಮಿಟಿ ಶೀಘ್ರ ರಚನೆ

ಪುತ್ತೂರು: ಪುತ್ತೂರಿನಲ್ಲಿ ನಿರ್ಮಿಸಲು ಉದ್ದೇಶಿರುವ ಮೆಡಿಕಲ್ ಕಾಲೇಜ್ ಆಸ್ಪತ್ರೆ ಮತ್ತು ಮುಂದಿನ ಹಂತದಲ್ಲಿ ನಿರ್ಮಾಣ ವಾಗಲಿರುವ ಮೆಡಿಕಲ್ ಕಾಲೇಜಿಗೆ ಸಂಬಂಧಿಸಿದಂತೆ ಬೈಲಾ ಕಮಿಟಿ ರಚನೆ ಕಾರ್ಯ ಶೀಘ್ರದಲ್ಲೇ ನಡೆಯಲಿದೆ.

ಪುತ್ತೂರು ಮೆಡಿಕಲ್ ಕಾಲೇಜಿಗೆ ಸಂಬಂಧಿಸಿ ರಾಜ್ಯ ಸರಕಾರ ನೇಮಕ ಮಾಡಿರುವ ನೋಡೆಲ್ ಅಧಿಕಾರಿ ಡಾ. ಕಿಶೋರ್ ಅವರು ಪುತ್ತೂರಿಗೆ ಭೇಟಿ ನೀಡಿ ಶಾಸಕ ಅಶೋಕ್ ರೈ ಅವರ ಜತೆ ಈ ಬಗ್ಗೆ ಚರ್ಚೆ ನಡೆಸಿದ್ದಾರೆ.

ರಾಜೀವ್ ಗಾಂಧಿ ಆರೋಗ್ಯ ವಿಶ್ವ ವಿದ್ಯಾನಿಲಯದ ನಿರ್ದೇಶಕರಾಗಿರುವ ಡಾ. ಕಿಶೋರ್ ಅವರನ್ನು ಸರಕಾರ ಕೆಲ ದಿನಗಳ ಹಿಂದೆ ಪುತ್ತೂರು ಮೆಡಿಕಲ್ ಕಾಲೇಜು ಯೋಜನೆಗೆ ನೋಡೆಲ್ ಅಧಿಕಾರಿಯಾಗಿ ನೇಮಿಸಿತ್ತು.

ಪುತ್ತೂರಿನ ಪ್ರವಾಸಿ ಮಂದಿರದಲ್ಲಿ ಶಾಸಕ ಅಶೋಕ್ ರೈ ಜತೆ ಡಾ. ಕಿಶೋರ್ ಸುದೀರ್ಘ ಸಮಾಲೋಚನೆ ನಡೆಸಿದರು. ಈ ಕುರಿತು ಮಾಹಿತಿ ನೀಡಿದ ಶಾಸಕರು, ಸರಕಾರಿ ಆಸ್ಪತ್ರೆ ಮತ್ತು ಮೆಡಿಕಲ್ ಕಾಲೇಜ್ ರಚನೆ ಸಂಬಂಧ ಆರಂಭದಲ್ಲಿ ಬೈಲಾ ರಚನೆಯಾಗಬೇಕಿದೆ. ಇದಕ್ಕಾಗಿ ಸರಕಾರಿ ಮಟ್ಟದಲ್ಲಿ ಬೈಲಾ ಕಮಿಟಿ ಶೀಘ್ರ ರಚನೆಯಾಗಲಿದೆ. ವೈದ್ಯಕೀಯ ಶಿಕ್ಷಣ ಸಚಿವರು, ಇಲಾಖೆಯ ಮುಖ್ಯ ಕಾರ್ಯದರ್ಶಿ, ಹಣಕಾಸು ಇಲಾಖೆಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಯೋಜನಾ ಇಲಾಖೆಯ ಉನ್ನತ ಅಧಿಕಾರಿಗಳು ಮತ್ತು ಪುತ್ತೂರು ಶಾಸಕರು ಈ ಬೈಲಾ ಕಮಿಟಿ ಯಲ್ಲಿರುತ್ತಾರೆ. ಆಸ್ಪತ್ರೆ, ಮೆಡಿಕಲ್ ಕಾಲೇಜು ನಿರ್ಮಾಣಕ್ಕೆ ಸಂಬಂಧಿಸಿದ ಎಲ್ಲ ಅಂಶಗಳನ್ನು ಬೈಲಾದಲ್ಲಿ ಸೇರಿಸಲಾಗುತ್ತದೆ. ಯೋಜನೆ, ಅನುಷ್ಠಾನ, ಹಣಕಾಸು ವಿಚಾರಗಳು, ನಿರ್ವಹಣೆ ಇತ್ಯಾದಿಗಳೆಲ್ಲ ಬೈಲಾದಲ್ಲಿ ಸೇರಲಿವೆ. ಮುಂದಿನ 15 ದಿನಗಳಲ್ಲಿ ಬೈಲಾ ರಚನೆಯಾಗುವ ಸಾಧ್ಯತೆ ಇದೆ ಎಂದರು.



ಡಾ. ಕಿಶೋರ್ ಅವರು ಪುತ್ತೂರು ಮೆಡಿಕಲ್ ಕಾಲೇಜಿಗೆ ಸಂಬಂಧಿತ ಮುಂದಿನ ಎಲ್ಲ ಚಟುವಟಿಕೆಗಳ ನೋಡೆಲ್ ಅಧಿಕಾರಿಯಾಗಿದ್ದು, ಅಗತ್ಯವಿರುವಾಗಲೆಲ್ಲಾ ಪುತ್ತೂರಿಗೆ ಬರಲಿದ್ದಾರೆ ಎಂದು ಶಾಸಕರು ತಿಳಿಸಿದ್ದಾರೆ.

ಕೇಂದ್ರ ಸಂಸ್ಕೃ ತಿ ಸಚಿವಾಲಯ ಸಹಿತ ವಿವಿಧ ಸಂಘಗಳ ಆಶ್ರಯದಲ್ಲಿ ನಡೆದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು

ಕೊಡ್ಲಿಪೇಟೆಯಲ್ಲಿ ಜನಮನ ರಂಜಿಸಿದ 'ಮಾನ್ಸೂನ್ ಸಾಂಸ್ಕೃತಿಕ ಉತ್ಸವ'

ಮಡಿಕೇರಿ: ಶಿಕ್ಷಣದೊಂದಿಗೆ ವಿದ್ಯಾರ್ಥಿಗಳು ಸಾಂಸ್ಕೃ ತಿಕ ಚಟುವಟಿಕೆ ಬೆಳೆಸಿಕೊಂಡು ಸಾಹಿತ್ಯಾಸಕ್ತರಾಗಬೇಕು ಎಂದು ಭಾರತ ಸರ್ಕಾರದ ದಕ್ಷಿಣ ವಲಯ ಸಾಂಸ್ಕೃ ತಿಕ ನಿರ್ದೇಶಕ ಕೆ.ಕೆ.ಗೋಪಾಲಕೃಷ್ಣ ಅವರು ಕರೆ ನೀಡಿದರು.

ಕೇಂದ್ರ ಸಂಸ್ಕೃ ತಿ ಸಚಿವಾಲಯ, ದಕ್ಷಿಣ ವಲಯ ಸಾಂಸ್ಕೃ ತಿಕ ಕೇಂದ್ರ, ತಂಜಾವೂರು ಹಾಗೂ ಕುಶಾಲನಗರ ಕನ್ನಡ ಸಿರಿ ಸ್ನೇಹ ಬಳಗದ ವತಿಯಿಂದ ಕೊಡ್ಲಿಪೇಟೆಯ ಎಸ್‌ಜಿಎಸ್ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ಎರಡು ದಿನಗಳ ಕಾಲ ನಡೆದ 'ಮಾನ್ಸೂನ್ ಸಾಂಸ್ಕೃ ತಿಕ ಉತ್ಸವ' ಉದ್ಘಾಟಿಸಿ ಅವರು ಮಾತನಾಡಿದರು.

ಭಾರತೀಯ ಸಂಸ್ಕೃ ತಿ ಸನಾತನ ಸಂಸ್ಕೃ ತಿಯಾಗಿದ್ದು, ಸಮಾನತೆ, ಭ್ರಾತೃತ್ವ, ಏಕತೆ ಹೊಂದಿದೆ. ವಿಶ್ವದಲ್ಲಿಯೇ ಭಾರತೀಯ ಸಂಸ್ಕೃ ತಿಗೆ ಹೆಚ್ಚಿನ ಸ್ಥಾನಮಾನವಿದೆ ಎಂದರು.

ಭಾರತ ಸರ್ಕಾರದ ದಕ್ಷಿಣ ವಲಯ ಸಾಂಸ್ಕೃ ತಿಕ ಕೇಂದ್ರವು ತಂಜಾವೂರಿನಲ್ಲಿ ಕೇಂದ್ರ ಕಚೇರಿ ಹೊಂದಿದ್ದು, ದಕ್ಷಿಣ ರಾಜ್ಯಗಳಲ್ಲಿ ಆಯಾಯ ಜಿಲ್ಲೆ, ರಾಜ್ಯಕ್ಕೆ ಸಂಬಂಸಿದಂತೆ ಸಾಂಸ್ಕೃ ತಿಕ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದೆ. ಅದೇ ರೀತಿ ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯ ಹಾಗೂ ಅಕ್ಕಪಕ್ಕದ ಜಿಲ್ಲೆಯ ಕಲಾವಿದರು ಒಂದೆಡೆ ಸೇರಿ ಎರಡು ದಿನಗಳ ಕಾರ್ಯಕ್ರಮ ''ಮಾನ್ಸೂನು ಉತ್ಸವ'' ನಡೆಸಲು ಕನ್ನಡ ಸಿರಿ ಸ್ನೇಹ ಬಳಗ ನಮಗೆ ಸಹಕಾರ ನೀಡುತ್ತಿದೆ ಎಂದು ಶ್ಲಾಘಿಸಿದರು. ಮುಂದೆಯೂ ಸಹ ಕೊಡಗು ಜಿಲ್ಲೆಯಲ್ಲಿ ಹೆಚ್ಚು ಹೆಚ್ಚು ಕಾರ್ಯಕ್ರಮ ನಡೆಸಲಾಗುವುದು ಎಂದರು.



ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ ಮಾತನಾಡಿ ನಮ್ಮ ವಿದ್ಯಾಸಂಸ್ಥೆಯಲ್ಲಿ ವಿಶೇಷವಾದ ಸಾಂಸ್ಕೃ ತಿಕ ಕಾರ್ಯಕ್ರಮ ನಡೆಸುತ್ತಿರುವುದು ಹೆಮ್ಮೆಯ ವಿಷಯ.

ಜನಮನ ರಂಜಿಸಿದ ಕಾರ್ಯಕ್ರಮ

ಕೊಡಗಿನ ಉಮ್ಮತ್ತಾಟ್, ಊರುಟ್ಟಿ ಕೊಟ್ಟ್, ಬಾಳೋಪಾಟ್, ಕಂಸಾಳೆ, ಡೊಳ್ಳು ಕುಣಿತ, ಜೇನುಕುರುಬ ನೃತ್ಯ, ಜಾನಪದ ಹಾಡುಗಳು, ಜಾನಪದ ನೃತ್ಯ, ಕೋಲಾಟ್, ಮುಂತಾದ ಕಲೆಗಳು ಪ್ರದರ್ಶಿಸಿ ಜನಮನ ರಂಜಿಸುವಲ್ಲಿ ಕಾರ್ಯಕ್ರಮ ಯಶಸ್ವಿಯಾಯಿತು.

ಗೌರವ, ಸನ್ಮಾನ

ಎರಡು ದಿನಗಳ ಕಾಲ ಮಾನ್ಸೂನ್ ಉತ್ಸವ ಕಾರ್ಯಕ್ರಮ ನಡೆಸಲು ಕಾರಣರಾದ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರದ ನಿರ್ದೇಶಕ ಕೆ.ಕೆ.ಗೋಪಾಲಕೃಷ್ಣ ಶಾಲೆಯಲ್ಲಿ ಎಸ್‌ಎಸ್ ಎಲ್‌ಸಿಯಲ್ಲಿ ನೂರಕ್ಕೆ ನೂರರಷ್ಟು ಫಲಿತಾಂಶ ಬರಲು ಶ್ರಮಿಸಿದ ಪ್ರಾಂಶುಪಾಲೆ ತನುಜಾ ಹಾಗೂ ಕಾರ್ಯದರ್ಶಿ ನಂಜುಂಡ ಅವರನ್ನು ಕನ್ನಡ ಸಿರಿ ಸ್ನೇಹ ಬಳಗದ ಅಧ್ಯಕ್ಷ ಬಿ.ಎಸ್.ಲೋಕೇಶ್ ಸಾಗರ್ ಅವರು ಸ್ವಾಮೀಜಿಯವರ ಆಶೀರ್ವಾದದೊಂದಿಗೆ ಗೌರವಿಸಿ ಸನ್ಮಾನಿಸಿದರು.

ಸಮಾಜ ಇಂದು ಸಾಂಸ್ಕೃ ತಿಕ ಕಾರ್ಯಕ್ರಮವನ್ನು ಸ್ವೀಕರಿಸಿ ಇಂದಿನ ಪೀಳಿಗೆಗೆ ಪರಿಚಯಿಸಬೇಕೆಂದರು.

ಪ್ರಾಸ್ತಾವಿಕ ನುಡಿಯಾಡಿದ ಕಾರ್ಯಕ್ರಮದ ಸಂಯೋಜಕ ಹಾಗೂ ಕನ್ನಡ ಸಿರಿ ಸ್ನೇಹ ಬಳಗದ ಅಧ್ಯಕ್ಷ ಬಿ.ಎಸ್.ಲೋಕೇಶ್ ಸಾಗರ್ ಮಾತನಾಡಿ, ಜಿಲ್ಲೆಯಲ್ಲಿ ಮಾನ್ಸೂನ್ ಮಳೆಯನ್ನು ಆಹ್ವಾನ ಮಾಡಿಕೊಳ್ಳುವ ಈ ಸಂದರ್ಭದಲ್ಲಿ ಮಾನ್ಸೂನ್ ಉತ್ಸವ ಸಾಂಸ್ಕೃ ತಿಕ ಕಾರ್ಯಕ್ರಮವನ್ನು ಕೊಡ್ಲಿಪೇಟೆಯಲ್ಲಿ ನಡೆಸಲು ಸಂತೋಷವಾಗುತ್ತಿದ್ದು, ತಾವೆಲ್ಲರೂ ಸಂಸ್ಕೃ ತಿ ಸಾಹಿತ್ಯದ ಸದಭಿರುಚಿ ಬೆಳೆಸಿಕೊಳ್ಳಬೇಕು ಎಂದರು.

ನಾಡು ನುಡಿ ಭಾಷೆಗಾಗಿ ನಾವೆಲ್ಲರೂ ಕೈಜೋಡಿಸಿ ಕೆಲಸ ಮಾಡಬೇಕು. ಇದಕ್ಕಾಗಿ ಅನೇಕ ಶರಣರು ಸಮಾಜದ ಏಳಿಗೆಗೆ ದುಡಿದು ಕೊಡುಗೆ ನೀಡಿದ್ದಾರೆ ಎಂದರು.

ವಿದ್ಯಾರ್ಥಿಗಳು ಸಂಸ್ಕೃ ತಿಯ ಕಡೆಗೆ ಮಾರು ಹೋಗುವುದರೊಂದಿಗೆ ಕಲೆಗೆ ಪ್ರೋತ್ಸಾಹ ನೀಡಬೇಕು. ಇಂದು ಅನೇಕ ಜನಪದ ಕಲೆಗಳು ನಶಿಸಿ ಹೋಗುತ್ತಿರುವ ಸಂದರ್ಭದಲ್ಲಿ ಇಂತಹ ಇಲಾಖೆ ಬಾಹ್ಯ ಪ್ರಪಂಚಕ್ಕೆ ಕಲೆಯನ್ನು ಪರಿಚಯಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದರು.

ವೇದಿಕೆಯಲ್ಲಿ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ ರಾಣಿ ಮಾಚಯ್ಯ, ದಕ್ಷಿಣ ವಲಯ ಸಾಂಸ್ಕೃ ತಿಕ ಕೇಂದ್ರದ ರವೀಂದ್ರ ಕುಮಾರ್, ಎಸ್. ಜಿ.ವಿದ್ಯಾಸಂಸ್ಥೆಯ ಪ್ರಾಂಶುಪಾಲೆ ತನುಜಾ, ಕಾರ್ಯದರ್ಶಿ ನಂಜುಂಡ, ಮಣಜೂರು ಮಂಜುನಾಥ್, ಪತ್ರಕರ್ತರಾದ ಕೆ.ಕೆ.ನಾಗರಾಜ, ಕೆ.ಅಶ್ವಥ್ ಉಪಸ್ಥಿತರಿದ್ದರು.

ಶಾಲೆಯ ಕನ್ನಡ ಭಾಷಾ ಪ್ರಾಧ್ಯಾಪಕ ಚಂದ್ರಶೇಖರ ಸ್ವಾಗತಿಸಿದರೆ, ಮಣಜೂರು ಮಂಜುನಾಥ್ ನಿರೂಪಿಸಿ, ವಂದಿಸಿದರು.

ಕಿರುಸುದ್ದಿ

ಆರ್ಚರಿ ಪ್ರೀಮಿಯರ್ ಲೀಗ್: ಹೈದರಾಬಾದ್ ಆತಿಥ್ಯ

ಬೆಂಗಳೂರು: ಭಾರತೀಯ ಬಿಲ್ಲುಗಾರಿಕೆಯ ಪ್ರತಿಷ್ಠಿತ ಫ್ರಾಂಚೈಸಿ ಟೂರ್ನಿಯಾದ ಆರ್ಚರಿ ಪ್ರೀಮಿಯರ್ ಲೀಗ್ (ಎಪಿಎಲ್) ಎರಡನೇ ಆವೃತ್ತಿಗೆ ಹೈದರಾಬಾದ್ ಆತಿಥ್ಯ ವಹಿಸಲಿದೆ ಎಂದು ಆಯೋಜಕರು ಘೋಷಿಸಿದ್ದಾರೆ. ಅಕ್ಟೋಬರ್ 8ರಿಂದ 18ರವರೆಗೆ ನೆಕ್ಲೇಸ್ ರೋಡ್‌ನ ಪೀಪಲ್ಸ್ ಪ್ಲಾಜಾದಲ್ಲಿ 11 ದಿನಗಳ ಕಾಲ ನಡೆಯಲಿರುವ ಈ ಟೂರ್ನಿಯಲ್ಲಿ ವಿಶ್ವದ ಅಗ್ರ ಬಿಲ್ಲುಗಾರರು ಭಾಗವಹಿಸಲಿದ್ದಾರೆ. ಭಾರತೀಯ ಬಿಲ್ಲುಗಾರಿಕೆ ಸಂಸ್ಥೆ ಆಯೋಜಿಸುತ್ತಿರುವ ಈ ಲೀಗ್‌ಗೆ ತೆಲಂಗಾಣ ಸರ್ಕಾರ ಬೆಂಬಲ ನೀಡಿದ್ದು, ಕಳೆದ ವರ್ಷ ನವದೆಹಲಿಯಲ್ಲಿ ಯಶಸ್ವಿಯಾಗಿ ನಡೆದ ಮೊದಲ ಆವೃತ್ತಿಯ ಬಳಿಕ ಇದೀಗ ಎರಡನೇ ಸೀಸನ್‌ಗೆ ಸಜ್ಜಾಗಿದೆ. ಟೂರ್ನಿಯಲ್ಲಿ ಭಾರತದ ಪ್ರಮುಖ ಬಿಲ್ಲುಗಾರರಾದ ದೀಪಿಕಾ ಕುಮಾರಿ, ಅತನು ದಾಸ್, ಓಜಸ್ ದಿಯೋತಲೆ, ಜ್ಯೋತಿ ಸುರೇಖಾ, ಅಭಿಷೇಕ್ ವರ್ಮಾ ಹಾಗೂ ಅಂಕಿತಾ ಭಕತ್ ಸೇರಿದಂತೆ ಹಲವು ಅಂತಾರಾಷ್ಟ್ರೀಯ ತಾರೆಯರು ಸ್ಪರ್ಧಿಸಲಿದ್ದಾರೆ. ಒಟ್ಟು ಆರು ಫ್ರಾಂಚೈಸಿ ತಂಡಗಳು ಕಣಕ್ಕಿಳಿಯಲಿದ್ದು, ಮೈಟಿ ಮರಾಠಾಸ್, ರಾಜಪುತಾನ ರಾಯಲ್ಸ್, ಪೃಥ್ವಿರಾಜ್ ಯೋಧಾಸ್, ಕಾಕತೀಯ ನೈಟ್ಸ್, ಚೆರೋ ಆರ್ಚರ್ಸ್ ಹಾಗೂ ಚೋಳ ಚೀಫ್ಸ್ ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ. 48 ಭಾರತೀಯ ಮತ್ತು ವಿದೇಶಿ ಬಿಲ್ಲುಗಾರರು ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ.

ಅಭ್ಯಾಸ ಪಂದ್ಯದಲ್ಲಿ ಎಡವಿದ ಭಾರತ

ಕಾರ್ಡಿಫ್(ಇಂಗ್ಲೆಂಡ್): ಇಂಗ್ಲೆಂಡ್ ವಿರುದ್ಧ ನಡೆದ ಅಭ್ಯಾಸ ಪಂದ್ಯದಲ್ಲಿ ಭಾರತೀಯ ಮಹಿಳಾ ತಂಡ ಸೋಲನುಭವಿಸಿದರೂ ಟಿ20 ವಿಶ್ವಕಪ್ ಉತ್ತಮ ಪ್ರದರ್ಶನದೊಂದಿಗೆ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿತು. ಶುಕ್ರವಾರ ಶುರುವಾಗಲಿರುವ ಮಹಿಳೆಯರ ಟಿ20 ವಿಶ್ವಕಪ್‌ಗೆ ಭಾರತ ಸಜ್ಜಾಗುತ್ತಿದೆ. ಇದೇ ವೇಳೆ ಬುಧವಾರ ನಡೆದ ಅಭ್ಯಾಸ ಪಂದ್ಯದಲ್ಲಿ ಭಾರತ ಇಂಗ್ಲೆಂಡ್ ತಂಡವನ್ನು ಎದುರಿಸಿತ್ತು. ಅಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 6 ವಿಕೆಟ್ ನಷ್ಟಕ್ಕೆ 171 ರನ್ ಗಳಿಸಿತು. ಅಮಿ ಜೋನಸ್(64) ಸ್ಫೋಟಕ ಅರ್ಧಶತಕ ಬಾರಿಸಿದರೆ, ಸೀವರ್ ಬ್ರಂಟ್ 57 ರನ್ ಬಾರಿಸಿದರು. ದಾನಿ ಗಿಬ್ಸನ್ 12 ಬಾಲ್‌ಗಳಲ್ಲಿ 30 ರನ್ ಬಾರಿಸಿ ಸ್ಕೋರ್ ಹಿಗ್ಗಿಸಿದರು. ಭಾರತ ಪರ ಶ್ರೇಯಾಂಕಾ ಪಾಟೀಲ್ 2 ವಿಕೆಟ್ ಪಡೆದರೆ, ಚಾರಣಿ, ರಾಧಾ, ಶೆಫಾಲಿ ಮತ್ತು ರೇಣುಕಾ ತಲಾ ಒಂದು ವಿಕೆಟ್ ಪಡೆದುಕೊಂಡಿತು. ಗುರಿ ಬೆನ್ನತ್ತಿದ ಭಾರತ 19.5 ಓವರ್‌ಗಳಲ್ಲಿ 166 ರನ್‌ಗಳಿಗೆ ಆಲೌಟ್ ಆಯಿತು. ಅಗ್ರ ಕ್ರಮಾಂಕಿತ ಬ್ಯಾಟಿಗರು ಕೈಕೊಟ್ಟರೂ ಮಧ್ಯಮ ಕ್ರಮಾಂಕದಲ್ಲಿ ರಿಚಾ ಘೋಷ್ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. 36 ಎಸೆತ ಮಾತ್ರವೇ ಎದುರಿಸಿದ ಅವರು, 9 ಬೌಂಡರಿ–2ಸಿಕ್ಸರ್‌ನೊಂದಿಗೆ 68 ರನ್ ಬಾರಿಸಿದರು. ಉಳಿದ ಬ್ಯಾಟಿಗರು 20ರ ಗಡಿ ದಾಟದಿದ್ದರೂ 15 ರನ್ ಮಟ್ಟಿಗೆ ಕೊಡುಗೆಗಳನ್ನು ನೀಡುತ್ತಾ ಬಂದರು. ಪರಿಣಾಮ ಭಾರತ ಕೊನೆಯ 3 ಬಾಲ್‌ಗಳಲ್ಲಿ 6 ರನ್‌ಗಳಿಸಬೇಕಿತ್ತು. ಆದರೆ 2 ಬಾಲ್ ಎದುರಿಸಿದ ಭಾರತೀಯರು ಒಂದೂ ರನ್ ಗಳಿಸದೆ ಆಲೌಟ್ ಆದರು. ಇಂಗ್ಲೆಂಡ್ 5 ರನ್‌ಗಳಿಂದ ಪಂದ್ಯ ಗೆದ್ದುಕೊಂಡಿತು.

ಕೌಂಟಿ ಕ್ರಿಕೆಟ್ ಆಡಲಿದ್ದಾರೆ ಮಾನವ್ ಸುಥಾರ್

ಮುಂಬೈ: ಇತ್ತೀಚೆಗೆ ನಡೆದ ಅಫ್ಘಾನಿಸ್ತಾನ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಭರ್ಜರಿ ಪ್ರದರ್ಶನ ನೀಡಿ ವಿಶ್ವ ಕ್ರಿಕೆಟ್ ಗಮನ ಸೆಳೆದ ಭಾರತದ ಯುವ ಸ್ಪಿನ್ನರ್ ಮಾನವ್ ಸುಥಾರ್ ಇಂಗ್ಲೆಂಡ್‌ನ ವಾರ್ವಿಕ್‌ಷೈರ್ ಕೌಂಟಿ ಕ್ಲಬ್ ಸೇರಲಿದ್ದು, ಎರಡು ಪಂದ್ಯವನ್ನಾಡಲಿದ್ದಾರೆ. 23 ವರ್ಷದ ಈ ಎಡಗೈ ಸ್ಪಿನ್ನರ್ ಕೌಂಟಿ ಚಾಂಪಿಯನ್‌ಶಿಪ್‌ನ ಎರಡು ಪ್ರಮುಖ ಪಂದ್ಯಗಳಲ್ಲಿ ಕಣಕ್ಕಿಳಿಯಲಿದ್ದಾರೆ. ಇದೇ ಮೊದಲ ಬಾರಿಗೆ ಕೌಂಟಿ ಕ್ರಿಕೆಟ್ ಆಡುತ್ತಿರುವ ಮಾನವ್ ಸುಥಾರ್ ಇತ್ತೀಚೆಗೆ, ನ್ಯೂ ಚಂಡೀಗಢದಲ್ಲಿ ನಡೆದ ಏಕೈಕ ಟೆಸ್ಟ್ ಪಂದ್ಯದಲ್ಲಿ ಕಣಕ್ಕಿಳಿಯುವ ಮೂಲಕ ತಮ್ಮ ಅಂತಾರಾಷ್ಟ್ರೀಯ ಚೊಚ್ಚಲ ಪಂದ್ಯವನ್ನು ಆಡಿದರು. ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 33 ರನ್ ನೀಡಿ 6 ವಿಕೆಟ್ ಪಡೆದಿದ್ದ ಮಾನವ್, ಎರಡನೇ ಇನ್ನಿಂಗ್ಸ್‌ನಲ್ಲಿ 1 ವಿಕೆಟ್ ಉರುಳಿಸಿದ್ದರು.

ಭಾರತ ಎ–ಅಫ್ಘಾನ್ ಎ ಪಂದ್ಯ ಇಂದು

ಡಂಬುಲಾ: ಗೆಲುವಿನೊಂದಿಗೆ ಮುನ್ನಡೆ ಸಾಧಿಸಿರುವ ಭಾರತ ಎ ತಂಡವು ತ್ರಿಕೋನ ಸರಣಿಯ ಎರಡನೇ ಪಂದ್ಯದಲ್ಲಿ ಗುರುವಾರದಂದು ಅಫ್ಘಾನಿಸ್ತಾನ ಎ ತಂಡವನ್ನು ಎದುರಿಸಲಿದೆ. ಶ್ರೀಲಂಕಾ ಎ ವಿರುದ್ಧ ನಡೆದಿರುವ ಪಂದ್ಯದಲ್ಲಿ ಈಗಾಗಲೇ ಗೆಲುವು ಸಾಧಿಸಿರುವ ಭಾರತ ಎ ತಂಡ ಭಾರೀ ಮುನ್ನಡೆ ಸಾಧಿಸಿದೆ. ಇತ್ತ ಅಫ್ಘಾನಿಸ್ತಾನ ಇದೇ ಮೊದಲ ಬಾರಿಗೆ ಕಣಕ್ಕಿಳಿಯಲಿದೆ. ರುತುರಾಜ್ ಗಾಯಕ್ವಾಡ್ ಮತ್ತು ತಿಲಕ್ ವರ್ಮಾ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಮೊದಲ ಪಂದ್ಯ ಗೆಲ್ಲಿಸಿದ್ದರು. ತಂಡದಲ್ಲಿ ವೈಭವ್ ಸೂರ್ಯವಂಶಿ ಸೇರಿದಂತೆ ಯುವಕರೇ ಇದ್ದು ಭರವಸೆಯಲ್ಲಿದೆ.

ನಾಳೆಯಿಂದ ಮಹಿಳಾ ಟಿ20 ವಿಶ್ವಕಪ್ ಶುರು | ಚುಟುಕು ಕ್ರಿಕೆಟ್ ಸಮರಕ್ಕೆ ಇಂಗ್ಲೆಂಡ್ ಸಿದ್ಧ

ರಂಗೇರಿಸಲಿದೆ ಮಹಿಳಾ ವಿಶ್ವಕಪ್

ಲಂಡನ್: ಇತ್ತ ಫುಟ್‌ಬಾಲ್ ಕಣದಲ್ಲಿ ಮಿಂಚಲು ವಿಶ್ವ ಕಾಲ್ಚೆಂಡಿನಾಟದ ದಿಗ್ಗಜರು ಸಜ್ಜಾದರೆ ಅತ್ತ ಮಹಿಳೆಯರ ಕ್ರಿಕೆಟ್ ಟಿ20 ವಿಶ್ವಕಪ್ ಪಂದ್ಯಾವಳಿ ಜನರ ಮನರಂಜಿಸಲು ಸಜ್ಜಾಗಿದೆ. ಕಳೆದ ವರ್ಷ ಮುಕ್ತಾಯಗೊಂಡಿರುವ ಏಕದಿನ ಮಾದರಿಯ ಕ್ರಿಕೆಟ್ ವಿಶ್ವಕಪ್ ನಂತರ ಇದೀಗ ಟಿ20 ವಿಶ್ವಕಪ್ ಪಂದ್ಯಾವಳಿ ಶುಕ್ರವಾರದಿಂದ ನಡೆಯಲಿದೆ.

ಮಹಿಳೆಯರ ಕ್ರಿಕೆಟ್ ಅಂಗಳಕ್ಕೆ ಈಗ ಪುರುಷರ ಕ್ರಿಕೆಟ್‌ನಷ್ಟೇ ಮಹತ್ವ ಸಿಗುತ್ತಿದೆ. ಬಹುಮಾನ ಮೊತ್ತದಿಂದ ನೋಡುಗರ ಸಂಖ್ಯೆಯಲ್ಲೂ ಪರಿವರ್ತನೆಯ ಪರ್ವವೇ ಕಂಡುಬಂದಿದೆ. ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಪಂದ್ಯಾವಳಿ ಯಾಕೆ ವಿಶೇಷ ಮತ್ತು ಯಾಕೆ ಮುಖ್ಯ ಎಂಬ ಪ್ರಶ್ನೆಗೆ ಉತ್ತರ ಇಲ್ಲಿದೆ.


ವಿಶ್ವಕಪ್ ಶುರುವಾಗಿದ್ದು ಹೀಗೆ: 2000 ಇಸವಿಯ ನಂತರದ ಸಮಯದಲ್ಲಿ ಕ್ರಿಕೆಟ್‌ನ ಅತ್ಯಂತ ಚಿಕ್ಕ ಮಾದರಿಗೆ ಭಾರೀ ಜನಪ್ರಿಯತೆ ಸಿಕ್ಕಿತು. ವಿಶ್ವಾದ್ಯಂತ ಕ್ರಿಕೆಟ್ ಅಭಿಮಾನಿಗಳು ಅರ್ಧ ದಿನದಲ್ಲೇ ಮುಗಿಯುವ ಈ ಕ್ರೀಡೆಗೆ ಹೆಚ್ಚಿನ ಆಸಕ್ತಿ ತೋರಿದ ನಂತರ 2007ರಲ್ಲಿ ಪುರುಷರ ಟಿ20 ವಿಶ್ವಕಪ್ ಪಂದ್ಯಾವಳಿ ಆಯೋಜಿಸಲಾಗಿತ್ತು. ಇತ್ತ 2005ರಲ್ಲಿ ಮೊದಲ ಬಾರಿಗೆ ಮಹಿಳೆಯರ ನಡುವೆ ಅಂತಾರಾಷ್ಟ್ರೀಯ ಟಿ20 ಪಂದ್ಯ ನಡೆದಿತ್ತು. 2007ರಲ್ಲಿ ನಡೆದ ಪುರುಷರ ಟಿ20 ವಿಶ್ವಕಪ್‌ಗೆ ಸಿಕ್ಕ ಬೆಂಬಲ ಮತ್ತು ಆಸಕ್ತಿ ಗಮನಿಸಿದ ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆ 2009ರಲ್ಲಿ ಮಹಿಳೆಯರಲ್ಲೂ ಇದೇ ಮಾದರಿಯ ವಿಶ್ವಕಪ್ ಒಂದನ್ನು ಆಯೋಜಿಸಲು ಸಿದ್ಧತೆ ನಡೆಸಿತು. ಅದರಂತೆ 2009ರಲ್ಲಿ ಮೊದಲ ಬಾರಿಗೆ ಇಂಗ್ಲೆಂಡ್‌ನಲ್ಲಿ ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿ ನಡೆಯಿತು. ಅಲ್ಲಿಂದ ಇಲ್ಲಿಯವರೆಗೂ ಪ್ರತಿ ಎರಡು ವರ್ಷಕ್ಕೊಮ್ಮೆ ಪಂದ್ಯಾವಳಿ ನಡೆಯುತ್ತದೆ.

ಫಿಫಾ ಅಬ್ಬರದಲ್ಲಿ ಮಹಿಳೆಯರ ಕ್ರಿಕೆಟ್ ವಿಶ್ವಕಪ್ ಮರೆಯದಿರಿ

ಅರ್ಹತೆ ಪಡೆದುಕೊಳ್ಳುವುದು ಹೇಗೆ?: ಐಸಿಸಿ ಮಹಿಳಾ ಟ್ವೆಂಟಿ20 ಅಂತಾರಾಷ್ಟ್ರೀಯ ಶ್ರೇಯಾಂಕಗಳು ಮತ್ತು ಅರ್ಹತಾ ಪಂದ್ಯವಾದ ಮಹಿಳಾ ವಿಶ್ವ ಟ್ವೆಂಟಿ20 ಅರ್ಹತಾ ಪಂದ್ಯಾವಳಿಯಿಂದ ಅರ್ಹತೆಯನ್ನು ನಿರ್ಧರಿಸಲಾಗುತ್ತದೆ. 2014 ರವರೆಗೆ, ಐಸಿಸಿ ಮಹಿಳಾ ಟಿ20 ಅಂತಾರಾಷ್ಟ್ರೀಯ ಶ್ರೇಯಾಂಕದ ಅಗ್ರ ಆರು ತಂಡಗಳು ಸ್ವಯಂಚಾಲಿತವಾಗಿ ಅರ್ಹತೆ ಪಡೆಯುತ್ತಿದ್ದವು. ಉಳಿದ ಎರಡು ಸ್ಥಾನಗಳನ್ನು ಅರ್ಹತಾ ಪ್ರಕ್ರಿಯೆಯಿಂದ ನಿರ್ಧರಿಸಲಾಗುತ್ತದೆ. 2014ರ ಆವೃತ್ತಿಯಲ್ಲಿ, ಆರು ಸ್ಥಾನಗಳನ್ನು ಐಸಿಸಿ ಮಹಿಳಾ ಟಿ20ಐ ಶ್ರೇಯಾಂಕದ ಅಗ್ರ ಎಂಟು ತಂಡಗಳು ನಿರ್ಧರಿಸುತ್ತಿದ್ದವು, ಆತಿಥೇಯ ದೇಶ ಮತ್ತು ಮೂರು ಅರ್ಹತಾ ತಂಡಗಳು ಪಂದ್ಯಾವಳಿಯಲ್ಲಿ ಅವರೊಂದಿಗೆ ಸೇರುತ್ತವೆ. 2016ರಿಂದ, ಐಸಿಸಿ ಮಹಿಳಾ ಟಿ20 ತಂಡದ ಶ್ರೇಯಾಂಕದ ಅಗ್ರ ಎಂಟು ತಂಡಗಳು ಏಳು ಸ್ಥಾನಗಳನ್ನು ನಿರ್ಧರಿಸುತ್ತವೆ, ಆತಿಥೇಯ ದೇಶ ಮತ್ತು ಎರಡು ತಂಡಗಳು ಅರ್ಹತಾ ಸುತ್ತಿನ ಮೂಲಕ ಕೂಡಿಕೊಳ್ಳುತ್ತವೆ.

ಈ ಬಾರಿ ಹೆಚ್ಚಿನ ತಂಡಗಳು: ಈ ಬಾರಿಯ ಟೂರ್ನಿ ಇಂಗ್ಲೆಂಡ್, ವೇಲ್ಸ್‌ನಲ್ಲಿ ನಡೆಯು ತ್ತಿದೆ. ವಿಶೇಷವೆಂದರೆ ಸಾಮಾನ್ಯವಾಗಿ 10 ತಂಡಗಳು ಮಾತ್ರ ಈ ಪಂದ್ಯಾವಳಿ ಭಾಗವ ಹಿಸಿದರೆ ಈ ಬಾರಿ 10ರ ಬದಲು 12 ತಂಡ ಭಾಗವಹಿಸುತ್ತಿವೆ. ಇದು ಟೂರ್ನಿಯ ಅತಿ ದೊಡ್ಡ ಆವೃತ್ತಿಯಾಗಿದೆ. ಬಹುಮಾನ ಮೊತ್ತವೂ ದಾಖಲೆಯ 8.8 ಮಿಲಿಯನ್ ಡಾಲರ್ ಆಗಿದೆ.





ವಿಶ್ವಕಪ್ ಮಾಹಿತಿ

ICC WOMEN'S T20 WORLD CUP ENGLAND & WALES 2026

ಒಟ್ಟು ಪಂದ್ಯ	ಒಟ್ಟು ತಂಡಗಳು
33	12

ಗುಂಪುಗಳು

ಎ: ಆಸ್ಟ್ರೇಲಿಯಾ, ಭಾರತ, ಬಾಂಗ್ಲಾದೇಶ, ನೆದರ್ಲೆಂಡ್ಸ್, ಪಾಕಿಸ್ತಾನ, ದಕ್ಷಿಣ ಆಫ್ರಿಕಾ

ಬಿ: ಇಂಗ್ಲೆಂಡ್, ಐರ್ಲೆಂಡ್, ನ್ಯೂಜಿಲೆಂಡ್, ಸ್ಕಾಟ್ಲೆಂಡ್, ಶ್ರೀಲಂಕಾ, ವೆಸ್ಟ್ ಇಂಡೀಸ್

ಮಾದರಿ:
- ರೌಂಡ್ ರಾಬಿನ್, ನಂತರ ನಾಕೌಟ್ಸ್

ಹಾಲಿ ಚಾಂಪಿಯನ್ಸ್
- ನ್ಯೂಜಿಲೆಂಡ್

ಅತ್ಯಂತ ಯಶಸ್ವಿ ತಂಡ
- ಆಸ್ಟ್ರೇಲಿಯಾ

ಪಂದ್ಯಾವಳಿಯ ಆರಂಭ
- 12 ಜೂನ್

ಫೈನಲ್: 5 ಜುಲೈ

ಪ್ರಮುಖ ದಾಖಲೆಗಳು
- ಅತ್ಯಧಿಕ ಪ್ರಶಸ್ತಿಗಳು: ಆಸ್ಟ್ರೇಲಿಯಾ (6)
- ಅತಿ ಹೆಚ್ಚು ರನ್: ಸೂಜಿ ಬೇಟ್ಸ್ (1216+ ರನ್)
- ಅತಿ ಹೆಚ್ಚು ವಿಕೆಟ್: ಮೇಗನ್ ಶುಟ್ (48+ ವಿಕೆಟ್)

ಟಿ20 ವಿಶ್ವಕಪ್‌ಗಿದೆ ಅದ್ಭುತ ಇತಿಹಾಸ

1. ಮೊದಲ ಚಾಂಪಿಯನ್ ಇಂಗ್ಲೆಂಡ್ (2009)
ಲಾರ್ಡ್ಸ್ ಮೈದಾನದಲ್ಲಿ ನಡೆದ ಮೊದಲ ಮಹಿಳಾ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಇಂಗ್ಲೆಂಡ್ ನ್ಯೂಜಿಲೆಂಡ್ ತಂಡವನ್ನು ಸೋಲಿಸಿ ಇತಿಹಾಸ ನಿರ್ಮಿಸಿತು.

2. ಟಿ20ಯಲ್ಲೂ ಆಸ್ಟ್ರೇಲಿಯಾ ಪ್ರಭುತ್ವ
2010ರಿಂದ 2014ರವರೆಗೆ ಸತತ ಮೂರು ಬಾರಿ ಹಾಗೂ ನಂತರ 2018, 2020 ಮತ್ತು 2023ರಲ್ಲಿ ಪ್ರಶಸ್ತಿ ಗೆದ್ದು ಮಹಿಳಾ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾ ಬೆಸ್ಟ್ ತಂಡವಾಗಿದ್ದಲ್ಲದೆ ಪ್ರತಿಷ್ಠಿತ ಮಾದರಿಯಲ್ಲಿ ತನ್ನ ಪ್ರಭುತ್ವ ನಿರ್ಮಿಸಿತು.

3. ವೆಸ್ಟ್ ಇಂಡೀಸ್‌ನ ಐತಿಹಾಸಿಕ ಗೆಲುವು
2016ರಲ್ಲಿ ಕೋಲ್ಕತ್ತಾದಲ್ಲಿ ನಡೆದ ಫೈನಲ್‌ನಲ್ಲಿ ಆಸ್ಟ್ರೇಲಿಯಾವನ್ನು ಸೋಲಿಸಿ ಮೊದಲ ಬಾರಿಗೆ ಚಾಂಪಿಯನ್ ಆಯಿತು.

4. 2020ರಲ್ಲಿ ಭಾರತದ ಕನಸು ಭಗ್ನ
2020ರ ಫೈನಲ್‌ನಲ್ಲಿ 86,000ಕ್ಕೂ ಹೆಚ್ಚು ಪ್ರೇಕ್ಷಕರ ಎದುರು ಭಾರತ ಆಸ್ಟ್ರೇಲಿಯಾ ವಿರುದ್ಧ ಸೋತು ಪ್ರಶಸ್ತಿ ಕಳೆದುಕೊಂಡಿತು. ಇದು ಮಹಿಳಾ ಕ್ರಿಕೆಟ್‌ನ ಅತಿ ದೊಡ್ಡ ಪ್ರೇಕ್ಷಕ ದಾಖಲೆಯೊಂದಾಗಿದೆ.

5. ನ್ಯೂಜಿಲೆಂಡ್‌ನ ಚೊಚ್ಚಲ ಕಿರೀಟ
2024ರಲ್ಲಿ ದಕ್ಷಿಣ ಆಫ್ರಿಕಾವನ್ನು ಮಣಿಸಿ ನ್ಯೂಜಿಲೆಂಡ್ ಮೊದಲ ಬಾರಿಗೆ ಮಹಿಳಾ ಟಿ20 ವಿಶ್ವಕಪ್ ಗೆದ್ದಿತು.



ವಿಶ್ವಕಪ್ ಮೈದಾನಗಳ ಯಶಸ್ಸಿನ ಹಿಂದೆ ಅಡಗಿರುವ ಮಹಾ ವಿಜ್ಞಾನ

ಮೈದಾನದ ಹುಲ್ಲಿನ ಹಿಂದಿದೆ ರೋಚಕ ಕಹಾನಿ

ಫಿಫಾ ವಿಶ್ವಕಪ್ ನಡೆಯ ಬೇಕಾದರೆ ಸಾವಿರಾರು ಆಟಗಾರರು ಮೈದಾನದಲ್ಲಿ ಮಿಂಚುತ್ತಾರೆ. ಲಕ್ಷಾಂತರ ಅಭಿಮಾನಿಗಳು ಕ್ರೀಡಾಂಗಣದ ರಂಗೇರಿಸುತ್ತಾರೆ. ಕೋಟ್ಯಂತರ ಅಭಿಮಾನಿಗಳ ವೀಕ್ಷಣೆ, ನಿರ್ಣಾಯಕರ ನಿರ್ಧಾರ, ಗ್ರೌಂಡ್‌ಸ್ಟಾಫ್‌ಗಳ ಶ್ರಮ ಮತ್ತು ಆಯೋಜಕರ ಸಾಹಸ ಸೇರಿದಾಗ ಮಾತ್ರವೇ ಫಿಫಾ ವಿಶ್ವಕಪ್ ಅಂಥ ದೊಡ್ಡ ಕೂಟಗಳು ಯಶಸ್ವಿಯಾಗುತ್ತವೆ. ಅಂಥದ್ದೇ ಮತ್ತೊಂದು ತಂಡದ ಬಗ್ಗೆ ಕೇಳಿದರೆ ಹುಬ್ಬೇರುವುದು ಗ್ಯಾರಂಟಿ. ಫಿಫಾ ವಿಶ್ವಕಪ್‌ನಲ್ಲಿ ಅಭಿಮಾನಿಗಳ ಕಣ್ಣು ಸಾಮಾನ್ಯವಾಗಿ ಗೋಲುಗಳು, ಸ್ಟಾರ್ ಆಟಗಾರರು ಮತ್ತು ರೋಚಕ ಪಂದ್ಯಗಳ ಮೇಲಿರುತ್ತದೆ. ಆದರೆ ಈ ಎಲ್ಲದರ ಹಿಂದೆ ಮೌನವಾಗಿ ಕೆಲಸ ಮಾಡಿರುವ ಮತ್ತೊಂದು ತಂಡ ಇದೆ ಪಿಚ್ (ಹುಲ್ಲಿನ ಮೈದಾನ) ತಜ್ಞರು. ಅವರ ಯಶಸ್ಸು ಎಂದರೆ ಅಭಿಮಾನಿಗಳು ಪಿಚ್‌ನ್ನು ಗಮನಿಸದೇ ಪಂದ್ಯವನ್ನು ಆನಂದಿಸುವುದು. ಯಾಕೆಂದರೆ ಪಿಚ್ ಬಗ್ಗೆ ಯಾರೂ ಮಾತನಾಡದಿದ್ದರೆ ಅದು ಯಶಸ್ಸು!

ಡಲ್ಲಾಸ್‌ನಲ್ಲಿ ಗುಲಾಬಿ ಬೆಳಕಿನ ಅದ್ಭುತ!

ಡಲ್ಲಾಸ್‌ನ ಎಟಿಟಿ ಸ್ಟೇಡಿಯಂನಲ್ಲಿ ಅತ್ಯಂತ ದೊಡ್ಡ ಸವಾಲು ಎದುರಾಯಿತು. ಇಲ್ಲಿ 9 ಪಂದ್ಯಗಳು ನಡೆಯಲಿದ್ದು, ಮೇಲ್ಛಾವಣಿ ಇರುವುದರಿಂದ ಸಾಕಷ್ಟು ಸೂರ್ಯನ ಬೆಳಕು ಮೈದಾನಕ್ಕೆ ಬರುವುದಿಲ್ಲ ಇದಕ್ಕೆ ಪರಿಹಾರವಾಗಿ ಇಂಜಿನಿಯರ್‌ಗಳು ಸ್ಟೇಡಿಯಂ ಮೇಲ್ಭಾಗದಲ್ಲಿ ಗುಲಾಬಿ ಗ್ರೋವ್ ಲೈಟ್ಸ್ ಅಳವಡಿಸಿದರು. ಈ ವಿಶೇಷ ದೀಪಗಳು ಹುಲ್ಲಿಗೆ ಅಗತ್ಯವಾದ ಬೆಳಕನ್ನು ಒದಗಿಸಿ ಅದನ್ನು ಹಸಿರಾಗಿಯೇ ಉಳಿಸುತ್ತವೆ.

1994ರಿಂದ 2026ರವರೆಗೆ

1994ರಲ್ಲಿ ಅಮೆರಿಕ ವಿಶ್ವಕಪ್ ಆಯೋಜಿಸಿದ್ದಾಗ ಇಂದಿನ ತಂತ್ರಜ್ಞಾನಗಳಿರಲಿಲ್ಲ. ಆ ಸಮಯದಲ್ಲಿ ಹೈಬ್ರಿಡ್ ಬಲವರ್ಧನೆ ಇರಲಿಲ್ಲ. ಗ್ರೋ ಲೈಟ್ಸ್ ಇರಲೇ ಇಲ್ಲ. ಹಾಗಾಗಿ ಹುಲ್ಲು 30 ದಿನಗಳೊಳಗೆ ಹಾಳಾಗುತ್ತಿತ್ತು. ಆ ಅನುಭವದಿಂದಲೇ ಹೊಸ ಸಂಶೋಧನೆ ಆರಂಭವಾಗಿ ಇಂದಿನ ಅತ್ಯಾಧುನಿಕ ಪಿಚ್ ವ್ಯವಸ್ಥೆ ರೂಪುಗೊಂಡಿದೆ. ಆದರೆ ಈಗ ಇದೆಲ್ಲಾ ಸಮಸ್ಯೆಗಳಿಗೂ ಉತ್ತರ ಸಿಕ್ಕಿದೆ.



ಸಂಶೋಧನೆಯಿಂದ ಏನೇನು ಲಾಭ?

- ಕಡಿಮೆ ನೀರಿನಲ್ಲಿ ಹುಲ್ಲು ಬೆಳೆಯುವ ವ್ಯವಸ್ಥೆ
- ನೀರನ್ನು ಮರುಬಳಕೆ ಮಾಡುವ ಹೈಡ್ರೋಪೋನಿಕ್ ಪಿಚ್‌ಗಳು
- ಹೆಚ್ಚು ಪರಿಸರ ಸ್ನೇಹಿ ಕ್ರೀಡಾಂಗಣಗಳನ್ನು ಒದಗಿಸುತ್ತದೆ.

ನಿಯಮ ಏನಿದೆ?

ಟೆನ್ನೆಸಿ ಮತ್ತು ಮಿಚಿಗನ್ ಸ್ಟೇಟ್ ಯೂನಿವರ್ಸಿಟಿ ವಿಜ್ಞಾನಿಗಳು ಕಳೆದ ಎಂಟು ವರ್ಷಗಳಿಂದ ವಿಶ್ವಕಪ್‌ಗೆ ಸೂಕ್ತವಾದ ಹೈಬ್ರಿಡ್ ಹುಲ್ಲಿನ ತಂತ್ರಜ್ಞಾನ ಅಭಿವೃದ್ಧಿಪಡಿಸಿದ್ದಾರೆ. ಫಿಫಾ ನಿಯಮದಂತೆ ಎಲ್ಲ ಮೈದಾನಗಳೂ ಬಹುತೇಕ ನೈಸರ್ಗಿಕ ಹುಲ್ಲಿನಿಂದಲೇ ಇರಬೇಕು ಹಾಗೂ ಎಲ್ಲೆಡೆ ಆಟದ ಗುಣಮಟ್ಟ ಒಂದೇ ರೀತಿಯಿರಬೇಕು. ಈ ಬಾರಿಯ ವಿಶ್ವಕಪ್ 16 ಕ್ರೀಡಾಂಗಣಗಳಲ್ಲಿ ನಡೆಯಲಿದೆ. 48 ತಂಡಗಳು ಸ್ಪರ್ಧಿಸಲಿವೆ. 104 ಪಂದ್ಯಗಳು ನಡೆಯಲಿವೆ. ಈ 16 ಮೈದಾನಗಳಲ್ಲಿ 8 ಮೈದಾನಗಳು ಕೃತಕ ಹುಲ್ಲು ಹೊಂದಿದ್ದವು. ಮುಖ್ಯವಾಗಿ ಲ್ಯೂಮನ್ ಫೀಲ್ಡ್ (ಸಿಯಾಟಲ್), ಸೋಫಿ ಸ್ಟೇಡಿಯಂ (ಲಾಸ್ ಏಂಜೆಲಿಸ್), ಎಟಿಟಿ ಸ್ಟೇಡಿಯಂ (ಡಲ್ಲಾಸ್) ಕ್ರೀಡಾಂಗಣಗಳು ಸಂಪೂರ್ಣ ಕೃತಕ ಹುಲ್ಲನ್ನೇ ಹೊಂದಿದ್ದವು.

ಕಾರ್ಯಾಚರಣೆ ಹೇಗಿತ್ತು?

ಡ್ರೈನೇಜ್ ವ್ಯವಸ್ಥೆ: ಸಿಯಾಟಲ್‌ನ ಲ್ಯೂಮನ್ ಫೀಲ್ಡ್‌ನಲ್ಲಿ ಮೊದಲು ಡ್ರೈನೇಜ್ ವ್ಯವಸ್ಥೆ ಅಳವಡಿಸಿ, ಅದರ ಮೇಲೆ 10 ಇಂಚುಗಳಷ್ಟು ಮರಳು ಹಾಕಿ, ನಂತರ ವಿಶೇಷ ಹುಲ್ಲನ್ನು ಹಾಸಿ ಕೃತಕ ನಾರುಗಳಿಂದ ಬಲಪಡಿಸಲಾಯಿತು.

ಎರಡು ವಿಧದ ಹುಲ್ಲು

ಮೆಕ್ಸಿಕೋದ ಮಾಂಟೆರೇಯ್‌ನಲ್ಲಿ ಉಷ್ಣಾಂಶ ಹೆಚ್ಚಿದ್ದರೆ, ಕೆನಡಾದ ವ್ಯಾಂಕೂವರ್‌ನಲ್ಲಿ ತಂಪಾದ ವಾತಾವರಣವಿದೆ. ಆದ್ದರಿಂದ ತಜ್ಞರು ಎರಡು ವಿಧದ ಹುಲ್ಲು ಬಳಸಿದ್ದಾರೆ:

1 ಬೆಚ್ಚಗಿನ ಪ್ರದೇಶಗಳಿಗೆ
- ಬರ್ಮುಡಾ ಗ್ರಾಸ್

2 ತಂಪಾದ ಕ್ರೀಡಾಂಗಣಗಳಿಗೆ
- ಪೆರೆನ್ನಿಯಲ್ ರೈ ಹುಲ್ಲು
- ಕೆಂಟುಕಿ ಬ್ಲೂಗ್ರಾಸ್ ಮಿಶ್ರಣ

– ಈ ಹುಲ್ಲುಗಳನ್ನು ಮೂರು ಆತಿಥೇಯ ರಾಷ್ಟ್ರಗಳ 10 ವಿಶೇಷ ಟರ್ಫ್ ಫಾರ್ಮ್‌ಗಳಲ್ಲಿ ಬೆಳೆಸಲಾಗಿದೆ.

ಟೆಸ್ಟ್ ಬ್ಯಾಟಿಂಗ್ ಶ್ರೇಯಾಂಕ: ಶುಭಮನ್ ಗಿಲ್‌ಗೆ 8ನೇ ಸ್ಥಾನ

ದುಬೈ: ಭಾರತ ತಂಡದ ನಾಯಕ ಶುಭಮನ್ ಗಿಲ್ ಮತ್ತು ಬ್ಯಾಟರ್ ಯಶಸ್ವಿ ಜೈಸ್ವಾಲ್ ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆಯ ಟೆಸ್ಟ್ ಶ್ರೇಯಾಂಕದಲ್ಲಿ ಅಗ್ರ 10ರಲ್ಲಿ ಕಾಣಿಸಿಕೊಂಡಿದ್ದಾರೆ.

ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್ ಪಂದ್ಯದಲ್ಲಿ ಭಾರತ ಗೆಲುವು ಸಾಧಿಸಿದೆ. ಈ ನಡುವೆ ಅದೇ ಪಂದ್ಯದಲ್ಲಿ ಶತಕ ಬಾರಿಸಿ ಮಿಂಚಿರುವ ಗಿಲ್ 2 ಸ್ಥಾನ ಜಿಗಿತ ಕಂಡಿದ್ದಾರೆ. ಜೈಸ್ವಾಲ್ ಒಂದು ಸ್ಥಾನ ಇಳಿದಿದ್ದಾರೆ. ಬುಧವಾರದಂದು ಪ್ರಕಟಗೊಂಡಿರುವ ಪರಿಷ್ಕೃತ ಪಟ್ಟಿಯಲ್ಲಿ ಹಲವು ಬದಲಾವಣೆಗಳಾಗಿವೆ. ಇಂಗ್ಲೆಂಡಿನ ಜೋ ರೂಟ್ ಅವರನ್ನು ಹಿಂದಿಕ್ಕಿರುವ ಅದೇ ದೇಶದ ಹ್ಯಾರಿ ಬ್ರೂಕ್ ಮೊದಲ ಸ್ಥಾನಕ್ಕೇರಿದ್ದಾರೆ. ಎರಡನೇ ಸ್ಥಾನವನ್ನು ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಪಡೆದರೆ, ಜೋ ರೂಟ್ ಮೂರನೇ ಸ್ಥಾನಕ್ಕೆ ಜಾರಿದ್ದಾರೆ. ನಾಲ್ಕನೇ ಸ್ಥಾನದಲ್ಲಿ ಆಸ್ಟ್ರೇಲಿಯಾದ ಸ್ಟೀವ್ ಸ್ಮಿತ್, ಬಡ್ತಿ ಕಂಡಿರುವ ಶ್ರೀಲಂಕಾದ ಕಮಿಂದು ಮೆಂಡಿಸ್ ಐದನೇ ಸ್ಥಾನಕ್ಕೇರಿದ್ದಾರೆ. ಒಟ್ಟು 743 ರೇಟಿಂಗ್ ಅಂಕಗಳನ್ನು ಹೊಂದಿರುವ ಶುಭಮನ್ ಗಿಲ್ 8ನೇ ಸ್ಥಾನದಲ್ಲಿದ್ದರೆ, 733 ಅಂಕ ಗಳಿಸಿರುವ ಜೈಸ್ವಾಲ್ 9ನೇ ಸ್ಥಾನದಲ್ಲಿದ್ದಾರೆ. ವಿಕೆಟ್ ಕೀಪರ್–ಬ್ಯಾಟರ್ ರಿಷಭ್ ಪಂತ್ ಜಿಗಿತ ಕಂಡಿದ್ದು, 12ನೇ ಸ್ಥಾನಕ್ಕೇರಿದ್ದಾರೆ.



ಬೂಮ್ರಾ ದರ್ಬಾರ್: ಬೌಲಿಂಗ್ ವಿಭಾಗದಲ್ಲಿ ಜಸ್‌ಪ್ರೀತ್ ಬೂಮ್ರಾ ಅಗ್ರಸ್ಥಾನದಲ್ಲೇ ಇದ್ದಾರೆ. 870 ಅಂಕಗಳನ್ನು ಹೊಂದಿರುವ ಬೂಮ್ರಾ ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ ಮೇಲಿದ್ದಾರೆ. ದ. ಆಫ್ರಿಕಾದ ಮಾರ್ಕೊ ಯಾನ್ಸನ್ ಬಡ್ತಿ ಪಡೆದು ನಾಲ್ಕನೇ ಸ್ಥಾನಕ್ಕೇರಿದರೆ, ಭಾರತದ ಕುಲ್ದೀಪ್ ಯಾದವ್ 14ನೇ ಸ್ಥಾನಕ್ಕೇರಿದರೆ, ಆಡದ ರವೀಂದ್ರ ಜಡೇಜಾ ಮೂರು ಸ್ಥಾನದ ಕುಸಿತದೊಂದಿಗೆ 17ಕ್ಕಿಳಿದಿದ್ದಾರೆ.

ಮೆರಿಟಸ್ ಕಪ್ ರೇಸಿಂಗ್: ಜಿದಾನ್ ಅನೀಸ್ ರನ್ನರ್‌ಅಪ್

ಕೊಯಮತ್ತೂರು: ಹತ್ತು ವರ್ಷದ ಆರವ್ ಸುರೇಕಾ (ರಾಯೋ ರೇಸಿಂಗ್) ರಾಷ್ಟ್ರೀಯ ರೇಸಿಂಗ್ ವೇದಿಕೆಯಲ್ಲಿ ತಮ್ಮ ಶಕ್ತಿಯನ್ನು ಪ್ರದರ್ಶಿಸಿದ್ದು, ಕೊಯಮತ್ತೂರಿನ ಕೋಸ್ಟ್ ಕಾರ್ಟಿಂಗ್ ಸರ್ಕ್ಯೂಟ್‌ನಲ್ಲಿ ಮೆಕೊ ಮೆರಿಟಸ್ ಕಪ್‌ನ 'ಮೈಕ್ರೋ ಮ್ಯಾಕ್ಸ್' ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಮುಂಬೈನ ಈ ಬಾಲಕ ಕೇವಲ 2 ಅಂಕಗಳ ಅಲ್ಪ ಮುನ್ನಡೆಯೊಂದಿಗೆ ಅಂತಿಮ ದಿನಕ್ಕೆ ಪ್ರವೇಶಿಸಿದ್ದರು. ಅಂತಿಮವಾಗಿ ಅವರು ಎರಡನೇ ಮತ್ತು ಐದನೇ ಸ್ಥಾನಗಳನ್ನು ಪಡೆದು, ಒಟ್ಟು 78 ಅಂಕಗಳೊಂದಿಗೆ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಬೆಂಗಳೂರಿನ ಜಿದಾನ್ ಅನೀಸ್ (ಪೆರೆಗ್ರಿನ್ ರೇಸಿಂಗ್; 72 ಅಂಕಗಳು) ಮತ್ತು ಕೊಲ್ಹಾಪುರದ ಆಯಾನ್ಶ್ ಪಾಟೀಲ್ (ಎಮ್ ಸ್ಪೋರ್ಟ್; 72 ಅಂಕಗಳು) ಅವರನ್ನು ಹಿಂದಿಕ್ಕಿ ಆರವ್ ಈ ಸಾಧನೆ ಮಾಡಿದರು.

ಇದಕ್ಕೂ ಮುನ್ನ ನಡೆದ ಸುತ್ತುಗಳಲ್ಲಿ ಅವರು ಒಮ್ಮೆ ಪ್ರಥಮ ಹಾಗೂ ಒಮ್ಮೆ ದ್ವಿತೀಯ ಸ್ಥಾನ ಗಳಿಸುವ ಮೂಲಕ ಸ್ಪಷ್ಟ ವಿಜೇತರಾಗಿ ಹೊರಹೊಮ್ಮಿದ್ದರು. ಈ ವಯೋಮಿತಿಯಲ್ಲಿ ದೇಶದ ಅತ್ಯುತ್ತಮ ರೇಸರ್‌ಗಳ ವಿರುದ್ಧ ಸ್ಪರ್ಧಿಸಿದ್ದ ಆರವ್, ತಮ್ಮ ಮುನ್ನಡೆಯನ್ನು ಕಾಯ್ದುಕೊಳ್ಳುವಲ್ಲಿ ಅದ್ಭುತ ಧೈರ್ಯವನ್ನು ಪ್ರದರ್ಶಿಸಿದರು.

ಆಸ್ಟ್ರೇಲಿಯನ್ ಓಪನ್ | ಭಾರತೀಯರ ಮಿಂಚಿನಾಟ

ಪ್ರಿ–ಕ್ವಾರ್ಟರ್‌ಗೆ ಸಿಂಧು, ತನ್ವಿ, ಮಾಳ್ವಿಕಾ

ಸಿಡ್ನಿ(ಆಸ್ಟ್ರೇಲಿಯಾ): ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತೀಯರ ಅತ್ಯುತ್ತಮ ಪ್ರದರ್ಶನ ಮುಂದುವರಿದಿದೆ. ಅವಳಿ ಪದಕ ವಿಜೇತೆ ಪಿ. ವಿ. ಸಿಂಧು ಗೆಲುವಿನ ಆರಂಭ ಕೊಟ್ಟರೆ, ಉದಯೋನ್ಮುಖ ಆಟಗಾರ್ತಿ ತನ್ವಿ ಶರ್ಮ ಗೆಲುವಿನ ನಾಗಾಲೋಟ ಮುಂದುವರಿಸಿದರು. ಮಾಳ್ವಿಕಾ ಬನ್ಸೋಡ್, ಇಶಾರಾಣಿ ಮತ್ತು ತನ್ಯಾ ಹೇಮಂತ್ ಕೂಡ ಭರ್ಜರಿ ಪ್ರದರ್ಶನದೊಂದಿಗೆ ಪ್ರಿಕ್ವಾರ್ಟರ್‌ಫೈನಲ್‌ಗೇರಿದ ನಂತರ ಆಸ್ಟ್ರೇಲಿಯನ್ ಓಪನ್‌ನಲ್ಲಿ ಭಾರತೀಯರೇ ಪಾರುಪತ್ಯ ಸಾಧಿಸಿದ್ದಾರೆ.

ಪೇರುನ ಐನಸ್ ಲೂಸಿಯಾ ಅವರನ್ನು ಎದುರಿಸಿದ್ದ ಸಿಂಧು 21–13, 21–11ರಿಂದ ಗೆಲುವು ಸಾಧಿಸಿದರು. ಮೊದಲಿನಿಂದಲೂ ಪಂದ್ಯದ ಮೇಲೆ ಹಿಡಿತ ಸಾಧಿಸಿದ ಸಿಂಧು ಅನುಭವ ಪ್ರದರ್ಶಿಸಿದರು. ಪಂದ್ಯ ಕೇವಲ 32 ನಿಮಿಷಗಳಲ್ಲಿ ಮುಕ್ತಾಯಗೊಂಡಿತು. ಮತ್ತೊಂದು ಪಂದ್ಯದಲ್ಲಿ ತನ್ವಿ ಶರ್ಮ ಪಂದ್ಯಾವಳಿಯ ಐದನೇ ಸೀಡ್‌ನ ಚಿಯು ಪಿನ್ ಅವರನ್ನು ಎದುರಿಸಿದ್ದರು. 45 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಪ್ರಾಬಲ್ಯ ಸಾಧಿಸಿದ 17 ವರ್ಷದ ತನ್ವಿ ಶರ್ಮ 21–12, 22–20ರಿಂದ ಗೆಲುವು ಸಾಧಿಸಿದರು. ಮತ್ತೊಂದು ಪಂದ್ಯದಲ್ಲಿ ಮಾಳ್ವಿಕಾ ಥೈಲ್ಯಾಂಡ್‌ನ ಟೋನ್ರಗ್ ಅವರನ್ನು 15–21, 21–7, 21–13ರಿಂದ ಗೆಲುವು ಸಾಧಿಸಿದರು. ಮುಂದಿನ ಸುತ್ತಿನ ಪಂದ್ಯದಲ್ಲಿ ಮಾಳ್ವಿಕಾ ಮತ್ತು ತನ್ವಿ ಎದುರಾಗಲಿದ್ದಾರೆ. ಭಾರತೀಯರ ಪ್ರಾಬಲ್ಯದಲ್ಲಿ ತನ್ಯಾ ಕೂಡ ಸೇರಿಕೊಂಡರು. ಅಮೆರಿಕದ ಇಶಿಕಾ ಜೈಸ್ವಾಲ್ ಅವರನ್ನು ಎದುರಿಸಿದ ಅವರು, 21–17, 21–18ರಿಂದ ಗೆಲುವು ಸಾಧಿಸಿದರು.




ಇನ್ನು ಮಿಶ್ರ ವಿಭಾಗದಲ್ಲಿ ಭಾರತೀಯ ಜೋಡಿಯಾದ ಧ್ರುವ್ ರಾವತ್ ಮತ್ತು ಮನೀಶಾ ಜೋಡಿ, ಆಸ್ಟ್ರೇಲಿಯಾದ ಲಿಮ್ ಜಯ್ದೆನ್ ಮತ್ತು ವಿಕ್ಟೋರಿಯಾ ವಿರುದ್ಧ 21–13, 21–14ರಿಂದ ಭರ್ಜರಿ ಗೆಲುವು ಸಾಧಿಸಿದರು.

ಪುರುಷರ ವಿಭಾಗದಲ್ಲಿ ನಿರಾಸೆ: ಮಹಿಳೆಯರ ಪ್ರಾಬಲ್ಯದ ನಡುವೆಯೇ ಅತ್ತ ಪುರುಷರ ವಿಭಾಗದಲ್ಲಿ ಭಾರತಕ್ಕೆ ಭಾರೀ ಹಿನ್ನಡೆಯಾಯಿತು. ಹಿರಿಯ ಆಟಗಾರರಾದ ಕಿರಣ್ ಜಾರ್ಜ್ ಉತ್ತಮ ಪ್ರದರ್ಶನ ನೀಡಿದ್ದಾದರೂ ಮಲೇಷ್ಯಾದ ಜಸ್ಟಿನ್ 19–21, 21–14, 15–21ರಿಂದ ಸೋತರು. ದಯಾನಂದ ಚೀನಾದ ಹು ಜಿಯಾನ್ ವಿರುದ್ಧ 8–21, 10–21ರಿಂದ ಸೋತರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ

6011



ಎಡದಿಂದ ಬಲಕ್ಕೆ
1.ರತಿ ಕಡೆಯಲ್ಲಿರುವ ವಿಶಿಷ್ಟ ಶೈಲಿ (3)
3.ಪಾಠವನ್ನು ಕಲಿಸುವಿಕೆ (4)
5.ದೊಡ್ಡ ರೀತಿಯ ಗೊಂದಲ–ಗದ್ದಲ (4)
7.ನನಗೆ ಈ ಹತ್ತು ತಲೆಯುಳ್ಳವ ಕಂಡ (4)
8. ನಸುವಿನ ನಡುವೆ ಭಯಗೊಳಿಸುವಿಕೆಯಿದೆ (4)
10.ಆರಾಮ ಖರ್ಚಿಯನ್ನು ಹೀಗೂ ಹೇಳಬಹುದು (4)
12.ದಿನಭವಿಷ್ಯದಲ್ಲಿ ಸಂಪತ್ತಿನ ಪ್ರವೇಶ (4)
14.ಭೂಮಿಯಲ್ಲಿ ಹುಟ್ಟುವ ಗಿಡಮರಗಳು (4)
16.ಸುಭಾಷಿತದ ಸಮಾನಪದ (4)
17.ಮನೆಯ ಮೇಲಿನ ಅಂತಸ್ತು (3)

ಮೇಲಿನಿಂದ ಕೆಳಕ್ಕೆ
1.ಸಂಕಲನವನ್ನು ಸೂಚಿಸುವ ಚಿಹ್ನೆ (2)
2.ಮಂಗ ಇಲ್ಲಿ ತಲೆಕೆಳಗಾಗಿದೆ (2)
4.ಗಾಳಿ–ವಾಯುದೇವತೆಯೀತ (3)
6.ಲಾಡುವಿನ ನಡುವೆ ಬರೆದ ವ್ಯವಸಾಯದ ಖರ್ಚು (3)
7.ತನ್ನ ಸ್ವಾಧೀನಕ್ಕೆ ಬರುವಂತೆ ಮಾಡಿಕೊಳ್ಳು (3)
9.ಸುಮದ ಮಧ್ಯದಲ್ಲಿ ಕುಳಿತ ಕೃಷ್ಣನ ಮಿತ್ರ (3)
11.ನೇರವಾದ ಸಾಲು–ಕ್ರಮ ಎಂಬರ್ಥದ ಶಬ್ದ (3)
13.ನಾಣಿಗೆ ಈ ನಡುವೆ ಕಂಡ ಹೆಣ್ಣು ಹಾವು (3)
15.ಖಾತೆಗೆ ಬಂದ ಸೇರಿದ ಎಂಬ ಉರ್ದು ಶಬ್ದ (2)
16.ನೆಲವನ್ನು ತೋಡುವಿಕೆ (2)

6010 ಉತ್ತರ

ಎಡದಿಂದ ಬಲಕ್ಕೆ:
3.ಪಿಡಿ 4.ವದನಾರವಿಂದ
7.ಖನಿಜ 8.ನರಳು
9.ದೊನ್ನೆ 10.ಕಾಂತಿ
12.ಗಡವ 14.ಯಮಳ
15.ಕುರುಡುನಂಬಿಕೆ
18.ಬೇಡು

ಮೇಲಿನಿಂದ ಕೆಳಕ್ಕೆ :
1.ತೇವ 2.ವಿಂಧ್ಯ
3.ಪಿತ್ತಜನಕಾಂಗ
5.ನಾಗರ 6.ದಖನಿ
8.ನನ್ನೆದೆಯಹಾಡು
11.ಬೆಳಕು 13.ನಂಜುಂಡ
16.ರುದ್ರ 17.ಕೆತ್ತು

ಕಿರುಸುದ್ದಿ

ಕುಂಬಳೆ ಪೊಲೀಸರ ಕಾರ್ಯಾಚರಣೆ: ಗಾಂಜಾ ಪತ್ತೆ

ಕುಂಬಳೆ: ಕುಂಬಳೆ ಪೊಲೀಸರು ಮಂಗಳವಾರ ಎರಡು ಕಡೆಗಳಲ್ಲಿ ನಡೆಸಿದ ಪ್ರತ್ಯೇಕ ಕಾರ್ಯಾಚರಣೆಯಲ್ಲಿ ಗಾಂಜಾ ಪತ್ತೆಹಚ್ಚಿದ್ದು, ಇದಕ್ಕೆ ಸಂಬಂಧಿಸಿ ಇಬ್ಬರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಆದರಂತೆ ಕೊಯಿಪ್ಪಾಡಿ ಬದ್ರಿಯಾನ ಗರದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ 10 ಗ್ರಾಂ ಗಾಂಜಾ ಪತ್ತೆಯಾಗಿದ್ದು, ಈ ನಿಟ್ಟಿನಲ್ಲಿ ಕೊಯಿಪ್ಪಾಡಿ ಬದ್ರಿಯಾನಗರದ ಅಫ್ಜಲ್ (29) ಎಂಬಾತನ ವಿರುದ್ಧ ಕೇಸು ದಾಖಲಿಸಲಾಗಿದೆ. ಪೆರುವಾಡ್‌ನಲ್ಲಿ ನಡೆಸಿದ ಇನ್ನೊಂದು ಕಾರ್ಯಾಚರಣೆಯಲ್ಲಿ 5 ಗ್ರಾಂ ಗಾಂಜಾ ಕೈವಶವಿರಿಸಿದ ಆರೋಪದಂತೆ ಕೊಯಿಪ್ಪಾಡಿ ಕುಂಟಂಗೇರಡ್ಕ ಹೌಸ್‌ನ ಮೊಹಮ್ಮದ್ ಕಾಮಿನ್ ಕೆ. (20) ಎಂಬಾತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಕಾರು ಅಪಘಾತ: ಚಾಲಕ ಮೃತ್ಯು

ಪುತ್ತೂರು: ಕೆದಿಲ ಗ್ರಾಮದ ಗಡಿಯಾರದಲ್ಲಿ ನಾಲ್ವರು ಪ್ರಯಾಣಿಸುತ್ತಿದ್ದ ಕಾರೊಂದು ಹೆದ್ದಾರಿ ವಿಭಾಜಕಕ್ಕೆ ಡಿಕ್ಕಿಯಾಗಿ ಗಂಭೀರ ಗಾಯಗೊಂಡಿದ್ದ, ಚಾಲಕ ಮೃತಪಟ್ಟು ಉಳಿದ ಮೂವರು ಗಾಯಗೊಂಡ ಘಟನೆ ಬುಧವಾರ ಸಂಭವಿಸಿದೆ. ಕಾರು ಚಾಲಕ ಸಕಲೇಶಪುರದ ಲಕ್ಷ್ಮೀಕಾಂತ್ (21) ಮೃತಪಟ್ಟವರು. ಉಳಿದ ಪ್ರಯಾಣಿಕರಾದ ದರ್ಶನ್, ರಂಜನ್, ಶೋಭಾ ಗಾಯಗೊಂಡು ಖಾಸಗಿ ಆಸ್ಪತ್ರೆಗೆ ದಾಖಲಿಸಲ್ಪಟ್ಟಿದ್ದಾರೆ. ಘಟನೆಯ ಕುರಿತು ಪುತ್ತೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾವೇರಿ ನದಿಯಲ್ಲಿ ಮುಳುಗಿ ಯುವಕರಿಬ್ಬರ ಕಣ್ಮರೆ

ಕುಶಾಲನಗರ: ಕಾವೇರಿ ನದಿಯಲ್ಲಿ ಮುಳುಗಿ ನಾಗಾಲ್ಯಾಂಡ್ ಮೂಲದ ಇಬ್ಬರು ಯುವಕರು ನಾಪತ್ತೆಯಾದ ಘಟನೆ ಕುಶಾಲನಗರ ರಸೂಲ್ ಲೇಔಟ್ ಬಳಿ ಬುಧವಾರ ಸಂಜೆ ನಡೆದಿದೆ. ನಾಗಾಲಾಂಡ್ ರಾಜ್ಯದ ಬಸೋಸೊ ಕುಂ ಚಂಗ್ (23) ಹಾಗೂ ಯಾಂಕಾಂಗ್ (27) ಎಂಬವರೇ ನಾಪತ್ತೆಯಾದವರು. ಕುಶಾಲನಗರದ ಹೊಟೇಲೊಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದ ಈ ಇಬ್ಬರು ಯುವಕರು ಹಾಗೂ ಓರ್ವ ಯುವತಿ ಕೆಲಸಕ್ಕೆ ರಜೆ ಮಾಡಿ ಸಂಜೆ ನದಿಯತ್ತ ತೆರಳಿದ್ದು, ನದಿ ದಡದಲ್ಲಿ ಪಾರ್ಟಿ ಮಾಡಿದ ಬಳಿಕ ಇಬ್ಬರು ಯುವಕರು ನದಿಗಿಳಿದಿದ್ದಾರೆ. ಈ ಸಂದರ್ಭ ಆಳವಾದ ಗುಂಡಿಯಲ್ಲಿ ಮುಳುಗಿದ್ದಾರೆ. ಸಂಜೆ 5.30ರ ಸುಮಾರಿಗೆ ಈ ದುರ್ಘಟನೆ ನಡೆದಿದ್ದು, ಕತ್ತಲಾದ ಹಿನ್ನಲೆಯಲ್ಲಿ ಪತ್ತೆ ಕಾರ್ಯಾಚರಣೆ ನಡೆಸಲು ಸಾಧ್ಯವಾಗಿಲ್ಲ.

ಕೆರೆಗೆ ಬಿದ್ದು ವೃದ್ಧ ಮೃತ್ಯು

ಪುತ್ತೂರು: ನಗರಸಭೆ ವ್ಯಾಪ್ತಿಯ ಸಿಂಗಾಣಿ ಎಂಬಲ್ಲಿ ವ್ಯಕ್ತಿಯೋರ್ವರು ತೋಟದ ಕೆರೆಗೆ ಬಿದ್ದ ಮೃತಪಟ್ಟ ಘಟನೆ ಜೂ. 9 ರಂದು ಸಂಭವಿಸಿದೆ. ಸಿಂಗಾಣಿ ನಿವಾಸಿ ವಲೇರಿಯನ್ ಡಿ'ಸೋಜ (62) ಮೃತಪಟ್ಟವರು. ಅವರು ಹುಲ್ಲು ತರಲೆಂದು ತೋಟಕ್ಕೆ ಹೋದವರು ಮನೆಗೆ ವಾಪಸಾಗದೆ ಇದ್ದುದರಿಂದ ಪುತ್ರ ಹುಡುಕಿಕೊಂಡು ಹೋದಾಗ ಕೆರೆಯ ಬಳಿ ಚಪ್ಪಲಿ, ಕತ್ತಿ ಕಂಡಿತ್ತು. ಸಂಶಯಗೊಂಡು ಅಗ್ನಿಶಾಮಕ ದಳದವರ ಸಹಾಯದಿಂದ ಕೆರೆಯಲ್ಲಿ ಹುಡುಕಾಡಿದಾಗ ವಲೇರಿಯನ್ ಅವರ ಮೃತ ದೇಹ ಪತ್ತೆಯಾಗಿದೆ. ಮೃತರ ಪುತ್ರ ವಿನಿಲ್ ಡಿ'ಸೋಜ ಅವರು ನೀಡಿದ ದೂರಿನಂತೆ ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತೆಂಗಿನ ಮರ ಮೈಮೇಲೆ ಬಿದ್ದು ದಾರುಣ ಸಾವು

ಕುಂಬಳೆ: ಸ್ನೇಹಿತರೊಂದಿಗೆ ಮಾತನಾಡುತ್ತಿದ್ದ ವೇಳೆ ತೆಂಗಿನಮರ ತುಂಡಾಗಿ ಮೈಮೇಲೆ ಬಿದ್ದು ಮಸೀದಿ ಅಧ್ಯಕ್ಷ ಮೃತಪಟ್ಟ ದಾರುಣ ಘಟನೆ ಸಂಭವಿಸಿದೆ. ಪೆರುವಾಡ್ ಜುಮಾ ಮಸೀದಿ ಸಮಿತಿ ಅಧ್ಯಕ್ಷ, ಮೀನು ಕಾರ್ಮಿಕರಾಗಿದ್ದ ಪೆರುವಾಡ್ ಅಬ್ದುಲ್ಲ (65) ಸಾವಿಗೀಡಾದ ದುರ್ದೈವಿ. ಬುಧವಾರ ಬೆಳಗ್ಗೆ ಪೆರುವಾಡ್ ಪಿ.ಎಸ್. ಮೈದಾನ ಬಳಿಯ ಕಡಪ್ಪುರದಲ್ಲಿ ಈ ದುರ್ಘಟನೆ ನಡೆದಿದೆ. ಅವರು ಸ್ನೇಹಿತರೊಂದಿಗೆ ಮಾತನಾಡುತ್ತಾ ಕುಳಿತ್ತಿದ್ದಾಗ ತೆಂಗಿನ ಮರ ಮುರಿದು ಮೈಮೇಲೆ ಬಿದ್ದಿದೆ. ಮೃತರು ಪತ್ನಿ, ಆರು ಮಂದಿ ಮಕ್ಕಳನ್ನು ಅಗಲಿದ್ದಾರೆ.

ವಿಷ ಸೇವಿಸಿ ಆತ್ಮಹತ್ಯೆ

ಉಪ್ಪಿನಂಗಡಿ : ಬಜತ್ತೂರು ಗ್ರಾಮದ ಪುಣಿಕೆದಡಿ ಮನೆ ನಿವಾಸಿ ವಸಂತ ಗೌಡ (48) ವಿಷ ಸೇವಿಸಿ ಆತ್ಮಹತ್ಯೆಗೈದ ಘಟನೆ ಬುಧವಾರ ಸಂಭವಿಸಿದೆ. ವಿಪರೀತ ಮದ್ಯ ಸೇವನೆಯ ಚಟವನ್ನು ಹೊಂದಿದ್ದ ಈತ ಜೂ. 4 ರಂದು ವಿಷ ಸೇವಿಸಿ ಅಸ್ವಸ್ಥರಾಗಿ ಮಂಗಳೂರಿನ ಆಸ್ಪತ್ರೆಗೆ ದಾಖಲಾಗಿದ್ದವರು ಚಿಕಿತ್ಸೆ ಫಲಕಾರಿಯಾಗದೆ ಬುಧವಾರದಂದು ಮೃತಪಟ್ಟರೆಂದು ತಿಳಿಸಲಾಗಿದೆ. ವಸಂತ ಗೌಡ ವಿವಾಹಿತನಾಗಿದ್ದು ಪತ್ನಿ ಹಾಗೂ ಓರ್ವ ಮಗನನ್ನು ಹೊಂದಿದ್ದ. ಮದ್ಯ ಸೇವಿಸಿ ಬಂದು ಪತ್ನಿಗೆ ಹಿಂಸೆ ನೀಡುತ್ತಿದ್ದ ಕಾರಣಕ್ಕೆ ಹತ್ತು ವರ್ಷದ ಹಿಂದೆಯೇ ಪತ್ನಿ ಮಗನನ್ನು ಕರೆದುಕೊಂಡು ತವರು ಮನೆಯನ್ನು ಸೇರಿದ್ದು, ಬಳಿಕ ಒಂಟಿಯಾಗಿ ಜೀವನ ನಡೆಸುತ್ತಿದ್ದರೆನ್ನಲಾಗಿದೆ.

ಮಂಜೇಶ್ವರ ರೈಲು ನಿಲ್ದಾಣ ಬಳಿ ನಡೆದ ದುರ್ಘಟನೆ

ರೈಲು ಡಿಕ್ಕಿ: ಇಬ್ಬರು ಮೃತ್ಯು

ಮಂಜೇಶ್ವರ: ರೈಲು ಡಿಕ್ಕಿ ಹೊಡೆದು ಕೂಲಿ ಕಾರ್ಮಿಕ ಮೃತಪಟ್ಟ ಘಟನೆ ಮಂಜೇಶ್ವರ ರೈಲು ನಿಲ್ದಾಣ ಬಳಿಯಲ್ಲಿ ನಡೆದಿದೆ. ಮೊಗ್ರಾಲ್ ಪುತ್ತೂರು ಕೋಟೆಕುನ್ನು ನಿವಾಸಿ, ಹೊಸಬೆಟ್ಟು ಸ್ಫೂರ್ತಿನಗರದ ಬಾಡಿಗೆ ಮನೆಯಲ್ಲಿ ವಾಸವಾಗಿರುವ ಉಮೇಶ್ (40) ಎಂಬವರು ಸಾವಿಗೀಡಾದ ವ್ಯಕ್ತಿ.

ಮಂಗಳವಾರ ಸಂಜೆ ಮಂಜೇಶ್ವರ ರೈಲು ನಿಲ್ದಾಣ ಬಳಿಯ ಹಳಿಯಲ್ಲಿ ರೈಲು ಡಿಕ್ಕಿ ಹೊಡೆದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. ಸ್ಥಳಕ್ಕೆ ಮಂಜೇಶ್ವರ ಪೊಲೀಸರು ತಲುಪಿ ಪರಿಶೀಲನೆ ನಡೆಸಿದರು. ಕಾಸರಗೋಡಿನಿಂದ ಮಂಗಳೂರು ಭಾಗಕ್ಕೆ ಸಂಚರಿಸುತ್ತಿದ್ದ ಗೂಡ್ಸ್ ರೈಲುಗಾಡಿ ಡಿಕ್ಕಿ ಹೊಡೆದಿರುವುದಾಗಿ ತಿಳಿದು ಬಂದಿದೆ.

ಕೂಲಿ ಕಾರ್ಮಿಕರಾದ ಅವರು ಸುಮಾರು 5 ವರ್ಷಗಳಿಂದ ಪತ್ನಿಯೊಂದಿಗೆ ಹೊಸಬೆಟ್ಟು ಸ್ಫೂರ್ತಿನಗರದ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಮೃತರು ಪತ್ನಿ ತಾರಾ, ಸಹೋದರ ಸಹೋದರಿಯರಾದ ಶಶಿಧರ, ಅನಿಲ್‌ಕುಮಾರ್, ಇಂದಿರಾ, ಗೀತಾ, ಜಯಶ್ರೀ, ಸುಜಾತ ಅವರನ್ನು ಅಗಲಿದ್ದಾರೆ. ಈ ದಂಪತಿಗೆ ಮಕ್ಕಳಿಲ್ಲ. ಮಂಜೇಶ್ವರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.




ಇನ್ನೊಂದು ಘಟನೆಯಲ್ಲಿ ಮಂಜೇಶ್ವರ ಕೀರ್ತೇಶ್ವರ ದೇವಸ್ಥಾನ ಸಮೀಪದ ಬಾಡಿಗೆ ಮನೆಯಲ್ಲಿ ವಾಸಿಸುವ ಮನೀಶ್ (18) ಸಾವಿಗೀಡಾದ ಘಟನೆ ನಡೆದಿದೆ. ಮಂಗಳವಾರ ರಾತ್ರಿ ಮಂಜೇಶ್ವರ ಪರಿಸರದ ರೈಲು ಹಳಿಯಲ್ಲಿ ಅವರ ಮೃತದೇಹ ಕಂಡುಬಂದಿದ್ದು, ರೈಲು ಡಿಕ್ಕಿ ಹೊಡೆದಿರಬಹುದೆಂದು ಅಂದಾಜಿಸಲಾಗಿದೆ. ಪಿಯುಸಿ ಶಿಕ್ಷಣ ಪೂರ್ತಿಗೊಳಿಸಿದ ಬಳಿಕ ಅವರು ಫ್ಯಾಬ್ರಿಕೇಶನ್ ಕೆಲಸ ನಿರ್ವಹಿಸುತ್ತಿದ್ದರು. ಕುಂಬಳೆ ಭಾಗದಲ್ಲಿ ಕೆಲಸ ಮುಗಿಸಿ ಮರಳುತ್ತಿದ್ದಾಗ ಮಂಗಳೂರಿನಿಂದ ಕಣ್ಣೂರು ಭಾಗಕ್ಕೆ ತೆರಳುತ್ತಿದ್ದ ಗೂಡ್ಸ್ ರೈಲು ಡಿಕ್ಕಿ ಹೊಡೆದಿರಬಹುದೆಂದು ಸಂಶಯಿಸಲಾಗಿದೆ. ಮಂಜೇಶ್ವರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತರು ತಂದೆ ದಾಮೋದರ, ತಾಯಿ ಲೀಲಾವತಿ ಅವರನ್ನು ಅಗಲಿದ್ದಾರೆ. ಗಂಟೆಗಳ ನಡುವೆ ಈ ಪ್ರಕರಣಗಳು ಸಂಭವಿಸಿದ್ದು, ನಾಡಿನಲ್ಲಿ ಶೋಕಸಾಗರ ಸೃಷ್ಟಿಸಿದೆ.

- ಮಂಜೇಶ್ವರ ರೈಲು ನಿಲ್ದಾಣ ಬಳಿಯ ಹಳಿಯಲ್ಲಿ ರೈಲು ಡಿಕ್ಕಿ ಹೊಡೆದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ.
- ಮಂಜೇಶ್ವರ ಕೀರ್ತೇಶ್ವರ ದೇವಸ್ಥಾನ ಸಮೀಪದ ಬಾಡಿಗೆ ಮನೆಯಲ್ಲಿ ವಾಸಿಸುವ ಮನೀಶ್ (18) ಸಾವಿಗೀಡಾದ ಘಟನೆ
- ಮಂಗಳೂರಿನಿಂದ ಕಣ್ಣೂರು ಭಾಗಕ್ಕೆ ತೆರಳುತ್ತಿದ್ದ ಗೂಡ್ಸ್ ರೈಲು ಡಿಕ್ಕಿ ಹೊಡೆದಿರಬಹುದೆಂದು ಸಂಶಯಿಸಲಾಗಿದೆ.

ಚಾರ್ಮಾಡಿ ಘಾಟಿಯ ರಸ್ತೆಯಲ್ಲಿ ಚಿರತೆ ಪ್ರತ್ಯಕ್ಷ

ಬೆಳ್ತಂಗಡಿ: ದಕ್ಷಿಣ ಕನ್ನಡ ಹಾಗೂ ಚಿಕ್ಕಮಗಳೂರನ್ನು ಸಂಪರ್ಕಿಸುವ ಚಾರ್ಮಾಡಿ ಘಾಟಿಯಲ್ಲಿ ರಸ್ತೆ ಬದಿಯಲ್ಲಿ ಚಿರತೆ ಪ್ರತ್ಯಕ್ಷವಾಗಿದ್ದು, ಮಳೆಗಾಲದ ಹಿನ್ನೆಲೆ ಮತ್ತು ಕಡಿಮೆಯಾದ ದೃಶ್ಯತೆಯಿಂದ ಪ್ರವಾಸಿಗರಿಗೆ ಹೆಚ್ಚಿನ ಅಪಾಯ ಸಾಧ್ಯತೆ ಇರುವ ಕುರಿತು ಆತಂಕ ವ್ಯಕ್ತವಾಗಿದೆ. ಪ್ರಯಾಣಿಕರು ಎಚ್ಚರಿಕೆ ವಹಿಸುವಂತೆ ಅರಣ್ಯ ಇಲಾಖೆ ಎಚ್ಚರಿಸಿದೆ.

ಮೂಡಿಗೆರೆ ಅರಣ್ಯ ವಲಯ ವ್ಯಾಪ್ತಿಗೆ ಒಳಪಡುವ ಘಾಟಿ ರಸ್ತೆಯ ತಡೆಗೋಡೆಯ ಸಮೀಪ ಚಿರತೆ ಕಾಣಿಸಿಕೊಂಡಿದೆ. ರಸ್ತೆಯ ಬದಿಯಲ್ಲಿಯೇ ಕೆಲಹೊತ್ತು ಇದ್ದ ಚಿರತೆ ಅರಣ್ಯದತ್ತ ಹೋಗಿದೆ. ಈ ಮಾರ್ಗದಲ್ಲಿ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತಿದ್ದು, ಮಳೆಗಾಲ ಆರಂಭವಾಗಿರುವುದರಿಂದ ಪ್ರವಾಸಿಗರ ಸಂಖ್ಯೆಯೂ ಹೆಚ್ಚಾಗಿದೆ.

ಮಳೆ ಹಾಗೂ ದಟ್ಟ ಮಂಜಿನಿಂದ ದೃಶ್ಯತೆ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ರಸ್ತೆ ಬದಿ ಅಥವಾ ಅರಣ್ಯ ಪ್ರದೇಶದ ಸಮೀಪ ಕಾಡುಪ್ರಾಣಿಗಳ ಚಲನೆ ತಕ್ಷಣ ಗಮನಕ್ಕೆ ಬಾರದಿರುವ ಸಾಧ್ಯತೆ ಇದೆ. ಇಂತಹ ಸಂದರ್ಭಗಳಲ್ಲಿ ಫೋಟೋ ಅಥವಾ ಸೆಲ್ಫಿ ಪಡೆಯಲು ವಾಹನದಿಂದ ಇಳಿಯುವ ಪ್ರವಾಸಿಗರು ಹೆಚ್ಚಿನ ಅಪಾಯಕ್ಕೆ ಒಳಗಾಗುವ




ಸಾಧ್ಯತೆ ಇರುವುದರಿಂದ ಎಚ್ಚರಿಕೆ ವಹಿಸುವಂತೆ ಅರಣ್ಯ ಇಲಾಖೆ ಸೂಚಿಸಿದೆ.

ಚಾರ್ಮಾಡಿ ಘಾಟಿ ಸಂಪೂರ್ಣ ಅರಣ್ಯ ವಲಯವಾಗಿರುವುದರಿಂದ ಕಾಡುಪ್ರಾಣಿಗಳ ಸಂಚಾರ ಸಹಜ. ಆದರೆ ಮಾನವ ಚಟುವಟಿಕೆ ಹೆಚ್ಚಿರುವ ರಸ್ತೆಯ ಸಮೀಪ ಅವು ಕಾಣಿಸಿಕೊಂಡಿರುವುದು ಗಮನಾರ್ಹವಾಗಿದೆ. ಹೀಗಾಗಿ ವಾಹನ ನಿಲ್ಲಿಸುವಾಗ ಸುರಕ್ಷಿತ ಸ್ಥಳ ಆಯ್ಕೆ ಮಾಡುವುದು, ಗುಂಪಾಗಿ ರಸ್ತೆ ಅಂಚಿಗೆ ತೆರಳುವುದು ಹಾಗೂ ಕಾಡುಪ್ರಾಣಿಗಳ ಹತ್ತಿರ ಹೋಗಲು ಯತ್ನಿಸುವುದನ್ನು ತಪ್ಪಿಸಬೇಕು ಎಂದು ಅಧಿಕಾರಿಗಳು ಮನವಿ ಮಾಡಿದ್ದಾರೆ.

ಕಡಲ್ಕೊರೆತ ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆ

ಚೇರಂಗೈ ಕಡಪ್ಪುರದ ಕುಟುಂಬಗಳಿಗೆ ಆತಂಕ



ಕಾಸರಗೋಡು: ಮಳೆ, ಗಾಳಿ ತೀವ್ರಗೊಳ್ಳುತ್ತಿದ್ದಂತೆಯೇ ಕಾಸರಗೋಡು ಜಿಲ್ಲೆಯ ಕರಾವಳಿ ಪ್ರದೇಶದ ನಿವಾಸಿಗಳು ಅಕ್ಷರಶಃ ಆತಂಕದಲ್ಲಿ ಬದುಕುವಂತಾಗಿದೆ. ಜಿಲ್ಲೆಯ ಸಮುದ್ರ ಕರಾವಳಿಯಲ್ಲಿ ಕಡಲ್ಕೊರೆತ ಸಂಭವಿಸುವ ಸಾಧ್ಯತೆಯಿದ್ದು, ಹಲವಾರು ಕುಟುಂಬಗಳು ಸಂಕಷ್ಟದಲ್ಲಿ ದಿನದೂಡುವಂತಾಗಿವೆ.

ಆದರಲ್ಲೂ ಚೇರಂಗೈ ಕಡಪ್ಪುರದಲ್ಲಿ ಕಡಲ್ಕೊರೆತ ತಲೆದೋರುವ ಲಕ್ಷಣಗಳು ಗೋಚರಿಸುತ್ತಿವೆ. ಈ ಕಡಪ್ಪುರದಲ್ಲಿ ದಶಕಗಳಿಂದ ಕಡಲ್ಕೊರೆತದ ಭೀತಿಯಲ್ಲಿ ಅನೇಕ ಕುಟುಂಬಗಳು ಜೀವನ ಸಾಗಿಸುತ್ತಿವೆ. ಚೇರಂಗೈಯಲ್ಲಿ ಜಿಯೋ ಬ್ಯಾಗ್ ಜೋಡಿಸುವ ಮೂಲಕ ಪ್ರತಿರೋಧ ಚಟುವಟಿಕೆಗಳನ್ನು ನಡೆಸಲಾದರೂ ಕಡಲಿನ ಆರ್ಭಟಕ್ಕೆ ಅವೆಲ್ಲವೂ ಆಹುತಿಗೀಡಾಗುತ್ತಿವೆ. ಮಳೆಗಾಲದಲ್ಲಿ ಪ್ರಬಲವಾಗಿ ತೆರೆಗಳು ಅಪ್ಪಳಿಸಿ ಮನೆಗಳ ಗೋಡೆಗಳು ಕುಸಿದು ಬೀಳುತ್ತಿವೆ.

ಕಿರು ನೀರಾವರಿ ಇಲಾಖೆಯು ಕಳೆದ ವರ್ಷ ಜಿಲ್ಲೆಯ ಕರಾವಳಿ ವಲಯದಲ್ಲಿ ಜಾರಿಗೊಳಿಸಬಹುದಾದ ಯೋಜನೆಗಳ ನಿರ್ದೇಶನಗಳನ್ನು ಕೇರಳ ಸರಕಾರಕ್ಕೆ ಸಲ್ಲಿಸಿತ್ತು. ಆದರೆ ಅದರಲ್ಲಿ ಯಾವುದೂ ಅನುಷ್ಠಾನಕ್ಕೆ ಬಂದಿಲ್ಲ. ಇದೇ ವೇಳೆ ಉದುಮ, ತೃಕ್ಕನ್ನಾಡು ಮೊದಲಾದ ಭಾಗಗಳಲ್ಲಿ ತಾತ್ಕಾಲಿಕ ವ್ಯವಸ್ಥೆ ಎಂಬ ನೆಲೆಯಲ್ಲಿ ಕಗ್ಗಲ್ಲುಗಳನ್ನು ತಂದುಹಾಕಿ ಭಿತ್ತಿ ನಿರ್ಮಿಸಲು ನಡೆಸಿದ ಪ್ರಯತ್ನಗಳು ಕೂಡಾ ಅರ್ಧದಲ್ಲೇ ಉಳಿದುಕೊಂಡಿದೆ. ಜಿಲ್ಲೆಯ ಸಮುದ್ರ ಕರಾವಳಿ ನಿವಾಸಿಗಳಿಗೆ ಸುಗಮವಾಗಿ ಜೀವಿಸುವಂತಾಗಲು ಜಿಲ್ಲಾಡಳಿತ ಮತ್ತು ಸರಕಾರವು ಶಾಶ್ವತ ಯೋಜನೆಗಳನ್ನು ರೂಪಿಸಬೇಕಾಗಿದೆ.

ಗೋವಧಾ ಕೇಂದ್ರ ಪತ್ತೆ ಪ್ರಕರಣ: ಆರೋಪಿಯ ಮನೆ, ಕೊಟ್ಟಿಗೆ ಬಂಟ್ವಾಳ ಪೊಲೀಸರಿಂದ ಜಪ್ತಿ

ಬಂಟ್ವಾಳ: ಅಕ್ರಮ ಗೋವಧಾ ಕೇಂದ್ರ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಜಿಪಮೂಡ ಗ್ರಾಮದ ಕೊಳಕೆ-ಪಂಜಾಜೆ ಎಂಬಲ್ಲಿ ಆರೋಪಿಗಳ ಮನೆ, ಕೊಟ್ಟಿಗೆ ಸೇರಿದಂತೆ ಕೃತ್ಯ ನಡೆದ ಸ್ಥಳವನ್ನು ಬಂಟ್ವಾಳ ನಗರ ಠಾಣಾ ಪೊಲೀಸರು ಜಪ್ತಿ ಮಾಡಿದ್ದಾರೆ.

ಕೃತ್ಯ ನಡೆದ ಸ್ಥಳವಾದ ಸಜಿಪಮೂಡ ಗ್ರಾಮದ ಕೊಳಕೆ ಪಂಜಾಜೆ ಎಂಬಲ್ಲಿ ಪ್ರಕರಣದ ಆರೋಪಿ ಮುಸ್ತಫಾ ಎಂಬಾತನ ಮನೆ ಹಾಗೂ ದನದ ಕೊಟ್ಟಿಗೆಗಳನ್ನು ಕಲಂ 8(1) 'ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ 2020' ರಂತೆ ಜಪ್ತಿ ಮಾಡಿರುವ ಪೊಲೀಸರು ಮುಂದಿನ ಕ್ರಮಕ್ಕಾಗಿ ಮಂಗಳೂರು ಉಪ ವಿಭಾಗೀಯ ದಂಡಾಧಿಕಾರಿಗಳಿಗೆ ವರದಿ ಸಲ್ಲಿಸಿದ್ದಾರೆ.

ವಾರದ ಹಿಂದೆ ಸಜಿಪಮೂಡ ಗ್ರಾಮದ ಪಂಜಾಜೆ-ಕೊಳಕೆ ಎಂಬಲ್ಲಿ ಮನೆಯೊಂದರ ಹಿಂಭಾಗದ ದನದ ಕೊಟ್ಟಿಗೆಯಲ್ಲಿ ನಡೆಯುತ್ತಿದ್ದ ಅಕ್ರಮ ಗೋವಧಾ ಕೇಂದ್ರಕ್ಕೆ ಬಂಟ್ವಾಳ ನಗರ ಠಾಣಾ ಪೊಲೀಸರು ದಾಳಿ ನಡೆಸಿದ್ದು, ಈ ಸಂಬಂಧ ಆರೋಪಿಗಳಾದ ಮುಸ್ತಾಫಾ (33) ಹಾಗೂ ಮಹಮ್ಮದ್ ಸಾದೀಕ್ (30) ಎಂಬವರನ್ನು ಬಂಧಿಸಿದ್ದು, ಇನ್ನಿಬ್ಬರು ಪರಾರಿಯಾಗಿದ್ದರು.



ಈ ಸಂದರ್ಭ ಪೊಲೀಸರು ಜಾನುವಾರು, ವಾಹನ, ಗೋಮಾಂಸ ಸೇರಿದಂತೆ ಸೊತ್ತುಗಳನ್ನು ವಶಕ್ಕೆ ಪಡೆದುಕೊಂಡಿದ್ದರು. ದನದ ಕೊಟ್ಟಿಗೆಯನ್ನೇ ಅಕ್ರಮ ಗೋ ವಧಾ ಕೇಂದ್ರವನ್ನಾಗಿಸಿ ದಂಧೆ ನಡೆಸಲಾಗುತ್ತಿತ್ತು.

ಮಾರಾಮಾರಿ: ಓರ್ವ ಸೆರೆ

ಉಡುಪಿ: ನಗರದ ಕೃಷ್ಣಮಠದ ರಾಜಾಂಗಣ ಪಾರ್ಕಿಂಗ್ ರಸ್ತೆ ಬಳಿ ಮಂಗಳವಾರ ಸಂಜೆ ಕಾರು ಚಲಾಯಿಸುವ ವಿಚಾರಕ್ಕೆ ಹೈದರಾಬಾದ್‌ನ ಪ್ರವಾಸಿಗರು ಹಾಗೂ ಸ್ಥಳೀಯ ಕಾರು ಚಾಲಕನ ನಡುವೆ ಗಲಾಟೆ ನಡೆದಿದ್ದು, ಮಾರಾಮಾರಿಯಾಗಿ ಮಾರ್ಪಟ್ಟಿದೆ. ಈ ಘಟನೆಗೆ ಸಂಬಂಧಿಸಿ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ದೂರು-ಪ್ರತಿದೂರು ದಾಖಲಾಗಿದ್ದು, ಓರ್ವನನ್ನು ಬಂಧಿಸಲಾಗಿದೆ.



ಕೊರಂಗ್ರಪಾಡಿ ನಿವಾಸಿ ಸುಪ್ರೀತ್ ಕುಮಾರ್ ಬಂಧಿತ ಆರೋಪಿ.

ಹೈದರಾಬಾದ್‌ನ ಪ್ರವಾಸಿ ರಂಗ ರಾವ್ ಎಂಬವರು, ಸ್ಥಳೀಯ ಚಾಲಕ ಸುಪ್ರೀತ್ ಕುಮಾರ್ ಎಂಬಾತ ತನ್ನ ಕಾರನ್ನು ವೇಗವಾಗಿ ಚಲಾಯಿಸಿದನ್ನು ಪ್ರಶ್ನಿಸಿದ್ದಕ್ಕೆ ಕೋಲಿನಿಂದ ತಲೆಗೆ ಹೊಡೆದು ಗಾಯಗೊಳಿಸಿದ್ದಾನೆ ಎಂದು ದೂರು ನೀಡಿದ್ದಾರೆ. ಇದಕ್ಕೆ ಪ್ರತಿಯಾಗಿ ದೂರು ನೀಡಿರುವ ಸುಪ್ರೀತ್ ಕುಮಾರ್, ಪ್ರವಾಸಿಗರು ತನ್ನ ಕಾರಿಗೆ ಡಿಕ್ಕಿ ಹೊಡೆಯಲು ಬಂದಿದ್ದನ್ನು ಪ್ರಶ್ನಿಸಿದ್ದಕ್ಕೆ ತನ್ನ ಹಾಗೂ ಪತ್ನಿಯ ಮೇಲೆ ಫೋಟೋ ಸ್ಟ್ಯಾಂಡ್ ಮತ್ತು ಕಬ್ಬಿಣದ ವಸ್ತುಗಳಿಂದ ಹಲ್ಲೆ ನಡೆಸಿ, ಕಾರಿನ ಗ್ಲಾಸ್ ಪುಡಿಪುಡಿ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ಪೊಲೀಸರು ಇಬ್ಬರ ವಿರುದ್ಧವೂ ಬಿಎನ್‌ಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿ ಸುಪ್ರೀತ್ ಕುಮಾರ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲು ಕ್ರಮ ಕೈಗೊಂಡಿದ್ದಾರೆ.

ಕಾಸರಗೋಡು ಜಿಲ್ಲೆಯಲ್ಲಿ ತೆಂಗಿನ ಕಾಯಿ ಬೆಲೆ 40 ರೂ.ಗೆ ಕುಸಿತ

ತೀವ್ರ ಸಂಕಷ್ಟದಲ್ಲಿ ತೆಂಗು ಬೆಳೆಗಾರರು

ಕಾಸರಗೋಡು: ಸರಿಸುಮಾರು 8 ತಿಂಗಳ ಹಿಂದೆ ಭಾರೀ ಬೇಡಿಕೆಯಿಂದಾಗಿ 85 ರೂಪಾಯಿ ತನಕ ತಲುಪಿದ್ದ ತೆಂಗಿನಕಾಯಿ ಬೆಲೆ ಇದೀಗ ಹಂತ ಹಂತವಾಗಿ ಅರ್ಧಕ್ಕಿಂತಲೂ ಕಡಿಮೆ ಕುಸಿದಿದ್ದು, ಕೇವಲ 40ರೂ.ಗಳಿಗೆ ಇಳಿಕೆಯಾಗಿದೆ. ಹಸಿ ತೆಂಗಿನಕಾಯಿಯ ಬೆಲೆಯು ಕಿಲೋವೊಂದಕ್ಕೆ 35 ರೂ.ಗಳಿಗೆ ತಲುಪಿದ್ದು, ಕಾಸರಗೋಡು ಜಿಲ್ಲೆಯ ತೆಂಗು ಬೆಳೆಗಾರರು ತೀವ್ರ ಸಂಕಷ್ಟದ ಪರಿಸ್ಥಿತಿ ಎದುರಿಸುವಂತಾಗಿದೆ.

ತಮಿಳುನಾಡಿನಲ್ಲಿ ಈ ಬಾರಿ ತೆಂಗಿನಕಾಯಿ ಉತ್ಪಾದನೆ ಗಣನೀಯವಾಗಿ ಹೆಚ್ಚಾಗಿದೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ತೆಂಗಿನ ಮೌಲ್ಯವರ್ಧಿತ ಉತ್ಪನ್ನಗಳ ಅಂತಾರಾಷ್ಟ್ರೀಯ ರಫ್ತು ತೀವ್ರವಾಗಿ ಇಳಿಮುಖಗೊಂಡಿದೆ.

ಕೇರಳ, ತಮಿಳುನಾಡು, ಕರ್ನಾಟಕ ಮೊದಲಾದ ರಾಜ್ಯಗಳಲ್ಲಿ ಬೇರೆ ಬೇರೆ ಅವಧಿಗಳಲ್ಲಿ ತೆಂಗಿನ ಕೊಯ್ಲು ನಡೆಯುತ್ತಿದೆಯಾದರೂ ನೆರೆರಾಜ್ಯಗಳಿಂದ ಕಾಸರಗೋಡು ಕೇರಳದ ಮಾರುಕಟ್ಟೆಗಳಿಗೆ ತೆಂಗಿನ ಕಾಯಿ ವ್ಯಾಪಕ ಪ್ರಮಾಣದಲ್ಲಿ ಹರಿದುಬರುತ್ತಿದೆ ಎಂದು ಜಿಲ್ಲೆಯ ವ್ಯಾಪಾರಿಗಳು ತಿಳಿಸಿದ್ದಾರೆ.



ಯುದ್ಧದ ಪರಿಣಾಮ ತೆಂಗಿನ ಮೌಲ್ಯ ವರ್ಧಿತ ಉತ್ಪನ್ನಗಳ ಅಂತಾರಾಷ್ಟ್ರೀಯ ರಫ್ತು ತೀವ್ರ ಇಳಿಮುಖ

ಸೂಕ್ತ ಕ್ರಮ ಕೈಗೊಳ್ಳಲಿ

ಪ್ರಸ್ತುತ ಮಾರುಕಟ್ಟೆಯಲ್ಲಿ ಒಂದು ಕಿಲೋ ತೆಂಗಿನಕಾಯಿಗೆ **40 ರೂ.** ಇದ್ದು, ಸಿಪ್ಪೆ ಸುಲಿಯದ ಒಂದು ತೆಂಗಿನಕಾಯಿ **13 ರೂಪಾಯಿ**ಗೆ ಲಭಿಸುತ್ತಿದೆ. ಕೊಬ್ಬರಿಗೆ ಕಿಲೋಗೆ **130 ರೂ.** ಮತ್ತು ತೆಂಗಿನ ಎಣ್ಣೆ ಕಿಲೋವೊಂದಕ್ಕೆ **280 ರೂ.** ಗಳಿಗೆ ದೊರಕುತ್ತಿದೆ. ತೆಂಗಿನಕಾಯಿ ಗೆರಟೆಗೆ ಕಿಲೋವೊಂದಕ್ಕೆ **32 ರೂ.** ಆಗಿ ಇಳಿಮುಖಗೊಂಡಿದೆ. ಬೆಲೆ ಕುಸಿತದ ಬೆನ್ನಲ್ಲೇ ತೆಂಗಿನ ಮರಗಳನ್ನು ಬಾಧಿಸುತ್ತಿರುವ ವಿವಿಧ ರೋಗಗಳು ಕೃಷಿಕರನ್ನು ಮತ್ತಷ್ಟು ಕಂಗೆಡಿಸಿದೆ. ಇದರೊಂದಿಗೆ ರಸಗೊಬ್ಬರಗಳ ಬೆಲೆಯೇರಿಕೆ ಮತ್ತು ಕಾರ್ಮಿಕರ ಕೂಲಿ ವೆಚ್ಚ ದುಬಾರಿಯಾಗಿರುವುದು ಬೆಳೆಗಾರರನ್ನು ಸಮಸ್ಯೆಗೀಡುಮಾಡಿದೆ. ಈ ನಿಟ್ಟಿನಲ್ಲಿ ಕೇರಳ ಸರಕಾರವು ಮಧ್ಯ ಪ್ರವೇಶಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.